ಮಂಗಳವಾರ, ಏಪ್ರಿಲ್ 4, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 93 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ: ವಜ್ರಮಹೋತ್ಸವ ಸಂಭ್ರಮದಲ್ಲಿ ಸಿಬಿಐ
ಅರೆನ್ಯಾಯಿಕ ವಿಚಾರಣೆಯೂ ಆನ್‌ಲೈನ್ 5

ಮಹಾವೀರ ಜಯಂತಿ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,106 ▲	17,398 ▲	₹61,150 (ಬೆಂಗಳೂರು)	₹73,000 (ಬೆಂಗಳೂರು)	82.31 ▼

ವಾರಸುದಾರರಿಲ್ಲದ ₹35,012 ಕೋಟಿ ಆರ್‌ಬಿಐಗೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ 10.24 ಕೋಟಿ ಖಾತೆಗಳಲ್ಲಿ 2023ರ ಫೆಬ್ರುವರಿವರೆಗೆ ಇದ್ದ, ವಾರಸುದಾರರಿಲ್ಲದ ₹35,012 ಕೋಟಿ ಠೇವಣಿಯನ್ನು ಆರ್‌ಬಿಐಗೆ ವರ್ಗಾಯಿಸಲಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕರಾಡ್ ಅವರು ಲೋಕಸಭೆಗೆ ತಿಳಿಸಿದ್ದಾರೆ.

10 ವರ್ಷದಿಂದ ಈ ಖಾತೆಗಳಲ್ಲಿ ಯಾವುದೇ ವಹಿವಾಟು ನಡೆದಿಲ್ಲ ಎಂದು ಅವರು ತಿಳಿಸಿದ್ದಾರೆ. ವಾರಸುದಾರರು ಇಲ್ಲದ ಠೇವಣಿಗಳನ್ನು ಹೊಂದಿರುವ ಬ್ಯಾಂಕ್‌ಗಳ ಪೈಕಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮೊದಲ ಸ್ಥಾನದಲ್ಲಿದೆ. ಎಸ್‌ಬಿಐನಲ್ಲಿ ₹8,086 ಕೋಟಿ, ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ₹5,340 ಕೋಟಿ, ಕೆನರಾ ಬ್ಯಾಂಕ್‌ನಲ್ಲಿ ₹4,558 ಕೋಟಿ ಮತ್ತು ಬ್ಯಾಂಕ್ ಆಫ್ ಬರೋಡದಲ್ಲಿ ₹3,904 ಕೋಟಿ ವಾರಸುದಾರರಿಲ್ಲದ ಠೇವಣಿ ಇತ್ತು.

ಅರಣ್ಯದಂಚಿನಲ್ಲಿ ಕಾಡಾನೆ ತಡೆಗೆ ಸಿಮೆಂಟ್ ಪಿಲ್ಲರ್ ತಡೆಗೋಡೆ ಪ್ರಯೋಗ ಯಶಸ್ವಿ

ಕೊಡಗು ಜಿಲ್ಲೆಯ ಶನಿವಾರಸಂತೆ ವ್ಯಾಪ್ತಿಯ ಹಿರಿಕರ ಗ್ರಾಮದ ಅರಣ್ಯ ಅಂಚಿನಲ್ಲಿ ಕಾಡಾನೆ, ಕಾಟಿಗಳ ನಿಯಂತ್ರಣಕ್ಕಾಗಿ ನಿರ್ಮಿಸಿರುವ ಸಿಮೆಂಟ್ ಪಿಲ್ಲರ್ ತಡೆಗೋಡೆ

• ಎಚ್.ಎಸ್.ಶರಣ್

ಶನಿವಾರಸಂತೆ (ಕೊಡಗು ಜಿಲ್ಲೆ): ಸಮೀಪದ ಗೌಡಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಹಿರಿಕರ ಗ್ರಾಮದಲ್ಲಿ ಕಾಡಾನೆಗಳು ಊರೊಳಗೆ ಬರುವುದನ್ನು ತಡೆಯಲು ಅರಣ್ಯ ಇಲಾಖೆಯು ಸಿಮೆಂಟ್ ಪಿಲ್ಲರ್ ತಡೆಗೋಡೆ ನಿರ್ಮಾಣದ ಪ್ರಯೋಗ ಮಾಡಿದೆ.

2.25 ಮೀಟರ್ ಎತ್ತರ ಹಾಗೂ 75 ಮೀಟರ್ ಉದ್ದದ ಈ ತಡೆಗೋಡೆಗೆ ₹16 ಲಕ್ಷ ವೆಚ್ಚ ಮಾಡಲಾಗಿದೆ. ನಿರ್ಮಾಣವಾಗಿ ಒಂದು ತಿಂಗಳು ಕಳೆದಿದ್ದು, ಆನೆಗಳು ಊರಿನೊಳಗೆ ನುಸುಳಿಲ್ಲ ಎನ್ನುತ್ತಾರೆ ಅಧಿಕಾರಿಗಳು.

‘ಇಲ್ಲಿ ಕಾಡಾನೆಗಳ ಜೊತೆಗೆ, ಕಾಟಿಗಳ ಹಾವಳಿಯೂ ಇದೆ. ಈ ತಡೆಗೋಡೆಯು ಇವುಗಳನ್ನು ತಡೆಯುವಲ್ಲಿಯೂ ಯಶಸ್ವಿಯಾಗಿದೆ’ ಎಂದು ಹಿರಿಕರ ಗ್ರಾಮದ ನಿವಾಸಿ ಎಚ್.ಎಸ್.ರಕ್ಷಿತ್ ‘ಪ್ರಜಾವಾಣಿ’ಗೆ ತಿಳಿಸಿದರು.

ಇಲ್ಲಿನ ಹಿರಿಕರ, ಚಿಕ್ಕಾರ, ಕೂಗೂರು ಮೊದಲಾದ ಗ್ರಾಮಗಳ ರೈತರು ಕಾಡಾನೆ ಉಪಟಳದಿಂದ ಕಂಗೆಟ್ಟಿದ್ದರು. ಮಾಲಂಬಿ ಮೀಸಲು ಅರಣ್ಯದಿಂದ ಹಿರಿಕರ ಗ್ರಾಮದ ಮೂಲಕ ಬರುತ್ತಿದ್ದ ಕಾಡಾನೆಗಳು, ಕಾಟಿಗಳು ಅಕ್ಕಪಕ್ಕದ ಗ್ರಾಮಗಳಲ್ಲಿ ಬೀಡುಬಿಟ್ಟು, ತೋಟ–ಗದ್ದೆಗಳಿಗೆ ನುಗ್ಗಿ ಫಸಲನ್ನು ಧ್ವಂಸಗೊಳಿಸುತ್ತಿದ್ದವು. ಇದರಿಂದ ನಷ್ಟ ಉಂಟಾಗುತ್ತಿತ್ತು.

ಇದಕ್ಕಾಗಿ, ಹಿರಿಕರ ಗ್ರಾಮದಲ್ಲಿ ರೈತ ಮಹಿಳೆ ಶಶಿಕಲಾ ಸಣ್ಣಸ್ವಾಮಿ ಅವರ ತೋಟದ ಅಂಚಿನಲ್ಲಿ ಮಾಲಂಬಿ ಮೀಸಲು ಅರಣ್ಯದಿಂದ ಕಾಡಾನೆಗಳು ಬರುವ ಸ್ಥಳದಲ್ಲಿ ಕಂದಕ ನಿರ್ಮಾಣ ಮಾಡಲಾಗಿತ್ತು. ಆದರೆ, ಕ್ರಮೇಣ ಕಂದಕದಲ್ಲಿ ಮಣ್ಣು ಕುಸಿಯಿತು. ಕಾಡಾನೆಗಳು ಕಂದಕ ದಾಟಿ ಎಂದಿನಂತೆ ಗ್ರಾಮದೊಳಕ್ಕೆ ಬರಲಾರಂಭಿಸಿದ್ದವು. ಹೀಗಾಗಿ, ಇಲಾಖೆಯು ಸಿಮೆಂಟ್ ಪಿಲ್ಲರ್ ತಡೆಗೋಡೆ ನಿರ್ಮಿಸಿದೆ.

ಶನಿವಾರಸಂತೆಯ ವಲಯ ಅರಣ್ಯಾಧಿಕಾರಿ ಪಿ.ಪ್ರಫುಲ್ ಶೆಟ್ಟಿ ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿ, ‘ಸಿಮೆಂಟ್ ಪಿಲ್ಲರ್ ತಡೆಗೋಡೆಯನ್ನು ಮಾಕುಟ್ಟ ಭಾಗದಲ್ಲಿ ಪ್ರಾಯೋಗಿಕವಾಗಿ ನಿರ್ಮಿಸಿದ್ದು, ಅಲ್ಲಿ ಯಶಸ್ವಿಯಾಗಿದೆ. ಇಲ್ಲೂ ಪ್ರಾಯೋಗಿಕವಾಗಿ 75 ಮೀಟರ್‌ವರೆಗೆ ನಿರ್ಮಿಸಲಾಗಿದೆ. ಆನೆಗಳು ಈ ತಡೆಗೋಡೆ ಉರುಳಿಸಲು ಸಾಧ್ಯವಿಲ್ಲ. ಸದ್ಯ, ಕಾಮಗಾರಿ ಪೂರ್ಣಗೊಂಡು ತಿಂಗಳು ಕಳೆದಿದೆ. ಆನೆ, ಕಾಟಿಗಳು ತಡೆಗೋಡೆಯನ್ನು ದಾಟಿಲ್ಲ. ವೆಚ್ಚವೂ ಹೆಚ್ಚಾಗುವುದಿಲ್ಲ’ ಎಂದು ಹೇಳಿದರು.

‘ಕೂಗೂರು, ಚಿಕ್ಕಾರ ಗ್ರಾಮದ ಹಲವೆಡೆ ಇಂತಹ ತಡೆಗೋಡೆ ನಿರ್ಮಿಸಲು ಚಿಂತಿಸಲಾಗಿದೆ. ಇಲಾಖೆ ಅನುಮತಿ ನೀಡಿದ ಬಳಿಕ ಕಾಮಗಾರಿ ಆರಂಭಿಸಲಾಗುವುದು’ ಎನ್ನುತ್ತಾರೆ ಅವರು.

ಪಶ್ಚಿಮ ಬಂಗಾಳದಲ್ಲಿ ರಾಮನವಮಿ ಮೆರವಣಿಗೆ ವೇಳೆ ಘರ್ಷಣೆ: ನಿಷೇಧಾಜ್ಞೆ ಮುಂದುವರಿಕೆ

ಹಿಂಸಾಚಾರ: ಟಿಎಂಸಿ–ಬಿಜೆಪಿ ಕಿತ್ತಾಟ

ಮುಖ್ಯಾಂಶಗಳು
- ಬುಧವಾರದೊಳಗೆ ವರದಿ ನೀಡಲು ಕಲ್ಕತ್ತಾ ಹೈಕೋರ್ಟ್ ಸೂಚನೆ
- ವಿಡಿಯೊ ದೃಶ್ಯಗಳನ್ನು ಸಲ್ಲಿಸಲು ನಿರ್ದೇಶನ
- ಇಂದು ಧರಣಿ ನಡೆಸಲು ಬಿಜೆಪಿ ಸಿದ್ಧತೆ

ರಿಸಾರಾ/ ಶ್ರೀರಾಮಪುರ (ಪಶ್ಚಿಮ ಬಂಗಾಳ) (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ರಾಮ ನವಮಿ ಮೆರವಣಿಗೆ ಸಂದರ್ಭದಲ್ಲಿ ನಡೆದ ಹಿಂಸಾಚಾರವು ಪಶ್ಚಿಮ ಬಂಗಾಳ ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ನಡುವೆ ಭಾರಿ ವಾಕ್ಸಮರಕ್ಕೆ ಕಾರಣವಾಗಿದೆ. ಇದೇ ರೀತಿಯ ಜಟಾಪಟಿ ಬಿಜೆಪಿ ಮತ್ತು ಜೆಡಿಯು ನಡುವೆಯೂ ನಡೆದಿದೆ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಹೂಗ್ಲಿ ಜಿಲ್ಲೆಯ ರಿಸಾರಾ ಮತ್ತು ಶ್ರೀರಾಮಪುರ ಪ್ರದೇಶಗಳಲ್ಲಿ ರಾಮ ನವಮಿಯ ಬಳಿಕ ನಡೆದ ಮೆರವಣಿಗೆಯಲ್ಲಿ ಹಿಂಸಾಚಾರಕ್ಕೆ ಸಂಬಂಧಿಸಿ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಬಿಜೆಪಿ ತಿರುಗೇಟು ನೀಡಿದೆ.

ರಾಮ ನವಮಿ ಕಳೆದ ಬಳಿಕವೂ ಮೆರವಣಿಗೆ ನಡೆಸಿದ್ದರ ಉದ್ದೇಶವೇನು ಎಂದು ಮಮತಾ ಅವರು ಸೋಮವಾರ ಪ್ರಶ್ನಿಸಿದ್ದಾರೆ. ‘ರಾಮ ನವಮಿ ಕಳೆದು ಐದು ದಿನಗಳ ಬಳಿಕ ಮೆರವಣಿಗೆ ನಡೆಸಿದ್ದು ಏಕೆ? ಹಬ್ಬದ ದಿನ ಮೆರವಣಿಗೆ ಮಾಡುವುದಕ್ಕೆ ಯಾರ ಆಕ್ಷೇಪವೂ ಇಲ್ಲ. ಆದರೆ, ಬಂದೂಕು ಮತ್ತು ಬಾಂಬ್ ಹಿಡಿದು ಪೊಲೀಸರ ಅನುಮತಿಯನ್ನೂ ಪಡೆಯದೆ ಮೆರವಣಿಗೆ ನಡೆಸುವಂತಿಲ್ಲ’ ಎಂದು ಮಮತಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಪ್ರದೇಶಕ್ಕೆ ಪ್ರಕ್ಷುಬ್ಧ ಪರಿಸ್ಥಿತಿ ಸೃಷ್ಟಿಸಲೇಬೇಕು ಎಂಬ ಉದ್ದೇಶದಿಂದ ಮೆರವಣಿಗೆಯಲ್ಲಿ ಹೋಗಲಾಗಿದೆ’ ಎಂದು ಮಮತಾ ಆರೋಪಿಸಿದ್ದಾರೆ.

‘ಆ ಗೂಂಡಾಗಳು ತಳ್ಳುಗಾಡಿಗಳಿಗೆ ಬೆಂಕಿ ಹಚ್ಚಿದ್ದಾರೆ. ಕೈಯಲ್ಲಿ ಬಂದೂಕು ಹಿಡಿದು ಕುಣಿದಿದ್ದಾರೆ. ಇನ್ನೊಂದು ಸುತ್ತು ಹಿಂಸಾಚಾರ ನಡೆಸುವ ಷಡ್ಯಂತ್ರವನ್ನು ಅವರು ಮಾಡಿದ್ದಾರೆ. ಹಾಗಾಗಿಯೇ ಎಚ್ಚರದಲ್ಲಿ ಇರಲು ಪೊಲೀಸರಿಗೆ ಹೇಳಿದ್ದೇನೆ. ಪಶ್ಚಿಮ ಬಂಗಾಳದಲ್ಲಿ ಮಾತ್ರವಲ್ಲ, ದೇಶದ ವಿವಿಧೆಡೆ ಇಂತಹುದೇ ಪರಿಸ್ಥಿತಿ ನಿರ್ಮಿಸಲಿದ್ದಾರೆ’ ಎಂದು ಮಮತಾ ಹೇಳಿದ್ದಾರೆ.

ಹನುಮಾನ್ ಜಯಂತಿಯು ಗುರುವಾರ ನಡೆಯಲಿದೆ. ಹಾಗಾಗಿ ಪೊಲೀಸರು ಎಚ್ಚರದಿಂದ ಇರಬೇಕು ಎಂದೂ ಅವರು ಹೇಳಿದ್ದಾರೆ.

‘ನಮಗೆಲ್ಲರಿಗೂ ಬಜರಂಗಬಲಿಯ ಬಗ್ಗೆ ಗೌರವ ಇದೆ. ಆದರೆ, ಗಲಭೆಯ ಹೆಸರಿನಲ್ಲಿ ಅವರು ಸಂಚು ರೂಪಿಸಬಹುದು. ಇದು ಗಮನದಲ್ಲಿ ಇರಲಿ. ಈಗ ರಂಜಾನ್. ಹಾಗಾಗಿ, ಅಂದು ಮುಸ್ಲಿಮರ ರಕ್ಷಣೆಯು ಎಲ್ಲ ಹಿಂದೂ ಸೋದರ ಸೋದರಿಯರ ಹೊಣೆಯಾಗಿದೆ’ ಎಂದೂ ಅವರು ಹೇಳಿದ್ದಾರೆ.

ರಾಮನವಮಿ ಮೆರವಣಿಗೆ ವೇಳೆ ಹಿಂಸಾಚಾರ ಭುಗಿಲೆದ್ದಿದ್ದ ಹೂಗ್ಲಿ ಜಿಲ್ಲೆಯ ರಿಸಾರಾ ಮತ್ತು ಶ್ರೀರಾಮಪುರದಲ್ಲಿ ಸೋಮವಾರ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದ್ದು, ಶಾಂತವಾಗಿದೆ. ಈ ಎರಡೂ ಪಟ್ಟಣಗಳ ಕೆಲವು ಪ್ರದೇಶಗಳಲ್ಲಿ ಬಿಗುವಿನ ಪರಿಸ್ಥಿತಿ ಇರುವುದರಿಂದ ಪ್ರತಿಬಂಧಕಾಜ್ಞೆ ಮತ್ತು ಇಂಟರ್‌ನೆಟ್ ಸೇವೆ ಸ್ಥಗಿತ ಮುಂದುವರಿದಿದೆ.

ಗುಂಪು ಘರ್ಷಣೆ ಸಂಬಂಧ ಮತ್ತೆ 12 ಜನರನ್ನು ಬಂಧಿಸಲಾಗಿದೆ. ಕೆಲವು ಪ್ರದೇಶಗಳಲ್ಲಿ ಬೆಳಿಗ್ಗೆ ಉದ್ವಿಗ್ನ ಪರಿಸ್ಥಿತಿ ಇತ್ತು. ಜನರು ಸೇರದಂತೆ ಎಚ್ಚರ ವಹಿಸಲಾಗಿದೆ.

ಪೊಲೀಸ್ ಆಯುಕ್ತರಿಗೆ ಎನ್‌ಸಿಪಿಸಿಆರ್ ನೋಟಿಸ್

ಹೂಗ್ಲಿ ಜಿಲ್ಲೆಯಲ್ಲಿ ನಡೆದ ಹಿಂಸಾಚಾರದಲ್ಲಿ ಕಲ್ಲುತೂರಲು ಮಕ್ಕಳನ್ನು ಬಳಸಿಕೊಂಡಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಮಕ್ಕಳ ಹಕ್ಕುಗಳ ಸಂರಕ್ಷಣೆಯ ರಾಷ್ಟ್ರೀಯ ಆಯೋಗವು (ಎನ್‌ಸಿಪಿಸಿಆರ್) ಹೌರಾ ಪೊಲೀಸ್ ಆಯುಕ್ತರಿಗೆ ನೋಟಿಸ್ ಜಾರಿ ಮಾಡಿದೆ.

ಬಿಹಾರ– ನಡೆಯದ ಕಲಾಪ: ರಾಮನವಮಿ ಮೆರವಣಿಗೆ ಸಂದರ್ಭದಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕರು ಬಿಹಾರ ವಿಧಾನಮಂಡಲದಲ್ಲಿ ಪ್ರತಿಭಟನೆ ನಡೆಸಿದರು. ‘ಗಲಭೆ ನಿಯಂತ್ರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ’ ಎಂದು ಬಿಜೆಪಿ ಶಾಸಕರು ಎಂದು ಆರೋಪಿಸಿದರು. ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಂಚು ರೂಪಿಸಿಯೇ ಗಲಭೆ ನಡೆಸಿವೆ ಎಂದು ಆಡಳಿತ ಮೈತ್ರಿಕೂಟದ ಶಾಸಕರು ತಿರುಗೇಟು ನೀಡಿದರು.

ಬಿಹಾರ: ಕಲಾಪಕ್ಕೆ ಅಡ್ಡಿ 11

ಬಿಜೆಪಿ ನಿಯೋಗಕ್ಕೆ ತಡೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸುಕಾಂತಾ ಮಜುಂದಾರ್ ಅವರ ನೇತೃತ್ವದ ನಿಯೋಗವು ಹಿಂಸಾಪೀಡಿತ ರಿಸಾರಾ ಪ್ರದೇಶಕ್ಕೆ ಭೇಟಿ ನೀಡುವುದನ್ನು ಪೊಲೀಸರು ಸೋಮವಾರ ತಡೆದರು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ನಾಯಕರು, ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ನಿಯೋಗಕ್ಕೆ ಭೇಟಿಯ ಅವಕಾಶ ನಿರಾಕರಿಸಿದ್ದನ್ನು ಖಂಡಿಸಿ ಬಿಜೆಪಿಯ ಕೆಲವು ಕಾರ್ಯಕರ್ತರು ರಿಸಾರಾ ಪ್ರದೇಶದಲ್ಲಿ ಧರಣಿ ನಡೆಸಿದರು.

ನೀರಾಟ ಬಿಸಿಲಿನ ಬೇಗೆಗೆ ಬಸವಳಿದ ಯುವಕರು ಹುಬ್ಬಳ್ಳಿಯ ಉಣಕಲ್ ಕೆರೆಯಲ್ಲಿ ಸೋಮವಾರ ಈಜಿ ನಿರಾಳರಾದರು -ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಮಾನಹಾನಿ: ರಾಹುಲ್‌ಗೆ ಜಾಮೀನು

ಗುಜರಾತ್ ಸೆಷನ್ಸ್ ಕೋರ್ಟ್‌ಗೆ ಹಾಜರಾದ ‘ಕೈ’ ನಾಯಕ

ಸೂರತ್ (ಪಿಟಿಐ): ಸಂಸದ ಸ್ಥಾನದಿಂದ ಅನರ್ಹಗೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಗುಜರಾತ್ ಸೆಷನ್ಸ್ ಕೋರ್ಟ್ ಸೋಮವಾರ ಜಾಮೀನು ನೀಡಿದೆ. ವಿಚಾರಣೆಯನ್ನು ಇದೇ 13ಕ್ಕೆ ಮುಂದೂಡಲಾಗಿದೆ.

ಮೋದಿ ಉಪನಾಮದ ಕುರಿತು ರಾಹುಲ್ ಅವರು 2019ರಲ್ಲಿ ನೀಡಿದ್ದ ಹೇಳಿಕೆಯೊಂದರಲ್ಲಿ ಅವರಿಗೆ ಸೂರತ್‌ನ ಮ್ಯಾಜಿಸ್ಟ್ರೇಟ್ ನ್ಯಾಯಾಲಯವೊಂದು ಎರಡು ವರ್ಷ ಶಿಕ್ಷೆ ವಿಧಿಸಿತ್ತು. ಇದರಿಂದಾಗಿ ಲೋಕಸಭಾ ಸದಸ್ಯತ್ವದಿಂದ ರಾಹುಲ್ ಅವರು ಅನರ್ಹಗೊಂಡಿದ್ದಾರೆ.

ಅಪರಾಧ ನಿರ್ಣಯ ಮತ್ತು ಶಿಕ್ಷೆಯನ್ನು ಪ್ರಶ್ನಿಸಿ ರಾಹುಲ್ ಅವರು ಖುದ್ದಾಗಿ ಹಾಜರಾಗಿ ಮೇಲ್ಮನವಿ ಸಲ್ಲಿಸಿದ್ದಾರೆ. ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ನೀಡಿದ ತೀರ್ಪು ‘ಲೋಪಯುತವಾಗಿದೆ ಮತ್ತು ದುರುದ್ದೇಶದಿಂದ ಕೂಡಿದೆ’. ತಾವು ಸಂಸತ್ ಸದಸ್ಯತ್ವದಿಂದ ಅನರ್ಹಗೊಳ್ಳಬೇಕು ಎಂಬ ಕಾರಣಕ್ಕಾಗಿಯೇ ಎರಡು ವರ್ಷ ಶಿಕ್ಷೆ ವಿಧಿಸಲಾಗಿದೆ ಎಂದು ರಾಹುಲ್ ವಾದಿಸಿದ್ದಾರೆ.

> **ಪ್ರಜಾಪ್ರಭುತ್ವ ರಕ್ಷಿಸುವ ಸಲುವಾಗಿ ‘ಮಿತ್ರಕಾಲ’ದ ವಿರುದ್ಧ ನಡೆಸುತ್ತಿರುವ ಹೋರಾಟ ಇದು. ಈ ಕದನದಲ್ಲಿ ಸತ್ಯವೇ ನನ್ನ ಅಸ್ತ್ರ. ಅದುವೇ ನನಗೆ ಬೆಂಬಲ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಪ್ರಕರಣದ ದೂರುದಾರರಾಗಿರುವ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ ಅವರಿಗೆ ನೋಟಿಸ್ ಜಾರಿಗೊಳಿಸಿರುವ ನ್ಯಾಯಪೀಠವು ಇದೇ 10ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಿದೆ.

‘ರಾಹುಲ್ ಅವರಿಗೆ ₹15,000 ಮೊತ್ತದ ಬಾಂಡ್‌ನ ಮೇಲೆ ಜಾಮೀನು ಮಂಜೂರು ಮಾಡಲಾಗಿದೆ. ರಾಹುಲ್ ಅವರು ನಿರಪರಾಧಿ ಎಂದು ಘೋಷಿಸಿ ಶಿಕ್ಷೆ ರದ್ದುಪಡಿಸುವಂತೆ ಕೋರಿ ನಾವು ಅರ್ಜಿ ಸಲ್ಲಿಸಿದ್ದೇವೆ. ಇದರ ವಿಚಾರಣೆಗೆ ನ್ಯಾಯಪೀಠ ಸಮ್ಮತಿ ಸೂಚಿಸಿದೆ’ ಎಂದು ರಾಹುಲ್ ಪರ ವಕೀಲ ಕಿರೀಟ್ ಪಾನ್‌ವಾಲಾ ತಿಳಿಸಿದ್ದಾರೆ.

11ನೇ ಪುಟ ನೋಡಿ

ಗಣಿತ ಪರೀಕ್ಷೆ: ನಕಲು ಮಾಡಲು ಶಿಕ್ಷಕರ ಸಹಕಾರ?

ಪ್ರಜಾವಾಣಿ ವಾರ್ತೆ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಕುಷ್ಟಗಿ ತಾಲ್ಲೂಕಿನ ತಾವರಗೇರಾ ಪಟ್ಟಣದ ಶಶಿಧರಸ್ವಾಮಿ ವಿದ್ಯಾನಿಕೇತನ ಜೂನಿಯರ್ ಕಾಲೇಜಿನಲ್ಲಿ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ನಡೆಯುತ್ತಿದ್ದಾಗ ಸಾಮೂಹಿಕ ನಕಲಿಗೆ ಶಿಕ್ಷಕರು ಹಾಗೂ ಪೋಷಕರು ಸೋಮವಾರ ಸಹಕರಿಸಿದ್ದರು ಎಂದು ಆರೋಪಿಸಲಾಗಿದೆ. ಸೋಮವಾರ ನಡೆದ ಗಣಿತ ವಿಷಯದ ಪರೀಕ್ಷೆ ವೇಳೆ ನಕಲು ಮಾಡಲಾಗಿದೆ ಎನ್ನಲಾಗಿದೆ.

ಪರೀಕ್ಷಾ ಕೇಂದ್ರದ ಪಕ್ಕದಲ್ಲಿನ ಜೆರಾಕ್ಸ್ ಅಂಗಡಿ ಒಳಗಡೆ ಕುಳಿತು ಶಿಕ್ಷಕರು ಉತ್ತರವನ್ನು ಬರೆದು ಅದನ್ನು ಪರೀಕ್ಷಾ ಕೇಂದ್ರಗಳಿಗೆ ಪೂರೈಸಿದರು. ತಾವರಗೇರಾ, ದೋಟಿಹಾಳ, ಕುಷ್ಟಗಿ ಸೇರಿದಂತೆ ಅನೇಕ ಪರೀಕ್ಷಾ ಕೇಂದ್ರಗಳಲ್ಲಿ ನಕಲು ಪ್ರತಿ ಪೂರೈಸಿರುವ ಆರೋಪಗಳು ಕೇಳಿ ಬಂದಿವೆ. ಶಿಕ್ಷಕರು ಉತ್ತರ ಬರೆದಿದ್ದ ಗಣಿತ ಪ್ರಶ್ನೆಗಳ ಉತ್ತರದ ಪ್ರತಿಗಳು ‘ಪ್ರಜಾವಾಣಿ’ಗೆ ಲಭ್ಯವಾಗಿವೆ. ಸಾಮೂಹಿಕ ನಕಲು ಕುರಿತ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.



ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಗಣಿತ ಪರೀಕ್ಷೆಯ ಉತ್ತರಗಳು

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಎಂ.ಎ. ರೆಡ್ಡೇರ್ ಅವರು ಪ್ರತಿಕ್ರಿಯೆ ನೀಡಿ, ‘ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊದಲ್ಲಿರುವ ಉತ್ತರ ಪತ್ರಿಕೆಯ ಕೈ ಬರಹ ಯಾರದ್ದು ಎನ್ನುವುದನ್ನು ಪರಿಶೀಲಿಸಲಾಗುವುದು. ಘಟನೆ ಕುರಿತು ಪೂರ್ಣವಾಗಿ ವರದಿ ನೀಡುವಂತೆ ಕುಷ್ಟಗಿ ಬಿಇಒಗೆ ಸೂಚಿಸಿದ್ದೇನೆ’ ಎಂದರು.

ರೈಲು ಬೋಗಿಯೊಳಗೆ ಬೆಂಕಿ ಹಚ್ಚಿದ ದುಷ್ಕರ್ಮಿ: ಮೂವರ ಸಾವು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಕೋಯಿಕ್ಕೋಡ್‌ನಲ್ಲಿ ಚಲಿಸುತ್ತಿದ್ದ ರೈಲಿನ ಬೋಗಿಯೊಳಗೆ ದುಷ್ಕರ್ಮಿಯೊಬ್ಬ ಬೆಂಕಿ ಹಚ್ಚಿದ ಪರಿಣಾಮ ಮೂವರು ಮೃತಪಟ್ಟಿದ್ದಾರೆ ಮತ್ತು ಒಂಬತ್ತು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಲಪ್ಪುಳ–ಕಣ್ಣೂರು ಎಕ್ಸಿಕ್ಯುಟಿವ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಭಾನುವಾರ ರಾತ್ರಿ 9.30ರ ಸುಮಾರಿಗೆ ಈ ಕೃತ್ಯ ನಡೆದಿದೆ.

ಮೃತರನ್ನು ಕಣ್ಣೂರಿನ ರಹಮತ್, ಅವರ ಜೊತೆಗಿದ್ದ ಎರಡು ವರ್ಷದ ಸಹಾರ ಮತ್ತು ನೌಫೀಕ್ ಎಂದು ಗುರುತಿಸಲಾಗಿದೆ. ಇವರ ಮೃತದೇಹಗಳು ಹಳಿಯಲ್ಲಿ ಪತ್ತೆಯಾಗಿದ್ದವು. ಗಾಯಾಳುಗಳಲ್ಲಿ ನಾಲ್ವರಿಗೆ ಸುಟ್ಟ ಗಾಯಗಳಾಗಿವೆ ಎಂದು ಪೊಲೀಸರು ವಿವರಿಸಿದ್ದಾರೆ.

11ನೇ ಪುಟ ನೋಡಿ

‘ಸುಳಿವು ಲಭ್ಯ’

ಆರೋಪಿಯ ಬಗ್ಗೆ ಸುಳಿವು ಲಭಿಸಿದ್ದು, ಆತನ ಪತ್ತೆಗಾಗಿ ಕಾರ್ಯಾಚರಣೆ ನಡೆಸುತ್ತಿದ್ದೇವೆ ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅನಿಲ್ ಕಾಂತ್ ತಿಳಿಸಿದ್ದಾರೆ.

‘ಆರೋಪಿಯು ನೋಯ್ಡಾ ನಿವಾಸಿ ಶಾರುಕ್ ಸೈಫ್ ಆಗಿರಬಹುದು’ ಎಂದು ಪೊಲೀಸರು ಶಂಕಿಸಿರುವುದಾಗಿ ಮೂಲಗಳು ತಿಳಿಸಿವೆ.

ರೈಲು ಹಳಿಯಲ್ಲಿ ಬಿದ್ದಿದ್ದ ಸಿಮ್ ಕಾರ್ಡ್ ಇಲ್ಲದ ಮೊಬೈಲ್‌ನಲ್ಲಿದ್ದ ಸಾಮಾಜಿಕ ಮಾಧ್ಯಮಗಳ ಖಾತೆಗಳನ್ನು ಪರಿಶೀಲಿಸಿ ಈ ಮಾಹಿತಿ ನೀಡಿದ್ದಾರೆ ಎಂದೂ ಹೇಳಿವೆ.

ಪೊಲೀಸರು ಆರೋಪಿಯ ರೇಖಾಚಿತ್ರ ಹಾಗೂ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು ಬಿಡುಗಡೆ ಮಾಡಿದ್ದಾರೆ.

ಎಸ್ಸೆಸ್ಸೆಲ್ಸಿ: ಫಲಿತಾಂಶ ಹೆಚ್ಚಿಸಲು ಶೇ 10ರಷ್ಟು ಕೃಪಾಂಕ

ಬೆಂಗಳೂರು: ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಹೆಚ್ಚಿಸಲು ಭಾಷಾ ವಿಷಯಗಳಿಗೆ ಶೇ 10 ಮತ್ತು ಐಚ್ಛಿಕ ವಿಷಯಗಳಿಗೆ ಶೇ 8ರಷ್ಟು ಕೃಪಾಂಕ ನೀಡಲು ರಾಜ್ಯ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ನಿರ್ಧರಿಸಿದೆ.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ದೇವಾಲಯ ನಿಧಿಯಿಂದ ₹ 8 ಕೋಟಿ ಮಂಜೂರು ಮಾಡಿಸಿಕೊಂಡ ಹರ್ಷವರ್ಧನ್

ಶ್ರೀಕಂಠೇಶ್ವರನ ಹುಂಡಿಗೆ ಶಾಸಕನ ಕೈ!

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ದೇವಸ್ಥಾನದ ಆದಾಯವನ್ನು ಅದೇ ದೇವಾಲಯದ ಜೀರ್ಣೋದ್ಧಾರಕ್ಕೆ ಮಾತ್ರ ಬಳಸಿಕೊಳ್ಳಬೇಕೆಂಬ ಕಾನೂನು ಇದ್ದರೂ ಅದನ್ನು ಉಲ್ಲಂಘಿಸಿ, ಬಿಜೆಪಿ ಶಾಸಕ ಬಿ. ಹರ್ಷವರ್ಧನ್ ಅವರು ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದ ನಿಧಿಯಿಂದ ವಿವಿಧ ಜನಾಂಗದವರ ಸಮುದಾಯ ಭವನಗಳನ್ನು ನಿರ್ಮಿಸಲು ₹ 8 ಕೋಟಿ ಮಂಜೂರು ಮಾಡಿಸಿಕೊಂಡಿದ್ದಾರೆ.

‘ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಕಾಯ್ದೆ 1997ರ ಕಲಂ 36ರ ಅಡಿ, ಆಯಾ ದೇಗುಲದ ಆದಾಯವನ್ನು ಅದೇ ದೇಗುಲದ ಅಭಿವೃದ್ಧಿಗೆ ಮಾತ್ರ ಬಳಸಿಕೊಳ್ಳಬೇಕು. ಹೀಗಾಗಿ, ವಿವಿಧ ಜನಾಂಗದವರ ಸಮುದಾಯ ಭವನಗಳಿಗೆ ದೇವಾಲಯ ನಿಧಿಯ ಬಳಕೆ ಸೂಕ್ತವಲ್ಲ’ ಎಂದು ಮುಜರಾಯಿ ಇಲಾಖೆ ಸ್ಪಷ್ಟವಾಗಿ ನಮೂದಿಸಿದ್ದರೂ, ಶಾಸಕರ ಮನವಿಗೆ ಮುಖ್ಯಮಂತ್ರಿ ಅನುಮೋದನೆ ನೀಡಿರುವ ದಾಖಲೆಗಳು ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

‘ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ಉದ್ದೇಶಿತ ವಿಐಪಿ ಅತಿಥಿ ಗೃಹ ನಿರ್ಮಾಣ, 100 ಕೊಠಡಿಗಳ ನಿರ್ಮಾಣ, ಡಾರ್ಮಿಟರಿ ಕಟ್ಟಡ ನಿರ್ಮಾಣಕ್ಕೆ ₹ 16.52 ಕೋಟಿ ಮೊತ್ತದಲ್ಲಿ ದೇವಾಲಯದ ನಿಧಿಯಿಂದ ಕಾಮಗಾರಿ ಕೈಗೊಳ್ಳಲು ಸಚಿವ ಸಂಪುಟದ ಅನುಮೋದನೆಯಂತೆ 2022ರ ಡಿ. 1ರಂದು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ ಹೊರಡಿಸಲಾಗಿದೆ. ದೇವಸ್ಥಾನದ ನಿಶ್ಚಿತ ಠೇವಣಿಯಲ್ಲಿ ₹ 14 ಕೋಟಿ ಮಾತ್ರ ಲಭ್ಯವಿದ್ದು, ಈ ಕಾಮಗಾರಿಗೇ ಅನುದಾನದ ಕೊರತೆಯಿದೆ’ ಎಂದೂ ಮುಜರಾಯಿ ಇಲಾಖೆ ಸ್ಪಷ್ಟಪಡಿಸಿತ್ತು.

5ನೇ ಪುಟ ನೋಡಿ

ಶಾದಿ ಮಹಲ್‌ಗೂ ದೇವಸ್ಥಾನ ನಿಧಿಗೆ ಬೇಡಿಕೆ!

ಹರ್ಷವರ್ಧನ್ ಅವರು 2022 ನ.28ರಂದು ಮುಖ್ಯಮಂತ್ರಿ ಅವರಿಗೆ ಸಲ್ಲಿಸಿದ್ದ ಮನವಿಯಲ್ಲಿ, ‘ನಂಜನಗೂಡು ಪಟ್ಟಣದಲ್ಲಿ ಒಂದೇ ಸೂರಿನಡಿ ವಿವಿಧ ಜನಾಂಗದವರ ಸಮುದಾಯ ಭವನಗಳನ್ನು ತಾಲ್ಲೂಕು ಮಟ್ಟದಲ್ಲಿ ನಿರ್ಮಿಸಲಾಗುತ್ತಿದೆ. ಅನುದಾನ ಕೊರತೆಯಿಂದ ಕಾಮಗಾರಿಗಳು ವಿಳಂಬವಾಗಿವೆ. ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಸಾಕಷ್ಟು ಅನುದಾನವಿದೆ. ಸಮುದಾಯ ಭವನಗಳ ನಿರ್ಮಾಣಕ್ಕೆ ದೇವಸ್ಥಾನದ ನಿಧಿ ಬಳಸಿಕೊಳ್ಳಲು ಅನುಮತಿ ನೀಡಬೇಕು’ ಎಂದು ಕೋರಿದ್ದರು.

ಆ ಮನವಿಯಲ್ಲಿ ಬಾಬು ಜಗಜೀವನ್ ರಾಮ್, ಮಡಿವಾಳ, ಈಡಿಗ, ಸವಿತಾ, ಉಪ್ಪಾರ ಸಮುದಾಯ ಭವನಗಳ ಮುಂದುವರಿದ ಕಾಮಗಾರಿ, ಪೌರಕಾರ್ಮಿಕರ ಸಮುದಾಯ ಭವನ ನಿರ್ಮಾಣ, ಶಾದಿ ಮಹಲ್ ನಿರ್ಮಾಣ, ವಾಲ್ಮೀಕಿ ಭವನದ ಇತರ ಸೌಲಭ್ಯಕ್ಕೆ ₹ 8 ಕೋಟಿ ಅನುದಾನಕ್ಕೆ ಬೇಡಿಕೆ ಇಟ್ಟಿದ್ದರು. ಆ ಬಳಿಕ, ಫೆ.3ರಂದು ಸಲ್ಲಿಸಿದ ಮತ್ತೊಂದು ಮನವಿಯಲ್ಲಿ ಶಾದಿ ಮಹಲ್ ನಿರ್ಮಾಣ ಕಾಮಗಾರಿ, ವಾಲ್ಮೀಕಿ ಭವನದ ಇತರ ಸೌಲಭ್ಯಕ್ಕೆ ನಮೂದಿಸಿದ್ದ ₹ 2 ಕೋಟಿ ಬೇಡಿಕೆ ಕೈಬಿಟ್ಟು, ಆ ಮೊತ್ತದಲ್ಲಿ ವಿಶ್ವಕರ್ಮ, ಕುಂಬಾರ, ಗಾಣಿಗರ, ಗೆಜ್ಜೆಗಾರ, 24 ತೆಲುಗುಶೆಟ್ಟರ ಸಮುದಾಯಕ್ಕೆ ಭವನ ನಿರ್ಮಾಣ, ಒಕ್ಕಲಿಗ, ಬೌದ್ಧವಿಹಾರದ ಮುಂದುವರಿದ ಕಾಮಗಾರಿಗೆ ಅನುದಾನಕ್ಕೆ ಬೇಡಿಕೆ ಇಟ್ಟಿದ್ದರು.

ಹುಂಡಿ ಹಣ ಬಳಸಿದರೆ ತಪ್ಪೇನು?

‘ದೇವಸ್ಥಾನದ ಆದಾಯದಿಂದ 13 ಸಮುದಾಯ ಭವನ ಕಟ್ಟಿಸುತ್ತಿದ್ದೇವೆ. ಅಲ್ಪಸಂಖ್ಯಾತರ ಭವನ ಎಂದಾಗ ಶಾದಿ ಮಹಲ್ ಎಂದು ತಪ್ಪಾಗಿ ಬಂದಿತ್ತು. ದೇವಸ್ಥಾನದ ನಿಧಿ ಬಳಸಲು ಮುಖ್ಯಮಂತ್ರಿಯವರು ವಿವೇಚನಾಧಿಕಾರ ಬಳಸಿ ಅನುಮತಿ ನೀಡಿದ್ದಾರೆ. ಹಿಂದೆಯೂ ಈ ರೀತಿ ಬಳಸಿದ ನಿದರ್ಶನವಿದೆ. ದೇವಸ್ಥಾನದ ಹುಂಡಿಗೆ ಸಾರ್ವಜನಿಕರು ಹಾಕಿದ ಹಣವನ್ನು ಸಾರ್ವಜನಿಕ ಅಗತ್ಯಕ್ಕೆ ಬಳಸುತ್ತಿದ್ದೇವೆ. ಅದರಲ್ಲಿ ತಪ್ಪೇನಿದೆ?’

ಬಿ. ಹರ್ಷವರ್ಧನ್, ಶಾಸಕ, ನಂಜನಗೂಡು

ಸುಧಾ, ಮಯೂರ ಓದಿರಿ

BEFORE THE HON'BLE ADDL. CITY CIVIL AND SESSIONS JUDGE AND COMMERCIAL COURT AT BANGALORE (CCH-84)

COM. O.S.No. 1628/2022

Between:

M/s. Karnataka Co-operative Oil Seeds Growers Federation Ltd., Head office: No.11, 4th Floor, Blue Cross Chambers, Infantry Road Cross, Bangalore – 560001 Represented by its Managing Director, Mr. G.C. Reddy

...PLAINTIFF

And:

K.S. Parvathi, Proprietor, Vasavi Traders, No.437, Ground Floor, SVN School Road, Pipeline Cross, Honnagana Hatii Gate, Channenahalli, Tavarekere, Bangalore – 562130

... DEFENDANT

Summons to defendants through paper publication

Whereas, the above named plaintiff instituted the above top noted suit against defendant for recovery of money of **Rs.8,76,608/-** along with future interest @ 23% p.a. since the defendant is avoiding to take the notice of the above suit proceedings, the notice to defendant is published in this newspaper, accordingly, the defendant is hereby summoned to appear before this court in person or through pleader on the **22nd day May month 2023, at 11.00 AM** to answer the same failing which you will be placed ex-parte, given under my hand and seal of the court, this 31st day of March 2023.

Sd/- Sheristadar, City Civil Court, Bengaluru

Advocate for Plaintiff
M. Sampath Kumar, Advocate,
Building No.11, House No.123, Kengeri Satellite Town, Bangalore - 560060
Mobile: 9845147741

'ಹೋಟೆಲ್ ತಿಂಡಿ–ತಿನಿಸುಗಳ ದರ ಏರಿಕೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್ ಊಟ, ತಿಂಡಿ–ತಿನಿಸುಗಳ ಬೆಲೆಯನ್ನು ಸದ್ಯಕ್ಕೆ ಹೆಚ್ಚಿಸದಿರಲು ಸೋಮವಾರ ನಡೆದ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ತಿಳಿಸಿದೆ.

'ಹೋಟೆಲ್ ಉದ್ಯಮಕ್ಕೆ ಬೇಕಾಗುವ ಅಡುಗೆ ಅನಿಲ ಸೇರಿ ಇತರೆ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ. ಗ್ರಾಹಕರ ಹಿತದೃಷ್ಟಿಯಿಂದ ತಿಂಡಿ–ತಿನಿಸುಗಳ ಬೆಲೆಯನ್ನು ಏರಿಕೆ ಮಾಡುವುದಿಲ್ಲ. ಮುಂದಿನ ಎರಡು ತಿಂಗಳಲ್ಲಿ ಕಚ್ಚಾ ವಸ್ತುಗಳ ದರಗಳ ಬದಲಾವಣೆಯನ್ನು ಗಮನಿಸಿ ತಿಂಡಿ–ತಿನಿಸುಗಳ ದರ ಏರಿಕೆಯ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಮಾಹಿತಿ ನೀಡಿದರು.

'ಇದೇ ಶನಿವಾರ ವಾಣಿಜ್ಯ ಅಡುಗೆ ಅನಿಲದ ಬೆಲೆ ₹91ರಷ್ಟು ಇಳಿಕೆಯಾಗಿತ್ತು. ಆದರೆ, ಏಕಕಾಲಕ್ಕೆ ಹೆಚ್ಚಿನ ಸಿಲಿಂಡರ್ ಖರೀದಿ ಮಾಡುತ್ತಿದ್ದವರಿಗೆ ರಿಯಾಯಿತಿ ರದ್ದು ಮಾಡಲಾಗಿದ್ದು, ಇದರಿಂದ ಮತ್ತಷ್ಟು ಹೊರೆಯಾಗಿದೆ. ಇದನ್ನು ಮುಂದುವರಿಸುವಂತೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳ ಸಚಿವಾಲಯಕ್ಕೆ ಪತ್ರ ಬರೆದರೂ ಪ್ರಯೋಜನವಾಗಿಲ್ಲ' ಎಂದು ತಿಳಿಸಿದರು.

ದೊಣ್ಣೆಯಿಂದ ಹೊಡೆದು ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ಸತೀಶ್ (22) ಎಂಬುವವರನ್ನು ದೊಣ್ಣೆಯಿಂದ ಹೊಡೆದು ಕೊಲೆ ಮಾಡಲಾಗಿದೆ.

'ಪಿಳ್ಳಣ್ಣ ಗಾರ್ಡನ್ ಸಮೀಪದ ರೈಲ್ವೆ ಹಳಿ ಸಮೀಪದಲ್ಲಿ ಸತೀಶ್ ಮೃತದೇಹ ಪತ್ತೆಯಾಗಿದೆ. ಯಾರೂ ದುಷ್ಕರ್ಮಿಗಳು ಭಾನುವಾರ ರಾತ್ರಿ ಸತೀಶ್ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ಮೃತದೇಹವನ್ನು ಆಸ್ಪತ್ರೆಯಲ್ಲಿ ಇರಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಸುಳ್ಳು ಸಾಕ್ಷ್ಯ: ಕೆಪಿಟಿಸಿಎಲ್ ಅಧಿಕಾರಿ ವಿರುದ್ಧ ಕ್ರಿಮಿನಲ್ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಚ ಪ್ರಕರಣವೊಂದರಲ್ಲಿ ಆಪಾದಿತ ಸರ್ಕಾರಿ ನೌಕರನಿಗೆ ಅನುಕೂಲವಾಗುವಂತೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದ ಆರೋಪದ ಮೇಲೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ಸಹಾಯಕ ಆಡಳಿತಾಧಿಕಾರಿ ಕೆ. ಪ್ರಶಾಂತ್ ಕುಮಾರ್ ವಿರುದ್ಧ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ.

ಅಪಾರ್ಟ್‌ಮೆಂಟ್ ಮಾಲೀಕರ ಸಂಘವೊಂದರ ನೋಂದಣಿಗೆ ₹ 10,000 ಲಂಚಕ್ಕೆ ಬೇಡಿಕೆ ಇಟ್ಟು, ₹ 7,000 ಪಡೆಯುತ್ತಿದ್ದ ಸಹಕಾರ ಅಭಿವೃದ್ಧಿ ಅಧಿಕಾರಿ ಎಚ್.ಪಿ. ಸದಾಶಿವ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) 2017ರ ಫೆಬ್ರುವರಿ 10ರಂದು ಬಂಧಿಸಿತ್ತು. ಈ ಪ್ರಕರಣದಲ್ಲಿ ಪ್ರಶಾಂತ್ ಕುಮಾರ್ ಅವರನ್ನು ಕಾರ್ಯಾಚರಣೆ ವೇಳೆ ನೇರ ಸಾಕ್ಷಿಯನ್ನಾಗಿ ಕರೆದೊಯ್ಯಲಾಗಿತ್ತು. ದೂರುದಾರ ಅನಂತ್ ಜತೆಯಲ್ಲೇ ಅವರು ಕಾರ್ಯಾಚರಣೆಯ ಆರಂಭದಿಂದ ಅಂತ್ಯದವರೆಗೂ ಇದ್ದರು.

ಪ್ರಕರಣದ ತನಿಖೆ ನಡೆಸಿದ್ದ ಎಸಿಬಿ ಅಧಿಕಾರಿಗಳು ಸಹಕಾರ ಅಭಿವೃದ್ಧಿ ಅಧಿಕಾರಿ ವಿರುದ್ಧ ಆರೋಪಪಟ್ಟಿ ಸಲ್ಲಿಸಿದ್ದರು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯದಲ್ಲಿ ಈ ಪ್ರಕರಣದ ವಿಚಾರಣೆ ನಡೆದಿತ್ತು. ಮೂರು ಬಾರಿ ವಿಚಾರಣೆಗೆ ಹಾಜರಾಗಿದ್ದ ಪ್ರಶಾಂತ್ ಕುಮಾರ್, ಆರೋಪಪಟ್ಟಿಯಲ್ಲಿ ಸದಾಶಿವ ವಿರುದ್ಧ ಇದ್ದ ಆರೋಪಗಳಿಗೆ ತದ್ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದರು. 'ಸದಾಶಿವ ಲಂಚದ ಹಣವನ್ನು ವಾಪಸ್ ನೀಡುತ್ತಿದ್ದರು' ಎನ್ನುವ ಮೂಲಕ ಇಡೀ ಪ್ರಕರಣಕ್ಕೆ ತಿರುವು ನೀಡಲು ಯತ್ನಿಸಿದ್ದರು.

ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ 2022ರ ಜೂನ್ 13ರಂದು ತೀರ್ಮಾನ ಪ್ರಕಟಿಸಿದ್ದ ವಿಶೇಷ ನ್ಯಾಯಾಲಯ, 'ಸದಾಶಿವ ಅಪರಾಧಿ' ಎಂದು ಸಾರಿತ್ತು. ಐದು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 20,000 ದಂಡ ವಿಧಿಸಿತ್ತು. ಸುಳ್ಳು ಸಾಕ್ಷ್ಯ ಹೇಳಿರುವ ಪ್ರಶಾಂತ್ ಕುಮಾರ್ ವಿರುದ್ಧ ಭಾರತೀಯ ದಂಡ ಸಂಹಿತೆ (ಐಪಿಸಿ) ಸೆಕ್ಷನ್ 193ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಅದೇ ಆದೇಶದಲ್ಲಿ ನಿರ್ದೇಶನ ನೀಡಿತ್ತು.

ಸುಳ್ಳು ಸಾಕ್ಷ್ಯ ನುಡಿದಿರುವುದಕ್ಕೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂಬ ನ್ಯಾಯಾಲಯದ ನಿರ್ದೇಶನದ ಕುರಿತು ಪ್ರತ್ಯೇಕ ಅರ್ಜಿಯೊಂದನ್ನು ದಾಖಲಿಸಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲಾಗಿದೆ. 'ಪ್ರಕರಣ ನಡೆದು 31 ತಿಂಗಳಾಗಿದ್ದುದು ಮತ್ತು ಪ್ರಾಸಿಕ್ಯೂಷನ್ ಪರ ವಕೀಲರ ಸಹಕಾರ ಇಲ್ಲದ ಕಾರಣದಿಂದ ಸರಿಯಾಗಿ ಸಾಕ್ಷ್ಯ ನುಡಿಯಲು ಸಾಧ್ಯವಾಗಿರಲಿಲ್ಲ. ಅದರಲ್ಲಿ ಆರೋಪಿಗೆ ಸಹಕರಿಸುವ ಉದ್ದೇಶ ಇರಲಿಲ್ಲ' ಎಂದು ಪ್ರಶಾಂತ್ ಕುಮಾರ್ ವಾದಿಸಿದ್ದರು. ಅದನ್ನು ತಿರಸ್ಕರಿಸಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಲಕ್ಷ್ಮೀನಾರಾಯಣ ಭಟ್ ಕೆ., ಅಧಿಕಾರಿ ವಿರುದ್ಧ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ನ್ಯಾಯಾಲಯದ ಶಿರಸ್ತೇದಾರ್‌ಗೆ ಮಾರ್ಚ್ 29ರಂದು ಆದೇಶ ಹೊರಡಿಸಿದ್ದಾರೆ.

ಐಪಿಸಿ ಸೆಕ್ಷನ್ 193ರಲ್ಲಿ ಏನಿದೆ?

ಐಪಿಸಿ ಸೆಕ್ಷನ್ 193ರ ಪ್ರಕಾರ, ನ್ಯಾಯಾಲಯದ ವಿಚಾರಣೆಯಲ್ಲಿ ಸುಳ್ಳು ಸಾಕ್ಷ್ಯ ನುಡಿಯುವವರು ಅಥವಾ ತಿರುಚಿದ ಸಾಕ್ಷ್ಯಗಳನ್ನು ಸಲ್ಲಿಸುವವರಿಗೆ ಏಳು ವರ್ಷಗಳವರೆಗೂ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ.

ರಂಜಾನ್ ಮಾಸ: ನಗರದಲ್ಲೇ 150 ಟನ್‌ಗೂ ಹೆಚ್ಚು ಮಾರಾಟದ ನಿರೀಕ್ಷೆ

ವೈವಿಧ್ಯಮಯ ಖರ್ಜೂರ: ಹೆಚ್ಚಿದ ಬೇಡಿಕೆ

• ಖಲೀಲಅಹ್ಮದ ಶೇಖ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಂಜಾನ್ ಮಾಸದಲ್ಲಿ ಖರ್ಜೂರಕ್ಕೆ ಹೆಚ್ಚು ಬೇಡಿಕೆ. ಮುಸ್ಲಿಮರು ಉಪವಾಸ ಮುಗಿಸುವುದೇ ಖರ್ಜೂರ ಸೇವಿಸುವ ಮೂಲಕ. ಈ ವ್ರತಾಚರಣೆ ವೇಳೆ ನಗರದಲ್ಲೇ ದಾಖಲೆಯ 150 ಟನ್‌ಗೂ ಅಧಿಕ ಖರ್ಜೂರ ಮಾರಾಟವಾಗುತ್ತದೆ ಎಂದು ಅಂದಾಜಿಸಲಾಗಿದೆ.

ಶಿವಾಜಿನಗರ, ರಸೆಲ್ ಮಾರುಕಟ್ಟೆ, ಯಶವಂತಪುರ ಎಪಿಎಂಸಿ ಮಾರುಕಟ್ಟೆ, ಮಲ್ಲೇಶ್ವರ, ಜಯನಗರ 4ನೇ ಬ್ಲಾಕ್, ಬಸವನಗುಡಿ, ಹಳೇ ತರಗುಪೇಟೆ, ಹೊಸ ತರಗುಪೇಟೆಗಳಲ್ಲಿ ಖರ್ಜೂರ ವ್ಯಾಪಾರ ನಡೆಯುತ್ತದೆ. ವಿದೇಶದ ಬಗೆಬಗೆಯ ಖರ್ಜೂರಗಳು ಸಹ ಈಗ ಮಾರುಕಟ್ಟೆಯಲ್ಲಿ ಲಭ್ಯ. ಮುಸ್ಲಿಮರ ಜತೆಗೆ ಬೇರೆ ಸಮುದಾಯದವರು ಖರೀದಿಗೆ ಮುಗಿಬೀಳುತ್ತಿದ್ದಾರೆ.

'ರಂಜಾನ್' ಅಂಗವಾಗಿ ಮುಸ್ಲಿಮರು ಒಂದು ತಿಂಗಳು ಉಪವಾಸ ವ್ರತ ಕೈಗೊಳ್ಳುತ್ತಾರೆ. ಪ್ರವಾದಿ ಮೊಹಮ್ಮದ್ ಅವರು ಇಫ್ತಾರ್ ವೇಳೆ, ಖರ್ಜೂರ ಸೇವಿಸಿ ರೋಜಾ ಮುಕ್ತಾಯಗೊಳಿಸುತ್ತಿದ್ದರು. ಮಸೀದಿ, ಮನೆಗಳಲ್ಲಿ ಸಂಜೆ ಆಯೋಜಸುತ್ತಿರುವ ಇಫ್ತಾರ್ ಕೂಟಗಳಲ್ಲಿ ಖರ್ಜೂರಕ್ಕೆ ಮೊದಲ ಸ್ಥಾನವಿದೆ. ಖರ್ಜೂರದಿಂದಲೇ ದಿನದ ಉಪವಾಸ ಮುಕ್ತಾಯಗೊಳಿಸುತ್ತಾರೆ' ಎಂದು ಶಿವಾಜಿನಗರದ ರಸೆಲ್ ಮಾರ್ಕೆಟ್ ವ್ಯಾಪಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಇದ್ರೀಸ್ ಚೌಧರಿ ಮಾಹಿತಿ ನೀಡಿದರು.

'ಕೋವಿಡ್ ಅವಧಿಯಲ್ಲಿ ವ್ಯಾಪಾರಿಗಳು ಸಾಕಷ್ಟು ನಷ್ಟ ಅನುಭವಿಸಿದ್ದರು. ಎರಡು ವರ್ಷಗಳ ಬಳಿಕ ಈ ಬಾರಿ ಬೇಡಿಕೆ ಹೆಚ್ಚಿದ್ದು, ವ್ಯಾಪಾರ ಚೇತರಿಸಿಕೊಂಡಿದೆ. ನಗರದಲ್ಲಿ 1,000ಕ್ಕೂ ಹೆಚ್ಚು ಖರ್ಜೂರ ಮಾರಾಟ ಅಂಗಡಿಗಳಿದ್ದು, ರಂಜಾನ್ ಮಾಸದಲ್ಲೇ 150 ಟನ್‌ಗೂ ಅಧಿಕ ಖರ್ಜೂರ ಮಾರಾಟವಾಗುತ್ತದೆ' ಎಂದು ಹೇಳಿದರು.

'ಖರ್ಜೂರಗಳಲ್ಲಿ ಔಷಧೀಯ ಗುಣಗಳಿವೆ. ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರಿಗೂ ಖರ್ಜೂರ ಅಚ್ಚುಮೆಚ್ಚು. ಅಜುವಾ ಖರ್ಜೂರಕ್ಕೆ ವಿಶೇಷ ಶಕ್ತಿ ಇದೆ. ನಿಶ್ಯಕ್ತಿ, ಚರ್ಮರೋಗ, ದೃಷ್ಟಿ ದೋಷ ಕಾಯಿಲೆ ನಿವಾರಣೆಗೆ ಸಹಕಾರಿ ಎನ್ನಲಾಗಿದೆ. ದಕ್ಷಿಣ ಆಫ್ರಿಕಾ ಮೂಲದ ಮೆಡ್‌ಜೋಲ್ ಖರ್ಜೂರ ಹೆಚ್ಚು ಸಿಹಿಯಾಗಿದ್ದು, ಅಧಿಕ ತಿರುಳು ಹೊಂದಿರುತ್ತದೆ' ಎಂದು ಹೇಳಿದರು.

ರಸೆಲ್ ಮಾರುಕಟ್ಟೆಯ ಅಂಗಡಿಯೊಂದರಲ್ಲಿ ಕಂಡುಬಂದ ವಿವಿಧ ಬಗೆಯ ಖರ್ಜೂರ

'ವಿದೇಶಿ ಖರ್ಜೂರಕ್ಕೆ ಹೆಚ್ಚಿದ ಬೇಡಿಕೆ'

ಪ್ರಪಂಚದಲ್ಲಿ 350ಕ್ಕೂ ಹೆಚ್ಚು ಬಗೆಯ ಖರ್ಜೂರ ಬೆಳೆಯಲಾಗುತ್ತದೆ. ಶಿವಾಜಿನಗರದ ರಸೆಲ್ ಮಾರುಕಟ್ಟೆಯಲ್ಲಿಯೇ 22 ಬಗೆಯ ಖರ್ಜೂರಗಳು ದೊರೆಯುತ್ತವೆ.

'ವಿದೇಶದ ಖರ್ಜೂರ ಹಾಗೂ ಒಣಹಣ್ಣುಗಳ ಖರೀದಿಗೆ ರಂಜಾನ್‌ಗಿಂತ ಒಂದು ತಿಂಗಳ ಮುಂಚಿತವೇ ಬೇಡಿಕೆ ಹೆಚ್ಚಾಗುತ್ತದೆ. ಸೌದಿ ಅರೇಬಿಯಾ, ಇರಾನ್, ಜೋರ್ಡಾನ್, ಬಗ್ದಾದ್, ಟುನಿಷಿಯಾ, ದಕ್ಷಿಣ ಆಫ್ರಿಕಾ ಖರ್ಜೂರಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಅದರಲ್ಲಿ ಅಜುವಾ, ಸಕ್ಕರೆರಹಿತ ಮೆಡ್ಜಾಲ್ ಕಿಂಗ್, ರುತ್ಬ ಸುಖ್ರಿ, ಸಖಾರಿ, ಕಲ್ಮಿ, ಇರಾನಿ, ಅಂಬರ, ಖುದ್ರಿ, ಸಗಾಯಿ ಸೇರಿ ಹಲವಾರು ಬಗೆಯ ಖರ್ಜೂರಗಳು ಲಭ್ಯ. ಪ್ರತಿ ಕೆ.ಜಿ.ಗೆ ಕನಿಷ್ಠ ₹240ರಿಂದ ಗರಿಷ್ಠ ₹2ಸಾವಿರವರೆಗೆ ದರವಿದೆ' ಎಂದು ಮಹಮ್ಮದ್ ಇದ್ರೀಸ್ ಚೌಧರಿ ಮಾಹಿತಿ ನೀಡಿದರು.

ರಂಜಾನ್ ಮಾಸದಲ್ಲಿ ಖರ್ಜೂರ ಮಾರಾಟದ ಮೇಲೆ ವಿಧಿಸುವ ಜಿಎಸ್‌ಟಿಗೆ ಕೇಂದ್ರ ಸರ್ಕಾರ ವಿನಾಯಿತಿ ನೀಡಬೇಕು.

ಮಹಮ್ಮದ್ ಇದ್ರೀಸ್ ಚೌಧರಿ
ರಸೆಲ್ ಮಾರ್ಕೆಟ್ ವ್ಯಾಪಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ

ಫ್ಯೂರೋರ್ ಆರಂಭ

ನಗರದ ದಯಾನಂದ ಸಾಗರ್ ಕಾಲೇಜಿನ ಸಾಂಸ್ಕೃತಿಕ ಹಬ್ಬ 'ಫ್ಯೂರೋರ್'ಗೆ ಸೋಮವಾರ ಚಾಲನೆ ನೀಡಲಾಯಿತು. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ನಟಿ ನಿಮಿಕಾ ರತ್ನಾಕರ್, ಸಂಸ್ಥೆಯ ಕಾರ್ಯದರ್ಶಿ ಗಾಳಿಸ್ವಾಮಿ, ಕಾರ್ಯಕ್ರಮದ ಉಸ್ತುವಾರಿ ಪೂಜಾ ಬಾಳಿಗಾ, ನವೀನ್ ಶಂಕರ್, ಪ್ರತಾಪ್ ನಾರಾಯಣ್, ರಘು ಇದ್ದರು.

ಒಳಮೀಸಲಾತಿ ವಿರೋಧಿಸಿ ನಾಳೆಯಿಂದ ಜಾಗೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಗಳ ವರ್ಗೀಕರಣ ಮಾಡುವ ಮೂಲಕ ಒಳಮೀಸಲಾತಿ ಹಂಚಿಕೆ ಮಾಡಿರುವುದನ್ನು ಖಂಡಿಸಿ ಏಪ್ರಿಲ್ 5ರಿಂದ ರಾಜ್ಯದಾದ್ಯಂತ ಜಾಗೃತಿ ಅಭಿಯಾನ ಮಾಡಲಾಗುವುದು ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ತಿಳಿಸಿದೆ.

'ಸಂವಿಧಾನ ವಿರೋಧಿ ಹಾಗೂ ಸುಪ್ರೀಂ ಕೋರ್ಟ್‌ನ ತೀರ್ಪಿಗೆ ವಿರುದ್ಧವಾಗಿ ಪರಿಶಿಷ್ಟ ಜಾತಿಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿ ಒಳಮೀಸಲಾತಿ ಹಂಚಿಕೆ ಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿರುವುದನ್ನು ತಡೆಹಿಡಿಯಬೇಕು. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಿಂದ ಇದರ ವಿರುದ್ಧ ಜನಜಾಗೃತಿ ಮೂಡಿಸುವ ಅಭಿಯಾನಕ್ಕೆ ಚಾಲನೆ ನೀಡಲಾಗುವುದು' ಎಂದು ಒಕ್ಕೂಟದ ಅಧ್ಯಕ್ಷ ರವಿ ಎಚ್. ಮಾಕಳಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಒಳ ಮೀಸಲಾತಿಯೇ ಅಸಂವಿಧಾನಿಕ. ಹೀಗಾಗಿರುವ ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳಿಗೆ ಶೇ 4.5 ರಷ್ಟು ಮೀಸಲಾತಿ ಹಂಚಿಕೆ ಮಾಡಿರುವುದು ಕೂಡ ಅವೈಜ್ಞಾನಿಕ. ಇದು ಭಾರತದ ಸಂವಿಧಾನ ಮತ್ತು ನಮ್ಮ ಸಮುದಾಯಗಳಿಗೆ ಮಾಡಿದ ದ್ರೋಹ. ನಮ್ಮ ಹಿಂದುಳಿದಿರುವಿಕೆಯನ್ನು ಮತ್ತು ಜನಸಂಖ್ಯೆಯನ್ನು ಪರಿಗಣಿಸದೆ ಶೇಕಡಾ 4.5 ಪ್ರಮಾಣದ ಮೀಸಲಾತಿ ಹಂಚಿಕೆ ಮಾಡಲಾಗಿದೆ' ಎಂದು ಆರೋಪಿಸಿದರು.

'ಕಾನೂನು ಸಚಿವರಾದ ಜೆ. ಸಿ. ಮಾಧುಸ್ವಾಮಿ ಅವರ ನೇತೃತ್ವದ ಸಚಿವ ಸಂಪುಟದ ಉಪಸಮಿತಿಯು ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಸಹೋದರ ಸಮುದಾಯಗಳ ಕುರಿತು ವಸ್ತುನಿಷ್ಠ ಅಧ್ಯಯನವೇ ಮಾಡಿಲ್ಲ. ಈ ಉಪಸಮಿತಿಯ ವರದಿಯಲ್ಲಿ ಪರಿಶಿಷ್ಟ ಜಾತಿಗಳ ಸಹೋದರ ಸಮುದಾಯಗಳ ಐಕ್ಯತೆ ಹಾಳು ಮಾಡಲು ಸ್ಪೃಶ್ಯರು, ಅಸ್ಪೃಶ್ಯರು, ಸೌಲಭ್ಯ ಪಡೆದವರು, ಮುಂದುವರಿದವರು, ಅಭಿವೃದ್ಧಿ ಹೊಂದಿರುವವರು, ಎಡಗೈ, ಬಲಗೈ, ಎಂದು ವಿಭಜಿಸಲಾಗಿದೆ' ಎಂದು ಹೇಳಿದರು.

'ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಹೋರಾಟಗಾರರ ಮೇಲೆ ದಾಖಲಿಸಿರುವ ಎಲ್ಲಾ ಪ್ರಕರಣಗಳನ್ನು ಕೂಡಲೇ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

ರಾಘವೇಂದ್ರ ನಾಯಕ್, ಅನಂತ್ ನಾಯಕ್ ಎನ್., ಆದರ್ಶ ಯಲ್ಲಪ್ಪ, ಬಿ.ಟಿ. ಲಲಿತಾ ನಾಯಕ್, ಇದ್ದರು.

TRAVEL CORNER

9015 500 200 RAILTOURISM.COM

CONNECT ಕ್ಲಾಸಿಫೈಡ್ಸ್

Grand Flea Market Presents

ದ ಸೋಕ್ (ಮಾರ್ಕೆಟ್)
THE SOUQ (MARKET)

Art, Craft, Handlooms & Lifestyle Exhibition

Date : 31st March 2023 to 9th April 2023

Timings : 11:00 AM to 7:00 PM

10 DAYS EXHIBITION



Art & Crafts | Handicrafts | Clothings | Fashion Accessories | Home Decore & More

Entry Free! The Shadow Show — Live Performance — Date: 8th April 2023 — Timings: 5.30 PM – 6.30 PM — Venue: Karnataka Chitrakala Parishath, Kumara Krupa Road, Near Shivananda Circle, Bengaluru

Entry Free! ChendaMelam — Rhythm of Drums — Date: 9th April 2023 | Timings: 5 PM to 7 PM — Karnataka Chitrakala Parishath, Kumara Krupa Road, Bengaluru

Organized By: Grand Flea Market

For Details Contact: 9036658774 / 6364685716

Karnataka Chitrakala Parishath, Kumara Krupa Road, Bengaluru

10 DAYS EXHIBITION | 100+ STALLS | LIVE PERFORMANCE | FREE ENTRY

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

General

RETIRED/ VRS Persons and Age above 45 Years Earn 2nd Income 50K to 60K PM in their life here no Retirement: 9886641282/ 7019215243

RENTAL PROPERTIES

Accommodation Available

Commercial

RENT, COMMERCIAL Shops, Chikkallasandra, KSRTC Layout, 2 shops, ground floor. Suitable: ATM's/ Electricals. 8123569300

PERSONAL

Change of Name

I, VINAY KUMAR ACHANTA CHATURBHUJA, residing Bengaluru-102, have changed my name as VINAY KUMAR ACHANTA,vide affidavit dated 3/4/2023 before Notary P.C.Ramaiah, Bengaluru

I,SUNANDITA BISWAS D/o Subha Chandra Biswas, R/at.#708, Junior College Road,Kadugodi Bangalore-560067,have changed-my name-from Sunandita Biswas to Saba Sunandita Biswas and religion from Hindu to Islam vide_affidavit dtd:30.03.2023, sworn_before N.Nagappa, Advocate_& Notary, Bangalore.

I THEJASWINI N #251/1,3rd cross Gokula 1st stage,1st Phase MSRIT Bengaluru-54 have changed my name to TEJASHWINI N SINGH Vide affidavit dated 27/03/2023 before notary K.V. Mani, Bengaluru.

I, SAIYADA YASEEM BANU W/O AZEEZ ABBAS residence at Alipur Gowribidanur taluk, Chikkaballapur district have changed my name to SYEDA YASEEM BANU vide affidavit dated 01.04.2023 before notary N.S Ashok Kumar Gowribidanur.

KANAKARAJ S/O. Late.Siddappa, R/a#150, Ramaiahnapalya, Dodballapura, Bangalore Rural District, Bangalore-561203 Have Changed My Name to RAJANNA vide Affidavit Dated: 30.3.2023 Before Notary C.V.Earappa, Bengaluru.

PUBLIC NOTICE

ಸಾರ್ವಜನಿಕ ನೋಟಿಸ್

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಹಿರಂಡಹಳ್ಳಿ ಗ್ರಾಮಕ್ಕೆ ಸೇರಿದ ಸ್ವತ್ತಿನ ನಂ, 83, ಖಾತೆ ನಂ. 761/28/29, ನಿವೇಶನದ ಸಂಖ್ಯೆಗಳ ನಂ. 28 ಮತ್ತು 29ರಲ್ಲಿರುವ ನಿವೇಶನದ ವಿಸ್ತೀರ್ಣ ಪೂ+ಪ: 40ಅಡಿಗಳು, ಉ+ದ: 60ಅಡಿಗಳು, ಒಟ್ಟು 2400ಚದರ ಅಡಿಗಳ ವಿಸ್ತೀರ್ಣವುಳ್ಳ ಸ್ವತ್ತನ್ನು **ಸುನಿತ, ಆರ್.ಎಲ್,** ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಹಿರಂಡಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ರಾಮಾಂಜನಪ್ಪ, ಹೆಚ್.ಎನ್. ಬಿನ್ ಲೇಟ್ ನಂಜಪ್ಪನವರಿಂದ ಶುದ್ಧ ಕ್ರಯಕ್ಕೆ ಪಡೆಯುತ್ತಿದ್ದು ಸದರಿ ಸ್ವತ್ತಿನ ಬಗ್ಗೆ ಸಾರ್ವಜನಿಕರ ತಕರಾರಿದ್ದರೇ ಅಥವಾ ತಮಗೂ ಹಕ್ಕು ಇದೆ ಎಂಬುದಾಗಿದ್ದರೆ ಸೂಕ್ತ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಬರವಣಿಗೆಯ ಮುಖಾಂತರವಾಗಿ ಕೆಳಕಂಡ ವಿಳಾಸದಲ್ಲಿ 8 ದಿನಗಳೊಳಗೆ ಸಂಪರ್ಕಿಸುವುದು.

ಎನ್. ಬಾಬು, ವಕೀಲರು,
ಮೊಬೈಲ್ ನಂ. 9341860947
9740913583 (ಸುನಿತ. ಆರ್.ಎಲ್)
ಬೆಂಗಳೂರು ದಿನಾಂಕ: 03.04.2023

DH Deccan Herald | ಪ್ರಜಾವಾಣಿ

NAME CHANGE

BOOK YOUR NAME CHANGE AD IN DECCAN HERALD ALL KARNATAKA + PRAJAVANI BENGALURU ALL DAYS

CHANGE OF NAME @ 50/-* Per Word

*conditions apply

For More Details Contact:
9731810277 | 9901641752
9845114560 | 9886213331
080- 45557160 | 163 | 164

ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ

ಪ್ರದರ್ಶನ ಮತ್ತು ಮಾರಾಟ

1 ರಿಂದ 9 ಏಪ್ರಿಲ್

ವಿವಾಹ ಮತ್ತು ಬೇಸಿಗೆ ವಿಶೇಷ

ಕೈಮಗ್ಗದ ಸಿಲ್ಕ್ ಮತ್ತು ಕಾಟನ್ ಸೀರೆ, ಡಿಸೈನರ್, ಎಥ್ನಿಕ್ ಮತ್ತು ವೆಸ್ಟರ್ನ ಉಡುಪು, ಫ್ಯಾಷನ್ ಜ್ಯುವೆಲ್ಲರಿ ಮತ್ತು ಇನ್ನೂ ಅನೇಕ

ಭಾಗವಹಿಸುವ ರಾಜ್ಯಗಳು: ಬಿಹಾರ್, ಅಸ್ಸಾಮ್, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ರಾಜಸ್ಥಾನ, ಕರ್ನಾಟಕ, ತಮಿಳನಾಡು , ಪಂಜಾಬ್, ತೆಲಂಗಾಣ, ಒಡಿಶಾ , ಚತ್ತೀಸ್‌ಘಢ್, ಜಮ್ಮು&ಕಾಶ್ಮೀರ, ಆಂಧ್ರಪ್ರದೇಶ ಮತ್ತು ಇನ್ನಿತರ ರಾಜ್ಯಗಳು

ಸ್ಥಳ: ಶಿಲ್ಪಕಲಾ ಮಂಟಪ

9ನೇ ಕ್ರಾಸ್, ಜೆಪಿ ನಗರ, 3ನೇ ಫೇಸ್, ಬನ್ನೇರಘಟ್ಟ ಮುಖ್ಯ ರಸ್ತೆ, ಶಾಪರ್ಸ್ ಸ್ಟಾಪ್ ಎದುರು, ಜಯದೇವ ಆಸ್ಪತ್ರೆಯ ಸಮೀಪ, ಬೆಂಗಳೂರು

CONTACT - 9412258826 | ALL DEBIT & CREDIT CARDS ACCEPTED | ENTRY FREE

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

DH — To Place your ad in Deccan Herald & Prajavani Classifieds
For details contact :
9845114560 / 9731810277 / 080 - 45557163 / 164

ಬೆಂಗಳೂರಿನ ಶ್ರೀನಗರದ ಅವಲಹಳ್ಳಿ ಮುಖ್ಯರಸ್ತೆಯಲ್ಲಿ ಸೋಮವಾರ ರಾತ್ರಿ ಸುರಿದ ಮಳೆಯಲ್ಲಿ ಕೊಡೆಯೊಂದಿಗೆ ಸಾಗಿದ ಪಾದಚಾರಿ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ. (ಎಡಚಿತ್ರ), ಗೊರಗುಂಟೆಪಾಳ್ಯ ರಸ್ತೆಯಲ್ಲಿ ಮಳೆಯಲ್ಲೇ ಚಲಿಸಿದ ವಾಹನಗಳು –ಪ್ರಜಾವಾಣಿ ಚಿತ್ರ/ ಬಿ.ಎಚ್‌. ಶಿವಕುಮಾರ್

ಆಲ್‌ರೌಂಡರ್ ಕ್ರಿಕೆಟ್ ದಿಗ್ಗಜರಿಗೆ ಶ್ರದ್ಧಾಂಜಲಿ!

ಕೆಪಿಸಿಸಿ ಶಿಕ್ಷಕರ ಘಟಕಕ್ಕೆ ನೇಮಕ

ಪ್ರಜಾವಾಣಿ ವಾರ್ತೆ

ಯಲಹಂಕ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಶಿಕ್ಷಕರ ಘಟಕದ ಅಧ್ಯಕ್ಷರಾಗಿ ಬಸವರಾಜ ಗುರಿಕಾರ ಮತ್ತು ಉಪಾಧ್ಯಕ್ಷರಾಗಿ ಎ.ಸಿ.ಹರಿ ಪ್ರಸಾದ್ ಅವರನ್ನು ನೇಮಿಸಲಾಗಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಆದೇಶದ ಮೇರೆಗೆ ಈ ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬಸವರಾಜ ಗುರಿಕಾರ

ಎ.ಸಿ. ಹರಿಪ್ರಸಾದ್

ನಗರದಲ್ಲಿ ಜೋರು ಮಳೆ: ತಂಪಾದ ಇಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆ ಆರಂಭವಾಗಿ ಬಿಸಿಲಿನ ಧಗೆ ಹೆಚ್ಚುತ್ತಿದೆ. ಇದರ ನಡುವೆಯೇ ನಗರದ ಹಲವೆಡೆ ಸೋಮವಾರ ಜೋರು ಮಳೆ ಸುರಿಯಿತು.

ನಗರದ ಹಲವೆಡೆ ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣ ಕಂಡು ಬಂತು.

ಅಲ್ಲಲ್ಲಿ ಬಿಸಿಲು ಕಾಣಿಸಿದರೂ ಹೆಚ್ಚು ಹೊತ್ತು ಇರಲಿಲ್ಲ. ಸಂಜೆ ವೇಳೆ ಶುರುವಾದ ಮಳೆಯ ಅಬ್ಬರ ರಾತ್ರಿಯವರೆಗೂ ಇತ್ತು.

ದೀಪಾಂಜಲಿನಗರ, ವಿಜಯನಗರ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಯಶವಂತಪುರ, ಪೀಣ್ಯ ಹಾಗೂ ಸುತ್ತಮುತ್ತ ಜೋರು ಮಳೆ ಆಯಿತು.

ಹೆಬ್ಬಾಳ, ಆರ್‌.ಟಿ. ನಗರ, ಅಮೃತಹಳ್ಳಿ, ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಶಿವಾಜಿನಗರ, ಅಶೋಕನಗರ, ಹಲಸೂರು, ಇಂದಿರಾ ನಗರ, ದೊಮ್ಮಲೂರು, ಕೋರಮಂಗಲ, ಮಡಿವಾಳ, ಜಯನಗರ, ಹನುಮಂತ ನಗರ, ಗಿರಿನಗರ ಹಾಗೂ ಸುತ್ತಮುತ್ತ ಮಳೆ ಸುರಿಯಿತು.

'ನಗರದ ಬಹುತೇಕ ಕಡೆ ಸಂಜೆಯಿಂದ ರಾತ್ರಿಯವರೆಗೂ ಮಳೆ ಆಗಿದೆ. ಬಿಸಿಲಿನ ಸೆಕೆಯಿಂದ ಬೇಸತ್ತಿದ್ದ ಜನರಿಗೆ ತಂಪಿನ ಅನುಭವವಾಗಿದೆ. ಮಳೆಯಿಂದ ಹಾನಿಯಾದ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

'ಬಹುತೇಕ ಪ್ರದೇಶಗಳ ರಸ್ತೆಗಳಲ್ಲಿ ಚರಂಡಿಗಳನ್ನು ಸ್ವಚ್ಛಗೊಳಿಸಲಾಗಿದೆ. ಸೋಮವಾರ ಮಳೆ ಸುರಿದ ವೇಳೆ ನೀರು ಸರಾಗವಾಗಿ ಹರಿದು ಹೋಗಿದೆ. ಹೀಗಾಗಿ, ರಸ್ತೆಯಲ್ಲಿ ನೀರು ನಿಂತ ಬಗ್ಗೆ ದೂರುಗಳು ಬಂದಿಲ್ಲ' ಎಂದು ತಿಳಿಸಿದರು.

ಸಂಚಾರ ದಟ್ಟಣೆ: ಸೋಮವಾರ ಸಂಜೆ ಮಳೆ ಸುರಿದಿದ್ದರಿಂದ ಹಲವು ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಕಂಡುಬಂತು. ಕಚೇರಿಯಿಂದ ಮನೆಗೆ ಹೊರಟಿದ್ದ ಹಾಗೂ ತಮ್ಮ ಕೆಲಸಕ್ಕೆ ತೆರಳುತ್ತಿದ್ದ ಜನ, ದಟ್ಟಣೆಯಲ್ಲಿ ಸಿಲುಕುವಂತಾಯಿತು.

ಮೆಜೆಸ್ಟಿಕ್, ಗಾಂಧಿನಗರ, ನೃಪ ತುಂಗ ರಸ್ತೆ, ಕೆಂಪೇಗೌಡ ರಸ್ತೆ, ರೇಸ್‌ಕೋರ್ಸ್ ರಸ್ತೆ, ಓಕಳಿಪುರ ಹಾಗೂ ಸುತ್ತಮುತ್ತ ರಸ್ತೆಗಳ ಬದಿಗಳಲ್ಲಿ ದ್ವಿಚಕ್ರ ವಾಹನಗಳಲ್ಲಿ ನಿಲ್ಲಿಸಿದ್ದ ಸವಾರರು, ಅಕ್ಕ–ಪಕ್ಕದ ಮಳಿಗೆಗಳಲ್ಲಿ ಆಶ್ರಯ ಪಡೆದಿದ್ದರು.

ಸುರಿಯುತ್ತಿದ್ದ ಮಳೆಯಲ್ಲಿ ವಾಹನಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಲು ಪೊಲೀಸರು ಪರದಾಡಿದರು.

ಕೆಲ ಚಾಲಕರು ವಾಹನಗಳನ್ನು ಅಡ್ಡಾದಿಡ್ಡಿಯಾಗಿ ಓಡಿಸಿದ್ದರಿಂದ ದಟ್ಟಣೆ ಸಮಸ್ಯೆ ಉಲ್ಬಣಿಸಿತ್ತು.

'ಬೆಂಗಳೂರಿನಲ್ಲಿ ಇನ್ನೂ ಎರಡು ದಿನಗಳ ಕಾಲ ಮಳೆಯಾಗುವ ಸಾಧ್ಯತೆ ಯಿದೆ. ಮೋಡ ಕವಿದ ವಾತಾವರಣವೂ ಕಂಡುಬರಲಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ತಲೆಮರೆಸಿಕೊಂಡಿಲ್ಲ, ವಿಚಾರಣೆ ಎದುರಿಸುವೆ: ಪುನೀತ್ ಕೆರೆಹಳ್ಳಿ

ರಾಮನಗರ: 'ಇದ್ರೀಷ್ ಪಾಷ ಸಾವು ವಿಚಾರದಲ್ಲಿ ನನ್ನ ವಿರುದ್ಧ ಎಫ್ಐಆರ್ ದಾಖಲಾಗಿದ್ದರೆ ವಿಚಾರಣೆ ಎದುರಿಸುತ್ತೇನೆ. ಕಾನೂನಾತ್ಮಕವಾಗಿ ಹೋರಾಟ ಮಾಡುತ್ತೇನೆ' ಎಂದು ಪ್ರಕರಣದ ಪ್ರಮುಖ ಆರೋಪಿ, ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಪುನೀತ್ ಕೆರೆಹಳ್ಳಿ ಹೇಳಿದ್ದಾರೆ.

ಪುನೀತ್ ಕೆರೆಹಳ್ಳಿ

ಈ ಬಗ್ಗೆ ಪುನೀತ್ ಮಾತ ನಾಡಿರುವ ವಿಡಿಯೊ ಒಂದು ಸೋಮವಾರ ರಾತ್ರಿ ಫೇಸ್‌ಬುಕ್‌ನಲ್ಲಿ ಹರಿದಾಡುತ್ತಿದೆ. 'ಅನೇಕ ದೇವಸ್ಥಾನಗಳಿಗೆ ಭೇಟಿ ಕೊಡುತ್ತಿದ್ದು, ಈ ಸಂದರ್ಭದಲ್ಲಿ ನನ್ನ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಹೀಗಾಗಿ, ಯಾರ ಸಂಪರ್ಕಕ್ಕೂ ಸಿಕ್ಕಿರಲಿಲ್ಲ. ಮಾಹಿತಿ ಬಂದರೆ ನಾನೇ ಖುದ್ದು ಪೊಲೀಸರ ಮುಂದೆ ಬರುತ್ತೇನೆ' ಎಂದು ಅವರು ಹೇಳಿದ್ದಾರೆ.

'ಶುಕ್ರವಾರ ಮಧ್ಯರಾತ್ರಿ 11.59 ರಿಂದ ನಾನು ಘಟನೆಯನ್ನು ಫೇಸ್ ಬುಕ್ ಲೈವ್ ಮಾಡಿದ್ದೇನೆ. ಶನಿವಾರ ಬೆಳಿಗ್ಗೆ 5ಕ್ಕೆ ಮಠಕ್ಕೆ ಹಸುಗಳನ್ನು ಬಿಡುವವರೆಗೂ ನಾನು ಪೊಲೀಸರ ಜೊತೆಯಲ್ಲೇ ಇದ್ದೆ. ನಾವು ಯಾರನ್ನೂ ಹತ್ಯೆ ಮಾಡಿಲ್ಲ. ಮರಣೋತ್ತರ ಪರೀಕ್ಷೆ ವರದಿಯೇ ಇದಕ್ಕೆ ಉತ್ತರ ನೀಡಲಿದೆ' ಎಂದು ಅವರು ಹೇಳಿದ್ದಾರೆ.

'ಯಾರಿಗೂ ನಾನು ಹಣಕ್ಕಾಗಿ ಬೇಡಿಕೆ ಇಟ್ಟಿಲ್ಲ. ದುಡ್ಡು ಮಾಡಲು ಈ ಹೋರಾಟಕ್ಕೆ ಬಂದಿಲ್ಲ. ಕುಮಾರಸ್ವಾಮಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಯಾರೇ ನನ್ನ ವಿರುದ್ಧ ನಿಂತರೂ ಹೋರಾಟ ಬಿಡುವುದಿಲ್ಲ' ಎಂದು ಅವರು ವಿಡಿಯೊದಲ್ಲಿ ಹೇಳಿದ್ದಾರೆ.

'ಮಂಡ್ಯದಿಂದ ಹಲಗೂರು, ಸಾತನೂರು ಮಾರ್ಗವಾಗಿ ನಿರಂತರ ವಾಗಿ ಜಾನುವಾರು ಸಾಗಣೆ ಆಗು ತ್ತಿದ್ದು, ಇದಕ್ಕೆ ರಾಜಕಾರಣಿಗಳ ಕೃಪಾಕಟಾಕ್ಷವೂ ಇದೆ' ಎಂದೂ ಅವರು ದೂರಿದ್ದಾರೆ.

ಛಾಯಾಚಿತ್ರ ಸ್ಪರ್ಧೆ: 13ರಿಂದ ನೋಂದಣಿ

ಬೆಂಗಳೂರು: ಅಡವಿ ಅಲರ್ಟ್ ಫೌಂಡೇಷನ್ ವತಿಯಿಂದ 'ಐ ಫಾರ್ ವೈಲ್ಡ್' ಎಂಬ ಪರಿಕಲ್ಪನೆ ಅಡಿ ರಾಷ್ಟ್ರ ಮಟ್ಟದ ಛಾಯಾಚಿತ್ರ ಸ್ಪರ್ಧೆ ಆಯೋಜಿಸಲಾಗಿದೆ.

ಇದೇ 13ರಿಂದ ಸ್ಪರ್ಧೆಗೆ ನೋಂದಣಿ ಆರಂಭಗೊಳ್ಳಲಿದೆ. ಮೇ 23ರಂದು ನೋಂದಣಿಗೆ ಕೊನೆ ದಿನವಾಗಿದೆ. 'ಟೈಟಲ್' ವಿಜೇತರಿಗೆ ₹ 25 ಸಾವಿರ, ಪ್ರಥಮ ಬಹುಮಾನ ₹ 15 ಸಾವಿರ, ದ್ವಿತೀಯ ಬಹುಮಾನ ₹ 10 ಸಾವಿರ, ತೃತೀಯ ಬಹುಮಾನ ₹ 5 ಸಾವಿರ ನೀಡಲಾಗುವುದು. ಪ್ರಮಾಣಪತ್ರ ಹಾಗೂ ಆಕರ್ಷಕ ಉಡುಗೊರೆಗಳು ಇರಲಿವೆ. ವನ್ಯಜೀವಿ ಹಾಗೂ ಪ್ರಾಣಿ–ಮಾನವ ಸಂಘರ್ಷದ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ: 77606 74721 , 93532 46026.

ಹಸಿರು ವಾತಾವರಣ: ಬಿಎಸಿಎಲ್‌ಗೆ ಗ್ರೀನ್ ಸಿಟೀಸ್ ಪ್ಲಾಟಿನಂ ಗರಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪರಿಸರ ಸಂರಕ್ಷಣಾ ಯೋಜನೆ ಜಾರಿಗಾಗಿ ಪ್ರಶಸ್ತಿ
- ಬಿಎಸಿಎಲ್‌ನಿಂದ ಸಮಗ್ರ ಸುಸ್ಥಿರ ಅಭಿವೃದ್ಧಿ

ದೇವನಹಳ್ಳಿ: ಕೆಂಪೇಗೌಡ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಹಸಿರುಮಯ ವಾತಾವರಣ ನಿರ್ಮಾಣ ಮಾಡಿರುವುದಕ್ಕಾಗಿ ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ಸ್ (ಐಜಿಬಿಸಿ) ಕೊಡಮಾಡುವ ಪ್ರತಿಷ್ಠಿತ ಗ್ರೀನ್ ಸಿಟೀಸ್ ಪ್ಲಾಟಿನಂ ಪ್ರಶಸ್ತಿಗೆ ಬೆಂಗಳೂರು ಏರ್‌ಪೋರ್ಟ್ ಸಿಟಿ ಲಿಮಿಟೆಡ್ (ಬಿಎಸಿಎಲ್) ಭಾಜನವಾಗಿದೆ.

ವಿಮಾನ ನಿಲ್ದಾಣದಲ್ಲಿ ಹಸಿರುಮಯ ವಾತಾವರಣ, ವಿನ್ಯಾಸ, ನೀತಿ, ಭೂಬಳಕೆ ವರ್ಗೀಕರಣ, ನೀರಿನ ನಿರ್ವಹಣೆ, ಇಂಧನ ದಕ್ಷತೆ, ತ್ಯಾಜ್ಯ ನಿರ್ವಹಣೆ, ಮಾಹಿತಿ ಮತ್ತು ತಂತ್ರಜ್ಞಾನ (ಐಸಿಟಿ) ಹಸಿರು ಹೀಗೆ ಹತ್ತಾರು ಪರಿಸರ ಸಂರಕ್ಷಣಾ ಯೋಜನೆಗಳನ್ನು ಜಾರಿಗೊಳಿಸಿರುವ ಉದ್ದೇಶದಿಂದ ಈ ಪ್ರಶಸ್ತಿಯು ಬೆಂಗಳೂರು ವಿಮಾನ ನಿಲ್ದಾಣಕ್ಕೆ ಒಲಿದಿದೆ.

ನಿಲ್ದಾಣದಲ್ಲಿ ಸುಸ್ಥಿರ ನಗರಾಭಿವೃದ್ಧಿಗಾಗಿ ಹೊಸ ಮಾನದಂಡ ರೂಪಿಸಿರುವ ಬಿಎಸಿಎಲ್ ಸಮಗ್ರ ಸುಸ್ಥಿರ ಅಭಿವೃದ್ಧಿ ಸಾಧಿಸಿದೆ. ಇದಕ್ಕಾಗಿ ಬಿಲ್ಡರ್‌ಗಳು, ವಿನ್ಯಾಸಕರು ಮತ್ತು ವಾಸ್ತುಶಿಲ್ಪಿಗಳು ಅನುಸರಿಸುವ ಕಡ್ಡಾಯ ನೀತಿ ಮತ್ತು ವಿನ್ಯಾಸ ಮಧ್ಯಸ್ಥಿಕೆಗಳೊಂದಿಗೆ ಸುಸ್ಥಿರತೆ-ಕೇಂದ್ರಿತ ನಗರ ವಿನ್ಯಾಸ ಮಾರ್ಗಸೂಚಿಗಳನ್ನು ಒದಗಿಸುತ್ತದೆ.

ಬೆಂಗಳೂರು ಏರ್‌ಪೋರ್ಟ್ ಸಿಟಿ ಲಿಮಿಟೆಡ್‌ನ ಸಿಇಒ ರಾವ್ ಮುನುಕುಟ್ಲ ಮಾತನಾಡಿ, 'ಐಜಿಬಿಸಿ ಗ್ರೀನ್ ಸಿಟೀಸ್ ಪ್ರಮಾಣೀಕರಣ ಸ್ವೀಕರಿಸಲು ನಾವು ಹೆಮ್ಮೆಪಡುತ್ತೇವೆ. ಇದು ಸುಸ್ಥಿರತೆಗೆ ನಮ್ಮ ಅಚಲ ಬದ್ಧತೆಯನ್ನು ಗುರುತಿ ಸುತ್ತದೆ. ಈ ಮನ್ನಣೆಯು ಏರ್‌ಪೋರ್ಟ್ ಸಿಟಿಯ ಒಟ್ಟಾರೆ ವಿನ್ಯಾಸ ಸಂವೇದನೆಯ ಅಂಗೀಕಾರವಾಗಿದೆ. ಇದು ನಾವೀನ್ಯ ಮತ್ತು ಸುಸ್ಥಿರತೆ ಚಾಲಿತವಾಗಿದೆ. ನಮ್ಮ ಅಭಿವೃದ್ಧಿಯು ಸುಸ್ಥಿರತೆಯ ಎಲ್ಲಾ ಮೂರು ಕ್ಷೇತ್ರದ ಮೇಲೆ ಕೇಂದ್ರೀಕರಿಸುತ್ತದೆ' ಎಂದು ತಿಳಿಸಿದ್ದಾರೆ.

ಬೆಂಗಳೂರು ಏರ್‌ಪೋರ್ಟ್ ಸಿಟಿಯ ಪಕ್ಷಿನೋಟ

'ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿಗಳಾದ ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಹೊಂದಾಣಿಕೆಯ ಗುರಿ ಹೊಂದಿದ್ದೇವೆ. ಈ ಪ್ರಮಾಣೀಕರಣವು ನಮ್ಮ ಸುಸ್ಥಿರತೆಯ ಪ್ರಯಾಣ ಮುಂದುವರಿಸಲು ಮತ್ತು ವಿಮಾನ ನಿಲ್ದಾಣ ಅದರ ಸುತ್ತಮುತ್ತಲಿನ ಸಮುದಾಯಗಳಿಗೆ ಹಸಿರು, ಹೆಚ್ಚು ಸಮರ್ಥನೀಯ ಭವಿಷ್ಯ ರಚಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ನಮಗೆ ಸ್ಫೂರ್ತಿಯಾಗಿದೆ' ಎಂದಿದ್ದಾರೆ.

ಐಜಿಬಿಸಿ ಅಧ್ಯಕ್ಷ ಗುರ್ಮಿತ್ ಸಿಂಗ್ ಅರೋರಾ ಅವರು, 'ಬೆಂಗಳೂರು ಏರ್ ಪೋರ್ಟ್ ಸಿಟಿ ಲಿಮಿಟೆಡ್‌ಗೆ ಐಜಿಬಿಸಿ ಗ್ರೀನ್ ಸಿಟಿ ಪ್ಲಾಟಿನಂ ಪ್ರಮಾಣೀಕರಣ ನೀಡಲು ಸಂತೋಷಪಡುತ್ತೇವೆ' ಎಂದು ತಿಳಿಸಿದ್ದಾರೆ.

₹ 199 ಕೋಟಿ ಸಾಲದ ಆರೋಪ

ಸೌದಿ ಪ್ರವಾಸಕ್ಕೆ ತೆರಳಲು ಉದ್ಯಮಿಗೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: '₹199 ಕೋಟಿ ಬ್ಯಾಂಕ್ ಸಾಲಗಾರ' ಎಂಬ ಆರೋಪ ಹೊತ್ತಿರುವ ನಗರದ ಉದ್ಯಮಿಯೊಬ್ಬರ ವಿರುದ್ಧ ಎಫ್‌ಆರ್‌ಆರ್‌ಒ (ವಿದೇಶಿಯರ ಪ್ರಾದೇಶಿಕ ನೋಂದಣಿ ಅಧಿಕಾರಿ) ವಿಭಾಗದ ಬೆಂಗಳೂರು ಬ್ಯೂರೊ ಹೊರಡಿಸಿದ್ದ ಲುಕ್ ಔಟ್ ಸುತ್ತೋಲೆಯ (ಎಲ್‌ಒಸಿ) ಹೊರತಾಗಿಯೂ ಅವರ ಉದ್ದೇಶಿತ ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ ಪ್ರವಾಸಕ್ಕೆ (ಯುಎಇ) ಹೈಕೋರ್ಟ್ ಹಸಿರು ನಿಶಾನೆ ತೋರಿದೆ.

ಎಲ್‌ಒಸಿ ಪ್ರಶ್ನಿಸಿ ಆರ್‌.ಟಿ.ನಗರದ ನಿವಾಸಿಯಾದ ಹಿಮಾಯತ್ ಖಾನ್ ಎಂಬ 57 ವರ್ಷದ ಉದ್ಯಮಿಯೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರು ಹೈಕೋರ್ಟ್‌ಗೆ ಮುಚ್ಚಳಿಕೆ ಬರೆದು ಕೊಟ್ಟು ನಿಗದಿತ ಅವಧಿಯ ತಮ್ಮ ಪ್ರವಾಸ ಮುಗಿಸಿಕೊಂಡು ಬರಬೇಕು' ಎಂಬ ಷರತ್ತು ವಿಧಿಸಿದೆ.

'ಅರ್ಜಿದಾರರೂ ಸೇರಿದಂತೆ ಇತರರ ವಿರುದ್ಧ ಎಲ್‌ಒಸಿ ಜಾರಿಗೊಳಿಸುವಂತೆ ಬ್ಯಾಂಕ್ ವಲಸೆ ಬ್ಯೂರೊಗೆ ಕೋರಿದೆ. ಆದರೆ, ಯಾವ ಕಾರಣಕ್ಕಾಗಿ ಎಲ್‌ಒಸಿ ಜಾರಿ ಮಾಡುವಂತೆ ಕೋರಲಾಗಿದೆ ಎಂಬುದನ್ನು ಮುಚ್ಚಿಡಲಾಗಿದೆ. ಅರ್ಜಿದಾರರು ಯಾವುದೇ ರೀತಿಯ ಸಾಲದ ಮೊತ್ತಕ್ಕೆ ಖಾತರಿದಾರರು ಎಂಬುದನ್ನೂ ತೋರಿಸಿಲ್ಲ. ಹೀಗಾಗಿ, ಎಲ್‌ಒಸಿ ಜಾರಿಯನ್ನು ಸಮರ್ಥಿಸಲಾಗದು' ಎಂದು ನ್ಯಾಯಪೀಠ ಹೇಳಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಲ ವಸೂಲಾತಿ ಪ್ರಕ್ರಿಯೆಯು ಬೆಂಗಳೂರಿನ ಸಾಲ ವಸೂಲಾತಿ ನ್ಯಾಯಮಂಡಳಿಯಲ್ಲಿ ಬಾಕಿ ಇದ್ದು, ಇದರಲ್ಲಿ ಅರ್ಜಿದಾರರು ಪಕ್ಷಗಾರರಲ್ಲ. ಯಾವುದೇ ಅಪರಾಧ ಪ್ರಕರಣದಲ್ಲಿಯೂ ಅವರು ಭಾಗಿ ಅಲ್ಲ. ಆದ್ದರಿಂದ, ಅವರ ವೈಯಕ್ತಿಕ ಹಕ್ಕಿಗೆ ಚ್ಯುತಿ ಉಂಟಾಗದಂತೆ ಪ್ರವಾಸಕ್ಕೆ ಅನು ಮತಿ ನೀಡುವುದು ಅಗತ್ಯವಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ಕೆ.ಶಶಿಕಿರಣ ಶೆಟ್ಟಿ, 'ಹಿಮಾಯತ್ ಖಾನ್ ಕಳೆದ 35 ವರ್ಷಗಳಿಂದ ತಮ್ಮನ್ನು ಮರ ಮುಟ್ಟು ಉದ್ಯಮದಲ್ಲಿ ತೊಡಗಿಸಿಕೊಂಡಿದ್ದು, ಅಸೋಸಿಯೇಟ್ ಡೆಕೊರ್ ಲಿಮಿಟೆಡ್ ಕಂಪನಿಯ ನಿರ್ದೇಶಕರಾಗಿದ್ದಾರೆ. ದೇಶ ವಿದೇಶಗಳಲ್ಲಿ ಸ್ಥಿರಾಸ್ತಿ ಹೊಂದಿದ್ದಾರೆ. ಕಂಪನಿಗೆ ಕಾರ್ಯ ನಿರ್ವಹಿಸದ ನಿರ್ದೇಶಕರಾಗಿರುವ ಅವರು ಕಂಪನಿ ಸಾಲ ಪಡೆಯಲು ನಿರ್ಧರಿಸಿದ ಸಮಯದಲ್ಲಿ ಖಾತರಿದಾರರಾಗಿ ಇರಲಿಲ್ಲ' ಎಂಬ ಅಂಶವನ್ನು ಪೀಠದ ಗಮನಕ್ಕೆ ತಂದಿದ್ದರು. ಆದರೆ, ಈ ವಾದಾಂಶವನ್ನು ಬಲವಾಗಿ ಅಲ್ಲಗಳೆದಿದ್ದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್‌.ಶಾಂತಿಭೂಷಣ್, 'ಎಲ್‌ಒಸಿ ಹೊರಡಿಸುವಂತೆ ಬ್ಯಾಂಕ್ ಕೋರಿರುವುದು ಸಮಂಜಸವಾಗಿಯೇ ಇದೆ. ಇಲ್ಲದೇ ಹೋದಲ್ಲಿ ಅವರು ದೇಶದಿಂದ ಪರಾರಿಯಾಗುವ ಸಾಧ್ಯತೆ ಇದೆ. ನಂತರ ವಿಚಾರಣೆ ನಡೆಸಲು ಕೈಗೆ ಸಿಗುವುದಿಲ್ಲ' ಎಂದು ಪ್ರತಿಪಾದಿಸಿದ್ದರು.

'ಅರ್ಜಿದಾರರು ತಮ್ಮ ಕಂಪನಿಯ ಆಸ್ತಿ ಒತ್ತೆ ಇರಿಸಿ ₹ 199 ಕೋಟಿ ಸಾಲವನ್ನು ಬ್ಯಾಂಕ್ ಆಫ್ ಬರೋಡಾದಿಂದ ಪಡೆದಿದ್ದಾರೆ' ಎಂಬ ಆರೋಪದಡಿ, ಬ್ಯಾಂಕ್‌ಗಳ ಒಕ್ಕೂಟವು ಅರ್ಜಿದಾರರ ವಿರುದ್ಧ ವಸೂಲಾತಿ ಪ್ರಕ್ರಿಯೆಗೆ ಮುಂದಾಗಿತ್ತು. ಇದರ ಭಾಗವಾಗಿ 2022ರ ಮಾರ್ಚ್ 7ರಂದು ಮುಂಬೈನ ಬ್ಯಾಂಕ್ ಆಫ್ ಬರೋಡಾದ ಡೆಪ್ಯುಟಿ ಜನರಲ್ ಮ್ಯಾನೇಜರ್ ಎಲ್‌ಒಸಿ ಜಾರಿಗೊಳಿಸಲು ಕೋರಿದ್ದರು.

ಎಸ್‌ಸಿಡಿಸಿಸಿ ಬ್ಯಾಂಕ್: ₹ 61.38 ಕೋಟಿ ಲಾಭ ಗಳಿಕೆ

ಮಂಗಳೂರು: 'ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಎಸ್‌ಸಿಡಿಸಿಸಿ ಬ್ಯಾಂಕ್) 2022–23ನೇ ಸಾಲಿನಲ್ಲಿ ₹61.38 ಕೋಟಿ ಲಾಭ ಗಳಿಸಿದೆ' ಎಂದು ಬ್ಯಾಂಕಿನ ಅಧ್ಯಕ್ಷ ಎಂ.ಎನ್. ರಾಜೇಂದ್ರ ಕುಮಾರ್ ತಿಳಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, '2021–22ನೇ ಸಾಲಿನಲ್ಲಿ ಬ್ಯಾಂಕ್ ₹ 50.49 ಕೋಟಿ ಲಾಭ ಗಳಿಸಿತ್ತು. ಕಳೆದ ಸಾಲಿಗೆ ಹೋಲಿಸಿದರೆ ಬ್ಯಾಂಕ್‌ನ ಲಾಭ ಗಳಿಕೆ ಶೇ 21.57ರಷ್ಟು ಏರಿಕೆಯಾಗಿದೆ. ಬ್ಯಾಂಕ್ ಇತಿಹಾಸದಲ್ಲೇ ಇದು ಸಾರ್ವಕಾಲಿಕ ದಾಖಲೆ' ಎಂದು ತಿಳಿಸಿದರು.

'2022–23ನೇ ಸಾಲಿನಲ್ಲಿ ಬ್ಯಾಂಕ್ ₹13,512 ಕೋಟಿ ವಾರ್ಷಿಕ ವಹಿವಾಟು ನಡೆಸಿದೆ. ಇದು ಕಳೆದ ಸಾಲಿನ ವಹಿವಾಟಿಗಿಂತ ಶೇ 16.40ರಷ್ಟು ಹೆಚ್ಚು. 2023–24ನೇ ಸಾಲಿನಲ್ಲಿ ವಹಿವಾಟನ್ನು ₹ 15 ಸಾವಿರ ಕೋಟಿಗೆ ಹೆಚ್ಚಿಸುವ ಗುರಿ ಇದೆ. ದುಡಿಯುವ ಬಂಡವಾಳವೂ ಕಳೆದ ವರ್ಷಕ್ಕಿಂತ ₹ 1,190 ಕೋಟಿಗಳಷ್ಟು ಹೆಚ್ಚಾಗಿದ್ದು, ಶೇ 13.73ರಷ್ಟು ಏರಿಕೆಯಾಗಿದೆ' ಎಂದು ಮಾಹಿತಿ ನೀಡಿದರು.

'ಠೇವಣಿ ಸಂಗ್ರಹದಲ್ಲೂ ಬ್ಯಾಂಕ್ ರಾಜ್ಯದಲ್ಲೇ ಮುಂಚೂಣಿಯಲ್ಲಿದೆ. ಒಟ್ಟು ₹ 6,368 ಕೋಟಿ ಠೇವಣಿ ಸಂಗ್ರಹಿಸಿದೆ' ಎಂದು ತಿಳಿಸಿದರು.

ಸಂಪಂಗಿ ಕೆರೆಯಂಗಳ: ಹಸಿ ಕರಗ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕರಗ ಉತ್ಸವದ ಸಿದ್ಧತೆ ಸಡಗರದಿಂದ ನಡೆಯುತ್ತಿದ್ದು, ಮಂಗಳವಾರ ತಡರಾತ್ರಿ ಹಸಿ ಕರಗ ಉತ್ಸವ ನಡೆಯಲಿದೆ.

ಸಂಪಂಗಿ ಕೆರೆ ಅಂಗಳದಲ್ಲಿರುವ ಶಕ್ತಿ ಪೀಠದಲ್ಲಿ ಹಸಿ ಕರಗ ಮೆರವಣಿಗೆ ಆರಂಭವಾಗಲಿದ್ದು, ಧರ್ಮರಾಯ ಸ್ವಾಮಿ ದೇವಾಲಯಕ್ಕೆ ಸಾಗಲಿದೆ.

ಏ.6ಕ್ಕೆ ಕರಗ ಶಕ್ತ್ಯೋತ್ಸವ: ದ್ರೌಪತಿ ಕರಗ ಶಕ್ತ್ಯೋತ್ಸವ ಹಾಗೂ ಧರ್ಮ-ರಾಯಸ್ವಾಮಿ ಮಹೋತ್ಸವವು ತಿಗಳರಪೇಟೆಯ ಧರ್ಮರಾಯ ಸ್ವಾಮಿ ದೇವಸ್ಥಾನದಲ್ಲಿ ಏಪ್ರಿಲ್ 6ರಂದು ನಡೆಯಲಿದೆ.

ಕರಗ ಮಹೋತ್ಸವದ ಅಂಗವಾಗಿ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಭಕ್ತಾದಿಗಳು ಸೋಮವಾರ ಸಿದ್ಧತೆ ನಡೆಸಿದರು – ಪ್ರಜಾವಾಣಿ ಚಿತ್ರ

ಪ್ರಭಾವಿಗಳ ಸೋಲಿಸಲು ಪ್ರಬಲ ಅಭ್ಯರ್ಥಿಗಳು ಕಣಕ್ಕೆ: ಬಿಜೆಪಿ ಕಾರ್ಯಕರ್ತರ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದ ಘಟಾನುಘಟಿ ಕಾಂಗ್ರೆಸ್ ನಾಯಕರನ್ನು ಸೋಲಿಸಲು ಪ್ರಭಾವಿ ಅಭ್ಯರ್ಥಿಗಳನ್ನೇ ಈ ಬಾರಿ ಕಣಕ್ಕೆ ಇಳಿಸಬೇಕು ಎಂದು ಜಿಲ್ಲಾ ಕೋರ್ ಕಮಿಟಿ ಸಭೆಯಲ್ಲಿ ಬಿಜೆಪಿ ಕಾರ್ಯಕರ್ತರು ಒತ್ತಾಯಿಸಿದ್ದಾರೆ.

'ಕಾಂಗ್ರೆಸ್‌ನ ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ಸೌಮ್ಯಾರೆಡ್ಡಿ, ಎನ್‌.ಎ. ಹ್ಯಾರಿಸ್, ಎಂ.ಕೃಷ್ಣಪ್ಪ ಅವರ ಬಗ್ಗೆ ಅವರ ಕ್ಷೇತ್ರಗಳಲ್ಲಿ ತೀವ್ರ ಅಸಮಾಧಾನವಿದೆ. ಆದರೆ, ಅವರ ವಿರುದ್ಧ ಪ್ರಭಾವಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸದ ಕಾರಣ ಅವರನ್ನು ಸೋಲಿಸಲು ಸಾಧ್ಯವಾಗುತ್ತಿಲ್ಲ. ಈ ಬಾರಿ ಅವರನ್ನು ಮಣಿಸಲು ಅಷ್ಟೇ ಸಾಮರ್ಥ್ಯದ ಹೊಂದಾಣಿಕೆ ಮಾಡಿ ಕೊಳ್ಳದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಬೇಕು' ಎಂದು ಬೇಡಿಕೆ ಮಂಡಿಸಿದ್ದಾರೆ.

'ಕೆಲವು ವರ್ಷಗಳಿಂದ ಹೊಂದಾಣಿಕೆ ರಾಜಕಾರಣದ ಕಾರಣ ಈ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲುವುದಕ್ಕೆ ಸಾಧ್ಯವಾಗುತ್ತಿಲ್ಲ. ಒಂದೋ ನಾಯಕರು ಹೊಂದಾಣಿಕೆ ಮಾಡಿಕೊಂಡರೆ, ಕೆಲವೊಮ್ಮೆ ಅಭ್ಯರ್ಥಿಗಳೂ ಮೃದುವಾಗಿ ಬಿಡುತ್ತಾರೆ. ಇದರಿಂದ ಈ ಕ್ಷೇತ್ರಗಳನ್ನು ಗೆಲ್ಲಲು ಆಗುತ್ತಿಲ್ಲ. ಈ ರೀತಿ ಹೊಂದಾಣಿಕೆ ಮಾಡಿಕೊಂಡರೆ ಪಕ್ಷಕ್ಕೆ ಬಹುಮತ ಸಿಗುವುದಾದರೂ ಹೇಗೆ ಎಂಬುದಾಗಿ ಪ್ರಶ್ನಿಸಿದರು' ಎಂದು ಮೂಲಗಳು ಹೇಳಿವೆ.

'ಈ ಬಾರಿ ಈ ಎಲ್ಲ ಕ್ಷೇತ್ರಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಆಕಾಂಕ್ಷಿಗಳು ಟಿಕೆಟ್‌ಗಾಗಿ ಪೈಪೋಟಿ ನಡೆಸಿದ್ದಾರೆ. ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದ ಅಭ್ಯರ್ಥಿಗಳೂ ಟಿಕೆಟ್‌ಗಾಗಿ ಪ್ರಯತ್ನ ನಡೆಸಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಕೆ.ಆರ್‌.ಪುರ: ಅದ್ದೂರಿ ಶೋಭಾಯಾತ್ರೆ

ಕೆ.ಆರ್‌.ಪುರ: ಶ್ರೀರಾಮನವಮಿ ಉತ್ಸವ ಸಮಿತಿ ಹಮ್ಮಿಕೊಂಡಿದ್ದ ಶೋಭಾಯಾತ್ರೆ ಕೆ.ಆರ್‌.ಪುರದಲ್ಲಿ ಅದ್ದೂರಿಯಾಗಿ ಜರುಗಿತು.

ಕೌದೇನಹಳ್ಳಿ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭಗೊಂಡ ಶ್ರೀರಾಮನವಮಿ ಶೋಭಾಯಾತ್ರೆ ಶ್ರೀರಾಮ ದೇವಸ್ಥಾನದಲ್ಲಿ ಕೊನೆ ಗೊಂಡಿತು.

ಶೋಭಾಯಾತ್ರೆಯಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು. ಶ್ರೀರಾಮ ನಾಮಸ್ಮರಣೆ ಘೋಷಣೆಗಳು ಮೊಳಗಿದವು.

ತಮಟೆ ವಾದ್ಯ, ಕಂಸಾಳೆ, ವೀರಗಾಸೆ ಶ್ರೀರಾಮ, ಹನುಮಂತನ ವೇಷಭೂಷಣಗಳನ್ನು ತೊಟ್ಟು ಶೋಭಾಯಾತ್ರೆಗೆ ಮತ್ತಷ್ಟು ಮೆರುಗು ನೀಡಿತು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, 'ನಾಡಿನ ಒಳತಿಗಾಗಿ ಹಾಗೂ ಕೆ.ಆರ್‌.ಪುರ ಕ್ಷೇತ್ರದ ಒಳಿತಿ ಗಾಗಿ ಶ್ರೀರಾಮನ ಶೋಭಾ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಧಾರ್ಮಿಕ ಕಾರ್ಯಕ್ರಮಗಳನ್ನು ಯಾವುದೇ ಕಾರಣಕ್ಕೂ ರಾಜಕೀಯಕ್ಕೆ ಬೆರೆಸಬೇಡಿ' ಎಂದರು.

ಶೋಭಾಯಾತ್ರೆ ಕಲ್ಕೆರೆ ಮುಖ್ಯರಸ್ತೆಯ ಮಂಜುನಾಥಸ್ವಾಮಿ ದೇವಸ್ಥಾನ, ಅಂಕಮ್ಮ ದೇವಸ್ಥಾನ, ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನ ಹಾಗೂ ರೇಣುಕಾ ಯಲ್ಲಮ್ಮ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಿ ಯರ್‍ರಯ್ಯನಪಾಳ್ಯದ ಕೋದಂಡರಾಮ ದೇವಸ್ಥಾನದ ಬಳಿ ಯಾತ್ರೆ ಅಂತಿಮವಾಯಿತು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಶೋಭಾಯಾತ್ರೆಗೆ ಚಾಲನೆ ನೀಡಿದರು.

ನಗರದಲ್ಲಿ ಇಂದು

ರಾಮೋತ್ಸವ ವಿಶೇಷ

ಶ್ರೀರಾಮೋತ್ಸವ: ಭರತನಾಟ್ಯ ಪ್ರದರ್ಶನ: ಸಭಾಪತಿ ನೃತ್ಯ ಅಕಾಡೆಮಿ ವಿದ್ಯಾರ್ಥಿಗಳಿಂದ, ನಿರ್ದೇಶನ: ಮಹಿಮಾ, 'ತಾಳವಾದ್ಯ'–'ಲಯ ಲಾವಣ್ಯ': ಆನೂರು ಅನಂತ ಕೃಷ್ಣ ಶರ್ಮಾ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಸೇವಾ ಮಂಡಳಿ, ರಾಜಾಜಿನಗರ, ಸಂಜೆ 5.30ರಿಂದ

ಶ್ರೀರಾಮೋತ್ಸವ ಕಾರ್ಯಕ್ರಮ: ಬೆಳಿಗ್ಗೆ 6: ಸುಪ್ರಭಾತ ಸೇವೆ, ಶುಂಠಿ ಕಷಾಯ ವಿತರಣೆ, ಬೆಳಿಗ್ಗೆ 9.30ಕ್ಕೆ ರಾಮತಾರಕ ಹೋಮ, ಅಲಂಕಾರ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಆಯೋಜನೆ: ಸನಾತನ ಭಕ್ತ ಮಂಡಳಿ ಟ್ರಸ್ಟ್, ಸ್ಥಳ: ಕೋದಂಡರಾಮ ದೇವಸ್ಥಾನದ ರಸ್ತೆ, ವಿಜಯನಗರ

ಶ್ರೀರಾಮೋತ್ಸವ: ತಾಳವಾದ್ಯ ಕಛೇರಿ: ಯುವ ಪ್ರತಿಭಾ ಸಮೂಹದಿಂದ, 'ಕೃಷ್ಣ ಕಾರುಣ್ಯ' ಪ್ರವಚನ ಮಾಲಿಕೆ: ಪಾವಗಡ ಪ್ರಕಾಶರಾವ್, 'ಮಂಕುತಿಮ್ಮನ ಕಗ್ಗ' ಕುರಿತು ಪ್ರವಚನ: ನಟೇಶ್, ಆಯೋಜನೆ ಮತ್ತು ಸ್ಥಳ: ಶ್ರೀರಾಮಮಂದಿರಂಟ್ರಸ್ಟ್, ನರಸಿಂಹರಾಜ ಕಾಲೊನಿ, ಸಂಜೆ 4.30ರಿಂದ

ರಾಮಾಯಣ ಸಪ್ತಾಹ: ಪ್ರವಚನ: ಸಾಯಿ ಗಿರಿಧರ್ ಸಾಯಿರಾಮ್, ಆಯೋಜನೆ ಮತ್ತು ಸ್ಥಳ: ಸತ್ಯ ಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಸಂಜೆ 5ರಿಂದ

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಪಟ್ಟಾಭಿರಾಮ ಪಂಡಿತ್, ಪಿಟೀಲು: ಟಿ.ಕೆ.ವಿ. ರಾಮಾನುಜಾಚಾರ್ಲು, ಮೃದಂಗ: ಎಚ್‌.ಎಸ್. ಸುಧೀಂದ್ರ, ಘಟ: ರಂಗನಾಥ ಚಕ್ರವರ್ತಿ, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15 ರಿಂದ

ಶ್ರೀರಾಮ ನವಮಿ ಉತ್ಸವ: ಸುಗಮ ಸಂಗೀತ, ಗಾಯನ: ಭಾವನಾ ಉಮೇಶ್, ಕೀ–ಬೋರ್ಡ್: ಬಿ.ಆರ್. ಪ್ರಕಾಶ್, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋ ಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ಭಾವನಾ ಉಮೇಶ್

ರಾಮನವಮಿ ಕಾರ್ಯಕ್ರಮ: ಹರಿದಾಸ ವೈಭವ, ಗಾಯನ: ಭವಾನಿ ಭುವನ್ ಮತ್ತು ಸುಮಲತಾ ಮಂಜುನಾಥ್, ಪಿಟೀಲು: ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಭವಾನಿ ಭುವನ್

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ವೆಂಕಟರಾಘವನ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಬಿ.ಸಿ. ಮಂಜುನಾಥ್, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಡಿ. ಪಲ್ಲವಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6.30

ಸಂವಾದ ಕಾರ್ಯಕ್ರಮ: ಟಿ. ಕೋಶಿ, ಅನುರಾಗ್ ಜೈನ್, ಕುಮಾರ್, ನಂದನ್ ನಿಲೇಕಣಿ, ಸಮೀರ್ ನಿಗಮ್, ಆಯೋಜನೆ: ಫೋನ್‌ಪೇ, ಸ್ಥಳ: ದಿ ಲೀಲಾ ಪ್ಯಾಲೆಸ್, ಬೆಳಿಗ್ಗೆ 10.30ರಿಂದ

ಮಲ್ಲಿಕಾರ್ಜುನ ಕಡಕೋಳ ಅವರ 'ಮುಟ್ಟು' ಕಥಾ ಸಂಕಲನ ಬಿಡುಗಡೆ: ಸಾನ್ನಿಧ್ಯ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಪುಸ್ತಕ ಬಿಡುಗಡೆ: ಎಸ್‌.ಜಿ. ಸಿದ್ಧರಾಮಯ್ಯ, ಪುಸ್ತಕದ ಕುರಿತು: ಎಂ.ಎಸ್. ಆಶಾದೇವಿ, ಉಪಸ್ಥಿತಿ: ಮಲ್ಲಿಕಾರ್ಜುನ ಕಡಕೋಳ, ಆಯೋಜನೆ: ಅಭಿವ್ಯಕ್ತಿ ದಾವಣಗೆರೆ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11



ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಮಲ್ಲಾಡಿ ಸಿಂಧು ರಾಗೇಶ್ವರಿ, ಮಲ್ಲಾಡಿ ಶಿವಾನಂದ ಯಶಸ್ವಿ, ವಿಶೇಷ ಸಂಗೀತ ಕಛೇರಿ: ಮಲ್ಲಾಡಿ ಸಹೋದರರು, ಪಿಟೀಲು: ಎಂಭಾರ್ ಎಸ್. ಕಣ್ಣನ್, ಮೃದಂಗ: ತುಮಕೂರು ರವಿಶಂಕರ್, ಘಟ: ಶಶಿ ಶಂಕರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, 'ಪ್ರಜಾವಾಣಿ', ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ಮಲ್ಲಾಡಿ ಸಹೋದರರು

ಮುತ್ಯಾಲಮ್ಮ ದೇವಿಯ ರಥೋತ್ಸವ: ದೀಪದ ಆರತಿಗಳು, ಹೂವಿನ ಅಲಂಕಾರ, ಜಲಜಮ್ಮ ದೇವಿಯ ಮೆರವಣಿಗೆ, ಅನ್ನಸಂತರ್ಪಣೆ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಬೆಳಿಗ್ಗೆ 5ರಿಂದ

ವಿಶ್ವವಿಖ್ಯಾತ ಕರಗ ಶಕ್ತ್ಯೋತ್ಸವ: ಕರಗದ ಕುಂಟೆಯಲ್ಲಿ ವಿಶೇಷ ಪೂಜೆ, ಆಯೋಜನೆ: ಬೆಂಗಳೂರು ನಗರದ ಧರ್ಮರಾಯಸ್ವಾಮಿ ದೇವಸ್ಥಾನ, ಸ್ಥಳ: ಕರಗದ ಕುಂಟೆ, ಕಬ್ಬನ್ ಉದ್ಯಾನ, ಮಧ್ಯಾಹ್ನ 12.30

ಭಜನೆ, ಪ್ರವಚನ, ಹರಿನಾಮ ಸಂಕೀರ್ತನೆ: ಭಜನೆ: ಪೂರ್ಣ ಪ್ರಜ್ಞ ಭಜನಾ ಮಂಡಳಿ, ಪ್ರವಚನ: ಕಲ್ಲಾಪುರ ಪವಮಾನಾಚಾರ್, ಆಯೋಜನೆ ಮತ್ತು ಸ್ಥಳ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ನಂಜನಗೂಡು ರಾಘವೇಂದ್ರಸ್ವಾಮಿಗಳ ಮಠ, ಸೀತಾಪತಿ ಅಗ್ರಹಾರ, ಸಂಜೆ 6ರಿಂದ

ಪ್ರವಚನ ವಾಹಿನಿ: 'ಶರೀರ ತ್ರಯ' ಕುರಿತು ಪ್ರವಚನ: ಶ್ರೀನಿವಾಸ ಪ್ರಸಾದ್ ಸಿ.ವಿ., ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಗಿರೀಶ ಕಾರ್ನಾಡರ 'ತುಘಲಕ್' ನಾಟಕ ಪ್ರದರ್ಶನ: ವಿನ್ಯಾಸ: ಎಂ.ಎಸ್. ಸತ್ಯು, ನಿರ್ದೇಶನ: ಎಸ್. ಸುರೇಂದ್ರನಾಥ್, ಆಯೋಜನೆ: ಭೂಮಿಜಾ, ಸ್ಥಳ: ರಂಗಶಂಕರ, ಸಂಜೆ 7.30

ಕ್ಷೇಮ ಕುಶಲ

ರಜೆಗೆ ಕಟ್ಟಿ ಅಕ್ಷರತೋರಣ

ಮಕ್ಕಳ ಪದಸಂಪತ್ತು ಬೆಳೆದಾಗ ಮಾತ್ರ ಅವರು ಉತ್ತಮ ಸಂವಹನ ನಡೆಸಬಲ್ಲರು. ಪದಸಂಪತ್ತು ಬೆಳೆಯುವುದು ಓದಿನಿಂದ.

ರಘು ವಿ.

ಹಬ್ಬದಂದು ಮನೆಯ ಬಾಗಿಲಿಗೆ ತೋರಣ ಕಟ್ಟುತ್ತೇವೆ. ಇದು ಶುಭದ, ಸಂಭ್ರಮದ ಸಂಕೇತ. ಮನದ ಬಾಗಿಲಿಗೂ ತೋರಣವಿದೆ. ಆದರೆ ಅದು ವ್ಯಕ್ತವಾಗುವುದು ಮಾತಿನ ಮೂಲಕ, ಬರಹದ ಮೂಲಕ. ತೋರಣ ಕಟ್ಟುವುದು ಸಾಮಾನ್ಯವಾಗಿ ಮನೆಯ ಕಿರಿಯರ ಕೆಲಸ. ಆದರೆ ಕಿರಿಯರ ಮನದ ಬಾಗಿಲಿಗೆ ಅಕ್ಷರತೋರಣ ಕಟ್ಟುವುದು ಹಿರಿಯರ ಕೆಲಸ. ಮಕ್ಕಳ ಪದಸಂಪತ್ತು ಬೆಳೆದಾಗ ಮಾತ್ರ ಅವರು ಉತ್ತಮ ಸಂವಹನ ನಡೆಸಬಲ್ಲರು. ಪದಸಂಪತ್ತು ಬೆಳೆಯುವುದು ಓದಿನಿಂದ. ಇಡೀ ಪದಕೋಶವನ್ನು ಬಾಯಿಪಾಠ ಮಾಡಿದರೂ ಪದಗಳ ಥುಲಕನ್ನು ಅರಿತು ಅವುಗಳನ್ನು ಸಮರ್ಪಕವಾಗಿ ಬಳಸುವ ಕಲೆ ಸಿದ್ಧಿಸುವುದು ವಿಪುಲ ಓದಿನಿಂದ. ವಾಕ್ಯರಚನೆಯ ಕ್ರಮ, ಭಾಷೆಯ ಪಲುಕು, ವೈವಿಧ್ಯ ಇವುಗಳ ಸೊಗಸನ್ನು ಅನುಭವಿಸುವ ಸಂಸ್ಕಾರ ಒದಗಿಸುವುದು ಓದು. ಕೇವಲ ಪದಸಂಪತ್ತಷ್ಟೇ ಅಲ್ಲದೆ ಕಲ್ಪನೆಗಳು ಗರಿಗೆದರಲು ಓದು ಬಹಳ ಪ್ರಯೋಜನಕಾರಿ. ಜೊತೆಗೆ ಮಕ್ಕಳ ಭಾವನಾತ್ಮಕ ಬೆಳವಣಿಗೆಗೂ ಇದು ಪೋಷಕ. ಅವರನ್ನು ಅಕ್ಷರಲೋಕಕ್ಕೆ ಪರಿಚಯಿಸಲು ಇರುವ ಏಕೈಕ ಮಾರ್ಗ ಓದು. ಈ ಬೇಸಿಗೆಯ ರಜೆಯಲ್ಲಿ ಮಕ್ಕಳು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸೋಣ.

ಓದಿನ ವಾತಾವರಣ

ಮೊದಲಿಗೆ ಮನೆಯಲ್ಲಿ ಓದಿನ ವಾತಾವರಣ ನಿರ್ಮಾಣವಾಗಬೇಕು. ನನಗೆ ಬಾಲ್ಯದ ಒಂದು ಮುಖ್ಯ ನೆನಪು, ಮಧ್ಯಾಹ್ನದ ಊಟವಾದ ಬಳಿಕ ನನ್ನ ಅಮ್ಮ ನಮ್ಮನ್ನು ಸುತ್ತ ಕೂರಿಸಿಕೊಂಡು ಓದುತ್ತಿದ್ದ ರಾಮಾಯಣ ಮಹಾಭಾರತಗಳು. ಮುಗ್ಧಮನಸ್ಸಿನಲ್ಲಿ ಆ ಪಾತ್ರಗಳು ಜೀವತಳೆಯುತ್ತಿದ್ದುದು ಒಂದು ಸುಂದರ ಅನುಭವ. ಹಿರಿಯರು ಮೊದಲಿಗೆ ಓದಿ ಹೇಳಿದರೆ (ವಿವರಿಸಬಾರದು) ಮಕ್ಕಳ ಮನಸ್ಸಿನಲ್ಲಿ ಕಥೆ ಆಕಾರ ಪಡೆದುಕೊಳ್ಳುತ್ತ ಸಾಗುವುದು. ಇದಕ್ಕೆ ದೊಡ್ಡ ಗ್ರಂಥಾಲಯವೇ ಬೇಕಿಲ್ಲ. ಕೇವಲ ಹತ್ತು ಉತ್ತಮ ಪುಸ್ತಕಗಳು ಸಾಕು. ಮನೆಯಲ್ಲಿ ಪುಸ್ತಕಗಳು ಇರಬೇಕು, ಮಕ್ಕಳ ಕೈಗೆಟಕುವಂತೆ ಇರಬೇಕು. ಬೇರೆ ಬೇರೆ ವಯಸ್ಸಿನ ಮಕ್ಕಳಿದ್ದರೆ ಆಯಾ ವಯೋಮಾನಕ್ಕೆ ತಕ್ಕಂತಹ ಪುಸ್ತಕಗಳಿರಲಿ. ಇವು ಒಪ್ಪ ಓರಣ ಕೆಡುತ್ತವೆ, ಹಾಳಾಗುತ್ತವೆ ಎಂದು ಜತನ ಮಾಡದೆ ಮಕ್ಕಳು ಅವುಗಳನ್ನು ಉಪಯೋಗಿಸುವುದನ್ನು ಪ್ರೋತ್ಸಾಹಿಸಬೇಕು. ಆರಂಭದ ದಿನಗಳಲ್ಲಿ ಹಿರಿಯರು ಓದಿ ಒಂದು ರೋಚಕ ಘಟ್ಟದಲ್ಲಿ ನಿಲ್ಲಿಸಿಬಿಡಬೇಕು. ಮುಂದೇನಾಯಿತು ತಿಳಿಯಲು ನೀವು ಓದಿ ಎಂದು ಓದಲು ಪ್ರೇರೇಪಿಸಬೇಕು. ಇಂದು ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆ ಹೆಚ್ಚಿರುವ ದಿನಗಳಲ್ಲಿ ಇ-ಬುಕ್ ರೀಡರ್‌ಗಳು ಲಭ್ಯವಿವೆ. ಅದನ್ನೂ ಬಳಸಲು ಪ್ರೋತ್ಸಾಹಿಸಬಹುದು.



ಪದಗಮನ

–ಈಗ ಹೆಜ್ಜೆ ಹೆಜ್ಜೆಯಾಗಿ ಓದುವ ಅಭ್ಯಾಸವನ್ನು ಮಕ್ಕಳಿಗೆ ಕಲಿಸುವುದು ಹೇಗೆಂದು ತಿಳಿಯೋಣ. ಮೊದಲಿಗೆ ಮಕ್ಕಳ ನೆರವಿನಿಂದಲೇ ಅವರು ಓದಬಯಸುವ ಪುಸ್ತಕಗಳ ಪಟ್ಟಿ ರಚಿಸಬೇಕು. ಅದರಲ್ಲಿ ಮುಖ್ಯವಾದ ಪುಸ್ತಕ ಬಿಟ್ಟುಹೋಗಿದೆ ಎನಿಸಿದರೆ ಅದನ್ನು ಹಿರಿಯರು ಸೇರಿಸಬಹುದು. ಹೀಗೆ ರಚಿತವಾದ ಪಟ್ಟಿ ದೊಡ್ಡದಿರಲಿ. ಪಟ್ಟಿ ದೊಡ್ಡದಿರಬೇಕು. ಏಕೆಂದರೆ ಮನೆಯಲ್ಲಿರುವ ನಾಲ್ಕು ಪುಸ್ತಕ ಓದಿ, ತಾನೆಲ್ಲ ಓದಿದೆ ಎಂದು ಕಿರಿಯರು ತಿಳಿಯಬಾರದು. ಓದಬೇಕಾದ್ದು ಬಹಳವಿದೆ ಎಂಬ ಅರಿವು, ಜವಾಬ್ದಾರಿಯನ್ನು ಈ ಪಟ್ಟಿ ನೆನಪಿಸುತ್ತಿರುತ್ತದೆ.

ಎರಡನೆಯದಾಗಿ, ಎಲ್ಲ ಕಾರ್ಯಸಾಧನೆಗೆ ಕಾಲಪರಿಮಿತಿ ರೂಪಿಸುವಂತೆ ಓದಿಗೂ ಚೌಕಟ್ಟು ನಿರ್ಮಿಸಿಕೊಳ್ಳಬೇಕು. ಅಂದರೆ, ಇಂತಿಷ್ಟು ದಿನಗಳಲ್ಲಿ ಇಷ್ಟು ಪುಸ್ತಕ ಓದುತ್ತೇನೆ ಎಂದು ನಿರ್ಧರಿಸಿ ಅದನ್ನು ಪಾಲಿಸಬೇಕು. ಓದಿನ ವೇಗ ಹೆಚ್ಚಿದಂತೆ, ಪುಸ್ತಕಗಳ ಸಂಖ್ಯೆಯೂ ಹೆಚ್ಚಿ ಖುಷಿ ಕಾಣಬಹುದು.

ಮೂರನೆಯದಾಗಿ, ಓದಿಗೆಂದು ಪ್ರತಿನಿತ್ಯ ಸಮಯವನ್ನು ಮೀಸಲಿರಿಸಬೇಕು. ಊಟದ ಬಳಿಕ ಅಥವಾ ರಾತ್ರಿ ಮಲಗುವ ಮುನ್ನ - ಹೀಗೆ ನಮಗೆ ಅನುಕೂಲಕರವಾದ ಸಮಯವನ್ನು ನಿಗದಿಪಡಿಸಿಕೊಂಡು, ಅದನ್ನು ಬಿಡದೆ ಸತತವಾಗಿ ಪಾಲಿಸಬೇಕು. ಒಮ್ಮೆ ಇದು ಅಭ್ಯಾಸವಾಗಿಬಿಟ್ಟರೆ, ತಪ್ಪಿಸಲು ಸಾಧ್ಯವಾಗದು. ನಾಲ್ಕನೆಯದಾಗಿ ಓದಲು ಕುಳಿತುಕೊಳ್ಳುವ ಜಾಗ ಪ್ರಶಾಂತವಾಗಿದ್ದು ಯಾವುದೇ ರೀತಿಯ ಅಡೆತಡೆ ಇರದ, ಕನಿಷ್ಠ ಶಬ್ದಮಾಲಿನ್ಯ ಇರುವಂತಹದ್ದಾಗಿರಬೇಕು. ಆ ಸಮಯದಲ್ಲಿ ಮನೆಯವರೂ ನಮ್ಮನ್ನು ವಿಚಲಿತರಾಗಿಸದಂತೆ ಎಚ್ಚರ ವಹಿಸಬೇಕು. ನಮ್ಮ ಪಾಲಿನ ಮನೆಗೆಲಸ ಮುಗಿಸಿ ಕುಳಿತರೆ ಅವರು ನಮ್ಮ ತಂಟೆಗೆ ಬಾರರು.

ಐದನೆಯದಾಗಿ, ಓದುವ ಸಮಯದಲ್ಲಿ ಕಥೆಯನ್ನು ಭಾವಿಸಿ ಅನುಭವವನ್ನು ಶ್ರೀಮಂತಗೊಳಿಸಿಕೊಳ್ಳಬೇಕು. ಕಣ್ಣು ಪದವನ್ನು ಓದಿ, ಬುದ್ಧಿ ಅರ್ಥವನ್ನು ನೀಡಿದರೆ ಮನಸ್ಸು ಅದಕ್ಕೆ ಭಾವವನ್ನೂ ಭಾವಕ್ಕೆ ತಕ್ಕಂತೆ ರೂಪವನ್ನು ನೀಡುತ್ತದೆ. ಆರಂಭದಲ್ಲಿ ನಿಧಾನವಾಗಿ ಓದಿ ಈ ಪ್ರಕ್ರಿಯೆಗೆ ನಾವು ಒಳಪಟ್ಟರೆ, ಕ್ರಮೇಣ ಇದು ಸಹಜವಾಗಿ ವೇಗವೂ ಹೆಚ್ಚಿ ಆನಂದವೂ ವೃದ್ಧಿಸುತ್ತದೆ. ಟಿ. ವಿ., ಸಿನಿಮಾ ಇತ್ಯಾದಿ ದೃಶ್ಯಮಾಧ್ಯಮಗಳಲ್ಲಿ ನಿರ್ಮಾಪಕ ನಿರ್ದೇಶಕರ ಕಲ್ಪನೆಗೆ ತಕ್ಕಂತೆ ಚಿತ್ರೀಕರಣವಾಗಿರುತ್ತದೆ. ಆದರೆ ಓದುವಾಗ, ನಾವೇ ನಿರ್ದೇಶಕರು, ನಮ್ಮ ಕಲ್ಪನೆಯ ತಾಕತ್ತಿನ ಮೇಲೆ ಮನಸ್ಸು ಚಿತ್ರಗಳನ್ನು ನಮ್ಮ ಮುಂದಿಡುತ್ತದೆ. ಹೀಗಾಗಿ ಓದಿನ ಅನುಭವ ನಮ್ಮ ಸ್ವಂತದ್ದು, ಹೆಚ್ಚು ಖುಷಿ ಕೊಡುವಂತಹದ್ದು. ನಮ್ಮ ಸಮಯವನ್ನು ಟಿ.ವಿ. ಸಿನೆಮಾಗಳಲ್ಲಿ ವ್ಯಯವಾಗಿಸುವ ಬದಲು ಓದಿನಲ್ಲಿ ತೊಡಗಿಸುವುದು ಹೆಚ್ಚು ಲಾಭದಾಯಕ.

ಆರನೆಯದಾಗಿ, ಟಿಪ್ಪಣಿ ತೆಗೆಯುವಂತಹ ಅಭ್ಯಾಸ ಮಾಡಿಕೊಂಡರೆ ಓದಿನ ಹೆಚ್ಚಿನ ಲಾಭ ಹೊಂದಬಹುದು. ಇದು ನಮ್ಮ ಓದಿನ ಹರಹನ್ನು ಗುರುತಿಸುವಲ್ಲೂ ನೆರವಾಗುವುದು.

ಏಳನೆಯದಾಗಿ, ಪುಸ್ತಕವೊಂದು ಸದಾ ಜೊತೆಯಲ್ಲಿದ್ದರೆ ಒಳ್ಳೆಯದು. ಸ್ವಲ್ಪ ಸಮಯ ದೊರೆತರೂ ನಾಲ್ಕೇ ಪುಟ ಓದಿದರೂ ಅದರಿಂದ ಲಾಭವೇ.

ಕೊನೆಯದಾಗಿ ಒಂದಿಷ್ಟು ಗ್ರಂಥಮಿತ್ರರು ನಮ್ಮವರಾಗಲಿ. ಅಂದರೆ ಓದಿದ್ದನ್ನು ಹಂಚಿಕೊಳ್ಳುವ ಬಳಗ. ಸಾಧ್ಯವಾದರೆ ಪುಸ್ತಕ ವಿನಿಮಯವೂ ಆಗಲಿ. ಆಗ ಓದಲು ಮತ್ತಷ್ಟು ಪ್ರೇರಣೆ ದೊರೆಯುವುದು. ❖

ಮಕ್ಕಳಲ್ಲಿ ಚೈತನ್ಯವನ್ನು ಬಿತ್ತಿರಿ ಬೆಳೆಸಿರಿ

ಡಾ. ಶಿವಾನಂದ ಬಿ. ಹಿರೇಮಠ

ಮನುಷ್ಯನ ಜೀವನದಲ್ಲಿ ಕಷ್ಟ-ಸುಖ, ಏಳು–ಬೀಳುಗಳು ಸಾಮಾನ್ಯ. ಅವುಗಳನ್ನು ಎದುರಿಸಬೇಕು. ಒಂದು ವೇಳೆ ಬಿದ್ದರೂ, ಪುಟಿದೇಳುವಂತಹ ಸಾಮರ್ಥ್ಯವೇ ನಮ್ಮನ್ನು ಸಫಲರನ್ನಾಗಿ ಮಾಡುವುದು. ಈ ಮನಃಸ್ಥಿತಿಯನ್ನು ಚಿಕ್ಕಂದಿನಿಂದಲೇ, ಕೆಲವು ಕ್ರಮಗಳನ್ನು ಅನುಸರಿಸುವುದರಿಂದ ಬೆಳೆಸಬಹುದು.

ಮನೆಯ ಎದುರಿನ ಪಾರ್ಕ್‌ನಲ್ಲಿ, ತಾಯಿ-ಮಗು ನಿಧಾನವಾಗಿ ಜಾಗ್ ಮಾಡುತ್ತಿರುವಾಗ, ಮಗು ಎಡವಿ ಬಿದ್ದು ಕಾಲಿಗೆ ಗಾಯವಾಯಿತು. ನಿರೀಕ್ಷೆಯಂತೆಯೇ, ತಾಯಿ ಗಾಬರಿಯಿಂದ ಮಗುವನ್ನು ಎತ್ತಿಕೊಂಡು, ಸಾವರಿಸಿ, ಗಾಯವನ್ನು ನೋಡಿ ಅದಕ್ಕೆ ತನ್ನಲ್ಲಿದ್ದ ಕರವಸ್ತ್ರವನ್ನು ಕಟ್ಟಿದಳು. ಇಲ್ಲಿಯವರೆಗೂ ನಡೆದದ್ದು ಸಹಜ. ಆದರೆ, ನಂತರ ನಡೆದದ್ದು ನನ್ನನ್ನು ಕೊಂಚ ವಿಚಲಿತನಾಗಿಸಿತು. ತಾಯಿಯು, ಮಗುವನ್ನು ಅಲ್ಲಿಂದ ಎತ್ತಿಕೊಂಡು, ಹತ್ತಿರವೇ ಇದ್ದ ಆಸ್ಪತ್ರೆಗೆ ಓಡಿಹೋದಳು. ಹೋಗುವಾಗ, ಅವಳು 'ಈ ಪಾರ್ಕ್‌ನಲ್ಲಿ ಜಾಗ್ ಮಾಡಿದರೆ, ನೀನು ಬಿದ್ದು ಗಾಯ ಮಾಡಿಕೊಳ್ಳುತ್ತೀಯ, ಇನ್ನು ಮೇಲೆ ಇಲ್ಲಿಗೆ ಬರುವುದೇ ಬೇಡ' ಎಂದು ಮಗುವಿಗೆ ಹೇಳುತ್ತಿದ್ದಳು!

ರಿಯಾ 10ನೇ ತರಗತಿಯಲ್ಲಿ ಓದುತ್ತಿರುವ ಹುಡುಗಿ. ಇತ್ತೀಚೆಗೆ ಅವಳ ಶಾಲೆಯನ್ನು ಬದಲಿಸಲಾಯಿತು. ಈಗೀಗ, ಅವಳಿಗೆ ತನ್ನ ಹೊಸ ಶಾಲೆ, ಸಹಪಾಠಿಗಳೊಂದಿಗೆ ಹೊಂದಿಕೊಳ್ಳಲು ತೊಂದರೆಯಾಗುತ್ತಿದೆ. ತನ್ನನ್ನು ಯಾರೂ ಇಷ್ಟ ಪಡುವುದಿಲ್ಲ ಎಂದುಕೊಳ್ಳುತ್ತಾಳೆ. ತಾನು ನೋಡಲು ಇತರರಂತೆ ಸುಂದರವಿಲ್ಲ ಎಂದುಕೊಳ್ಳುತ್ತಾಳೆ. ಇದರಿಂದ ಶಾಲೆಯಲ್ಲಿ ಜಗಳಗಳು, ಓದಿನಲ್ಲಿ ಏಕಾಗ್ರತೆಯ ಕೊರತೆ, ಆಸಕ್ತಿ ಕಳೆದುಕೊಳ್ಳುತ್ತಿದ್ದಾಳೆ. ಮನೆಯಲ್ಲಿಯೂ ಕಿರಿಕಿರಿಗಳು ಹೆಚ್ಚುತ್ತಿವೆ.

ಅಮರ, 7ನೇ ತರಗತಿಯಲ್ಲಿ ಓದುತ್ತಿದ್ದ. ಒಮ್ಮೆ, ಹೋಂವರ್ಕ್ ಮಾಡದಿದ್ದಕ್ಕೆ ಶಾಲೆಯಲ್ಲಿ ಶಿಕ್ಷಕರು ಬೈದಿದ್ದರು. ಮನೆಗೆ ಬಂದ ಮೇಲೆ, ಮೊಬೈಲ್‌ನಲ್ಲಿ ಗೇಮ್ ಆಡುತ್ತ ಕುಳಿತಿದ್ದ. ಅದನ್ನು ನೋಡಿ ಅವರಪ್ಪ, ಅವನನ್ನು ಗದರಿದರು. ಸಂಜೆ, ಅಮರ ಮನೆಯಿಂದ ಹೊರ ಹೋಗಿದ್ದ. ರಾತ್ರಿಯಾದರೂ ಮರಳಿ ಮನೆಗೆ ಬಂದಿರಲಿಲ್ಲ. ಕೊನೆಗೆ, 3 ದಿನಗಳ ನಂತರ ಬೆಂಗಳೂರು ರೈಲು ನಿಲ್ದಾಣದಲ್ಲಿ ಸಿಕ್ಕಿದ್ದ! ಪೋಲಿಸರು ಕಾರಣ ಕೇಳಿದರೆ, ಅಪ್ಪ ಗದರಿದರು, ಅದಕ್ಕೆ ಮನೆ ಬಿಟ್ಟು ಓಡಿ ಬಂದೆ ಎನ್ನುವ ಕಾರಣ ಹೇಳಿದ್ದ.

ಈ ಮೇಲಿನ ಮೂರು ಸಂದರ್ಭಗಳನ್ನು ಗಮನಿಸಿದರೆ, ಮಕ್ಕಳು ಹಾಗೂ ಹದಿಹರೆಯದವರಲ್ಲಿ ವಿವಿಧ ಪ್ರತಿಕೂಲ ಪರಿಸ್ಥಿತಿಗಳನ್ನು ಸಫಲವಾಗಿ ಎದುರಿಸುವ ಸಾಮರ್ಥ್ಯದ ಬಗ್ಗೆ ಪ್ರಶ್ನೆಗಳು ಉದ್ಭವವಾಗುತ್ತವೆ.

ಮೊದಲನೇ ಸಂದರ್ಭದಲ್ಲಿ, ತಾಯಿಯ ಕಾಳಜಿಯು ಸ್ವಾಭಾವಿಕವಾಗಿಯೂ ಹಾಗೂ ಪರಿಸ್ಥಿತಿಗೆ ತಕ್ಕ ಹಾಗೆ ಎನ್ನಿಸುತ್ತದೆ. ಆದರೆ ಅಷ್ಟು ಚಿಕ್ಕ ಗಾಯವಾಗುವ ಕ್ರಿಯೆಗೆ, ಅಷ್ಟೊಂದು ದೊಡ್ಡ ಮಟ್ಟದ ಪ್ರತಿಕ್ರಿಯೆ ಅವಶ್ಯಕತೆ ಇತ್ತೇ? ಈ ರೀತಿಯ ಪಾಲನೆಗೆ 'ಹೆಲಿಕಾಪ್ಟರ್ ಪೇರೆಂಟಿಂಗ್' ಎನ್ನುತ್ತೇವೆ.

ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಿ ಸಫಲವಾಗಿ ಹೊರಹೊಮ್ಮುವ ಸಾಮರ್ಥ್ಯ (Resilience) ಪ್ರತಿಯೊಬ್ಬ ಮನುಷ್ಯನಿಗೂ ಅತಿ ಅವಶ್ಯ. ಪ್ರತಿಯೊಬ್ಬರಲ್ಲೂ ಸಹಜವಾಗಿಯೇ ಈ ಸಾಮರ್ಥ್ಯ ಬೇರೆ ಬೇರೆ ಮಟ್ಟದಲ್ಲಿರುತ್ತದೆ. ಆದರೆ ಈ ಪುಟಿದೇಳುವ ಸಾಮರ್ಥ್ಯವನ್ನು ಚಿಕ್ಕಂದಿನಿಂದಲೇ ಪ್ರತಿಯೊಬ್ಬರಲ್ಲೂ ಬೆಳೆಸಬಹುದು, ವೃದ್ಧಿಸಬಹುದು.

ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ, ಪುಟಿದೇಳುವ ಚೈತನ್ಯವು ಇತ್ತೀಚಿನ ದಿನಗಳಲ್ಲಿ ಬೆಳೆಯುವ ಮಕ್ಕಳಲ್ಲಿ ಕಡಿಮೆಯೆನಿಸುತ್ತಿದೆ. ವಿಶೇಷವಾಗಿ, ಕೋವಿಡ್ ಲಾಕ್‌ಡೌನ್ ನಂತರ ಮಕ್ಕಳಲ್ಲಿ, ಅನೇಕ ಭಾವನಾತ್ಮಕ, ಮನೋದೈಹಿಕ ಹಾಗೂ ವರ್ತನಾ ಸಮಸ್ಯೆಗಳು ಹೆಚ್ಚಿವೆ. ಈ ಹೆಚ್ಚಳಕ್ಕೆ ಕಾರಣಗಳನ್ನು ಹುಡುಕಬೇಕಾದರೆ, ಮಕ್ಕಳಲ್ಲಿ 'ರೆಸಿಲಿಯನ್ಸ್' ಕಡಿಮೆಯಿರುವುದು ಒಂದು ಪ್ರಮುಖ ಕಾರಣ. ಈ ಚೈತನ್ಯ ಬೆಳೆಯದಿರುವುದಕ್ಕೆ ಕಾರಣಗಳೇನು?

1. **ಹೆಲಿಕಾಪ್ಟರ್ ಪಾಲನೆ:** ಮಕ್ಕಳಿಗೆ ಸ್ಪಷ್ಟವಾದ ಮಾರ್ಗದರ್ಶನ, ಸಂಪನ್ಮೂಲಗಳನ್ನು ಒದಗಿಸುವ ಹೊರತಾಗಿಯೂ ಮಗುವಿನ ಪ್ರತಿಯೊಂದು ಚಟುವಟಿಕೆಯಲ್ಲಿಯೂ ಪಾಲಕರು ಅವಶ್ಯಕತೆಗಿಂತ ಹೆಚ್ಚು ಭಾಗವಹಿಸುವುದು. ಇದರಿಂದ, ಮಗುವು ತನ್ನ ಸ್ವತಂತ್ರ ಮನೋಭಾವವನ್ನು ಬೆಳೆಸಿಕೊಳ್ಳುವುದಿಲ್ಲ. ಪ್ರತಿಯೊಂದಕ್ಕೂ, ಪಾಲಕರು ಹಾಗೂ ಇತರರ ಮೇಲೆಯೆ ಅವಲಂಬಿತವಾಗುತ್ತದೆ. ಸಮಸ್ಯೆಗಳನ್ನು ಪರಿಹರಿಸುವ ಕೌಶಲ ಮಗುವಿನಲ್ಲಿ ಬೆಳೆಯುವುದಿಲ್ಲ.
2. ಶಾಲೆಗಳಲ್ಲಿ ಅತಿಯಾದ ಶೈಕ್ಷಣಿಕ ಒತ್ತಡ. ಗುರಿಸಾಧನೆಯೆಡೆಗೇ ಅತಿಯಾದ ಪ್ರಾಮುಖ್ಯ.
3. ಜೀವನಕೌಶಲ ಹಾಗೂ ನೀತಿಪಾಠದ ಕಲಿಕೆ ಹಾಗೂ ಬೋಧನೆಯ ಬಗ್ಗೆ ನಿರಾಸಕ್ತಿ.
4. ಓದಿನಲ್ಲಿ, ಮೌಲ್ಯಾಧಾರಿತ ಫಲಿತಾಂಶಕ್ಕಿಂತ ಲೌಕಿಕ ಫಲಿತಾಂಶಕ್ಕೆ ಹೆಚ್ಚಿನ ಒತ್ತು.
5. ಪ್ರಕೃತಿಯಿಂದ ದೂರ ಸಾಗಿ ಅವಾಸ್ತವಿಕ ಜಗತ್ತಿನಲ್ಲಿ ಹೆಚ್ಚಿನ ಸಮಯವನ್ನು ಕಳೆಯುವುದು. (ಮೊಬೈಲ್, ಸಾಮಾಜಿಕ ಜಾಲತಾಣ, ಗೇಮ್ಸ್)
6. ಅನುಭೂತಿಯ ಕೊರತೆ. ಚಿಕ್ಕ ಕುಟುಂಬಗಳು, ಕೌಟುಂಬಿಕ ಸಮಸ್ಯೆಗಳು, ನಗರೀಕರಣ, ಇತ್ಯಾದಿ.

ಹಾಗಾದರೆ ಮಕ್ಕಳಲ್ಲಿ ಪುಟಿದೇಳುವ ಮನಃಸ್ಥಿತಿಯನ್ನು ಬೆಳೆಸಬಹುದೇ? ಹೌದು. ಮಕ್ಕಳಲ್ಲಿ, ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಿ, ಪುಟಿದೇಳುವಂತಹ ಚೈತನ್ಯವನ್ನು ಬೆಳೆಸಬಹುದು.

1. ಮಕ್ಕಳಿಗೆ ಆದಷ್ಟು ಸ್ವತಂತ್ರ ಹಾಗೂ ಪ್ರೋತ್ಸಾಹಭರಿತ ವಾತಾವರಣವನ್ನು ಕಲ್ಪಿಸಿಕೊಡುವುದು.
2. ಹೆಲಿಕಾಪ್ಟರ್ ಪಾಲನೆ ಬೇಡ. ಮಕ್ಕಳ ಸಮಸ್ಯೆಗಳನ್ನು ಖುದ್ದಾಗಿ ಪರಿಹರಿಸಬೇಡಿ. ಮಕ್ಕಳಿಗೆ ಮಾರ್ಗದರ್ಶನ ಮಾಡಿ, ಅವೇ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸಹಕರಿಸಿ. ಫಲಿತಾಂಶಗಳಿಗಿಂತ, ಪ್ರಯತ್ನಗಳನ್ನು ಪ್ರಶಂಸಿಸಿ.

ನಿರಾಶೆ, ಹತಾಶೆಗಳನ್ನು ಅನುಭವಿಸಲು ಬಿಡಿ. ಈ ಪರಿಸ್ಥಿತಿಗಳು ಶಾಶ್ವತವಲ್ಲವೆಂಬುದು ಮಕ್ಕಳಿಗೂ ಅರಿವಾಗಲಿ.

ಸೃಜನಶೀಲತೆಯನ್ನು ಬೆಂಬಲಿಸಿ, ಪ್ರೋತ್ಸಾಹಿಸಿ. ನಿರ್ಧಾರಗಳನ್ನು ಸ್ವಂತವಾಗಿ ತೆಗೆದುಕೊಳ್ಳಲು ಅವಕಾಶ ನೀಡಿ. ಸವಾಲುಗಳನ್ನು ಅವಕಾಶಗಳನ್ನಾಗಿ ಹೇಗೆ ಬಳಸಿಕೊಳ್ಳಬಹುದು ಎಂಬುದರ ಬಗ್ಗೆ ಚರ್ಚಿಸಿ. ಆತ್ಮವಿಶ್ವಾಸ–ಸ್ವಾಭಿಮಾನಗಳನ್ನು ಬೆಳೆಸಿ.

3. ವ್ಯಕ್ತಿತ್ವ ವಿಕಸನಕ್ಕೆ ಒತ್ತು ನೀಡಿ. ಇತರರೊಡನೆ ಬೆರೆಯುವುದು, ಗೆಳೆತನ, ಅನುಭೂತಿ ಮುಂತಾದ ಸಾಮಾಜಿಕ ಕೌಶಲಗಳನ್ನು ಬೆಳೆಸಿಕೊಳ್ಳುವುದು.
4. ಕ್ರೀಡೆಗಳತ್ತ ವಿಶೇಷ ಗಮನಕ್ಕೆ ಪ್ರೋತ್ಸಾಹಿಸಿ. ಕ್ರೀಡಾಸ್ಫೂರ್ತಿ ಜೀವನದಲ್ಲಿ ಅತಿ ಮುಖ್ಯ.
5. ಆದಷ್ಟು ಪ್ರಕೃತಿಯತ್ತ ಮುಖ ಮಾಡಿಸಿ. 'ಮೋರ್ ಗ್ರೀನ್ ಟೈಮ್ ದ್ಯಾನ್ ಸ್ಕ್ರೀನ್ ಟೈಮ್.' ❖

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

MATHEMATICS

MULTIPLE CHOICE QUESTIONS

28) $\int \frac{x^3-1}{x^3+x}\,dx =$

(a) $x - \log x + \log(x^2+1) - \tan^{-1}x + c$

(b) $x - \log x + \frac{1}{2}\log(x^2+1) - \tan^{-1}x + c$

(c) $x + \log x + \log(x^2+1) - \tan^{-1}x + c$

(d) $x + \log x + \frac{1}{2}\log(x^2+1) - \tan^{-1}x + c$

Ans : (b) $x - \log x + \frac{1}{2}\log(x^2+1) - \tan^{-1}x + c$

Expln :–

In $\frac{x^3-1}{x^3+1}$, the degree of Nr and Dr are same.

$\therefore$ By actual division we get $\frac{x^3-1}{x^3+1} = 1 - \frac{(x+1)}{x(x^2+1)}$

Let $\frac{x+1}{x(x^2+1)} = \frac{A}{x} + \frac{Bx+C}{x^2+1}$

$\frac{x+1}{x(x^2+1)} = \frac{A(x^2+1)+x(Bx+c)}{x(x^2+1)}$

$\therefore A(x^2+1)+Bx^2+Cx = x+1.$

Coeff. of x^2 : $A+B=0$, Coeff. of x : $C=1$,

Constant : $A=1$: $\therefore B=-1$

i.e., $\frac{x+1}{x(x^2+1)} = \frac{1}{x} + \frac{-x+1}{x^2+1}$

$$\int \frac{x^3-1}{x^3+x}\,dx = \int\left[1 - \frac{x+1}{x(x^2+1)}\right]dx$$

$$= x - \int\frac{x+1}{x(x^2+1)}\,dx = x - \int\frac{1}{x}\,dx - \int\frac{1-x}{x^2+1}\,dx$$

$$I = x - \log x - \int\frac{1}{x^2+1}\,dx + \int\frac{x\,dx}{x^2+1}$$

$$= x - \log x - \tan^{-1}x + \frac{1}{2}\log(x^2+1) + C.$$

29) If A and B are finite sets and $A \subset B$, then

(a) $n(A \cup B) = n(A)$

(b) $n(A \cap B) = n(B)$

(c) $n(A \cup B) = n(B)$

(d) $n(A \cap B) = \phi$

Answer: (c)

Consider the function $A \subset B$

$A \cap B = A$

$N(A \cap B) = n(A)$

Also,

$n(A \cup B) = n(A) + n(B) - n(A \cap B)$

$= n(A) + n(B) - n(A)$

$= n(B)$

30) The value of $\cos^2 45^\circ - \sin^2 15^\circ$ is

(a) $\sqrt{3}/2$ (b) $\sqrt{3}/4$

(c) $[\sqrt{3}+1]/2\sqrt{2}$

(d) $[\sqrt{3}-1]/2\sqrt{2}$

Answer: (b)

$\cos^2 45^\circ - \sin^2 15^\circ$

$\cos(45^\circ+15^\circ)\cos(45^\circ-15^\circ)$ $\{\because \cos^2 A - \sin^2 B = \cos(A+B)\cos(A-B)\}$

$= \cos 60^\circ \cos 30^\circ$

$= (1/2)(\sqrt{3}/2)$

$= \sqrt{3}/4$

31) $3+5+7+\ldots\ldots$ to n term is –

(a) $n(n+2)$ (b) $n(n-2)$

(c) n^2 (d) $(n+1)^2$

Ans: (a)

$3+5+7+\ldots\ldots+n$

$(a=3, d=2)$

$S_n = (n/2)[2a+(n-1)d]$

$= (n/2)[2*3+(n-1)2]$

$= (n/2)(6+2n-2)$

$= (n/2)(4+2n)$

$= n(n+2)$

32) If $\int \frac{\cos 8x+1}{\tan 2x - \cot 2x}\,dx = a\cos 8x + c$, then a =

(a) $-\frac{1}{16}$ (b) $\frac{1}{8}$

(c) $\frac{1}{16}$ (d) $-\frac{1}{8}$

Ans : (C) $\frac{1}{16}$

Expln :–

$$\int \frac{\cos 8x+1}{\frac{\sin 2x}{\cos 2x} - \frac{\cos 2x}{\sin 2x}} = \int \frac{\cos 8x+1}{\frac{\sin^2 2x - \cos^2 2x}{\sin 2x \cos 2x}}$$

$$= \int \frac{\cos 2(4x)+1}{-(\cos^2 2x - \sin^2 2x)} \times \frac{1}{2}\sin 4x\,dx$$

$\cos^2\theta - \sin^2\theta = \cos 2\theta$ and $1 + \cos 2\theta = 2\cos^2\theta$

$$\therefore I = -\int \frac{2\cos^2 4x}{\cos 4x} \times \frac{1}{2}\sin 4x\,dx$$

$$= -\int \sin 4x \cos 4x\,dx = -\frac{1}{2}\int \sin 8x\,dx$$

$$= \frac{1}{2}\frac{\cos 8x}{8} + C \qquad \therefore a = \frac{1}{16}.$$

33) If $\int_0^{\pi} x\, f(\sin x)\,dx = A\int_0^{\pi/2} f(\sin x)\,dx$, then A is

(a) 0 (b) 2π

(c) $\frac{\pi}{4}$ (d) π

Ans : (D) π

Expln :–

Let $I = \int_0^{\pi} x\, f(\sin x)\,dx$ ...(1)

Also $I \int_0^{\pi} (\pi - x)\, f[\sin(\pi - x)]\,dx$

i.e., $I \int_0^{\pi} (\pi - x)\, f(\sin x)\,dx$ ...(2)

Adding (1) and (2), we get $2I = \pi\int_0^{\pi} f(\sin x)\,dx$

$2I = \pi.\, 2\int_0^{\pi/2} f(\sin x)\,dx$ $[\because f(x) = f(a-x)]$

$\therefore I = \pi\int_0^{\pi/2} f(\sin x)\,dx$ $\qquad \therefore A = \pi.$

34) $\cot^{-1}(21) + \cot^{-1}(13) + \cot^{-1}(-8) =$

(a) 0 (b) $\cot^{-1} 26$

(c) π (d) none of these

Ans: (A) 0

Expln:-

(Contd....)

BIOLOGY

32) n a taxonomic hierarchy, the number of common characters will increase as we go from

a) Species to Kingdom

b). Kingdom to Species

c) Class to Order d) Genus to Species

Ans: (b)

Expln:- As we go higher from species to kingdom, the number of common characteristics goes on decreasing or vice versa. Lower the taxa more are the characteristics that the members within the taxon share. Higher the category, greater is the difficulty of determining the relationship to other taxa at the same level.

33) An explants is……………………..

a) dead plant b) part of the plant

c) part of the plant used in tissue culture

d) part of the plant that expresses a specific gene

Ans:- c

34) The biggest constraint of plant breeding is:………………………..

a) availability of desirable gene in the crop and its wild relatives

b) infrastructure c) trained manpower

d) transfer of genes from unrelated sources.

Ans:- d

35) Lysine and tryptophan are:

a) proteins b) non-essential amino acids

c) essential amino acids

d) aromatic and no acids.

Ans:- c

36) Micro-propagation is………………………

a) propagation of microbes in vitro

b) propagation of plants in vitro

c) propagation of cells in vitro

d) growing plants on smaller scale.

Ans:- b

37) Protoplast is…………………………………

a) another name for protoplasm

b) an animal cell c) a plant cell.

d) a plant cell without a cell wall

Ans:- d

38) To isolate protoplast, one needs…………

a) pectinase b) cellulase

c) both pectinase and cellulose d) chitinase.

Ans:- c

39) In which type of interaction, both the interacting organisms do not live close together?

a) Predation b) Parasitism

c) Mutualism d) Competition

Ans:(d)

Expln:- Predation is the consumption of one species (the prey) by another (the predator). Parasitism is a host parasite relationship in which one (parasite) is benefited while other (host) is adversely affected, although not necessarily killed. Competition is the injurious effect of one organism on another because of the removal of some resources of the environment. This phenomenon can result in major fluctuations in the composition of the microbial population in the soil

40) Which one of the following products of apiculture is used in cosmetics and polishes?

a) Honey b) oil

c) wax d) Royal jelly

Ans:- c

41) More than 70 percent of livestock population is in…………………………

a) Denmark b) Pakistana

c) China d) India and China.

Ans:- d

42) The agriculture sector of India employs:

a) 40 per cent of the population

b) 70 per cent of the population

c) 30 per cent of the population

d) 62 per cent of the population.

Ans:- d

43) Which one of the following statement is correct?

a) Chasmogamous flowers always exhibit geitonogamy.

b) Cleistogamous flowers always exhibit autogamy.

c) Chasmogamous flowers never exhibit autogamy.

d) Cleistogamous flowers exhibit both autogamy and geitonogamy.

Ans: (b)

Expln:- Cleistogamous flowers do not open at all. In such flowers, the anther and stigma lie close to each other. When anthers dehisce in the flower buds, pollen grain comes in contact with the stigma to effect pollination. Thus, cleistogamous flowers are invariably autogamous as there is no chance of cross pollen landing on the stigma. Whereas chasmogamous flowers(with exposed anthers and stigma) can exhibit autogamy, geitonogamy or xenogamy.

44) In a dithecous anther, each pollen sac contains 1000 MMC. What is the total number of pollen-grains produced by the anther?

a) 4,000 b) 8,000

c) 16,000 d) 32,000

Answer: (c)

Expln:- Total pollen sacs or microsporangia in bilobed, dithecous anther are four. Each pollen sac has 1000 microspore mother cells.

So, total microspore mother cell in 4 pollen sacs is $4 \times 1000 = 4000$. Meiosis produces 4 pollen grains or male gametophytes. Meiosis in 400 microspore mother cell will produce $= 400 \times 4 = 1600$ pollen grains or male gametophytes.

45) The vitamin whose content increases following the conversion of milk –

a) Vitamin C b) Vitamin D

c) Vitamin B_{12} d) Vitamin E

Ans:- c

❖

ಭದ್ರತೆ ಹೆಚ್ಚಿಸಿದರೂ ಸಿಬ್ಬಂದಿ ಕಣ್ತಪ್ಪಿಸಿ ಸಾಗಣೆ • ಮೊಬೈಲ್, ಸಿಮ್ ಪತ್ತೆ

ಕಾರಾಗೃಹದಲ್ಲಿ ನಿಲ್ಲದ ಅಕ್ರಮ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಭದ್ರತೆ ಹೆಚ್ಚಿಸಿದ್ದರೂ ಅಕ್ರಮ ಚಟುವಟಿಕೆಗಳು ನಿರಂತರವಾಗಿವೆ. ಪ್ರತಿ ಕೊಠಡಿಗಳಲ್ಲಿ ಸಿಬ್ಬಂದಿ ಮೇಲಿಂದ ಮೇಲೆ ತಪಾಸಣೆ ನಡೆಸುತ್ತಿದ್ದು ಮೊಬೈಲ್, ಸಿಮ್ ಕಾರ್ಡ್‌ಗಳನ್ನು ಜಪ್ತಿ ಮಾಡುತ್ತಿದ್ದಾರೆ.

ಜೈಲಿನ ಪ್ರವೇಶ ದ್ವಾರ ಹಾಗೂ ಕೈದಿಗಳ ಭೇಟಿ ಸ್ಥಳದಲ್ಲಿ ಕೈಗಾರಿಕಾ ಭದ್ರತಾ ಪಡೆಯ (ಕೆಎಸ್‌ಐಎಸ್‌ಎಫ್) ಸಿಬ್ಬಂದಿ ಭದ್ರತೆ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಜೈಲು ಸಿಬ್ಬಂದಿಯೂ ಭದ್ರತೆಗೆ ಕೈ ಜೋಡಿಸಿದ್ದಾರೆ.

ಜೈಲಿಗೆ ಬರುವ ಸಾರ್ವಜನಿಕರನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಆದಾಗ್ಯೂ, ಡ್ರಗ್ಸ್ ಹಾಗೂ ಮೊಬೈಲ್‌ಗಳು ಸರಬರಾಜಾಗುತ್ತಿರುವ ಆರೋಪಗಳು ಕೇಳಿಬರುತ್ತಿವೆ.

ಭೇಟಿಗಾಗಿ ಅನುಮತಿ ಪಡೆಯುವ ಕೆಲವರು, ಕೈದಿಗಳಿಗೆ ಮೊಬೈಲ್ ಹಾಗೂ ಡ್ರಗ್ಸ್ ಕೊಟ್ಟು ಹೋಗುತ್ತಿದ್ದಾರೆ. ಶಿಕ್ಷೆ ಅನುಭವಿಸುತ್ತಿರುವ ಕೈದಿಗಳು, ಮೊಬೈಲ್ ಬಳಸಿ ಹೊರಗಿನವರ ಜೊತೆ ಸಂಪರ್ಕ ಸಾಧಿಸುತ್ತಿದ್ದಾರೆ. ಕೆಲವರು, ಜನರಿಗೆ ಜೀವ ಬೆದರಿಕೆಯೊಡ್ಡಿ ಹಣ ವಸೂಲಿ ಮಾಡುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ.

‘ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಕೈದಿಗಳು, ಸಂಬಂಧಿಕರು ಹಾಗೂ ಎದುರಾಳಿಗಳಿಗೆ ಕರೆ ಮಾಡುತ್ತಿರುವ ಬಗ್ಗೆ ಕೆಲ ಠಾಣೆಗಳ ಪೊಲೀಸರು ಮಾಹಿತಿ ನೀಡುತ್ತಿದ್ದಾರೆ. ಅಂಥ ಕೈದಿಗಳ ಕೊಠಡಿಯಲ್ಲಿ ತಪಾಸಣೆ ನಡೆಸಿ ಅಕ್ರಮ ಪತ್ತೆ ಮಾಡಲಾಗುತ್ತಿದೆ’ ಎಂದು ಕಾರಾಗೃಹದ ಮೂಲಗಳು ಹೇಳಿವೆ.

ನಗರದ ಪರಪ್ಪನ ಅಗ್ರಹಾರದಲ್ಲಿರುವ ಕೇಂದ್ರ ಕಾರಾಗೃಹ

‘ಮೊಬೈಲ್, ಸಿಮ್ ಕಾರ್ಡ್ ಹಾಗೂ ಇತರೆ ಯಾವುದಾದರೂ ನಿಷೇಧಿತ ವಸ್ತುಗಳು ಸಿಕ್ಕರೆ ಠಾಣೆಗೆ ದೂರು ನೀಡಲಾಗುತ್ತಿದೆ. ಕೈದಿ ವಿರುದ್ಧ ಪ್ರತ್ಯೇಕ ಎಫ್‌ಐಆರ್ ದಾಖಲಾಗುತ್ತಿದೆ. ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ತಪಾಸಣೆ: ಕೈದಿಗಳ ಕೊಠಡಿಗಳಲ್ಲಿ ಜೈಲಿನ ಅಧಿಕಾರಿಗಳು ಮಾರ್ಚ್ 29ರಂದು ತಪಾಸಣೆ ನಡೆಸಿದ್ದು, ಮೊಬೈಲ್ ಹಾಗೂ ಸಿಮ್‌ಕಾರ್ಡ್‌ಗಳನ್ನು ಪತ್ತೆ ಹಚ್ಚಿದ್ದಾರೆ.

‘ಕೈದಿಗಳು ಮೊಬೈಲ್ ಬಳಸುತ್ತಿರುವ ಮಾಹಿತಿ ಇದ್ದು, ದಿಢೀರ್ ತಪಾಸಣೆ ನಡೆಸಲಾಯಿತು. ಟವರ್- 1 ವಿಭಾಗದ 7ನೇ ಬ್ಯಾರಕ್‌ನ ಕೊಠಡಿ ಸಂಖ್ಯೆ 1ರಲ್ಲಿ ಮೊಬೈಲ್ ಫೋನ್, 3 ಸಿಮ್ ಕಾರ್ಡ್ ಪತ್ತೆಯಾಗಿವೆ’ ಎಂದು ಮೂಲಗಳು ಹೇಳಿವೆ.

‘ವಿಚಾರಣಾಧೀನ ಕೈದಿ ಸೈಯದ್ ಅಸ್ಗರ್ ಅಲಿಯಾಸ್ ಅಜ್ಜು ಎಂಬಾತ ಮೊಬೈಲ್ ಹಾಗೂ ಸಿಮ್‌ಕಾರ್ಡ್ ಇಟ್ಟುಕೊಂಡಿದ್ದು ಗೊತ್ತಾಗಿದೆ. ಆತನ ವಿರುದ್ಧ ಪೊಲೀಸರಿಗೆ ದೂರು ನೀಡಲಾಗಿದೆ’ ಎಂದು ತಿಳಿಸಿವೆ.

ಪರಪ್ಪನ ಅಗ್ರಹಾರ ಠಾಣೆ ಪೊಲೀಸರು, ‘ಜೈಲಿನೊಳಗೆ ಮೊಬೈಲ್, ಸಿಮ್‌ಕಾರ್ಡ್ ಹೇಗೆ ಸಾಗಿಸಲಾಗಿದೆ ಎಂದು ತಿಳಿಯಲು ತನಿಖೆ ಮುಂದುವರಿಸಲಾಗಿದೆ. ವಿಚಾರಣಾಧೀನ ಕೈದಿಗೆ ಜೈಲಿನ ಕೆಲ ಸಿಬ್ಬಂದಿಯೂ ಸಹಕಾರ ನೀಡಿರುವ ಅನುಮಾನವೂ ಇದೆ’ ಎಂದರು.

500 ಪುಟಗಳ ವರದಿ ಸಲ್ಲಿಸಿದ್ದ ಎಡಿಜಿಪಿ

ಜೈಲಿನಲ್ಲಿನ ಅಕ್ರಮ ಚಟುವಟಿಕೆ ಹಾಗೂ ಕೈದಿಗಳಿಗೆ ವಿಲಾಸಿ ಸೌಲಭ್ಯ ಒದಗಿಸುತ್ತಿರುವ ಬಗ್ಗೆ ವಿಡಿಯೊಗಳು ಹರಿದಾಡಿದ್ದವು. ಈ ಬಗ್ಗೆ ತನಿಖೆ ನಡೆಸಿದ್ದ ಎಸಿಜಿಪಿ ಮುರುಗನ್ ನೇತೃತ್ವದ ತಂಡ, ಸರ್ಕಾರಕ್ಕೆ 500 ಪುಟಗಳ ವರದಿ ಸಲ್ಲಿಸಿತ್ತು.

ಬಳಿಕ ಹಲವು ಅಧಿಕಾರಿ ಹಾಗೂ ಸಿಬ್ಬಂದಿ ವರ್ಗಾವಣೆಯಾಗಿತ್ತು. ಅಕ್ರಮ ತಡೆಗೆ ಕೆಲ ಸುಧಾರಣಾ ಕ್ರಮಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಮೊಬೈಲ್ ಸಿಕ್ಕಿದ್ದ ಪ್ರಕರಣಗಳು

- **2023 ಫೆ. 20:** ವಿಚಾರಣಾಧೀನ ಕೈದಿ ಮಹಮ್ಮದ್ ನೌಶಾದ್ ಅಲಿಯಾಸ್ ಅನ್ಸಾರಿ ಒಳ ಉಡುಪಿನಲ್ಲಿ ಮೊಬೈಲ್ ಪತ್ತೆಯಾಗಿತ್ತು
- **2023 ಜ. 23:** ವಿಚಾರಣಾಧೀನ ಕೈದಿ ಜಯಮ್ಮ ಭೇಟಿಗೆ ಬಂದಿದ್ದ ರಾಮನಗರದ ಗುರುಲಕ್ಷ್ಮಮ್ಮ ಬ್ಯಾಗ್‌ನಲ್ಲಿ ಮೊಬೈಲ್ ಪತ್ತೆ
- **2022 ಡಿ. 22:** ಕೈದಿ ಮಹಮ್ಮದ್ ನದೀಮ್ ಅಲಿಯಾಸ್ ಬಡ್ಡೆ ನೋಡಲು ಬಂದಿದ್ದ ಕಾಡುಗೊಂಡನಹಳ್ಳಿ (ಕೆ.ಜಿ. ಹಳ್ಳಿ) ನಿವಾಸಿ ಉಮ್ಮೆಶಾಮ ಗುಪ್ತಾಂಗದಲ್ಲಿ ಬಚ್ಚಿಟ್ಟಿದ್ದ ಎರಡು ಬೇಸಿಕ್ ಮೊಬೈಲ್ ಪತ್ತೆ
- **2022 ಡಿ. 14:** ಕಾರಾಗೃಹದ 2ನೇ ಟವರ್ ಕಟ್ಟಡದ ಡಿ.ಬ್ಯಾರಕ್‌ನ ಕೊಠಡಿ ಸಂಖ್ಯೆ 6ರಲ್ಲಿ ಕೈದಿ ಸಾಗರ್ ಅಲಿಯಾಸ್ ರಕಿಬುಲ್ ಇಸ್ಲಾಮ್ ಬಳಿ ಎರಡು ಮೊಬೈಲ್ ಹಾಗೂ ಮೂರು ಸಿಮ್‌ಕಾರ್ಡ್ ಪತ್ತೆ

‘ಜಾಮರ್ ಬದಲಾವಣೆಗೆ ಪ್ರಸ್ತಾವ’

‘ಜೈಲಿನಲ್ಲಿ ಅಳವಡಿಸಿರುವ ಜಾಮರ್‌ಗಳು, 3ಜಿ ಮೊಬೈಲ್, ಸಿಮ್‌ಕಾರ್ಡ್‌ಗಳಿಗಷ್ಟೇ ಸೀಮಿತವಾಗಿವೆ. 4ಜಿ ಹಾಗೂ 5ಜಿ ಕರೆಗಳನ್ನು ತಡೆಯುವ ಸಾಮರ್ಥ್ಯವಿಲ್ಲ. ಹೀಗಾಗಿ, ಜಾಮರ್ ಬದಲಾವಣೆಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ಕಾರಾಗೃಹದ ಮೂಲಗಳು ಹೇಳಿವೆ.

‘ಕೇಂದ್ರ ಕಾರಾಗೃಹದ ಆಸುಪಾಸಿನಲ್ಲಿ ವಸತಿ ಪ್ರದೇಶವಿದೆ. ಜಾಮರ್‌ನಿಂದ ಸಾರ್ವಜನಿಕರ ಮೊಬೈಲ್‌ಗಳೂ ಬಂದ್ ಆಗುತ್ತಿರುವ ದೂರುಗಳಿವೆ. ಕಾರಾಗೃಹಕ್ಕಷ್ಟೇ ಜಾಮರ್ ಸೀಮಿತಗೊಳಿಸುವ ಹೊಸ ತಂತ್ರಜ್ಞಾನ ಬಳಸುವ ಬಗ್ಗೆ ಚಿಂತನೆ ನಡೆದಿದೆ’ ಎಂದು ತಿಳಿಸಿವೆ.

ಶಂಕಾಸ್ಪದ ಸಾವು: ಪೊಲೀಸರಿಂದ ಹಲ್ಲೆ?

ಅಪರಾಧ ಸುದ್ದಿ

ಬೆಂಗಳೂರು: ಮಲ್ಲೇಶ್ವರ ಠಾಣೆ ವ್ಯಾಪ್ತಿಯಲ್ಲಿ ಅಬ್ರಹಾಂ (30) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಪೊಲೀಸರು ಹಲ್ಲೆ ಮಾಡಿದ್ದಾರೆಂದು ಪೋಷಕರು ಆರೋಪಿಸಿದ್ದಾರೆ.

‘ಶ್ರೀರಾಮಪುರ ಸ್ವತಂತ್ರಪಾಳ್ಯದ ನಿವಾಸಿ ಅಬ್ರಹಾಂ (30), ಸೋಮವಾರ ಮಧ್ಯಾಹ್ನ ಮನೆಯಿಂದ ಹೊರಗೆ ಹೋಗಿದ್ದರು. ಮಂತ್ರಿ ಮಾಲ್ ಹಿಂಭಾಗದ ಮೇಲ್ಸೇತುವೆ ಬಳಿ ಅಬ್ರಹಾಂ ಮೃತದೇಹ ಪತ್ತೆಯಾಗಿತ್ತು. ಈ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ತರಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸ್ಥಳೀಯರ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸಾವಿಗೆ ಕಾರಣವೇನು ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ. ರೈಲ್ವೆ ಹಳಿ ಸುತ್ತಮುತ್ತ ಇರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ತಿಳಿಸಿದರು.

ತಪ್ಪಿಸಿಕೊಳ್ಳುವಾಗ ಬಿದ್ದು ಸಾವು?: ‘ಅಬ್ರಹಾಂ ಅವರು ಸ್ನೇಹಿತರ ಜೊತೆ ರೈಲ್ವೆ ಹಳಿ ಸಮೀಪದಲ್ಲಿ ಗಾಂಜಾ ಸೇದುತ್ತಿದ್ದರೆಂಬ ಮಾಹಿತಿ ಇದ್ದಿದ್ದರಿಂದ, ಪೊಲೀಸರು ಸ್ಥಳಕ್ಕೆ ಹೋಗಿದ್ದರು’ ಎಂದು ಸ್ಥಳೀಯರೊಬ್ಬರು ತಿಳಿಸಿದ್ದಾರೆ.

‘ಸಿಬ್ಬಂದಿಯನ್ನು ನೋಡಿದ್ದ ಅಬ್ರಹಾಂ ಹಾಗೂ ಸ್ನೇಹಿತರು, ಸ್ಥಳದಿಂದ ಓಡಲಾರಂಭಿಸಿದ್ದರು. ರೈಲ್ವೆ ಹಳಿ ಸಮೀಪ ಹೋಗಿದ್ದ ಅಬ್ರಾಹಂ, ಮೇಲ್ಸೇತುವೆಯಿಂದ ಜಿಗಿದಿದ್ದರು. ಗಾಂಜಾ ಮತ್ತಿನಲ್ಲಿದ್ದ ಅವರ ತಲೆ ಹಾಗೂ ದೇಹದ ಹಲವು ಭಾಗಗಳಿಗೆ ತೀವ್ರ ಪೆಟ್ಟು ಬಿದ್ದಿತ್ತು. ಇದರಿಂದಾಗಿ ಅವರು ಮೃತಪಟ್ಟಿರುವ ಅನುಮಾನವಿದೆ’ ಎಂದು ಹೇಳಿದ್ದಾರೆ.

ಪೊಲೀಸರ ಬೂಟಿನ ಗುರುತು: ಮಗನ ಸಾವಿನ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿರುವ ತಂದೆ ಶಂಕರ್, ‘ಪೊಲೀಸರ ಹಲ್ಲೆಯಿಂದ ಮಗ ಅಬ್ರಹಾಂ ಮೃತಪಟ್ಟಿದ್ದಾರೆ. ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಂಡು, ನ್ಯಾಯ ಒದಗಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘ಮಧ್ಯಾಹ್ನ ಮನೆಯಲ್ಲಿ ಊಟ ಮಾಡಿದ್ದ ಮಗ, ಕೆಲಸ ಇರುವುದಾಗಿ ಹೇಳಿ ಹೊರಗಡೆ ಹೋಗಿದ್ದ. ಮಗನ ಮೃತದೇಹದ ಮೇಲೆ ಪೊಲೀಸರ ಬೂಟಿನ ಗುರುತುಗಳಿವೆ. ಪೊಲೀಸರೇ ಥಳಿಸಿ ಮಗನನ್ನು ಕೊಂದು ಮೃತದೇಹ ಬಿಸಾಕಿದ್ದಾರೆ‘ ಎಂದಿದ್ದಾರೆ.

ಗಾಂಜಾ ಸೇವಿಸುತ್ತಿದ್ದ ಇಬ್ಬರು ಬಂಧನ: ಮಂತ್ರಿ ಮಾಲ್ ಹಿಂಭಾಗದಲ್ಲಿ ಗಾಂಜಾ ಸೇದುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿ, ಅವರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಬಂಧಿತರಿಬ್ಬರು ಅಬ್ರಹಾಂ ಸ್ನೇಹಿತರಿರಬಹುದೆಂಬ ಅನುಮಾನವಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿಯೊಬ್ಬರು, ‘ಬಂಧಿತ ಇಬ್ಬರಿಗೂ, ಅಬ್ರಾಹಾಂಗೂ ಯಾವುದೇ ಸಂಬಂಧವಿಲ್ಲ. ಪೊಲೀಸರಿಂದ ಹಲ್ಲೆ ನಡೆದಿರುವ ಆರೋಪದ ಬಗ್ಗೆ ಪೋಷಕರಿಂದಲೂ ದೂರು ಪಡೆದು ತನಿಖೆ ನಡೆಸಲಾಗುವುದು’ ಎಂದರು.

ಅಕ್ರಮ ಸಾಗಣೆ: ₹ 30 ಲಕ್ಷ ನಗದು ಜಪ್ತಿ

ಪ್ರಜಾವಾಣಿ ವಾರ್ತೆಗಳು

ಬೆಂಗಳೂರು: ಕಾರಿನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ₹30 ಲಕ್ಷ ನಗದು ಜಪ್ತಿ ಮಾಡಿರುವ ಅಮೃತಹಳ್ಳಿ ಪೊಲೀಸರು, ಚಾಲಕ ಸಪ್ತಗಿರಿ ರೆಡ್ಡಿ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಕಾಫಿಬೋರ್ಡ್ ಬಡಾವಣೆಯ ಉದ್ಯಾನ ಬಳಿ ಮಾರ್ಚ್ 28ರಂದು ಕಾರು ತಡೆದು ತಪಾಸಣೆ ನಡೆಸಲಾಗಿತ್ತು. ಕಾರಿನಲ್ಲಿದ್ದ ಬ್ಯಾಗ್‌ನಲ್ಲಿ ₹500 ಮುಖಬೆಲೆಯ 6000 ನೋಟುಗಳು ಪತ್ತೆಯಾದವು. ಸೂಕ್ತ ದಾಖಲೆ ನೀಡದಿದ್ದರಿಂದ ನಗದು ಜಪ್ತಿ ಮಾಡಿ, ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಚುನಾವಣೆ ಉದ್ದೇಶಕ್ಕಾಗಿ ನಗದು ಸಾಗಿಸುತ್ತಿದ್ದ ಬಗ್ಗೆ ಅನುಮಾನವಿದೆ. ಹಣ ಯಾರಿಗೆ ಸೇರಿದ್ದು ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದರು.

ಮಹಿಳೆ ಸಾವು: ಲಾರಿ ಚಾಲಕ ಬಂಧನ

ಬೆಂಗಳೂರು: ನಾಯಂಡಹಳ್ಳಿ ಜಂಕ್ಷನ್ ಬಳಿ ಸಂಭವಿಸಿದ್ದ ಅಪಘಾತದಲ್ಲಿ ಅನುಷಾ (29) ಎಂಬುವವರು ಮೃತಪಟ್ಟ ಪ್ರಕರಣದಲ್ಲಿ ಲಾರಿ ಚಾಲಕ ಮಂಜುನಾಥ್ (42) ಅವರನ್ನು ಬ್ಯಾಟರಾಯನಪುರ ಸಂಚಾರ ಪೊಲೀಸರು ಬಂಧಿಸಿದ್ದಾರೆ.

‘ಕೈವಾರದ ಮಂಜುನಾಥ್, ಕಂಪನಿಯೊಂದರ ಲಾರಿ ಚಾಲಕ. ದೊಡ್ಡಬಳ್ಳಾಪುರದಿಂದ ರಾಮನಗರಕ್ಕೆ ಸಿಮೆಂಟ್ ಚೀಲಗಳನ್ನು ಸಾಗಿಸುತ್ತಿದ್ದ ವೇಳೆ ದ್ವಿಚಕ್ರ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದಿತ್ತು. ರಸ್ತೆಯಲ್ಲಿ ಬಿದ್ದಿದ್ದ ಅನುಷಾ ತಲೆಯ ಮೇಲೆ ಚಕ್ರ ಹರಿದಿತ್ತು’ ಎಂದು ಪೊಲೀಸರು ಹೇಳಿದರು.

‘ಅಪಘಾತದ ಬಳಿಕ ಲಾರಿ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದ. ನೋಂದಣಿ ಸಂಖ್ಯೆ ಹಾಗೂ ತಾಂತ್ರಿಕ ಪುರಾವೆಗಳನ್ನು ಆಧರಿಸಿ ಮಂಜುನಾಥ್‌ನನ್ನು ಬಂಧಿಸಲಾಗಿದೆ’ ಎಂದರು.

‘ಅಪಘಾತದಲ್ಲಿ ಗಾಯಗೊಂಡಿರುವ ಅನುಷಾ ತಾಯಿ ವನಜಾಕ್ಷಿ ಅವರಿಗೆ ವೈದ್ಯರು ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಸದ್ಯ ಅವರನ್ನು ತುರ್ತು ನಿಗಾ ಘಟಕದಲ್ಲಿ (ಐಸಿಯು) ಇರಿಸಲಾಗಿದೆ’ ಎಂದು ಹೇಳಿದರು.

ಇಳಿಜಾರಿನಲ್ಲಿ ನಿಯಂತ್ರಣಕ್ಕೆ ಸಿಗದ ಲಾರಿ: ‘ನಾಯಂಡಹಳ್ಳಿ ಮೇಲ್ಸೇತುವೆಯಲ್ಲಿ ಹೊರಟಿದ್ದ ಲಾರಿ, ಪಂತರಪಾಳ್ಯದಲ್ಲಿ ಮೇಲ್ಸೇತುವೆಯಿಂದ ಇಳಿಯುತ್ತಿದ್ದಂತೆ ವೇಗ ಹೆಚ್ಚಾಗಿತ್ತು. ಎದುರಿಗೆ ದ್ವಿಚಕ್ರ ವಾಹನ ಇರುವುದನ್ನು ನೋಡಿ ಚಾಲಕ, ಲಾರಿ ನಿಲ್ಲಿಸಲು ಬ್ರೇಕ್ ಒತ್ತಿದ್ದರು. ಆದರೆ, ಲಾರಿ ನಿಯಂತ್ರಣಕ್ಕೆ ಸಿಗದೇ ವಾಹನಕ್ಕೆ ಡಿಕ್ಕಿ ಹೊಡೆದು ಮುಂದಕ್ಕೆ ಹೋಗಿತ್ತು. ಈ ಬಗ್ಗೆ ಚಾಲಕ ಹೇಳಿಕೆ ನೀಡಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

ಸಸಿಗಳಿಗೆ ನೀರು...

ಶಾಸಕರು, ಸಚಿವರಿಲ್ಲದೇ ಬಣಗುಡುತ್ತಿರುವ ವಿಧಾನಸೌಧದ ಎದುರಿನ ಕೈತೋಟದಲ್ಲಿ ಒಣಗುತ್ತಿರುವ ಸಸಿಗಳಿಗೆ ಕಾರ್ಮಿಕರೊಬ್ಬರು ನೀರುಣಿಸಿದರು

– ಪ್ರಜಾವಾಣಿ ಚಿತ್ರ/ರಂಜು ಪಿ.

ಉರುಳಿಬಿದ್ದ ದ್ವಿಚಕ್ರ ವಾಹನ: ಟೆಕಿ ಸಾವು

ಬೆಂಗಳೂರು: ಕೆಂಗೇರಿ ಸಂಚಾರ ಠಾಣೆ ವ್ಯಾಪ್ತಿಯ ನೈಸ್ ರಸ್ತೆಯಲ್ಲಿ ದ್ವಿಚಕ್ರ ವಾಹನ ಉರುಳಿಬಿದ್ದು ಅಪಘಾತ ಸಂಭವಿಸಿದ್ದು, ಹಿಂಬದಿ ಕುಳಿತಿದ್ದ ಸುಲೋಚನಾ (29) ಎಂಬುವವರು ಮೃತಪಟ್ಟಿದ್ದಾರೆ.

‘ಇಟ್ಟಮಡು ನಿವಾಸಿ ಸುಲೋಚನಾ, ಸಾಫ್ಟ್‌ವೇರ್ ಎಂಜಿನಿಯರ್. ಸ್ನೇಹಿತ ಅನಂತ್‌ಕುಮಾರ್ ಜೊತೆ ಭಾನುವಾರ ಸಂಜೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅನಂತ್‌ಕುಮಾರ್ ಅವರಿಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಸುಲೋಚನಾ ಹಾಗೂ ಅನಂತ್‌ಕುಮಾರ್, ನೈಸ್ ರಸ್ತೆ ಮೂಲಕ ಇಟ್ಟಮಡು ಕಡೆ ಹೊರಟಿದ್ದರು. ಅನಂತ್‌ಕುಮಾರ್, ಅತೀ ವೇಗವಾಗಿ ನಿರ್ಲಕ್ಷ್ಯದಿಂದ ವಾಹನ ಚಲಾಯಿಸಿದ್ದರು. ಹೊಸಕೆರೆಹಳ್ಳಿ ಬಳಿ ದ್ವಿಚಕ್ರ ವಾಹನ ಉರುಳಿಬಿದ್ದಿತ್ತು. ಸುಲೋಚನಾ ಧರಿಸಿದ್ದ ಅರ್ಧ ಹೆಲ್ಮೆಟ್ ಹಾರಿ ಹೋಗಿತ್ತು. ರಸ್ತೆಗೆ ಬಿದ್ದಿದ್ದ ಅವರ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು.’

ಸುಲೋಚನಾ

‘ಇಬ್ಬರನ್ನೂ ಸಮೀಪದ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ತಲೆಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಸುಲೋಚನಾ ಸೋಮವಾರ ಬೆಳಿಗ್ಗೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಅನಂತ್‌ಕುಮಾರ್ ಚೇತರಿಸಿಕೊಳ್ಳುತ್ತಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಹಿಂಬದಿ ಚಕ್ರದಲ್ಲಿ ಗಾಳಿ ಕಡಿಮೆಯಾಗಿದ್ದರಿಂದ ದ್ವಿಚಕ್ರ ವಾಹನ ಉರುಳಿಬಿದ್ದಿರುವ ಅನುಮಾನವಿದೆ. ತಜ್ಞರು ಈಗಾಗಲೇ ಸ್ಥಳ ಪರಿಶೀಲನೆ ನಡೆಸಿದ್ದಾರೆ. ಅವರ ವರದಿಯಿಂದ ನಿಜಾಂಶ ತಿಳಿಯಲಿದೆ’ ಎಂದರು.

ಅರ್ಧ ಹೆಲ್ಮೆಟ್ ಕಾರಣ: ‘ಸುಲೋಚನಾ ಅವರು ಅರ್ಧ ಹೆಲ್ಮೆಟ್ ಧರಿಸಿದ್ದರು. ಅಪಘಾತದ ವೇಳೆ ಹೆಲ್ಮೆಟ್ ಹಾರಿ ಹೋಗಿತ್ತು. ಸುಲೋಚನಾ ರಸ್ತೆಗೆ ಬೀಳುತ್ತಿದ್ದಂತೆ ತಲೆಗೆ ಪೆಟ್ಟು ಬಿದ್ದಿತ್ತು. ಇದರಿಂದಲೇ ಅವರು ಮೃತಪಟ್ಟಿದ್ದಾರೆ. ಐಎಸ್‌ಐ ಗುರುತಿನ ಗುಣಮಟ್ಟದ ಹೆಲ್ಮೆಟ್ ಧರಿಸಿದ್ದರೆ, ತಲೆಗೆ ಪೆಟ್ಟು ಬೀಳುವ ಸಂಭವ ಕಡಿಮೆ ಇತ್ತು’ ಎಂದು ಪೊಲೀಸರು ಹೇಳಿದರು.

ಮಹಿಳೆಯ ಫೋಟೊ ತೆಗೆದ ಪ್ರಕರಣ: ಆರೋಪಿಯ ವಿರುದ್ಧ ಎಫ್‌ಐಆರ್ ದಾಖಲು

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ಮಹಿಳೆಯೊಬ್ಬರ ಖಾಸಗಿ ಫೋಟೊಗಳನ್ನು ಕ್ಲಿಕ್ಕಿಸಿದ್ದ ಆರೋಪದಡಿ ವ್ಯಕ್ತಿಯೊಬ್ಬರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಆಂಧ್ರಪ್ರದೇಶದ 40 ವರ್ಷ ವಯಸ್ಸಿನ ಮಹಿಳೆ ದೂರು ನೀಡಿದ್ದಾರೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು. ಡೆಹ್ರಾಡೂನ್

‘ಬೆಂಗಳೂರಿನಿಂದ ಡೆಹ್ರಾಡೂನ್‌ಗೆ ಹೋಗಲೆಂದು ಏಪ್ರಿಲ್ 1ರಂದು ರಾತ್ರಿ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಟರ್ಮಿನಲ್ 1ರಲ್ಲಿರುವ ಮಳಿಗೆಯಲ್ಲಿ ಕಾಫಿ ಕುಡಿಯುತ್ತಿದ್ದರು. ಶಾರ್ಟ್ ಧರಿಸಿದ್ದ ಅವರ ಫೋಟೊವನ್ನು ಆರೋಪಿ ತನ್ನ ಮೊಬೈಲ್‌ನಲ್ಲಿ ಕ್ಲಿಕ್ಕಿಸಿದ್ದ. ಅದನ್ನು ನೋಡಿದ್ದ ಮಹಿಳೆ, ಆತನನ್ನು ಪ್ರಶ್ನಿಸಿದ್ದರು. ಇಬ್ಬರ ನಡುವೆ ವಾಗ್ವಾದ ನಡೆದಿತ್ತು.’

‘ಸ್ಥಳದಲ್ಲಿದ್ದ ಭದ್ರತಾ ಸಿಬ್ಬಂದಿ ಸಹಾಯದಿಂದ ಮಹಿಳೆ ಠಾಣೆಗೆ ದೂರು ನೀಡಿದ್ದಾರೆ. ತಮ್ಮ ಖಾಸಗಿ ಅಂಗಗಳ ಫೋಟೊವನ್ನು ಆರೋಪಿ ಕ್ಲಿಕ್ಕಿಸಿದ್ದಾನೆಂದು ಆರೋಪಿಸಿದ್ದಾರೆ. ಘಟನೆ ಬಳಿಕ ಆರೋಪಿ ತಲೆಮರೆಸಿಕೊಂಡಿದ್ದಾನೆ’ ಎಂದು ತಿಳಿಸಿದರು.

ಅಬ್ಬರದ ಸಂಗೀತ: ಪ್ರಶ್ನಿಸಿದ್ದಕ್ಕೆ ಹಲ್ಲೆ

ಬೆಂಗಳೂರು: ಮನೆಯಲ್ಲಿ ಅಬ್ಬರದ ಸಂಗೀತ ಹಚ್ಚಿದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ಮೂವರು ಸಾಫ್ಟ್‌ವೇರ್ ಎಂಜಿನಿಯರ್‌ಗಳ ವಿರುದ್ಧ ಪ್ರಕರಣ ದಾಖಲಾಗಿದೆ.

‘ಭಾನುವಾರ ರಾತ್ರಿ ನಡೆದಿರುವ ಘಟನೆ ಸಂಬಂಧ ಗಾಯಾಳುಗಳು ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಟಿಕೆಟ್ ಘೋಷಣೆಗೂ ಮುನ್ನವೇ ಮತದಾರರ ಮನ ಗೆಲ್ಲುವ ಪ್ರಯತ್ನ

ಅಪಾರ್ಟ್‌ಮೆಂಟ್, ಉದ್ಯಾನದಲ್ಲೂ ಆಕಾಂಕ್ಷಿಗಳ ಮನವೊಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ 28 ಕ್ಷೇತ್ರಗಳಲ್ಲೂ ಬೇಸಿಗೆ ಧಗೆಯ ಜತೆಗೆ ವಿಧಾನಸಭೆ ಚುನಾವಣೆಯ ಕಾವೂ ಏರುತ್ತಿದೆ. ಟಿಕೆಟ್ ಘೋಷಣೆಗೂ ಮುನ್ನವೇ ಆಕಾಂಕ್ಷಿಗಳು ಅಪಾರ್ಟ್‌ಮೆಂಟ್, ಉದ್ಯಾನದಲ್ಲಿ ಮತಬೇಟೆಗೆ ಇಳಿದಿದ್ದಾರೆ.

ಯಲಹಂಕ, ದಾಸರಹಳ್ಳಿ, ಮಹಾಲಕ್ಷ್ಮಿ ಲೇಔಟ್, ಬ್ಯಾಟರಾಯನಪುರದ ಅಪಾರ್ಟ್‌ಮೆಂಟ್ ಹಾಗೂ ಉದ್ಯಾನಗಳಿಗೆ ಆಕಾಂಕ್ಷಿಗಳು ಹಾಗೂ ಟಿಕೆಟ್ ಪಡೆದಿರುವ ಅಭ್ಯರ್ಥಿಗಳು ತೆರಳಿ ಮತಯಾಚನೆ ಮಾಡುತ್ತಿದ್ದಾರೆ.

ಕಳೆದ ಮಳೆಗಾಲದಲ್ಲಿ ಈಜಿಪುರ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಅಪಾರ್ಟ್‌ಮೆಂಟ್ ನಿವಾಸಿಗಳು ಪ್ರವಾಹದ ಸಂಕಷ್ಟಕ್ಕೆ ಸಿಲುಕಿದ್ದರು. ಈ ನಿವಾಸಿಗಳ ಸಮಸ್ಯೆ ಆಲಿಸಿ, ಪರಿಹಾರದ ಭರವಸೆ ನೀಡಲು ಅಭ್ಯರ್ಥಿಗಳು ಹಾಗೂ ಆಕಾಂಕ್ಷಿಗಳು ವಸತಿ ಸಮುಚ್ಚಯದತ್ತ ಚಿತ್ತ ಹರಿಸಿ, ಅವರ ಮನವೊಲಿಸುವ

ಬ್ಯಾಟರಾಯನಪುರ ಕ್ಷೇತ್ರದಲ್ಲಿ ಅಪಾರ್ಟ್‌ಮೆಂಟ್ ನಿವಾಸಿಗಳ ಜತೆಗೆ ಕಾಂಗ್ರೆಸ್ ಅಭ್ಯರ್ಥಿ ಕೃಷ್ಣ ಬೈರೇಗೌಡ ಅವರು ಸಂವಾದ ನಡೆಸಿದರು

ಕಾರ್ಯದಲ್ಲೂ ತಲ್ಲೀನರಾಗಿದ್ದಾರೆ.

ಬ್ಯಾಟರಾಯನಪುರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕೃಷ್ಣ ಬೈರೇಗೌಡ ಮತ್ತೊಮ್ಮೆ ಕಣಕ್ಕೆ ಇಳಿಯುತ್ತಿದ್ದಾರೆ. ಮೊದಲ ಸುತ್ತಿನ ಪ್ರಚಾರ ನಡೆಸಿರುವ ಅವರು, ಈಗ ಅಪಾರ್ಟ್‌ಮೆಂಟ್ ನಿವಾಸಿಗಳ ಜತೆಗೆ ಸಂವಾದ ನಡೆಸುತ್ತಿದ್ದಾರೆ.

ಟಿ.ದಾಸರಹಳ್ಳಿ ಕ್ಷೇತ್ರವು ಕಾಂಗ್ರೆಸ್‌ಗೆ ಕಗ್ಗಂಟ್ಟಾಗಿದೆ. ಕಾಂಗ್ರೆಸ್‌ನಿಂದ ಮೂವರು ಆಕಾಂಕ್ಷಿಗಳು ಪ್ರಚಾರ ನಡೆಸುತ್ತಿದ್ದಾರೆ.

ರಾಜಾಜಿನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಅವರು ಮನೆಮನೆ ಪ್ರಚಾರ ನಡೆಸುತ್ತಿದ್ದಾರೆ. ಆದರೆ, ಅವರಿಗೆ ಬಂಡಾಯದ ಬಿಸಿ ತಟ್ಟಿದೆ. ರಾಜಾಜಿನಗರದ ಕಾಂಗ್ರೆಸ್ ಅಭ್ಯರ್ಥಿಯಾಗಲು ಬಯಸಿದ್ದವರು ಪುಟ್ಟಣ್ಣ ಅವರಿಗೆ ಸಾಥ್ ನೀಡುತ್ತಿಲ್ಲ. ಅವರೊಂದಿಗೆ ಪ್ರಚಾರಕ್ಕೂ ಬರುತ್ತಿಲ್ಲ. ಹೀಗಾಗಿ, ತಮ್ಮ ಬೆಂಬಲಿಗರ ಜತೆಗೆ ಪುಟ್ಟಣ ಪ್ರಚಾರ ನಡೆಸುತ್ತಿದ್ದಾರೆ.

ಬಿಜೆಪಿ ಅಭ್ಯರ್ಥಿಗಳ ಹೆಸರು ಘೋಷಣೆ ಮಾಡದಿರುವ ಕಾರಣಕ್ಕೆ ಆಕಾಂಕ್ಷಿಗಳು ಪ್ರಚಾರ ನಡೆಸುತ್ತಿಲ್ಲ. ಟಿಕೆಟ್ ಸಿಗುವ ನಿರೀಕ್ಷೆಯಿದ್ದವರು ಮಾತ್ರ ಮನೆ ಮನೆಗೆ ತೆರಳಿ ಪ್ರಚಾರ ನಡೆಸುತ್ತಿದ್ದಾರೆ. ಜಿಲ್ಲೆಗಳಲ್ಲಿ ಪಂಚರತ್ನ ಯಾತ್ರೆ ಮುಗಿಸಿರುವ ಜೆಡಿಎಸ್, ಬೆಂಗಳೂರು ಕ್ಷೇತ್ರಗಳತ್ತ ಗಮನ ಹರಿಸಿದೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ಯಲಹಂಕ, ರಾಜರಾಜೇಶ್ವರಿ ನಗರ, ಯಶವಂತಪುರ ಕ್ಷೇತ್ರದಲ್ಲಿ ಪಂಚರತ್ನ ಯಾತ್ರೆ ನಡೆಸಿದ್ದಾರೆ.

‘ಜೆಡಿಎಸ್ ರೈತರು, ಬಡವರ ಪರ ಇಲ್ಲ’

ರಾಜರಾಜೇಶ್ವರಿನಗರ: ಜೆಡಿಎಸ್ ರೈತರು, ಬಡವರು, ಮಧ್ಯಮ ವರ್ಗದವರು, ಶೋಷಿತರು ಹಾಗೂ ದಲಿತರ ಪರವಾಗಿಲ್ಲ ಎಂದು ಸಚಿವ ಎಸ್‌.ಟಿ.ಸೋಮಶೇಖರ್ ಹೇಳಿದರು.

ರಾಮೋಹಳ್ಳಿಯ ವಿನಾಯಕನಗರದಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

‘ನಾವು ರೈತರ ಮಕ್ಕಳು ಎಂದು ಹೇಳಿ ಮತ ಪಡೆಯುತ್ತಾರೆಯೇ ಹೊರತು ನಿಮ್ಮ ಸೇವೆ ಮಾಡುವುದಿಲ್ಲ. ಅಭಿವೃದ್ಧಿಗಾಗಿ ಮತ್ತೊಮ್ಮೆ ನನಗೆ ಅವಕಾಶ ಮಾಡಿಕೊಡಬೇಕು’ ಎಂದು ಕೋರಿದರು.

ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಆರ್‌.ಪಿ.ಪ್ರಕಾಶ್, ರಾಮೋಹಳ್ಳಿ ರೈತ ಸಹಕಾರ ಬ್ಯಾಂಕ್ ಅಧ್ಯಕ್ಷ ವಿ.ವೇಣುಗೋಪಾಲ್, ಬಿಜೆಪಿ ಮುಖಂಡ ಚೇತನ್‌ಗೌಡ, ಎಲ್‌ಎನ್‌ಆರ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಲಕ್ಷ್ಮಿನಾರಾಯಣರಾಜು, ಹೇಮಂತ ರಾಜು, ಬಿ.ಆರ್‌.ಶಿವಮಾದಯ್ಯ, ಗ್ರಾಮ ಪಂಚಾಯಿತಿ ಸದಸ್ಯರಾದ ಬಿ.ಎಚ್‌. ಪ್ರಭು, ಚಂದ್ರು, ರತ್ನರಮೇಶ್ ಇದ್ದರು.

ಸಮಾರಂಭ: ರಾಜಕೀಯವಾಗಿ ಬಳಸಿಕೊಂಡರೆ ಕ್ರಮ

ಮದುವೆ, ಹಣ ವರ್ಗಾವಣೆ ಮೇಲೆ ನಿಗಾ: ತುಷಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ಮತ್ತು ಇತರೆ ಸಮಾರಂಭ, ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮೇಲೆ ನಿಗಾವಹಿಸಲಾಗುತ್ತದೆ ಎಂದು ಜಿಲ್ಲಾ ಚುನಾವಣೆ ಅಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದರು.

ವಿಧಾನಸಭೆ ಚುನಾವಣೆ ನೀತಿ ಸಂಹಿತೆಯಿಂದ ಮದುವೆ ಹಾಗೂ ಇತರೆ ಸಮಾರಂಭಗಳಿಗೆ ಯಾವುದೇ ನಿರ್ಬಂಧ ಇರುವುದಿಲ್ಲ. ಆದರೆ, ಇದನ್ನು ರಾಜಕೀಯವಾಗಿ ಬಳಸಿಕೊಂಡರೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಬ್ಯಾಂಕ್ ಖಾತೆಗಳಲ್ಲಿ ಹಣ ವರ್ಗಾವಣೆ ಬಗ್ಗೆ ನಿಗಾವಹಿಸಲಾಗುತ್ತದೆ. ಎಲೆಕ್ಟ್ರಾನಿಕ್ ವ್ಯವಸ್ಥೆ ಸೇರಿದಂತೆ ಖಾತೆಗಳಿಗೆ ಒಂದೇ ರೀತಿ ಅಥವಾ ಬೃಹತ್ ಮೊತ್ತದ ಅಸಾಮಾನ್ಯ ವರ್ಗಾವಣೆಯನ್ನು ಗಮನಿಸಲಾಗುತ್ತದೆ. ಇದರ ಬಗ್ಗೆ ತನಿಖೆ ಕೈಗೊಳ್ಳಲಾಗುತ್ತದೆ ಎಂದರು.

ಚುನಾವಣೆ ನೀತಿ ಸಂಹಿತೆ ನಿರ್ವಹಣೆಗೆ ಜಾರಿದಳ ರಚಿಸಲಾಗಿದೆ. ಇದಕ್ಕೆ ಆರ್‌ಬಿಐನ ಅಧಿಕಾರಿಗಳನ್ನೂ ಸೇರಿಸಿಕೊಳ್ಳಲಾಗಿದೆ. ಇದರಿಂದ ಬ್ಯಾಂಕ್‌ಗಳೊಂದಿಗೆ ಸಂಪರ್ಕ ಸುಲಭವಾಗುತ್ತದೆ ಎಂದು ಅವರು ಹೇಳಿದರು.

ಬಿಬಿಎಂಪಿಯ ಪ್ರತಿ ವಲಯದಲ್ಲೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳೊಂದಿಗೆ ಸಭೆ ನಡೆಸಲಾಗುತ್ತಿದೆ. ಮತದಾರರ ಚೀಟಿಯಿಂದ ಹಿಡಿದು ಮತಗಟ್ಟೆಯಲ್ಲಿ ಲಭ್ಯವಿರುವ ಸೌಲಭ್ಯದವರೆಗೆ ಎಲ್ಲ ರೀತಿಯ ಮಾಹಿತಿಯನ್ನು ವಿವರಿಸುತ್ತಿದ್ದೇವೆ ಎಂದು ತಿಳಿಸಿದರು.

ಸಿ–ವಿಜಿಲ್ ಆ್ಯಪ್ ಅನ್ನು ಎಲ್ಲರೂ ಡೌನ್‌ಲೋಡ್ ಮಾಡಿಕೊಂಡು, ಚುನಾವಣೆಗೆ ಸಂಬಂಧಿಸಿದ ಅಕ್ರಮಗಳು ನಡೆಯುತ್ತಿರುವ ಮಾಹಿತಿಯನ್ನು ನೀಡಬಹುದು. ಚಿತ್ರ ಹಾಗೂ ಸಮಯ ಸಹಿತ ಮಾಹಿತಿಯನ್ನು ರವಾನಿಸಬಹುದು. ದೂರುದಾರರ ಮಾಹಿತಿಯನ್ನು ಗೋಪ್ಯವಾಗಿಡಲಾಗುತ್ತದೆ. ನಾಗರಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಸಕ್ಷಮ ಆ್ಯಪ್ ಮೂಲಕ ದೈಹಿಕವಾಗಿ ಅಸಮರ್ಥರಾದವರಿಗೆ ಅವರು ಇರುವ ಸ್ಥಳದಲ್ಲೇ ಮತದಾನದ ಅವಕಾಶ ನೀಡಲಾಗುತ್ತದೆ. ಅಂಚೆ ಮತದಾನಕ್ಕೂ ಅವಕಾಶವಿದೆ. 80 ವರ್ಷಕ್ಕೂ ಮೇಲ್ಪಟ್ಟವರು ಮತಗಟ್ಟೆಗೆ ಬಂದು ಮತದಾನ ಮಾಡಿದರೆ ಇತರರಿಗೆ ಮಾದರಿಯಾಗುತ್ತಾರೆ ಎಂದು ಹೇಳಿದರು.

ಶಾಸಕಿಗೆ ಅವಾಚ್ಯವಾಗಿ ನಿಂದಿಸಿದ ಸಿ.ಜಿ. ಪಾಟೀಲ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕುಂದಗೋಳ ಕ್ಷೇತ್ರದ ಹಿರಿಯ ಕಾಂಗ್ರೆಸ್ ಮುಖಂಡ ಸಿ.ಜಿ. ಪಾಟೀಲ ಅವರು, ತುಂಬಿದ ಸುದ್ದಿಗೋಷ್ಠಿಯಲ್ಲಿ ತಮ್ಮದೇ ಪಕ್ಷದ ಶಾಸಕಿ ಕುಸುಮಾವತಿ ಶಿವಳ್ಳಿ ಅವರಿಗೆ ಅವಾಚ್ಯ ಶಬ್ದದಿಂದ ನಿಂದಿಸಿದರು.

ಕ್ಷೇತ್ರದ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ ಹತ್ತು ಆಕಾಂಕ್ಷಿಗಳು, ಪತ್ರಕರ್ತರ ಭವನದಲ್ಲಿ ಸೋಮವಾರ ಶಿವಾನಂದ ಬೆಂತೂರ ನೇತೃತ್ವದಲ್ಲಿ ಮಾತನಾಡುವಾಗ ಈ ಘಟನೆ ನಡೆಯಿತು.

‘ರಾಜಕೀಯ ತಿಳಿವಳಿಕೆ ಇಲ್ಲದ ಹಾಲಿ ಶಾಸಕಿ ಕುಸುಮಾವತಿ ಅವರಿಗೆ ಯಾವುದೇ ಕಾರಣಕ್ಕೂ ಟಿಕೆಟ್ ನೀಡಬಾರದು. ಉಪ ಚುನಾವಣೆಯಲ್ಲಿ ಅವರ ಗೆಲುವಿಗಾಗಿ ಶ್ರಮಿಸಿದ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಮುಖಂಡರು ಮತ್ತು ಕಾರ್ಯಕರ್ತರನ್ನ ಕಾಲ್ಕಸದಂತೆ ಕಾಣುತ್ತಿದ್ದಾರೆ’ ಎಂದು ಆಕಾಂಕ್ಷಿಗಳು ಅಸಮಾಧಾನ ತೋಡಿಕೊಳ್ಳುತ್ತಿದ್ದರು.

ಆಗ ಮಧ್ಯ ಪ್ರವೇಶಿಸಿದ ಪಾಟೀಲ, ಕುಸುಮಾವತಿ ಅವರನ್ನು ಅವಾಚ್ಯವಾಗಿ ನಿಂದಿಸಿದರು. ‘ಸುದ್ದಿಗೋಷ್ಠಿಯಲ್ಲಿ ಈ ರೀತಿ ಯಾರನ್ನೂ ನಿಂದಿಸಬಾರದು. ಮಹಿಳೆಯನ್ನು ಗೌರವಿಸಿ’ ಎಂದು ಮಾಧ್ಯಮದವರು ಹೇಳಿದಾಗ, ‘ಮಹಿಳೆಯೇ...? ಆಕಿ ಏನು ಮಾಡಿದ್ದಾಳೆ ಅಂತ ಗೊತ್ತಿದೆ’ ಎಂದು ಏಕವಚನದಲ್ಲಿ ಮತ್ತೆ ಆಕ್ರೋಶ ಹೊರ ಹಾಕಿದರು.

ಕುಸುಮಾವತಿ

ಸಿ.ಜಿ. ಪಾಟೀಲ

> **ಸಿ.ಜಿ. ಪಾಟೀಲ ಅವರು ತಂದೆ ಸಮಾನರು, ಮಾರ್ಗದರ್ಶಕರು. ಅಂತಹವರು ನನ್ನನ್ನು ಅವಾಚ್ಯವಾಗಿ ನಿಂದಿಸಿದ್ದಾರೆಂದರೆ, ಏನು ಹೇಳಬೇಕೊ ತೋಚುತ್ತಿಲ್ಲ**
> **ಕುಸುಮಾವತಿ ಶಿವಳ್ಳಿ,**
> ಕುಂದಗೋಳ ಶಾಸಕಿ

ಅವರ ಮಾತುಗಳಿಂದ ವೇದಿಕೆಯಲ್ಲಿದ್ದವರು ವಿಚಲಿತರಾದರು. ‘ಶಾಸಕಿ ವರ್ತನೆಯಿಂದ ನೊಂದು ಪಾಟೀಲ ಅವರು ಈ ರೀತಿ ಮಾತನಾಡಿದ್ದಾರೆ. ಅವರ ಪರವಾಗಿ ನಾವೆಲ್ಲರೂ ಕ್ಷಮೆ ಕೋರುತ್ತೇವೆ’ ಎಂದು ಸಮಾಧಾನಿಸಲು ಮುಂದಾದರು.

ಪಾಟೀಲ ಅವರಿಗೂ ಕ್ಷಮೆ ಕೋರುವಂತೆ ಸೂಚಿಸಿ, ಕೈಗೆ ಮೈಕ್ ಕೊಟ್ಟರು. ‘ನಾನ್ಯಾಕೆ ಕ್ಷಮೆ ಕೋರಬೇಕು’ ಎಂದು ವೇದಿಕೆಯಿಂದ ಇಳಿದ ಪಾಟೀಲ, ಮಾಧ್ಯಮದವರು ಪ್ರತಿಕ್ರಿಯೆ ಪಡೆಯಲು ಮುಂದಾದಾಗ ಅವರ ಮೇಲೂ ಗರಂ ಆಗಿ ಹೋದರು.

ಘಟನೆ ವೇಳೆ ಧಾರವಾಡ ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಹಾಗೂ ಟಿಕೆಟ್ ಆಕಾಂಕ್ಷಿಯೂ ಆಗಿರುವ ಧೃತಿ ಸಾಲಮನಿ ಅವರು, ಪಾಟೀಲ ಅವರ ಪಕ್ಕದಲ್ಲೇ ಕುಳಿತಿದ್ದರು. ನಿಂದನೆಗಾಗಿ ಧೃತಿ ಅವರು ಕ್ಷಮೆ ಕೇಳಿದರೂ, ಪಾಟೀಲ ಮಾತ್ರ ಕ್ಷಮೆ ಕೋರಲು ನಿರಾಕರಿಸಿದರು.

ಸಿ.ಜಿ. ಪಾಟೀಲ ಅವರ ಪುತ್ರ ಗೌಡಪ್ಪಗೌಡ ಸಿ. ಪಾಟೀಲ ಕೂಡ ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳಲ್ಲಿ ಒಬ್ಬರಾಗಿದ್ದಾರೆ.

‘ಕುಸುಮಾವತಿಗೆ ಟಿಕೆಟ್: ಬಂಡಾಯ’

‘ಕುಂದಗೋಳದ ಹಾಲಿ ಶಾಸಕಿ ಕುಸುಮಾವತಿ ಶಿವಳ್ಳಿ ಅವರಿಗೆ ಈ ಸಲದ ಚುನಾವಣೆಯಲ್ಲಿ ಯಾವುದೇ ಕಾರಣಕ್ಕೂ ಟಿಕೆಟ್ ನೀಡಬಾರದು’ ಎಂದು ಆಗ್ರಹಿಸಿರುವ ಅವರದೇ ಪಕ್ಷದ ಪದಾಧಿಕಾರಿಗಳು ಹಾಗೂ ಸ್ಥಳೀಯ ಟಿಕೆಟ್ ಆಕಾಂಕ್ಷಿಗಳು, ‘ಒಂದು ವೇಳೆ ಟಿಕೆಟ್ ಕೊಟ್ಟರೆ ನಮ್ಮಲ್ಲೇ ಒಬ್ಬರನ್ನು ಬಂಡಾಯ ಅಭ್ಯರ್ಥಿಯಾಗಿ ನಿಲ್ಲಿಸಲಾಗುವುದು’ ಎಂದು ಎಚ್ಚರಿಕೆಯನ್ನೂ ನೀಡಿದರು.

‘ಕುಸುಮಾವತಿ ಅವರಿಗೆ ರಾಜಕೀಯ ತಿಳಿವಳಿಕೆ ಇಲ್ಲ. ಯಾವುದೇ ಕಾರಣಕ್ಕೂ ಅವರಿಗೆ ಟಿಕೆಟ್ ಕೊಡಬಾರದು ಎಂದು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ಅವರಿಗೆ ಸ್ಥಳೀಯ ಪದಾಧಿಕಾರಿಗಳು ಹಾಗೂ ಆಕಾಂಕ್ಷಿಗಳ ಪರವಾಗಿ ಪತ್ರ ಬರೆದಿದ್ದೇವೆ’ ಎಂದು ಪಕ್ಷದ ಕುಂದಗೋಳ ಬ್ಲಾಕ್ ಅಧ್ಯಕ್ಷ ಜಗದೀಶ ಉಪ್ಪಿನ ಹೇಳಿದರು.

700 ಅಕ್ಕಿ ಚೀಲ ವಶ

ದಾಬಸ್‌ಪೇಟೆ: ಸೋಂಪುರ ಹೋಬಳಿಯ ಹಳೆನಿಜಗಲ್ ಗ್ರಾಮದ ರಾಷ್ಟ್ರೀಯ ಹೆದ್ದಾರಿ–48ರ ಚೆಕ್‌ಪೋಸ್ಟ್ ಬಳಿ ಅಕ್ರಮವಾಗಿ ಸಾಗಿಸುತ್ತಿದ್ದ ₹ 8 ಲಕ್ಷ ಮೌಲ್ಯದ 700 ಅಕ್ಕಿ ಚೀಲಗಳನ್ನು ವಶಕ್ಕೆ ಪಡೆದಿದ್ದು ಚಾಲಕ ನಾಗೇಶ್ ಎಂಬಾತನನ್ನು ಬಂಧಿಸಲಾಗಿದೆ.

ಚುನಾವಣೆ ಹಿನ್ನೆಲೆಯಲ್ಲಿ ಮತದಾರರಿಗೆ ಆಹಾರದ ಕಿಟ್ ವಿತರಿಸಲು ಅಕ್ಕಿ ಸಾಗಣೆ ಮಾಡಲಾಗುತ್ತಿರುವ ಅನುಮಾನದ ಮೇಲೆ ಜಪ್ತಿ ಮಾಡಲಾಗಿದೆ.

ತುಮಕೂರು ಕಡೆಯಿಂದ ಬೆಂಗಳೂರಿಗೆ ಬರುತ್ತಿದ್ದ ಕ್ಯಾಂಟರ್‌ನಲ್ಲಿ (ಕೆಎ 40, ಎ 9989) ಅಕ್ಕಿ ಚೀಲಗಳು ಇದ್ದವು. ಮಧ್ಯರಾತ್ರಿ 1 ಗಂಟೆಯ ಸಮಯದಲ್ಲಿ ಚುನಾವಣಾ ಕಾರ್ಯಕ್ಕೆ ನಿಯೋಜಿಸಿದ್ದ ಸಿಬ್ಬಂದಿ ವಿ.ತುಕಾರಾಮ್, ದಾಬಸ್‌ಪೇಟೆ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ನವೀನ್ ಕುಮಾರ್, ಪಿಎಸ್‌ಐ ಮಂಗಳಮ್ಮ, ಗ್ರಾ.ಪಂ. ಕಾರ್ಯದರ್ಶಿ ಮಂಜುನಾಥ್, ವೆಂಕಟೇಶ್ ಅವರು ಪರಿಶೀಲನೆ ನಡೆಸಿ ಅಕ್ಕಿ ಚೀಲ ವಶಕ್ಕೆ ಪಡೆದುಕೊಂಡರು.

ಚೆಕ್‌ಪೋಸ್ಟ್‌ನಲ್ಲಿ ಅಕ್ಕಿ ಚೀಲಗಳನ್ನು ಜಪ್ತಿ ಮಾಡಿದ ಪೊಲೀಸರು

ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ ಆಗ್ರಹ

22 ಕ್ಷೇತ್ರಗಳಲ್ಲಿ ಟಿಕೆಟ್ ನೀಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಾಹ್ಮಣ ಸಮುದಾಯಕ್ಕೆ ವಿಧಾನಸಭೆ ಚುನಾವಣೆಯಲ್ಲಿ ವಿವಿಧ ರಾಜಕೀಯ ಪಕ್ಷಗಳು ಕನಿಷ್ಠ 22 ಕ್ಷೇತ್ರಗಳಲ್ಲಿ ಅವಕಾಶ ನೀಡಬೇಕು ಎಂದು ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ ಆಗ್ರಹಿಸಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಷ್ಟ್ರೀಯ ಅಧ್ಯಕ್ಷ ಗೋವಿಂದ ಕುಲಕರ್ಣಿ, ‘ಬ್ರಾಹ್ಮಣರು ಎಂದರೆ ಬಿಜೆಪಿಗೆ ಮಾತ್ರ ಮತ ಹಾಕುವ ಸಮುದಾಯ ಎನ್ನುವ ಅಭಿಪ್ರಾಯವಿದೆ. ಆದರೆ, ಈ ಅಭಿಪ್ರಾಯವೇ ಸಮುದಾಯಕ್ಕೆ ಮುಳುವಾಗಿ

ಮುಖ್ಯಾಂಶಗಳು

- **ಸಮುದಾಯದ ಅಭಿವೃದ್ಧಿಗೆ ಕೈಜೋಡಿಸುವ ಪಕ್ಷಕ್ಕೆ ಚುನಾವಣೆಯಲ್ಲಿ ಬೆಂಬಲ**
- **ಸಂಘದ ರಾಷ್ಟ್ರೀಯ ಅಧ್ಯಕ್ಷ ಗೋವಿಂದ ಕುಲಕರ್ಣಿ ಘೋಷಣೆ**

ಪರಿಣಮಿಸಿದೆ’ ಎಂದರು.

‘ಬ್ರಾಹ್ಮಣರ ಮತಗಳು ಬಿಜೆಪಿಗೆ ಮಾತ್ರ ಸೀಮಿತ ಎನ್ನುವ ದೃಢ ವಿಶ್ವಾಸ ಆ ಪಕ್ಷಕ್ಕಿದೆ. ಏನೇ ಮಾಡಿದರೂ ಬ್ರಾಹ್ಮಣರು ತಮ್ಮ ಪಕ್ಷಕ್ಕೆ ಮತ ಹಾಕುವುದಿಲ್ಲ ಎನ್ನುವ ವಿಶ್ವಾಸ ಕಾಂಗ್ರೆಸ್ ಮುಖಂಡರದ್ದು. ಇದರಿಂದಾಗಿ ಸಮುದಾಯವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದಿದೆ’ ಎಂದು ದೂರಿದರು.

‘ರಾಜ್ಯದಲ್ಲಿ ಶೇ 9ರಷ್ಟು ಜನಸಂಖ್ಯೆ ಹೊಂದಿರುವ ಬ್ರಾಹ್ಮಣ ಸಮುದಾಯದ ಅಭಿವೃದ್ಧಿಗೆ ಕೈಜೋಡಿಸುವ ಪಕ್ಷಕ್ಕೆ ಚುನಾವಣೆಯಲ್ಲಿ ಬೆಂಬಲ ನೀಡಲಾಗುವುದು. ಇತ್ತೀಚೆಗೆ ಕಾಂಗ್ರೆಸ್ ಬಿಡುಗಡೆಗೊಳಿಸಿರುವ 124 ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಸಮುದಾಯದ ಆರು ಜನಕ್ಕೆ ಅವಕಾಶ ನೀಡಲಾಗಿದೆ. ಮುಂದಿನ ಪಟ್ಟಿಯಲ್ಲಿ ಇನ್ನಷ್ಟು ಜನರನ್ನು ಪರಿಗಣಿಸಬೇಕು. ಬಿಜೆಪಿಯೂ ಸಹ ಹೆಚ್ಚಿನ ಪ್ರಾತಿನಿಧ್ಯ ಕಲ್ಪಿಸಬೇಕು’ ಎಂದು ಆಗ್ರಹಿಸಿದರು.

6ಕ್ಕೆ ಸಿ.ಎಂಗೆ ಅಭಿನಂದನೆ

ಹುಬ್ಬಳ್ಳಿ: ಎಸ್‌.ಸಿ, ಎಸ್‌.ಟಿ ಮೀಸಲಾತಿ ಪ್ರಮಾಣ ಹೆಚ್ಚಿಸಿದ್ದಕ್ಕಾಗಿ ಹಾಗೂ ಒಳಮೀಸಲಾತಿ ನೀಡಿದ್ದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅಭಿನಂದನೆ ಸಲ್ಲಿಸಲು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿಗಳ ಒಕ್ಕೂಟದ ವತಿಯಿಂದ ಏ.6ರಂದು ಇಲ್ಲಿನ ನೆಹರೂ ಮೈದಾನದಲ್ಲಿ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಚಿವ ಗೋವಿಂದ ಕಾರಜೋಳ ಹೇಳಿದರು.

‘ವಿವಿಧ ಸಮುದಾಯಗಳ ಜನರ ಬೇಡಿಕೆಗೆ ಸ್ಪಂದಿಸಿದ ಬೊಮ್ಮಾಯಿ ಅವರು ಎಸ್‌.ಸಿ ಮೀಸಲಾತಿ ಪ್ರಮಾಣವನ್ನು ಶೇ 17ಕ್ಕೆ ಹಾಗೂ ಎಸ್‌.ಟಿ ಮೀಸಲಾತಿ ಪ್ರಮಾಣವನ್ನು ಶೇ 7ಕ್ಕೆ ಹೆಚ್ಚಿಸಿದ್ದಾರೆ’ ಎಂದು ತಿಳಿಸಿದರು.

ಮೆಟ್ಟಿಲು ಬಳಿ ಕುರಾನ್ ಪಠಣಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ): 'ಚನ್ನಕೇಶವ ಸ್ವಾಮಿ ರಥೋತ್ಸವದಲ್ಲಿ ರಥದ ಮುಂದೆ ಕುರಾನ್ ಪಠಣ (ದೇವರಿಗೆ ವಂದನೆ) ಮಾಡದೇ, ಸಂಪ್ರದಾಯದಂತೆ ಮೆಟ್ಟಿಲುಗಳ ಬಳಿ ನಿಂತು ವಂದನೆ ಸಲ್ಲಿಸಲು ಧಾರ್ಮಿಕ ದತ್ತಿ ಇಲಾಖೆಯಿಂದ ಆದೇಶ ಬಂದಿದೆ' ಎಂದು ದೇಗುಲದ ಕಾರ್ಯನಿರ್ವಾಹಕ ಅಧಿಕಾರಿ ವಿದ್ಯುಲ್ಲತಾ ತಿಳಿಸಿದರು.

'ಕುರಾನ್ ಪಠಣ ಕುರಿತು ಉಂಟಾದ ಗೊಂದಲಗಳನ್ನು ಪರಿಶೀಲಿಸಲು ಧಾರ್ಮಿಕ ದತ್ತಿ ಇಲಾಖೆ ಕಚೇರಿಯ ಹಿರಿಯ ಆಗಮ ಪಂಡಿತ ವಿಜಯ್ ಕುಮಾರ್ ಮಾ. 30ರಂದು ದೇಗುಲಕ್ಕೆ ಬಂದಿದ್ದು, ಮ್ಯಾನ್ಯುವಲ್ ಪರಿಶೀಲಿಸಿ ನೀಡಿದ ವರದಿ ಅನ್ವಯ ಸೋಮವಾರ ಆದೇಶ ಬಂದಿದೆ' ಎಂದರು.

'ರಥೋತ್ಸವದ ಸಂದರ್ಭದಲ್ಲಿ ಖಾಜಿ ಸಾಹೇಬರು ಬಂದು, ದೇಗುಲದ ಮರ್ಯಾದೆಗಳನ್ನು ಸ್ವೀಕರಿಸಿ, ಸಂಪ್ರದಾಯ ಪದ್ಧತಿಗಳಲ್ಲಿ ಯಾವುದೇ ವ್ಯತ್ಯಾಸ ಆಗದಂತೆ, ದೇಗುಲದ ಕೈಪಿಡಿಯಂತೆ ದೇವರಿಗೆ ವಂದನೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಅವರನ್ನು ಆಹ್ವಾನಿಸಿದ್ದೇವೆ' ಎಂದರು.

ವಿಡಿಯೊ ಕಾನ್ಫರೆನ್ಸ್ ಮೂಲಕ ಕಂದಾಯ ವ್ಯಾಜ್ಯ ವಿಲೇವಾರಿ: ಪರಿಶೀಲನೆಗೆ ಹೈಕೋರ್ಟ್ ಸೂಚನೆ

ಅರೆನ್ಯಾಯಿಕ ವಿಚಾರಣೆಯೂ ಆನ್‌ಲೈನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಎಲ್ಲಾ ಅರೆ ನ್ಯಾಯಿಕ ಪ್ರಾಧಿಕಾರಗಳಲ್ಲಿ ವಿಡಿಯೊ ಕಾನ್ಫರೆನ್ಸ್ (ವಿ.ಸಿ) ಮೂಲಕವೂ ಕಂದಾಯ ವ್ಯಾಜ್ಯಗಳ ವಿಚಾರಣೆ ನಡೆಸುವ ಸಾಧ್ಯತೆ ಬಗ್ಗೆ ಪರಿಶೀಲನೆ ನಡೆಸಿ' ಎಂದು ಹೈಕೋರ್ಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ ಹೋಬಳಿಯ ಮಂಜೇಗೌಡ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಸೂಚನೆ ನೀಡಿತು.

'ಸದ್ಯ ಎಲ್ಲ ನ್ಯಾಯಾಲಯಗಳಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಕರಣಗಳ ವಿಚಾರಣೆ ನಡೆಯುತ್ತಿವೆ. ಹೀಗಾಗಿ, ಇ-ಆಡಳಿತದ ಸಹಕಾರದಲ್ಲಿ ಅರೆ ನ್ಯಾಯಾಂಗ ಪ್ರಾಧಿಕಾರಗಳಲ್ಲಿಯೂ ವಿಡಿಯೊ ಕಾನ್ಫರೆನ್ಸಿಂಗ್ ವಿಚಾರಣೆ ಸಾಧ್ಯವಿದೆಯೇ ಎಂದು ಪರಿಶೀಲಿಸಿ' ಎಂದು ನಿರ್ದೇಶಿಸಿದೆ.

'ಅರೆನ್ಯಾಯಿಕ ಪ್ರಾಧಿಕಾರಗಳು ತಮ್ಮ ಮುಂದೆ ಬರುವ ಕಂದಾಯ ವ್ಯಾಜ್ಯಗಳ ವಿಚಾರಣೆ ಮುಂದೂಡಿಕೆಗಾಗಿ ವಕೀಲರು ಮತ್ತು ಕಕ್ಷಿದಾರರಿಗೆ ನೀಡುವ ಕಾರಣಗಳು ಅಸ್ಪಷ್ಟವಾಗಿರುತ್ತವೆ. ಅಂತೆಯೇ ಸೂಕ್ತ ಮತ್ತು ಅಗತ್ಯ ರೀತಿಯಲ್ಲಿ ವಿಚಾರಣೆ ನಡೆಸದೇ ಇರುವುದೂ ಈ ನ್ಯಾಯಪೀಠದ ಗಮನಕ್ಕೆ ಈ ಹಿಂದೆಯೂ ಬಂದಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ನ್ಯಾಯಪೀಠ, 'ಹಳೆಯ ಕಂದಾಯ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ಮತ್ತು ಅರೆ ನ್ಯಾಯಾಂಗದ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಪ್ರತ್ಯೇಕ ತಂಡ ನೇಮಕ ಮಾಡುವ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಪರಿಶೀಲಿಸಬೇಕು ಹಾಗೂ ಈ ಕುರಿತಂತೆ ಎಂಟು ವಾರಗಳಲ್ಲಿ ಸಮಗ್ರ ವರದಿ ಸಲ್ಲಿಸಬೇಕು' ಎಂದು ತಾಕೀತು ಮಾಡಿದೆ.

ಪ್ರಕರಣವೇನು?: ಜಮೀನಿಗೆ ಸಂಬಂಧಿಸಿ ಮಂಜೇಗೌಡರ ತಂದೆ ಬೊಮ್ಮೇನಹಳ್ಳಿ ವಾಸಿ ಕೆಂಪೇಗೌಡರ ಹೆಸರಿನಲ್ಲಿ ನೀಡಿದ್ದ ಖಾತಾ ರದ್ದುಪಡಿಸಿ ನಾಗಮಂಗಲ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು 2002ರ ಮಾರ್ಚ್ 7ರಂದು ಆದೇಶಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ ಕೆಂಪೇಗೌಡ ಮಂಡ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ಸುಮಾರು 12 ವರ್ಷ ಕಾಲ ಬಾಕಿ ಉಳಿಸಿಕೊಳ್ಳಲಾಗಿತ್ತು.

ಏತನ್ಮಧ್ಯೆ, ಕೆಂಪೇಗೌಡ ಮೃತಪಟ್ಟಿದ್ದರು. ಆದರೆ, ಅರ್ಜಿಯ ವಿಚಾರಣೆಗೆ ಸುಮಾರು 111ಕ್ಕೂ ಹೆಚ್ಚು ಮುದ್ದತ್ತಿನ ದಿನಾಂಕಗಳನ್ನು ನೀಡಲಾಗಿತ್ತು. ಈ 111 ದಿನಾಂಕಗಳಲ್ಲಿ ಯಾವುದೇ ರೀತಿಯ ವಿಚಾರಣೆ ನಡೆದಿರಲಿಲ್ಲ. ಅರ್ಜಿದಾರರಿಗೆ ಮಾಹಿತಿ ನೀಡದೆ ಹಾಗೂ ಅವರ ಅನುಪಸ್ಥಿತಿಯಲ್ಲಿ ಪ್ರಕರಣ ಮುಕ್ತಾಯಗೊಳಿಸಲಾಗಿತ್ತು.

ಅಧಿಕಾರ ವ್ಯಾಪ್ತಿ ಮೀರಿ ಈ ಪ್ರಕರಣವನ್ನು ವಿಲೇವಾರಿ ಮಾಡಲಾಗಿದೆ ಎಂದು ಪ್ರಶ್ನಿಸಿ ಮಂಜೇಗೌಡ ಹೈಕೋರ್ಟ್ ಮೆಟ್ಟಿಲೇರಿದ್ದರು.

'ಪಂಚಾಯತ್ ರಾಜ್ ಕಾಯ್ದೆ-1993ರ ಪ್ರಕಾರ ಜಮೀನಿನ ಖಾತಾ ರದ್ದುಪಡಿಸುವ ಅಧಿಕಾರ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಇಲ್ಲ' ಎಂದು ಆಕ್ಷೇಪಿಸಿದ್ದರು. ಅರ್ಜಿ ಪುರಸ್ಕರಿಸಿರುವ ನ್ಯಾಯಪೀಠ, ಮಂಜೇಗೌಡರ ತಂದೆ ಹೆಸರಿನ ಖಾತೆ ರದ್ದುಪಡಿಸಲಾದ ಆದೇಶವನ್ನು ಅಮಾನ್ಯಗೊಳಿಸಿದೆ. ಅರ್ಜಿದಾರರ ಪರ ವಕೀಲ ಜಿ.ಎಸ್. ವೆಂಕಟ ಸುಬ್ಬರಾವ್ ವಾದ ಮಂಡಿಸಿದ್ದರು.

ಹೈಕೋರ್ಟ್ ನಿರ್ದೇಶನಗಳು

- ಹೈಕೋರ್ಟ್ ಮತ್ತು ವಿಚಾರಣಾ ನ್ಯಾಯಾಲಯಗಳ ಮಾದರಿಯಲ್ಲಿಯೇ ವೆಬ್‌ಸೈಟ್‌ಗಳಲ್ಲಿ ದಿನನಿತ್ಯದ ಆದೇಶಗಳು, ತೀರ್ಪುಗಳೂ ಸೇರಿದಂತೆ ಪ್ರಕರಣಗಳ ಎಲ್ಲ ಮಾಹಿತಿ ಲಭ್ಯವಾಗುವಂತೆ ನೋಡಿಕೊಳ್ಳಬೇಕು.
- ಅರೆ ನ್ಯಾಯಾಂಗ ಪ್ರಾಧಿಕಾರಗಳಲ್ಲಿ ಪ್ರಕರಣಗಳನ್ನು ವಿಚಾರಣೆಗೆ ನಿಗದಿಪಡಿಸಿರುವ ದಿನಾಂಕ, ದೈನಂದಿನ ಆದೇಶಗಳು, ದಾಖಲಾಗಿರುವ ಸಾಕ್ಷ್ಯಾಧಾರಗಳು, ಅರ್ಜಿಗೆ ಸಂಬಂಧಿಸಿದಂತೆ ನೀಡಿರುವ ನಿರ್ದೇಶನಗಳು ಮತ್ತು ಅಂತಿಮ ತೀರ್ಪು ಸೇರಿದಂತೆ ಪ್ರಕರಣದ ಎಲ್ಲ ಪ್ರಕ್ರಿಯೆಗಳ ವಿವರಗಳ ಅಗತ್ಯವಿರುವ ಸಂಬಂಧ ವೆಬ್‌ಸೈಟ್‌ನಲ್ಲಿ ದಾಖಲಿಸಬೇಕು.
- ಹೈಕೋರ್ಟ್ ಆದೇಶಗಳ ಕುರಿತು ಇ-ಮೇಲ್, ಎಸ್‌ಎಂಎಸ್‌ಗಳ ಮೂಲಕ ಅರ್ಜಿದಾರರಿಗೆ ಮತ್ತು ವಕೀಲರಿಗೆ ಕಾಲಕಾಲಕ್ಕೆ ಮಾಹಿತಿ ತಿಳಿಯುವ ವ್ಯವಸ್ಥೆ ಮಾಡಬೇಕು.
- ವಿಚಾರಣೆ ಮುಂದೂಡುವ ಸಂದರ್ಭಗಳಲ್ಲಿ ಅರೆ ನ್ಯಾಯಾಂಗದ ಪೀಠಾಸೀನ ಅಧಿಕಾರಿಗಳು, 'ಆಡಳಿತಾತ್ಮಕ ಕಾರ್ಯಗಳಲ್ಲಿ ನಿರತರಾಗಿದ್ದಾರೆ' ಎನ್ನುವ ಹೇಳಿಕೆಯನ್ನು ಹೊರತುಪಡಿಸಿ ಯಾವ ಕಾರಣಕ್ಕಾಗಿ ವಿಚಾರಣೆ ಮುಂದೂಡಲಾಗುತ್ತಿದೆ ಎಂಬ ಬಗ್ಗೆ ಸ್ಪಷ್ಟ ಕಾರಣ ಉಲ್ಲೇಖಿಸಬೇಕು.
- ಈ ನಿರ್ದೇಶನಗಳ ಕುರಿತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಸಮಗ್ರ ಯೋಜನಾ ವರದಿ ಸಿದ್ಧಪಡಿಸಬೇಕು. ಅನುಪಾಲನಾ ವರದಿಯನ್ನು ಇದೇ 17ಕ್ಕೆ ಸಲ್ಲಿಸಬೇಕು ಎಂದು ಆದೇಶಿಸಿ ವಿಚಾರಣೆ ಮುಂದೂಡಲಾಗಿದೆ.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಚುನಾವಣೆ ದಿನಾಂಕ ಘೋಷಣೆ ಆದರೂ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ಅಭ್ಯರ್ಥಿಗಳ ಆಯ್ಕೆಗೆ ತಡಮಾಡುತ್ತಿರುವ ಹಿಂದೆ ತಂತ್ರಗಾರಿಕೆ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ತಾಳಗುಪ್ಪ– ಹುಬ್ಬಳ್ಳಿ ರೈಲ್ವೆ ಸರ್ವೆ ವರದಿ ಸಲ್ಲಿಕೆ

ಶಿರಸಿ: ಉತ್ತರ ಕನ್ನಡ ಜಿಲ್ಲೆ ಘಟ್ಟದ ಮೇಲಿನ ತಾಲ್ಲೂಕುಗಳ ಜನರ ಬಹುದಿನಗಳ ಬೇಡಿಕೆ ಆಗಿರುವ ತಾಳಗುಪ್ಪ- ಹುಬ್ಬಳ್ಳಿ ರೈಲ್ವೆ ಮಾರ್ಗದ ಪ್ರಾಥಮಿಕ ಸರ್ವೆ ಪೂರ್ಣಗೊಂಡಿದ್ದು, ಕಾರ್ಯಸಾಧ್ಯತಾ ವರದಿಯನ್ನು ನೈರುತ್ಯ ರೈಲ್ವೆ ವಲಯದಿಂದ ಕೇಂದ್ರ ರೈಲ್ವೆ ಮಂಡಳಿಗೆ ಕಳುಹಿಸಲಾಗಿದೆ.

ತಾಳಗುಪ್ಪ- ಹುಬ್ಬಳ್ಳಿ ನಡುವಿನ 158 ಕಿ.ಮೀ ಹೊಸ ಮಾರ್ಗಕ್ಕಾಗಿ ಪ್ರಾಥಮಿಕ ಸಮೀಕ್ಷೆ ನಡೆಸಲು ಕೇಂದ್ರ ರೈಲ್ವೆ ಮಂಡಳಿ 2019ರ ನ.14ಕ್ಕೆ ಮಂಜೂರಾತಿ ನೀಡಿತ್ತು. ಆ ಪ್ರಕಾರ ಸುಧಾರಿತ ತಂತ್ರಜ್ಞಾನ ಆಧಾರಿತ ಡ್ರೋನ್ ಸಮೀಕ್ಷೆ ನಡೆಸಲಾಗಿತ್ತು.

ಪ್ರಸ್ತುತ ಯೋಜನೆಯ ಸಂಚಾರ ವರದಿ ಜೊತೆಗೆ ಯೋಜನೆಗೆ ತಗಲುವ ₹3,115.16 ಕೋಟಿ ಅಂದಾಜು ವೆಚ್ಚದ ವರದಿಯನ್ನು ಮಾ.28ಕ್ಕೆ ನೈರುತ್ಯ ರೈಲ್ವೆ ವಲಯದ ಬೆಂಗಳೂರು ಕಂಟೋನ್ಮೆಂಟ್ (ನಿರ್ಮಾಣ 3) ಮುಖ್ಯ ಎಂಜಿನಿಯರ್ ಆನಂದ್ ಭಾರ್ತಿ ಅವರು ಕೇಂದ್ರ ರೈಲ್ವೆ ಮಂಡಳಿ ಪ್ರಧಾನ ನಿರ್ದೇಶಕರಿಗೆ ಸಲ್ಲಿಸಿದ್ದಾರೆ. ಈ ವರದಿ ಆಧರಿಸಿ ಹೊಸ ರೈಲು ಮಾರ್ಗ ಯೋಜನೆಗೆ ರೈಲ್ವೆ ಮಂಡಳಿ ಒಪ್ಪಿಗೆ ನೀಡಿದರೆ, ನೈಋತ್ಯ ರೈಲ್ವೆ ವಿಸ್ತ್ರತ ಯೋಜನಾ ವರದಿ ಸಿದ್ಧಪಡಿಸಲಿದೆ.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದಿಂದ ಪ್ರತಿಭಟನೆ

ಮೀಸಲಾತಿ ಆದೇಶ ಪ್ರತಿ ಸುಟ್ಟು ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: '2ಡಿ' ಮೀಸಲಾತಿಯನ್ನು ಧಿಕ್ಕರಿಸಿ ಪಂಚಮಸಾಲಿ ಸಮಾಜದ ಮುಖಂಡರು ಇಲ್ಲಿನ ರಾಣಿ ಚನ್ನಮ್ಮ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು. ಮೀಸಲಾತಿ ಆದೇಶದ ನಕಲು ಪ್ರತಿಗಳಿಗೆ ಬೆಂಕಿ ಹಚ್ಚಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಮಾಜಿ ಸಚಿವರಾದ ವಿನಯ ಕುಲಕರ್ಣಿ, ಎ.ಬಿ. ಪಾಟೀಲ, ಮುಖಂಡರಾದ ಎಚ್.ಎಸ್. ಶಿವಶಂಕರ, ದಿನೇಶ ಪಾಟೀಲ, ಗುಂಡು ಪಾಟೀಲ, ನಿಂಗಪ್ಪ ಪಿರೋಜಿ, ಆರ್.ಕೆ.ಪಾಟೀಲ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ವಿಜಯಾನಂದ ಕಾಶಪ್ಪನವರ, 'ಮೀಸಲಾತಿ ವಿಚಾರದಲ್ಲಿ ಸರ್ಕಾರ ಚೆಲ್ಲಾಟವಾಡಿದೆ. '2ಡಿ' ಮೀಸಲಾತಿಯು ವಿಧಾನಸಭೆ ಚುನಾವಣೆಗಾಗಿ ಮಾಡಿದ ಕುತಂತ್ರ. ಸಮಾಜ ಇದನ್ನು ಒಪ್ಪುವುದಿಲ್ಲ' ಎಂದು ಹೇಳಿದರು.

'ಲಿಂಗಾಯತರು ಮತ್ತೊಬ್ಬರ ಮೀಸಲಾತಿ ಕಸಿದುಕೊಳ್ಳುವಷ್ಟು ಕೆಟ್ಟವರಲ್ಲ. ಕುತಂತ್ರ ಬುದ್ಧಿ ಹೊಂದಿರುವ ಕೆಲವರು ಈ ನಾಟಕ ವಾಡಿದ್ದಾರೆ. ವಿಜಯೋತ್ಸವ ಆಚರಿಸುತ್ತೇವೆ ಎನ್ನುತ್ತಿದ್ದಾರೆ. ನಾವು ಇದನ್ನು ಒಪ್ಪುವುದಿಲ್ಲ' ಎಂದರು.

'ವಿನಯ ಕುಲಕರ್ಣಿ ಮತ್ತು ವಿಜಯಾನಂದ ಕಾಶಪ್ಪನವರ ಕುಡಿದ ಅಮಲಿನಲ್ಲಿ ಸ್ವಾಮೀಜಿ ಬಗ್ಗೆ ಮಾತನಾಡಿದ್ದಾರೆ' ಎಂದು ಸಚಿವ ಸಿ.ಸಿ.ಪಾಟೀಲ ಮಾಡಿದ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಅವರು, 'ಅವರೇನು ಕುಡಿಯುವುದಿಲ್ಲವೇ? ಸಿ.ಸಿ.ಪಾಟೀಲ ಅವರ ಮನೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿತ್ಯವೂ ಏನು ಮಾಡುತ್ತಾರೆ ಪರಿಶೀಲಿಸಿ. ಅಪಹಾಸ್ಯ ಗೌರವ ತರುವುದಿಲ್ಲ' ಎಂದು ಹೇಳಿದರು.

ಬೆಳಗಾವಿಯ ರಾಣಿ ಚನ್ನಮ್ಮನ ವೃತ್ತದಲ್ಲಿ ಪಂಚಮಸಾಲಿ ಸಮುದಾಯದ ಮುಖಂಡರು ಸೋಮವಾರ ಮೀಸಲಾತಿಯ ಆದೇಶ ಪ್ರತಿ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು –ಪ್ರಜಾವಾಣಿ ಚಿತ್ರ

'ಜಯಮೃತ್ಯುಂಜಯ ಸ್ವಾಮೀಜಿಗೆ ಕರೆ ಮಾಡಿ ಅಗೌರವ'

ಬೆಂಗಳೂರು: ರಾಜ್ಯ ಸರ್ಕಾರ ಪ್ರಕಟಿಸಿದ ಮೀಸಲಾತಿಯನ್ನು ಒಪ್ಪಿ ಹೋರಾಟ ನಿಲ್ಲಿಸಿದ ಕಾರಣ ಕೂಡಲ ಸಂಗಮಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರಿಗೆ ಕಾಂಗ್ರೆಸ್‌ನ ಕೆಲವು ನಾಯಕರು ದೂರವಾಣಿ ಕರೆ ಮಾಡಿ ಅಗೌರವ ತೋರುತ್ತಿದ್ದಾರೆ ಎಂದು ಸಚಿವ ಸಿ.ಸಿ.ಪಾಟೀಲ ಮತ್ತು ಶಾಸಕ ಅರವಿಂದ ಬೆಲ್ಲದ ಅವರು ಆರೋಪಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ದೂರು ನೀಡಿದ್ದಾರೆ. ಸ್ವಾಮೀಜಿಯವರಿಗೆ ಸೂಕ್ತ ಭದ್ರತಾ ವ್ಯವಸ್ಥೆ ಮಾಡುವುದಾಗಿ ಬೊಮ್ಮಾಯಿ ಭರವಸೆ ನೀಡಿದರು.

'ಸ್ವಾಮೀಜಿಯವರು 2ಎ ಮೀಸಲಾತಿಗೆ ಹೋರಾಟ ಮಾಡಿದ್ದರು. ಸರ್ಕಾರ ಮೀಸಲಾತಿ ಪ್ರಕಟಿಸಿ, ಆದೇಶ ಪತ್ರ ನೀಡಿದ ನಂತರ ಹೋರಾಟವನ್ನು ಹಿಂದಕ್ಕೆ ಪಡೆದಿದ್ದರು. ಇದರಿಂದ ಬೇಸರಗೊಂಡಿರುವ ಕಾಂಗ್ರೆಸ್‌ನ ಕೆಲವು ನಾಯಕರು ಮದ್ಯಪಾನ ಮಾಡಿ, ಸ್ವಾಮೀಜಿ ಜೊತೆಗೆ ಅಗೌರವದಿಂದ ಮಾತನಾಡಿದ್ದಾರೆ. ಈ ಮೂಲಕ ಪಂಚಮಸಾಲಿ ಸಮುದಾಯಕ್ಕೆ ಅಗೌರವವುಂಟು ಮಾಡಿದ್ದಾರೆ' ಎಂದು ಪಾಟೀಲ ಹೇಳಿದರು.

ಮೀಸಲಾತಿ ವಿಚಾರವನ್ನು ಚುನಾವಣಾ ರಾಜಕೀಯಕ್ಕೆ ಬಳಸಿಕೊಳ್ಳಲು ಕಾಂಗ್ರೆಸ್ ಉದ್ದೇಶಿಸಿತ್ತು. ಮುಖ್ಯಮಂತ್ರಿಯವರ ದಿಟ್ಟ ನಿರ್ಧಾರದಿಂದ ಈಗ ಹತಾಶೆಗೊಂಡಿದೆ. ಹೀಗಾಗಿ ಸ್ವಾಮೀಜಿಯವರ ಮೇಲೆ ಮುಗಿಬಿದ್ದಿದ್ದಾರೆ. ಪಂಚಮಸಾಲಿ ಸಮುದಾಯ ಎಲ್ಲ ವರ್ಗವನ್ನೂ ಒಟ್ಟಿಗೆ ಕರೆದುಕೊಂಡು ಹೋಗಿದೆ. ಈ ಹೋರಾಟದಿಂದ ಅನೇಕ ಸಮುದಾಯಗಳಿಗೆ ಅನುಕೂಲವಾಗಿದೆ ಎಂದರು.

ಸ್ವಾಮೀಜಿಯವರಿಗೆ ಕರೆ ಮಾಡಿ ಅಗೌರವದಿಂದ ಮಾತನಾಡುತ್ತಿರುವ ಕಾಂಗ್ರೆಸ್ ನಾಯಕರ ಹೆಸರು ಹೇಳಿ ಎಂದು ಸುದ್ದಿಗಾರರು ಒತ್ತಾಯಿಸಿದಾಗ, 'ಹೆಸರು ಹೇಳುವುದಿಲ್ಲ. ಹೋರಾಟದಲ್ಲಿ ಇದ್ದವರೇ ಆ ಕೆಲಸ ಮಾಡುತ್ತಿದ್ದಾರೆ' ಎಂದು ತಿಳಿಸಿದರು.

'ಮೀಸಲಾತಿ ಮರು ವರ್ಗೀಕರಣದಿಂದ ಅನ್ಯಾಯ'

ಬೆಂಗಳೂರು: ರಾಜ್ಯ ಸರ್ಕಾರವು ಮೀಸಲಾತಿ ಮರುವರ್ಗೀಕರಣಗೊಳಿಸಿ ಬಲಿಜ ಸಮುದಾಯಕ್ಕೆ ಅನ್ಯಾಯ ಮಾಡಿದೆ ಎಂದು ರಾಜ್ಯ ಸಮಗ್ರ ಬಲಿಜ ವೇದಿಕೆ ದೂರಿದೆ.

'ಬಲಿಜ ಸಮುದಾಯವನ್ನು ಪ್ರವರ್ಗ '2 ಸಿ'ಗೆ ಸೇರಿಸಲಾಗಿದೆ. ಇದರಿಂದ ರಾಜಕೀಯ, ಉದ್ಯೋಗದ ವಿಚಾರದಲ್ಲಿ ಬಲಿಜ ಸಮುದಾಯಕ್ಕೆ ಸಾಸಿವೆಯಷ್ಟು ಪ್ರಯೋಜನ ಇಲ್ಲ' ಎಂದು ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ರಮೇಶ್ ತಿಳಿಸಿದ್ದಾರೆ.

'ಮರು ವರ್ಗೀಕರಣ ಖಂಡಿಸಿ ಚಿಕ್ಕಬಳ್ಳಾಪುರದಲ್ಲಿ ಜಾಗೃತಿ ಸಮಾವೇಶ ಆಯೋಜಿಸಲು ತೀರ್ಮಾನಿಸಲಾಗಿದೆ' ಎಂದರು.

'ಬಲಿಜ ಸಮುದಾಯವನ್ನು ಪೂರ್ಣ ಪ್ರಮಾಣದಲ್ಲಿ ಪ್ರವರ್ಗ '2ಎ'ಗೆ ಸೇರಿಸಬೇಕು. '2ಸಿ'ಯಲ್ಲಿ ಉಳಿದರೆ ಪ್ರಬಲ ಸಮುದಾಯಗಳಾದ ಒಕ್ಕಲಿಗ, ರೆಡ್ಡಿ, ಲಿಂಗಾಯತರ ಜತೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ' ಎಂದು ಹೇಳಿದರು.

'ಹೋರಾಟದ ಫಲವಾಗಿ 2011ರಲ್ಲಿ ಶಿಕ್ಷಣದ ಸೌಲಭ್ಯಕ್ಕಾಗಿ '2ಎ' ಮೀಸಲಾತಿ ನೀಡಲಾಗಿತ್ತು. ಉದ್ಯೋಗದ ವಿಷಯದಲ್ಲಿ '3ಎ' ಪಟ್ಟಿಯಲ್ಲೇ ಉಳಿಸಲಾಗಿತ್ತು. ಇದೀಗ ಮತ್ತೆ ಅನ್ಯಾಯ ಎಸಗಲಾಗಿದೆ' ಎಂದರು.

ಆರೋಪಿಗಳ ಬಂಧನಕ್ಕೆ ಶೋಧ

ಇದ್ರೀಷ್ ಪಾಷ ಸಾವು ಪ್ರಕರಣ, ಸ್ಥಳಕ್ಕೆ ಐಜಿಪಿ ಭೇಟಿ

ಪ್ರಜಾವಾಣಿ ವಾರ್ತೆ

ಕನಕಪುರ: ತಾಲ್ಲೂಕಿನ ಸಾತನೂರು ಸಮೀಪ ಜಾನುವಾರು ಸಾಗಣೆ ಸಂದರ್ಭದಲ್ಲಿ ಹತ್ಯೆಯಾದರು ಎನ್ನಲಾದ ಇದ್ರೀಷ್ ಪಾಷ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಪುನೀತ್ ಕೆರೆಹಳ್ಳಿ ಮತ್ತು ಆತನ ಸಹಚರರ ವಿರುದ್ಧ ಹಲ್ಲೆ ಹಾಗೂ ಕೊಲೆ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಬಂಧನಕ್ಕೆ ಸರ್ಕಲ್ ಇನ್‌ಸ್ಪೆಕ್ಟರ್ ನೇತೃತ್ವದ ತಂಡ ರಚಿಸಲಾಗಿದೆ.

ಕೊಲೆ ಪ್ರಕರಣ ದಾಖಲಾಗುತ್ತಿದ್ದಂತೆ ಪುನೀತ್ ಮತ್ತು ಸಹಚರರು ನಾಪತ್ತೆ ಆಗಿದ್ದಾರೆ. ಜಾನುವಾರು ಸಾಗಣೆ ಮಾಡುತ್ತಿದ್ದವರ ಮೇಲಿನ ದಾಳಿಯನ್ನು ಪುನೀತ್ ಅರ್ಧ ಗಂಟೆಗೂ ಹೆಚ್ಚು ಕಾಲ ಫೇಸ್‌ಬುಕ್ ಲೈವ್ ಮಾಡಿದ್ದರು. ಅದರಲ್ಲಿ, ಕಂಟೇನರ್‌ನಲ್ಲಿ ಜಾನುವಾರು ಸಾಗಿಸುತ್ತಿರುವುದು, ಅದನ್ನು ಪುನೀತ್ ಮತ್ತು ತಂಡದವರು ತಡೆದಾಗ ವಾಹನದಲ್ಲಿದ್ದವರು ನಾಪತ್ತೆ ಆಗಿರುವುದು, ನಂತರದಲ್ಲಿ ಅವರನ್ನು ತಮ್ಮ ಹುಡುಗರು ಬೆನ್ನಟ್ಟಿ ಹಿಡಿದು ತರುತ್ತಿರುವುದಾಗಿ ಪುನೀತ್ ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಆದರೆ, ಆ ನಂತರದಲ್ಲಿ ವಿಡಿಯೊಗಳು ಡಿಲಿಟ್ ಆಗಿವೆ. ಘಟನೆ ನಡೆದ ಸ್ಥಳಕ್ಕೆ ಸೋಮವಾರ ಕೇಂದ್ರ ವಲಯ ಐಜಿಪಿ ಬಿ.ಆರ್. ರವಿಕಾಂತೇಗೌಡ ಭೇಟಿ ನೀಡಿ ಪರಿಶೀಲಿಸಿದರು.

'ಮೃತದೇಹದ ಮರಣೋತ್ತರ ಪರೀಕ್ಷೆ ಬಳಿಕ ಕೆಲವು ಅವಯವಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿದೆ. ಈ ವರದಿಯು ಪೊಲೀಸರ ಕೈ ಸೇರಲು 8–10 ದಿನಗಳಾದರೂ ಬೇಕಿದೆ. ಅದನ್ನು ನೇರವಾಗಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹತ್ಯೆಗೆ ಸಿಎಂ, ಗೃಹಸಚಿವ ಹೊಣೆ– ಡಿಕೆಶಿ

ಬೆಂಗಳೂರು: 'ನನ್ನ ಕ್ಷೇತ್ರ ಸಾತನೂರಿನಲ್ಲಿ ಮತೀಯ ಗೂಂಡಾಗಿರಿಯ ಭಾಗವಾಗಿ ಒಬ್ಬನ ಕೊಲೆಯಾಗಿದೆ. ಈ ಕೊಲೆಗೆ ಕಾರಣರಾದ ವ್ಯಕ್ತಿ ಬಿಜೆಪಿ ನಾಯಕರಿಗೆ ಆಪ್ತ. ಈ ಹತ್ಯೆಗೆ ಮುಖ್ಯಮಂತ್ರಿ ಮತ್ತು ಗೃಹ ಸಚಿವ ಹೊಣೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆರೋಪಿಸಿದರು.

ಕನಕಪುರ ತಾಲ್ಲೂಕಿನ ಸಾತನೂರು ಬಳಿ ಗೋರಕ್ಷಣೆ ಹೆಸರಿನಲ್ಲಿ ನಡೆದ ಯುವಕನ ಹತ್ಯೆ ಕುರಿತು ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಮೃತನ ಕುಟುಂಬಕ್ಕೆ ಸರ್ಕಾರ ಕೂಡಲೇ ₹ 25 ಲಕ್ಷ ಪರಿಹಾರ ನೀಡಬೇಕು' ಎಂದು ಆಗ್ರಹಿಸಿದರು.

'ಈ ಕೊಲೆಗೆ ಸರ್ಕಾರವೇ ಕಾರಣ. ಹೊಣೆ ಹೊತ್ತು ಮುಖ್ಯಮಂತ್ರಿ ಮತ್ತು ಗೃಹ ಸಚಿವರು ರಾಜೀನಾಮೆ ನೀಡಬೇಕು. ಅಲ್ಪಸಂಖ್ಯಾತರು ಬದುಕಲು ಅವಕಾಶ ಮಾಡಿಕೊಡಬೇಕು. ಚುನಾವಣೆ ಸಮಯದಲ್ಲಿ ಇಂತಹ ಗೊಂದಲ ಮಾಡುವುದು ಸರಿಯಲ್ಲ. ಈ ಹತ್ಯೆಯಲ್ಲಿ ಭಾಗಿಯಾಗಿರುವವರನ್ನು ಬಂಧಿಸಬೇಕು. ಆರೋಪಿಗಳನ್ನು ರಕ್ಷಣೆ ಮಾಡಿದರೆ, ಅದಕ್ಕೆ ಅಧಿಕಾರಿಗಳು ಜವಾಬ್ದಾರಿ ಆಗಲಿದ್ದಾರೆ' ಎಂದೂ ಹೇಳಿದರು.

ನಮನ ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆಯುತ್ತಿರುವ ಹಿಂದೂ ಧರ್ಮ ಆಚಾರ್ಯ ಸಭಾ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ ಭಾಗವತ್ ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅವರಿಗೆ ನಮಸ್ಕರಿಸಿ ಆಶೀರ್ವಾದ ಪಡೆದರು.

ರಾಹುಲ್ ಕೋಲಾರ ಭೇಟಿ 10ಕ್ಕೆ

ಪ್ರಜಾವಾಣಿ ವಾರ್ತೆ

ಕೋಲಾರ: ರಾಹುಲ್ ಗಾಂಧಿ ನೇತೃತ್ವದಲ್ಲಿ ಕೋಲಾರದಲ್ಲಿ ನಡೆಯಬೇಕಿರುವ 'ಜೈ ಭಾರತ್' ಸಮಾವೇಶ ಎರಡನೇ ಬಾರಿ ಮುಂದೂಡಿಕೆಯಾಗಿದ್ದು, ಏ. 10ಕ್ಕೆ ನಿಗದಿಪಡಿಸಲಾಗಿದೆ.

'ಕಾರಣಾಂತರದಿಂದ ಏ. 9ರ ಬದಲಿಗೆ ಏ. 10ರಂದು ಬೆಳಿಗ್ಗೆ 10 ಗಂಟೆಗೆ ಸಮಾವೇಶ ನಡೆಯಲಿದೆ. ಬೆಂಗಳೂರಿನಲ್ಲಿ ನಡೆದ ಪಕ್ಷದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ. ಲಕ್ಷ್ಮಿನಾರಾಯಣ ತಿಳಿಸಿದ್ದಾರೆ.

ಈ ಮೊದಲು ಏ. 9ರಂದು ಆಯೋಜಿಸಲು ನಿರ್ಧರಿಸಲಾಗಿತ್ತು. ಅದಕ್ಕೂ ಮೊದಲು ಏ. 5ಕ್ಕೆ ನಿಗದಿಪಡಿಸಲಾಗಿತ್ತು.

ಕೋಲಾರ ಹೊರವಲಯದ ಟಮಕದಲ್ಲಿ 11 ಎಕರೆ ಜಾಗದಲ್ಲಿ ವೇದಿಕೆ ಸಿದ್ಧಪಡಿಸಲಾಗುತ್ತಿದ್ದು, ಎರಡು ದಿನಗಳ ಹಿಂದೆ ಸಿದ್ದರಾಮಯ್ಯ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲಾ ಭೇಟಿ ನೀಡಿ ವೀಕ್ಷಿಸಿದ್ದರು.

2019ರ ಲೋಕಸಭಾ ಚುನಾವಣೆ ವೇಳೆ ಕೋಲಾರದಲ್ಲಿ ನಡೆದ ಸಭೆಯಲ್ಲಿ ನೀಡಿದ್ದ ಹೇಳಿಕೆಯಿಂದ ರಾಹುಲ್ ಈಗ ಎರಡು ವರ್ಷ ಶಿಕ್ಷೆಗೆ ಗುರಿಯಾಗಿದ್ದು, ಸಂಸತ್ ಸದಸ್ಯ ಸ್ಥಾನದಿಂದ ಅನರ್ಹರಾಗಿದ್ದಾರೆ. ಹೀಗಾಗಿ, ಇಲ್ಲಿಂದಲೇ ಸಂವಿಧಾನ ರಕ್ಷಣೆ ಹೋರಾಟ ಆರಂಭಿಸಲು ಕಾಂಗ್ರೆಸ್ ತೀರ್ಮಾನಿಸಿದೆ.

'ಸತ್ಯಮೇವ ಜಯತೇ' ಹೆಸರಿನಲ್ಲಿ ಆಯೋಜಿಸ ಬೇಕಿದ್ದ ಸಮಾವೇಶವನ್ನು ಸಂಘಟಕರು ಈಗಾಗಲೇ 'ಜೈ ಭಾರತ್' ಪ್ರತಿಭಟನಾ ಸಮಾವೇಶ ಎಂದು ಮರುನಾಮಕರಣ ಮಾಡಿದ್ದಾರೆ.

ಸಿಪಿಐನಿಂದ 7 ಕಡೆ ಸ್ಪರ್ಧೆ

ಮಡಿಕೇರಿ: 'ಭಾರತ ಕಮ್ಯುನಿಸ್ಟ್ ಪಕ್ಷವು (ಸಿಪಿಐ) ರಾಜ್ಯದ 7 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ' ಎಂದು ಪಕ್ಷದ ಸಹ ಕಾರ್ಯದರ್ಶಿ ಬಿ.ಅಮ್ಜದ್ ತಿಳಿಸಿದರು.

'ಮಡಿಕೇರಿ ಕ್ಷೇತ್ರದಿಂದ ಎಚ್.ಎಂ.ಸೋಮಪ್ಪ, ಚಿಕ್ಕಮಗಳೂರಿನ ಮೂಡಿಗೆರೆ ಕ್ಷೇತ್ರದಿಂದ ರಮೇಶ, ವಿಜಯನಗರದ ಕೂಡ್ಲಿಗಿ ಕ್ಷೇತ್ರದಿಂದ ವೀರಣ್ಣ, ತುಮಕೂರಿನ ಶಿರಾ ಕ್ಷೇತ್ರದಿಂದ ಗಿರೀಶ್, ಕಲಬುರಗಿಯ ಜೇವರ್ಗಿ ಕ್ಷೇತ್ರದಿಂದ ಮಹೇಶ್ ಕುಮಾರ್ ರಾಥೋಡ್, ಆಳಂದ ಕ್ಷೇತ್ರದಿಂದ ಮೌಲಾಮುಲ್ಲಾ, ಕೋಲಾರದ ಕೆಜಿಎಫ್ ಕ್ಷೇತ್ರದಿಂದ ಜ್ಯೋತಿಬಸು ಸ್ಪರ್ಧಿಸಲಿದ್ದಾರೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಎಸ್ಸೆಸ್ಸೆಲ್ಸಿ: ಫಲಿತಾಂಶ ಹೆಚ್ಚಿಸಲು ಶೇ 10ರಷ್ಟು ಕೃಪಾಂಕ

ಒಂದನೇ ಪುಟದಿಂದ...

ಕೋವಿಡ್ ಸಂದರ್ಭದಲ್ಲೂ ಇದೇ ರೀತಿಯ ಕೃಪಾಂಕ ನೀಡಲಾಗಿತ್ತು. ಕಲಿಕೆಯಲ್ಲಿ ವಿದ್ಯಾರ್ಥಿಗಳು ಹಿಂದುಳಿದಿರುವ ಬಗ್ಗೆ ಶಿಕ್ಷಕರು ನೀಡಿರುವ ಅಭಿಪ್ರಾಯಗಳನ್ನು ಪರಿಗಣಿಸಿ ಮಂಡಳಿ ಇದೇ ನೀತಿ ಮುಂದುವರಿಸುವ ನಿರ್ಧಾರ ಕೈಗೊಂಡಿದೆ.

ಉದಾಹರಣೆಗೆ ವಿದ್ಯಾರ್ಥಿಯೊಬ್ಬ 625ಕ್ಕೆ 219 (ಶೇ 35) ಅಂಕಗಳನ್ನು ಪಡೆದು, ಕೆಲವು ವಿಷಯಗಳಲ್ಲಿ ಅನುತ್ತೀರ್ಣನಾಗಿದ್ದರೆ ಕೃಪಾಂಕ ನೀಡಿ ಉತ್ತೀರ್ಣಗೊಳಿಸಲಾಗುವುದು. ಗರಿಷ್ಠ ಮೂರು ವಿಷಯಗಳಿಗೆ ಮಾತ್ರ ಇದು ಅನ್ವಯವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆದರೆ, ಗರಿಷ್ಠ ಕೃಪಾಂಕ ಶೇ 10ರಷ್ಟು ಮಾತ್ರ. ಐಚ್ಛಿಕ ವಿಷಯಗಳಲ್ಲಿ ಎಂಟು ಅಂಕಗಳು ಮತ್ತು ಪ್ರಥಮ ಭಾಷೆಯಲ್ಲಿ 10 ಅಂಕಗಳನ್ನು ನೀಡಲಾಗುವುದು. ಉತ್ತೀರ್ಣರಾಗುವ ಹಂತದಲ್ಲಿರುವ ವಿದ್ಯಾರ್ಥಿಗೆ ಮಾತ್ರ ಇದು ಅನ್ವಯವಾಗಲಿದೆ. ಈ ಸೌಲಭ್ಯದಿಂದ ಶೇ 5ರಷ್ಟು ವಿದ್ಯಾರ್ಥಿಗಳಿಗೆ ಅನುಕೂಲವಾಗಬಹುದು ಎಂದು ಅಧಿಕಾರಿಗಳು ವಿಶ್ಲೇಷಿಸಿದ್ದಾರೆ.

ಗೈರು: ಸೋಮವಾರ ನಡೆದ ಗಣಿತ ವಿಷಯದ ಪರೀಕ್ಷೆಯಲ್ಲಿ 8.28 ಲಕ್ಷ ವಿದ್ಯಾರ್ಥಿಗಳಲ್ಲಿ 13,765 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು.

ಹುತಾತ್ಮ ಯೋಧ ಏಕನಾಥ ಶೆಟ್ಟಿಗೆ ಕೆದಂಬಾಡಿ ರಾಮಯ್ಯ ಶೌರ್ಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಸ್ವಾತಂತ್ರ್ಯ ಹೋರಾಟಗಾರ ಕೆದಂಬಾಡಿ ರಾಮಯ್ಯ ಗೌಡ ರಾಜ್ಯ ಶೌರ್ಯ ಪ್ರಶಸ್ತಿ'ಯನ್ನು ತುಳುನಾಡಿನ ಯೋಧ ದಿ.ಸುಬೇದಾರ್ ಏಕನಾಥ ಶೆಟ್ಟಿ ಅವರಿಗೆ ಮರಣೋತ್ತರ ನೀಡಲಾಗುತ್ತಿದೆ.

₹50 ಸಾವಿರ ನಗದು ಬಹುಮಾನ ಒಳಗೊಂಡಿರುವ ಈ ಪ್ರಶಸ್ತಿಯನ್ನು ಇದೇ 5ರಂದು ಮಂಗಳೂರಿನಲ್ಲಿ ನಡೆಯುವ ಅಮರ ಸುಳ್ಯ ಸಂಸ್ಮರಣಾ ದಿನಾಚರಣೆಯಲ್ಲಿ, ಏಕನಾಥ ಶೆಟ್ಟಿ ಕುಟುಂಬಸ್ಥರಿಗೆ ಪ್ರದಾನ ಮಾಡಲಾಗುವುದು ಎಂದು ಸ್ವಾತಂತ್ರ್ಯ ಹೋರಾಟಗಾರ ಕೆದಂಬಾಡಿ ರಾಮಯ್ಯ ಗೌಡ ಸ್ಮಾರಕ ಸಮಿತಿ ಅಧ್ಯಕ್ಷ ಎಂ.ಬಿ. ಕಿರಣ್ ಬುಡ್ಲೆಗುತ್ತು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕ್ರಿ.ಶ 1834ರಿಂದ 1837ರವರೆಗೆ ನಡೆದ ಅಮರ ಸುಳ್ಯ ಸ್ವಾತಂತ್ರ್ಯ ಹೋರಾಟದಲ್ಲಿ ತುಳುನಾಡಿನ ಅನೇಕ ರೈತರು ಬಲಿದಾನ ಮಾಡಿದ್ದಾರೆ. ಹೋರಾಟಗಾರರು ಕೆದಂಬಾಡಿ ರಾಮಯ್ಯ ಗೌಡ ನೇತೃತ್ವದಲ್ಲಿ ನಗರದ ಬಾವುಟಗುಡ್ಡೆಯಲ್ಲಿ 1837ರ ಏ. 5ರಂದು ವಿಜಯ ಪತಾಕೆ ಹಾರಿಸಿದ್ದರು. ಇದರ ಸ್ಮರಣಾರ್ಥ ಕಳೆದ ವರ್ಷ ಬಾವುಟಗುಡ್ಡೆಯಲ್ಲಿ ರಾಮಯ್ಯ ಗೌಡ ಅವರ ಪ್ರತಿಮೆ ಸ್ಥಾಪಿಸಲಾಗಿದೆ. ಅವರ ಹೆಸರಿನಲ್ಲಿ ಈ ವರ್ಷದಿಂದ ಶೌರ್ಯ ಪ್ರಶಸ್ತಿ ಆರಂಭಿಸಿದ್ದೇವೆ' ಎಂದು ಹೇಳಿದರು.

'ಸ್ವಾತಂತ್ರ್ಯ ಹೋರಾಟಗಾರ ರಾಮಯ್ಯ ಗೌಡರು ನಿಗೂಢವಾಗಿ ಕಣ್ಮರೆಯಾಗಿದ್ದರು. 2016ರಲ್ಲಿ ಅಂಡಮಾನ್ ನಿಕೋಬಾರ್‌ನ ಪೋರ್ಟ್‌ಬ್ಲೇರ್‌ಗೆ ತೆರಳುತ್ತಿದ್ದ ವಿಮಾನ ನಿಗೂಢವಾಗಿ ಕಣ್ಮರೆಯಾಗಿತ್ತು. ಆ ವಿಮಾನದಲ್ಲಿ ಸುಬೇದಾರ್ ಏಕನಾಥ ಶೆಟ್ಟಿ ಇದ್ದರು. ಇಬ್ಬರ ಅಂತ್ಯದಲ್ಲೂ ಸಾಮ್ಯತೆ ಇದೆ' ಎಂದು ಅವರು ತಿಳಿಸಿದರು.

ಗೋಷ್ಠಿಯಲ್ಲಿ ಸಮಿತಿಯ ಉಪಾಧ್ಯಕ್ಷ ಪಿ.ಎಚ್.ಆನಂದ್ ನೆರಿಯ, ಪ್ರಧಾನ ಕಾರ್ಯದರ್ಶಿ ರಕ್ಷಿತ್ ಪುತ್ತಿಲ, ಪ್ರಧಾನ ಸಂಚಾಲಕ ಭಾಸ್ಕರ ದೇವಸ್ಯ ಹಾಗೂ ಖಜಾಂಚಿ ಶಿವರಾಮ ಗೌಡ ನಿನ್ನಿಕಲ್ ಇದ್ದರು.

ಕಲುಷಿತ ನೀರು ಕುಡಿದು 18 ಜನ ಅಸ್ವಸ್ಥ

ಬಳ್ಳಾರಿ: ತಾಲ್ಲೂಕು ಕುಂಟನಾಳ ಗ್ರಾಮದಲ್ಲಿ ಕಲುಷಿತ ನೀರು ಕುಡಿದು 18 ಜನ ಅಸ್ವಸ್ಥಗೊಂಡಿದ್ದು, ಇಬ್ಬರನ್ನು ವಿಮ್ಸ್‌ಗೆ ದಾಖಲಿಸಲಾಗಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಧಿಕಾರಿ ಡಾ.ಎಚ್.ಎಲ್ ಜನಾರ್ದನ್ ಮತ್ತು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಮೋಹನ್ ಕುಮಾರಿ ಗ್ರಾಮಕ್ಕೆ ಭೇಟಿ ನೀಡಿ, ಗ್ರಾಮಸ್ಥರಿಗೆ ಪೂರೈಕೆ ಆಗುತ್ತಿರುವ ಗ್ರಾಮದ ಹೊರ ವಲಯದಲ್ಲಿ ಹರಿಯುತ್ತಿರುವ ವೇದಾವತಿ ನದಿ ನೀರು ಪರಿಶೀಲಿಸಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಗ್ರಾಮದಲ್ಲಿ ವೈದ್ಯರ ತಂಡ ಬೀಡು ಬಿಟ್ಟಿದೆ.

ಕೆಲವರು ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ತೆರಳಿ ದಾಖಲಾಗಿದ್ದಾರೆ. 'ಈ ಘಟನೆಗೆ ಗ್ರಾಮ ಪಂಚಾಯಿತಿ ಸಿಬ್ಬಂದಿ ನಿರ್ಲಕ್ಷ್ಯವೇ ಕಾರಣ' ಎಂಬ ಆರೋಪ ಕೇಳಿ ಬಂದಿದೆ.

'ಪ್ರಜಾವಾಣಿ'ಯಿಂದ ನಡೆದ ಮತದಾನ ಜಾಗೃತಿ ಕಾರ್ಯಕ್ರಮದ ಚಿತ್ರವನ್ನು ದಕ್ಷಿಣ ಕನ್ನಡ ಜಿಲ್ಲಾ ಸ್ವೀಪ್ ಸಮಿತಿಯು ಚುನಾವಣಾ ಜಾಗೃತಿಗಾಗಿ ಹೊರತರುತ್ತಿರುವ 'ಎಲೆಕ್ಷನ್ ಫೋಕಸ್' ಎಂಬ ಇ–ಪೇಪರ್‌ನಲ್ಲಿ ಪ್ರಕಟಿಸಿದೆ

ಚುನಾವಣಾ ಮಾಹಿತಿಗೆ 'ಇ– ಫೋಕಸ್'

ಮಂಗಳೂರು: ದಕ್ಷಿಣ ಕನ್ನಡ ದಲ್ಲಿ ಮತದಾನ ಜಾಗೃತಿಗಾಗಿ ಜಿಲ್ಲಾ ಸ್ವೀಪ್ ಸಮಿತಿಯು 'ಎಲೆಕ್ಷನ್ ಫೋಕಸ್' ಆನ್‌ಲೈನ್ ಪತ್ರಿಕೆ ಆರಂಭಿಸಿದೆ.

'ಈ ಆನ್‌ಲೈನ್ ಪತ್ರಿಕೆ ನಿತ್ಯ ಸಂಜೆ ಪ್ರಕಟವಾಗಲಿದೆ. ಚುನಾವಣೆಗೆ ಸಂಬಂಧಿಸಿ ಮಾಹಿತಿ, ಕಾರ್ಯಕ್ರಮಗಳ ವಿವರಗಳನ್ನು ಆರು ಪುಟಗಳಲ್ಲಿ ನೀಡಲಿದ್ದೇವೆ' ಎಂದು ಪತ್ರಿಕೆಯ ಪ್ರಧಾನ ಸಂಪಾದಕ ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷ, ಜಿಲ್ಲಾ ಪಂಚಾಯಿತಿ ಸಿಇಒ ಡಾ.ಕುಮಾರ ತಿಳಿಸಿದರು.

'ಎಲೆಕ್ಷನ್ ಫೋಕಸ್' ಪತ್ರಿಕೆಯನ್ನು ಸೋಮವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಆನ್‌ಲೈನ್ ಮಾಧ್ಯಮದ ಜನರನ್ನು ತಲುಪುವ ಮೂಲಕ ಅವರಲ್ಲಿ ಚುನಾವಣೆ ಪ್ರಕ್ರಿಯೆ ಬಗ್ಗೆ ಆಸಕ್ತಿ ಮೂಡುವಂತೆ ಮಾಡುವ ಸಲುವಾಗಿ ಈ ಪತ್ರಿಕೆ ಆರಂಭಿಸಿದ್ದೇವೆ. ನಿತ್ಯ ಕನಿಷ್ಠ 2 ಲಕ್ಷ ಮಂದಿಯನ್ನು ತಲುಪುವ ಉದ್ದೇಶ ನಮ್ಮದು. ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿರುವ ಗೊಂದಲಗಳನ್ನು ಬಗೆಹರಿಸುವ ಪ್ರಯತ್ನವನ್ನು ಇದರ ಮೂಲಕ ಮಾಡಲಿದ್ದೇವೆ' ಎಂದರು.

ಮಂಗಳೂರು ಮಹಾನಗರ ಪಾಲಿಕೆ ಆಯುಕ್ತ ಕೆ.ಚನ್ನಬಸಪ್ಪ ಇದ್ದರು.

ಡಿ.ಎ ಹೆಚ್ಚಳಕ್ಕೆ ಆಗ್ರಹ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರಿಗೆ ಜನವರಿ 1ರಿಂದ ಪೂರ್ವಾನ್ವಯ ಆಗುವಂತೆ ಶೇಕಡ 4ರಷ್ಟು ತುಟ್ಟಿಭತ್ಯೆ (ಡಿ.ಎ) ಮಂಜೂರು ಮಾಡುವಂತೆ ಕೋರಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರಿಗೆ ಒತ್ತಾಯಿಸಿದೆ.

ಮುಖ್ಯ ಕಾರ್ಯದರ್ಶಿಯವರಿಗೆ ಸೋಮವಾರ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, 'ಕೇಂದ್ರ ಸರ್ಕಾರ ತನ್ನ ನೌಕರರಿಗೆ ಜನವರಿ 1ರಿಂದ ಅನ್ವಯವಾಗುವಂತೆ ತುಟ್ಟಿಭತ್ಯೆ ಹೆಚ್ಚಿಸಿದೆ. ಅದೇ ರೀತಿಯಲ್ಲಿ ರಾಜ್ಯ ಸರ್ಕಾರಿ ನೌಕರರಿಗೂ ತುಟ್ಟಿಭತ್ಯೆ ಮಂಜೂರು ಮಾಡಬೇಕು. ಬಾಕಿ ತುಟ್ಟಿಭತ್ಯೆಯನ್ನು ನಗದು ರೂಪದಲ್ಲಿ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

ಹಿಟ್ನಾಳಗೆ ಜನಾಕ್ರೋಶದ ಬಿಸಿ!

ಕೊಪ್ಪಳ: ಕೊಪ್ಪಳ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಹಾಲಿ ಶಾಸಕ ಕೆ. ರಾಘವೇಂದ್ರ ಹಿಟ್ನಾಳ ತಾಲ್ಲೂಕಿನ ಗುಡಗೇರಿ ಗ್ರಾಮದಲ್ಲಿ ಸೋಮವಾರ ಪ್ರಚಾರ ಕಾರ್ಯ ಆರಂಭಿಸಿದ ಮೊದಲ ದಿನವೇ ಗ್ರಾಮಸ್ಥರ ವಿರೋಧ ಎದುರಿಸಬೇಕಾಯಿತು.

ಗ್ರಾಮದ ಎಸ್.ಸಿ. ಕಾಲೊನಿಗೆ ಮತ ಕೇಳಲು ಹೋದ ಅವರನ್ನು ಯುವಕರು 'ಚುನಾವಣೆ ಬಂದಿದೆ ಎನ್ನುವ ಕಾರಣಕ್ಕೆ ಬಂದಿದ್ದೀರಿ. 10 ವರ್ಷ ಶಾಸಕರಾಗಿದ್ದರೂ ಏನೂ ಅಭಿವೃದ್ಧಿ ಕೆಲಸ ಮಾಡಿಲ್ಲ. ಹಿಂಬಾಲಕರನ್ನು ಮಾತ್ರ ಕಳುಹಿಸಿದ್ದೀರಿ. ಈಗಲಾದರೂ ಯಾಕೆ ಬಂದಿದ್ದೀರಿ' ಎಂದು ಖಾರವಾಗಿ ಪ್ರಶ್ನಿಸಿದರು.

'ಗುಡಗೇರಿ ಗ್ರಾಮದಲ್ಲಿ ರಸ್ತೆ ಸರಿಯಿಲ್ಲ. ಈ ಕಾರಣಕ್ಕೆ ಬಸ್ ಬರುವುದಿಲ್ಲ. ವಿದ್ಯಾರ್ಥಿಗಳು ಶಾಲಾ, ಕಾಲೇಜುಗಳಿಗೆ ಹೋಗಲು ಪಡಿಪಾಟಲು ಪಡಬೇಕಾಗಿದೆ. ರಸ್ತೆ ಅಭಿವೃದ್ಧಿಗೆ ಹಲವು ಸಲ ಭೂಮಿಪೂಜೆ ಮಾಡಿದ್ದೇ ಸಾಧನೆಯಾಗಿದ್ದು, ರಸ್ತೆ ಮಾತ್ರ ಆಗಲಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮತಯಾಚನೆ ಬಳಿಕ ನಡೆದ ಸಮಾರಂಭದಲ್ಲಿಯೂ ಗ್ರಾಮದ ಹಲವರು ಹಿಟ್ನಾಳ ವಿರುದ್ಧ ಅಸಮಾಧಾನ ಹೊರಹಾಕಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು 'ಇಷ್ಟು ವರ್ಷ ಬಿಜೆಪಿ ಸರ್ಕಾರದ ಆಡಳಿತವಿತ್ತು. ಮುಂದಿನ ಚುನಾವಣೆಯಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬರಲಿದೆ. ಆಗ ಜನರ ಎಲ್ಲಾ ಬೇಡಿಕೆಗಳನ್ನು ಈಡೇರಿಸಲಾಗುವುದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕ್ಷೇತ್ರದಲ್ಲಿಯೂ ಸಮಸ್ಯೆಗಳು ಇವೆ' ಎಂದರು.

ಶ್ರೀಕಂಠೇಶ್ವರನ ಹುಂಡಿಗೆ ಶಾಸಕನ ಕೈ!

ಒಂದನೇ ಪುಟದಿಂದ...

ಆದರೆ, ಶಾಸಕರ ಕೋರಿಕೆಯಂತೆ ಎಲ್ಲ ಕಾಮಗಾರಿಗಳಿಗೆ ₹ 8 ಕೋಟಿ ಅನುದಾನವನ್ನು ಶ್ರೀಕಂಠೇಶ್ವರ ದೇವಸ್ಥಾನದ ನಿಧಿಯಿಂದ ಭರಿಸಲು ಮುಖ್ಯಮಂತ್ರಿ ಫೆ. 8ರಂದು ಅನುಮೋದನೆ ನೀಡಿದ್ದರು. ಅದರಂತೆ, ಪ್ರಸ್ತಾವಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ ಹೊರಡಿಸಲು ಅನುಮತಿಗಾಗಿ ಕಡತವನ್ನು ಅಧಿಕಾರಿಗಳು ಮುಜರಾಯಿ ಇಲಾಖೆಯ ಸಚಿವೆ ಶಶಿಕಲಾ ಜೊಲ್ಲೆ ಅವರ ಮುಂದೆ ಮಂಡಿಸಿದ್ದರು.

'ಧಾರ್ಮಿಕ ದತ್ತಿ ಇಲಾಖೆಯು ಕಾನೂನು ಉಲ್ಲೇಖಿಸಿ ಶ್ರೀಕಂಠೇಶ್ವರ ದೇವಾಲಯದ ನಿಧಿಯಿಂದ ವಿವಿಧ ಸಮುದಾಯಗಳ ಭವನ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸಮಂಜಸವಲ್ಲ. ಈ ಪ್ರಸ್ತಾವ ಒಪ್ಪಿದರೆ ಇದನ್ನೇ ನಿದರ್ಶನವಾಗಿರಿಸಿಕೊಂಡು ರಾಜ್ಯದ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ದೇವಾಲಯಗಳ ಹಣವನ್ನು ಜಾತಿ ಆಧಾರಿತ ಸಮುದಾಯ ಭವನಗಳ ನಿರ್ಮಾಣಕ್ಕೆ ಇಂಥದ್ದೇ ಪ್ರಸ್ತಾವ ಬರುವ ಸಾಧ್ಯತೆಯಿದೆ. ಭಕ್ತಾದಿಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿ ತಪ್ಪು ಸಂದೇಶ ರವಾನೆಯಾಗುವ ಸಂಭವವೂ ಇರುತ್ತದೆ. ಹೀಗಾಗಿ, ಈ ಅನುಮೋದನೆ ಮರುಪರಿಶೀಲಿಸಬೇಕು. ಜಾತಿ ಆಧಾರಿತ ಭವನ ನಿರ್ಮಿಸಲು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುದಾನವನ್ನು ಮಂಜೂರು ಮಾಡಲು ಅವಕಾಶ ಇದೆ. ಆ ಇಲಾಖೆಗಳ ಮೂಲಕವೇ ಅನುದಾನ ಮಂಜೂರು ಮಾಡುವ ಕುರಿತು ಸ್ಪಷ್ಟ ನಿರ್ದೇಶನ ನೀಡಬೇಕು' ಎಂದು ಕೋರಿ ಕಡತವನ್ನು ಮುಖ್ಯಮಂತ್ರಿಗೆ ಜೊಲ್ಲೆ ಮರು ಮಂಡಿಸಿದ್ದರು.

ಆದರೆ, ಮುಖ್ಯಮಂತ್ರಿ ತಮ್ಮ ಈ ಹಿಂದಿನ ನಿರ್ದೇಶನವನ್ನೇ ಪುನರುಚ್ಚರಿಸಿ, ಆದೇಶ ಹೊರಡಿಸುವಂತೆ ಮಾರ್ಚ್ 2ರಂದು ಸೂಚಿಸಿದ್ದರು. ಹೀಗಾಗಿ, 6ರಂದೇ ಧಾರ್ಮಿಕ ದತ್ತಿ ಇಲಾಖೆ ಅನುಮತಿ ನೀಡಿ ಆದೇಶ ಹೊರಡಿಸಿದೆ.

ಸಂಕ್ಷಿಪ್ತ ಸುದ್ದಿ

ಡಿಕೆಶಿ ವಿರುದ್ಧ ಎಫ್‌ಐಆರ್

ಮಂಡ್ಯ: ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ ವೇಳೆ ಕಲಾವಿದರತ್ತ ₹ 500ರ ನೋಟುಗಳನ್ನು ಎಸೆದಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ನಗರದ ಗ್ರಾಮಾಂತರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಾರ್ಚ್ 28ರಂದು ಶ್ರೀರಂಗಪಟ್ಟಣ ತಾಲ್ಲೂಕಿನ ಕ್ಯಾತುಂಗೆರೆಯಿಂದ ರೋಡ್ ಶೋ ಶುರುವಾದಾಗ ಕಲಾ ತಂಡಗಳ ಕಲಾವಿದರು ಅವರನ್ನು ಹಣ ಕೊಡುವಂತೆ ಕೋರಿದ್ದರು. ಆಗ ಅವರು ಕಲಾವಿದರತ್ತ ಹಣ ಎಸೆದಿದ್ದರು.

ಜನಾರ್ದನ ರೆಡ್ಡಿ ಸೇರಿ ಐವರ ವಿರುದ್ಧ ಎಫ್‌ಐಆರ್: ಕನಕಗಿರಿ (ಕೊಪ್ಪಳ ಜಿಲ್ಲೆ): ಜಿಲ್ಲೆಯ ಕನಕಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಮಾದರಿ ನೀತಿಸಂಹಿತೆ ಉಲ್ಲಂಘಿಸಿದ ಆರೋಪದ ಮೇಲೆ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಸಂಸ್ಥಾಪಕ ಜನಾರ್ದನ ರೆಡ್ಡಿ ಸೇರಿದಂತೆ ಐದು ಜನರ ವಿರುದ್ಧ ಸೋಮವಾರ ಎಫ್‌ಐಆರ್ ದಾಖಲಾಗಿದೆ. ಪಕ್ಷದ ಪೋಸ್ಟರ್ ಇರುವ ಆಂಬುಲೆನ್ಸ್ ಉಚಿತ ಸೇವೆ ಎನ್ನುವ ಫಲಕ ಹಾಕಿಕೊಂಡು ಸಂಚರಿಸುತ್ತಿದ್ದಾಗ ಏ. 1ರಂದು ಇಲ್ಲಿನ ಡಾ. ಅಂಬೇಡ್ಕರ್ ವೃತ್ತದಲ್ಲಿ ವಾಹನ ಜಪ್ತಿ ಮಾಡಲಾಗಿತ್ತು.

ಮೇಲ್ಮನೆಯಲ್ಲಿ ಬಿಜೆಪಿ ಬಲ ಕುಸಿತ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಮುಂದಾಗಿರುವ ಕೆಲವರು ವಿಧಾನಪರಿಷತ್ತಿನ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವುದರಿಂದಾಗಿ ಮೇಲ್ಮನೆಯಲ್ಲಿ ಬಿಜೆಪಿಯ ಸದಸ್ಯ ಬಲ ಕುಸಿಯುತ್ತಿದೆ.

75 ಸದಸ್ಯ ಬಲದ ಪರಿಷತ್ತಿನಲ್ಲಿ ಬಿಜೆಪಿ 39 ಸದಸ್ಯರನ್ನು ಹೊಂದಿದೆ. ಕಾಂಗ್ರೆಸ್ 26, ಜೆಡಿಎಸ್ 8 ಸದಸ್ಯರನ್ನು ಹೊಂದಿದೆ. ಸಭಾಪತಿ ಮತ್ತು ಒಬ್ಬ ಪಕ್ಷೇತರ ಸದಸ್ಯರಿದ್ದಾರೆ. ಪುಟ್ಟಣ್ಣ ಹಾಗೂ ಬಾಬುರಾವ್ ಚಿಂಚನಸೂರು ರಾಜೀನಾಮೆ ನೀಡಿದ್ದರಿಂದಾಗಿ ಬಿಜೆಪಿ ಬಲ 37ಕ್ಕೆ ಇಳಿದಿದೆ.

ಬಿಜೆಪಿಯ ಮತ್ತೊಬ್ಬ ಸದಸ್ಯ ಆಯನೂರು ಮಂಜುನಾಥ್ ಕೂಡಾ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ. ಆರ್.ಶಂಕರ್ ಅದೇ ಹಾದಿಯಲ್ಲಿದ್ದಾರೆ ಎನ್ನಲಾಗಿದೆ. ನಾಮನಿರ್ದೇಶಿತ ಸದಸ್ಯ ಎಚ್.ವಿಶ್ವನಾಥ್ ಕಾಂಗ್ರೆಸ್‌ಗೆ ಬೆಂಬಲಿಸುವುದಾಗಿ ಹೇಳಿದ್ದಾರೆ.

ನನ್ನನ್ನು ವರ್ಗಾವಣೆ ಮಾಡಿ: ಡಿವೈಎಸ್ಪಿ

ಹಾಸನ: 'ಚುನಾವಣೆ ಮುಗಿಯುವವರೆಗೆ ನನ್ನನ್ನು ಬೇರೆಡೆ ವರ್ಗಾವಣೆ ಮಾಡಿ' ಎಂದು ಹಾಸನ ಉಪ ವಿಭಾಗದ ಡಿವೈಎಸ್ಪಿ ಉದಯಭಾಸ್ಕರ್ ಅವರು ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ಏ.2ರಂದು ಪತ್ರ ಬರೆದಿದ್ದಾರೆ.

'ನಾನು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದು, ರಾಜಕೀಯ ವ್ಯಕ್ತಿಗಳು ಕಾನೂನುಬಾಹಿರ ಕೆಲಸ ಮಾಡಲು ಒತ್ತಡ ಹಾಕುತ್ತಿದ್ದಾರೆ. ಅದಕ್ಕೆ ಮಣಿಯದ ನನ್ನ ಮೇಲೆ ವಿನಾಕಾರಣ ಆರೋಪ ಮಾಡುತ್ತಿದ್ದಾರೆ' ಎಂದಿದ್ದಾರೆ.

'ಚುನಾವಣೆಯ ಸಂದರ್ಭದಲ್ಲೂ ನಿಷ್ಪಕ್ಷಪಾತವಾಗಿ ಕೆಲಸ ನಿರ್ವಹಿಸಲು ಆಗದೇ ಇರಬಹುದು. ಆಗಲೂ ನನ್ನ ಮೇಲೆ ಆರೋಪಗಳನ್ನು ಮಾಡಬಹುದು. ಇದೆಲ್ಲವನ್ನೂ ತಪ್ಪಿಸಲು ಚುನಾವಣೆ ಮುಗಿಯುವವರೆಗೆ ತಾತ್ಕಾಲಿಕವಾಗಿ ನಿಮಗೆ ತಿಳಿದ ಸ್ಥಳಕ್ಕೆ ವರ್ಗಾವಣೆ ಮಾಡಿ' ಎಂದು ಮನವಿ ಮಾಡಿದ್ದಾರೆ.

ಈಚೆಗೆ ಪತ್ರಿಕಾಗೋಷ್ಠಿ ನಡೆಸಿದ್ದ ಶಾಸಕ ಎಚ್.ಡಿ.ರೇವಣ್ಣ ಅವರು ಉದಯಭಾಸ್ಕರ್ ಸೇರಿದಂತೆ ಪೊಲೀಸರ ವಿರುದ್ಧ ಆರೋಪ ಮಾಡಿ, 'ಇಲಾಖಾ ವಿಚಾರಣೆ ನಡೆಸಬೇಕು' ಎಂದು ಆಗ್ರಹಿಸಿದ್ದರು.

ಈಶ್ವರಪ್ಪ ವಿರುದ್ಧ ತೊಡೆತಟ್ಟಿದ ಆಯನೂರು ಮಂಜುನಾಥ್

ಕಾಂಗ್ರೆಸ್ ಸೇರ್ಪಡೆಗೆ ಸಜ್ಜು?

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ತಮ್ಮದೇ ಪಕ್ಷದ ಶಾಸಕ ಕೆ.ಎಸ್.ಈಶ್ವರಪ್ಪ ವಿರುದ್ಧ ತೊಡೆತಟ್ಟಿರುವ ಬಿಜೆಪಿಯ ಆಯನೂರು ಮಂಜುನಾಥ್, ಇನ್ನೂ 13 ತಿಂಗಳ ಅವಧಿ ಇದ್ದರೂ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಪ್ರಕಟಿಸಿದ್ದಾರೆ.

ಆಯನೂರು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ ಎಂದು ಹೇಳಲಾಗುತ್ತಿದೆಯಾದರೂ ಅದನ್ನು ಅವರು ಈವರೆಗೂ ಖಚಿತಪಡಿಸಿಲ್ಲ. ಆದರೆ, ಶಿವಮೊಗ್ಗ ನಗರ ಕ್ಷೇತ್ರಕ್ಕೆ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ ಕಾಂಗ್ರೆಸ್‌ನ 11 ಆಕಾಂಕ್ಷಿಗಳೇ 'ಅತೃಪ್ತಿ' ನೆಪದಲ್ಲಿ ಪದೇ ಪದೇ ಅದನ್ನು ಸಾರ್ವಜನಿಕವಾಗಿ ಹೇಳಿದ್ದಾರೆ.

ಕಾಂಗ್ರೆಸ್ ಬಯಸಿದ್ದು: ಶಿವಮೊಗ್ಗ ನಗರ ಕ್ಷೇತ್ರವು 1989ರ ಚುನಾವಣೆಯಿಂದ ಕೆ.ಎಸ್.ಈಶ್ವರಪ್ಪ ಅವರಿಗೆ ಐದು ಬಾರಿ ನೆಲೆ ಕಲ್ಪಿಸಿದೆ. ಆದರೆ, 1999ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಲಿಂಗಾಯತರಾದ ಎಚ್.ಎಂ. ಚಂದ್ರಶೇಖರಪ್ಪ ಹಾಗೂ 2013ರಲ್ಲಿ ಬ್ರಾಹ್ಮಣ ಸಮುದಾಯದ ಕೆ.ಬಿ. ಪ್ರಸನ್ನಕುಮಾರ್ ಅವರು ಈಶ್ವರಪ್ಪ ಅವರನ್ನು ಮಣಿಸಿದ್ದರು. ಆದರೆ, ಕಳೆದ

ಮುಖ್ಯಮಂತ್ರಿ ಆಗಿ ಬಿಎಸ್‌ವೈ ಶಿವಮೊಗ್ಗಕ್ಕೆ ಬಂದಾಗ ಒಮ್ಮೆಯೂ ಅವರನ್ನು ಈಶ್ವರಪ್ಪ ಗೌರವಯುತವಾಗಿ ಸ್ವಾಗತಿಸಲಿಲ್ಲ. ಯಡಿಯೂರಪ್ಪ ಅವರಿಗೆ ಎಷ್ಟು ಸಾಧ್ಯವೋ ಅಷ್ಟು ಅಪಮಾನ ಮಾಡಿದ್ದಾರೆ.

ಆಯನೂರು ಮಂಜುನಾಥ್, ವಿಧಾನಪರಿಷತ್ ಸದಸ್ಯ (ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದು)

ಚುನಾವಣೆಯಲ್ಲಿ ಪ್ರಸನ್ನಕುಮಾರ್ 46,107 ಮತಗಳ ಭಾರೀ ಅಂತರದಿಂದ ಸೋತಿದ್ದರು. ಈ ಬಾರಿ ರಣತಂತ್ರ ಬದಲಾಯಿಸಲು ಕಾಂಗ್ರೆಸ್ ಮುಂದಾಗಿದ್ದು, ಈಶ್ವರಪ್ಪ ಅವರನ್ನು ಮಣಿಸಲು ಲಿಂಗಾಯತ ಸಮುದಾಯದ ಜೊತೆಗೆ ಅಲ್ಪಸಂಖ್ಯಾತರ ಮತಗಳನ್ನು ಒಗ್ಗೂಡಿಸುವ ಲೆಕ್ಕಾಚಾರದಲ್ಲಿದೆ. ಹೀಗಾಗಿ ಆಯನೂರು ಅವರತ್ತ ಚಿತ್ತ ಹರಿಸಿದೆ ಎಂದು ಹೇಳಲಾಗುತ್ತಿದೆ.

'ಹೊಸಬರ ಬದಲಿಗೆ ಅನುಭವಿ ಆಯನೂರು ಅವರನ್ನು ಕಣಕ್ಕೆ ಇಳಿಸೋಣ. ಬಿಜೆಪಿ ಕಟ್ಟಿಹಾಕಲು ಅವರೇ ಸೂಕ್ತ ಎಂಬುದನ್ನು ವರಿಷ್ಠರಿಗೆ ಮನದಟ್ಟು ಮಾಡಿದ್ದೇವೆ. ಆಯನೂರು ಅವರೊಂದಿಗೆ ಡಿ.ಕೆ.ಶಿವಕುಮಾರ್ ಮಾತುಕತೆ ನಡೆಸಿದ್ದು, ಪಕ್ಷ ಸೇರ್ಪಡೆಗೆ ರಂಗ ಸಜ್ಜಾಗಿದೆ. ಅಂತೆಯೇ ಅವರು ರಾಜೀನಾಮೆ ಮಾತು ಆಡಿದ್ದಾರೆ' ಎಂದು ಮಲೆನಾಡು ಭಾಗದ ಕಾಂಗ್ರೆಸ್ ಮುಖಂಡರೊಬ್ಬರು ಹೇಳುತ್ತಾರೆ.

ಕಾಂಗ್ರೆಸ್ ನಾಯಕರ ಸೂಚನೆಯಂತೆ ಈಗಾಗಲೇ ಈಶ್ವರಪ್ಪ ವಿರುದ್ಧ ಆಯನೂರು ಅವರು ಮೊದಲ ಸುತ್ತಿನಲ್ಲಿ 'ಫ್ಲೆಕ್ಸ್ ಯುದ್ಧ' ಮುಗಿಸಿದ್ದಾರೆ. ಇದು ಶಿವಮೊಗ್ಗದಲ್ಲಿನ ಈಶ್ವರಪ್ಪ ವಿರೋಧಿ ಪಾಳಯದಲ್ಲಿ ಆಯನೂರು ಅವರ ವರ್ಚಸ್ಸು ಹೆಚ್ಚಿಸಿದೆ ಎನ್ನುತ್ತಾರೆ.

ಈ ಬೆಳವಣಿಗೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಕಣ್ಣು ಕೆಂಪಾಗಿಸಿದೆ. ಇಷ್ಟು ದಿನ ಟಿಕೆಟ್‌ಗಾಗಿ ಪರಸ್ಪರ ಪೈಪೋಟಿಯಲ್ಲಿ ತೊಡಗಿದ್ದವರನ್ನು 'ಆಯನೂರು' ನೆರಳು ಒಂದುಗೂಡಿಸಿದೆ. 'ಆಯನೂರು ಕಾಂಗ್ರೆಸ್ ಸೇರ್ಪಡೆ ಬೇಡ' ಎಂದು ಬೆಂಗಳೂರಿಗೆ ತೆರಳಿ ಕೆಪಿಸಿಸಿ ಅಧ್ಯಕ್ಷರಿಗೆ ಮನವಿ ಕೊಟ್ಟು ಬಂದಿದ್ದಾರೆ.

ಯಡಿಯೂರಪ್ಪ ಅವರ ನೀಲಿಗಣ್ಣಿನ ಹುಡುಗ ಮಂಜುನಾಥ್

ಈಗಾಗಲೇ ವಿಧಾನಸಭೆ, ವಿಧಾನ ಪರಿಷತ್, ಲೋಕಸಭೆ ಮತ್ತು ರಾಜ್ಯಸಭೆಗಳನ್ನು ಪ್ರತಿನಿಧಿಸಿರುವ ಆಯನೂರು ಮಂಜುನಾಥ್, ಶಿವಮೊಗ್ಗದ ಮಟ್ಟಿಗೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ನೀಲಿಗಣ್ಣಿನ ಹುಡುಗ.

ಹೀಗಾಗಿಯೇ ಆಯನೂರು ಮಂಜುನಾಥ್ ಅವರ ಈ ರಾಜಕೀಯ ನಡೆಗಳ ಹಿಂದೆ ಯಡಿಯೂರಪ್ಪ ಅವರ ನೆರಳನ್ನು ಹುಡುಕುವ ಪ್ರಯತ್ನವು ಅವರ ವಿರೋಧಿಗಳಿಂದ ಸಾಮಾಜಿಕ ಜಾಲತಾಣದಲ್ಲಿ ನಡೆದಿದೆ.

ಚುನಾವಣೆ ಸ್ಪರ್ಧೆ: ಶೀಘ್ರದಲ್ಲೇ ಪರಿಷತ್ ಸ್ಥಾನಕ್ಕೆ ರಾಜೀನಾಮೆ

ಶಿವಮೊಗ್ಗ: 'ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಶೀಘ್ರದಲ್ಲೇ ರಾಜೀನಾಮೆ ನೀಡಿ ಶಿವಮೊಗ್ಗ ನಗರ ಕ್ಷೇತ್ರದಿಂದ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುತ್ತೇನೆ' ಎಂದು ಬಿಜೆಪಿ ಮುಖಂಡ ಆಯನೂರು ಮಂಜುನಾಥ್ ಹೇಳಿದರು.

'ಚುನಾವಣೆಯಲ್ಲಿ ಕಣಕ್ಕೆ ಇಳಿಯಬೇಕೆಂಬ ಕಾರಣಕ್ಕೆ ನನ್ನ ಭಾವನೆಯನ್ನು ಈ ಹಿಂದೆ ಪ್ರಕಟಿಸಿದ್ದೇನೆ. ಬಿಜೆಪಿ ನಾಯಕರ ಗಮನಕ್ಕೆ ತಂದಿದ್ದೆ. ಆದರೆ, ಪಕ್ಷದಿಂದ ನನಗೆ ಟಿಕೆಟ್ ಸಿಗುವ ಲಕ್ಷಣಗಳು ಕಾಣುತ್ತಿಲ್ಲ. ಈಗ ಬರೀ ಈಶ್ವರಪ್ಪ ಹಾಗೂ ಭಾನುಪ್ರಕಾಶ್ ಅವರ ಮಕ್ಕಳ ಹೆಸರು ಬಿಜೆಪಿ ಪಟ್ಟಿಯಲ್ಲಿ ಕಾಣುತ್ತಿವೆ' ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಲೇವಡಿ ಮಾಡಿದರು.

'ಚುನಾವಣೆಯಲ್ಲಿ ಸ್ಪರ್ಧೆಯ ಮೂಲಕ ಕುಟುಂಬ ರಾಜಕಾರಣದ ಈ ಕೊಂಡಿಯನ್ನು ಕತ್ತರಿಸುವೆ' ಎಂದು ಹೇಳಿದರು.

ಆಯನೂರು ಸ್ಪರ್ಧೆಯ ವಿಚಾರದಲ್ಲಿ ಇತ್ತೀಚೆಗೆ ಮಾಧ್ಯಮದವರ ಪ್ರಶ್ನೆಗೆ ಶಾಸಕ ಕೆ.ಎಸ್.ಈಶ್ವರಪ್ಪ, 'ನಿನ್ನನ್ನೇ ಲೆಕ್ಕ ಇಟ್ಟಿಲ್ಲ. ಇನ್ನು ಅವನ್ಯಾವ ಲೆಕ್ಕ' ಎಂದು ಕೇಳಿದ್ದರು.

ಅದನ್ನೇ ಮುಖ್ಯವಾಗಿ ಪ್ರಸ್ತಾಪಿಸಿದ ಆಯನೂರು ಮಂಜುನಾಥ್, 'ನನ್ನ ಬಗ್ಗೆ ಈಶ್ವರಪ್ಪ ಏಕವಚನದಲ್ಲಿ ಮಾತನಾಡಿದ್ದಾರೆ. ಈಶ್ವರಪ್ಪ ಸ್ಪರ್ಧಿಸಲಿ, ಇಲ್ಲವೇ ಪುತ್ರನನ್ನು ಕಣಕ್ಕಿಳಿಸಲಿ. ಅವರ ವಿರುದ್ಧ ಸ್ಪರ್ಧಿಸಿ ನಾನ್ಯಾವ ಲೆಕ್ಕ ಅನ್ನೋದನ್ನು ತೋರಿಸುತ್ತೇನೆ' ಎಂದು ಸವಾಲು ಹಾಕಿದರು.

'ಬಿಜೆಪಿ ಬಗ್ಗೆ ನನ್ನ ಆಕ್ಷೇಪವಿಲ್ಲ. ನಾಯಕರ ವಿರುದ್ಧ ಇದೆ. ಬಿ.ಎಸ್. ಯಡಿಯೂರಪ್ಪ ಅವರು ಪುತ್ರರನ್ನು ರಾಜಕೀಯಕ್ಕೆ ಕರೆತಂದಾಗ ಈಶ್ವರಪ್ಪ ವಿರೋಧಿಸಿದ್ದರು. ಈಗ ಮಗನನ್ನು ಚುನಾವಣೆ ರಾಜಕೀಯಕ್ಕೆ ಕರೆತರುವ ಪ್ರಯತ್ನ ಮಾಡುತ್ತಿರುವುದೇಕೆ' ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಸೇರ್ಪಡೆಯಾಗುವಿರಾ, ಸ್ವತಂತ್ರವಾಗಿ ಸ್ಪರ್ಧಿಸುವಿರಾ? ಎಂಬ ಪ್ರಶ್ನೆಗೆ, 'ನನ್ನ ಕೊರಳಿನಲ್ಲಿ ಇನ್ನೂ ಬಿಜೆಪಿಯ ತಾಳಿ ಇದೆ. ಹೀಗಾಗಿ ಆ ಬಗ್ಗೆ ಏನೂ ಹೇಳುವುದಿಲ್ಲ' ಎಂದು ಮಾರ್ಮಿಕವಾಗಿ ಹೇಳಿದರು.

'ಸೌಹಾರ್ದ ಕೆಡಬಹುದು ಎಚ್ಚರ ವಹಿಸಿ'

'ಚುನಾವಣೆಯಲ್ಲಿ ಗೆಲ್ಲುವುದಕ್ಕೆ, ಹೇಳಿಕೊಳ್ಳಲು ಏನೂ ವಿಷಯವಿಲ್ಲ. ಹೀಗಾಗಿ ಶಿವಮೊಗ್ಗದ ಯಾವುದಾದರೂ ದೇವಸ್ಥಾನ ಇಲ್ಲವೇ ಪ್ರಾರ್ಥನಾ ಮಂದಿರ (ಮಸೀದಿ) ಅಪವಿತ್ರಗೊಂಡು ಕೋಮುಸೌಹಾರ್ದ ಕೆಡಬಹುದು' ಎಂದ ಆಯನೂರು ಮಂಜುನಾಥ್, 'ಚುನಾವಣೆ ಗೆಲ್ಲಲೇಬೇಕೆಂದವರು ಇಂತಹದ್ದನ್ನು ಮಾಡುತ್ತಾರೆ. ಹಿಂದೂ–ಮುಸ್ಲಿಂ ಸಮಾಜದವರು ಸಂಯಮ ವಹಿಸಿ ಅದಕ್ಕೆ ಅವಕಾಶ ಮಾಡಿಕೊಡಬಾರದು' ಎಂದು ಮನವಿ ಮಾಡಿದರು.

ಬಿಜೆಪಿ ಮಾಧ್ಯಮ ಕೇಂದ್ರ ಉದ್ಘಾಟನೆ • ಆಡಳಿತ ವಿರೋಧಿ ಅಲೆ ಇಲ್ಲ: ಮುಖ್ಯಮಂತ್ರಿ

'ಅಭಿವೃದ್ಧಿ ಹೆಸರಲ್ಲಿ ಮತಯಾಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಇಲ್ಲ ಎಂದು ಹೇಳಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಚುನಾವಣಾ ಸಮೀಕ್ಷೆ ನಡೆಸುವ ಸಂಸ್ಥೆಗಳು ಆಡಳಿತ ವಿರೋಧಿ ಅಲೆಯ ಮನಸ್ಥಿತಿಯಿಂದ ಹೊರಗೆ ಬಂದಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಮಾಧ್ಯಮ ಕೇಂದ್ರವನ್ನು ಉದ್ಘಾಟಿಸಿದ ಅವರು, 'ನರೇಂದ್ರ ಮೋದಿಯವರು ದೇಶದ ಆಡಳಿತ ಚುಕ್ಕಾಣಿ ಹಿಡಿದ ಬಳಿಕ ಆ ಧೋರಣೆ ಬದಲಾಗಿದೆ. ಅಭಿವೃದ್ಧಿ ಕೆಲಸಗಳ ವರದಿಯನ್ನು ಜನರ ಮುಂದಿಟ್ಟು ಸಕಾರಾತ್ಮಕ ನೆಲೆಯಲ್ಲಿ ಮತ ಕೇಳುತ್ತೇವೆ' ಎಂದರು.

'ಅಭ್ಯರ್ಥಿಗಳ ಆಯ್ಕೆಗೆ ಜಿಲ್ಲಾ ಮಟ್ಟದಲ್ಲಿ ಅಭಿಪ್ರಾಯ ಸಂಗ್ರಹಿಸಿ, ಜಿಲ್ಲಾ ಕೋರ್ ಕಮಿಟಿ ಸಭೆಯಲ್ಲೂ ಚರ್ಚಿಸಲಾಗಿದೆ. ಮಂಗಳವಾರ ಅಥವಾ ಬುಧವಾರ ರಾಜ್ಯ ಪ್ರಮುಖ ನಾಯಕರ ಸಭೆ ನಡೆಯಲಿದೆ. ಅಲ್ಲಿ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ ಕೇಂದ್ರಕ್ಕೆ ಕಳುಹಿಸಲಾಗುವುದು. 8ರಂದು ಸಂಸದೀಯ ಮಂಡಳಿ ಸಭೆ ನಡೆಯಲಿದ್ದು, ಆ ಬಳಿಕ ಅಭ್ಯರ್ಥಿ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಬೊಮ್ಮಾಯಿ ಅವರು ಹೇಳಿದರು.

'2011ರ ಜನಸಂಖ್ಯೆಗೆ ಅನುಗುಣವಾಗಿ ಮತ್ತು ಸಂಪುಟ ಉಪಸಮಿತಿಯ ವರದಿ ಆಧಾರದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣವನ್ನು ವರ್ಗೀಕರಿಸಲಾಗಿದೆ. ಬಂಜಾರ ಸೇರಿ ಕೆಲವು ಸಮುದಾಯಗಳಲ್ಲಿ ಈ ಕುರಿತು ತಪ್ಪುಗ್ರಹಿಕೆ ಆಗಿದೆ. ಅದನ್ನು ನಿವಾರಿಸುವ ಕೆಲಸ ಮಾಡಿದ್ದೇವೆ. ಕಾಂಗ್ರೆಸ್‌ನ ಕೆಲವು ನಾಯಕರು ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಈ ಸವಾಲನ್ನು ರಾಜಕೀಯವಾಗಿ ಸ್ವೀಕರಿಸುತ್ತೇವೆ' ಎಂದು ತಿಳಿಸಿದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರದ ಸರಣಿಯೇ ನಡೆಯಿತು. ಕಾಂಗ್ರೆಸ್‌ನವರಿಗೆ ಭ್ರಷ್ಟಾಚಾರದ ಕುರಿತು ಮಾತನಾಡಲು ನೈತಿಕತೆಯೇ ಇಲ್ಲ. ಕೇವಲ ರಾಜಕೀಯ ಕಾರಣಕ್ಕಾಗಿ ಕಾಂಗ್ರೆಸ್ ಆರೋಪ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ಬೆಂಗಳೂರಿನಲ್ಲಿ ಸೋಮವಾರ ನಡೆದ ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನಕುಮಾರ್ ಕಟೀಲ್, ಚುನಾವಣಾ ನಿರ್ವಹಣಾ ಸಂಚಾಲಕಿ ಶೋಭಾ ಕರಂದ್ಲಾಜೆ, ಕರ್ನಾಟಕ ರಾಜ್ಯ ಚುನಾವಣೆಯ ಉಸ್ತುವಾರಿ ಧರ್ಮೇಂದ್ರ ಪ್ರಧಾನ್ ಭಾಗವಹಿಸಿದ್ದರು.

ಇನ್ನೂ 20 ಬಾರಿ ಮೋದಿ ಭೇಟಿ

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಇನ್ನು 20 ಬಾರಿ ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೋಮವಾರ ತಿಳಿಸಿದರು.

ಅರಮನೆ ಮೈದಾನದಲ್ಲಿ ನಡೆದ ಪಕ್ಷದ ಚುನಾವಣಾ ನಿರ್ವಹಣಾ ಸಮಿತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಬಿಜೆಪಿ ರಾಜ್ಯಗಳ ಮುಖ್ಯಮಂತ್ರಿಗಳೂ ಪ್ರಚಾರ ನಡೆಸಲು ಬರಲಿದ್ದಾರೆ ಎಂದರು.

ಎರಡು ದಿನ ನಡೆದ ಜಿಲ್ಲಾ ಕೋರ್ ಕಮಿಟಿ ಸಭೆಗಳಲ್ಲಿ ಯಾವುದೇ ಕ್ಷೇತ್ರದ ಬಗ್ಗೆ ಅಸಮಾಧಾನ ಕೇಳಿ ಬರಲಿಲ್ಲ. ಸಮೀಕ್ಷೆಗಳು ಏನೇ ಹೇಳಿದರೂ ಬಿಜೆಪಿಗೆ ಬಹುಮತ ಸಿಗುವುದು ಖಚಿತ. ನಮ್ಮ ಪಕ್ಷದಲ್ಲಿ ಅಭ್ಯರ್ಥಿಗಳ ಗೆಲುವಿನ ರೂವಾರಿ ನಿರ್ವಹಣಾ ಸಮಿತಿಯೇ ಆಗಲಿದೆ. ಯಾರನ್ನೇ ಅಭ್ಯರ್ಥಿ ಮಾಡಿದರೂ ಗೆಲುವಿಗಾಗಿ ಶ್ರಮಿಸಲು ಒಮ್ಮತದ ಅಭಿಪ್ರಾಯಕ್ಕೆ ಬರಲಾಗಿದೆ. ಕಳೆದ ಮೂರು ತಿಂಗಳಲ್ಲಿ 4 ಕೋಟಿ ಜನರನ್ನು ಸಂಪರ್ಕಿಸಿರುವುದಾಗಿ ಹೇಳಿದರು.

ಶೋಭಾ ತಾಕೀತು: ಅಭ್ಯರ್ಥಿಯಾಗಿ ಯಾರನ್ನೇ ಕಣಕ್ಕೆ ಇಳಿಸಿದರೂ ಎಲ್ಲರೂ ಅವರ ಗೆಲುವಿಗಾಗಿ ಶ್ರಮಿಸಬೇಕು ಎಂದು ಚುನಾವಣಾ ನಿರ್ವಹಣಾ ಸಮಿತಿಯ ಸಂಚಾಲಕಿ ಮತ್ತು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸೂಚಿಸಿದರು.

'ನಿರ್ದಿಷ್ಟ ಅಭ್ಯರ್ಥಿಗೆ ಟಿಕೆಟ್ ಕೊಟ್ಟರೆ ಕೆಲಸ ಮಾಡುತ್ತೇವೆ ಎಂಬ ಭಾವನೆ ಬೇಡ. ಯಾರಿಗೆ ಕೊಟ್ಟರೂ ಪಕ್ಷವನ್ನು ಗೆಲ್ಲಿಸಲು ಕೆಲಸ ಮಾಡುತ್ತೇವೆ ಎಂಬ ಧ್ಯೇಯ ಇರಲಿ' ಎಂದು ಸಲಹೆ ಮಾಡಿದರು.

'ಶೀಘ್ರವೇ ಪಟ್ಟಿ ಬಿಡುಗಡೆ'

ಯಡಿಯೂರಪ್ಪ

ಶಿಕಾರಿಪುರ: 'ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳ ಬಗ್ಗೆ ಎರಡು ದಿನ ಚರ್ಚೆ ನಡೆಸಲಾಗಿದೆ. ಮುಂದಿನ ಎರಡು–ಮೂರು ದಿನಗಳಲ್ಲಿ ದೆಹಲಿಗೆ ತೆರಳಿ, ಅಭ್ಯರ್ಥಿಗಳ ಪಟ್ಟಿ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಪಡೆಯಲಿದ್ದು, ನಾವೇ ಅಧಿಕಾರ ನಡೆಸುತ್ತೇವೆ' ಎಂದರು.

'ಬಿ.ವೈ. ವಿಜಯೇಂದ್ರ ಬೇರೆ ಕ್ಷೇತ್ರದಲ್ಲಿ ನಿಲ್ಲಬೇಕು ಎಂಬ ಒತ್ತಡ ಇತ್ತು. ಅವರು ವರುಣಾದಿಂದ ಸ್ಪರ್ಧಿಸುವುದಿಲ್ಲ. ನನಗೆ ರಾಜಕೀಯ ಜನ್ಮ ನೀಡಿದ ಶಿಕಾರಿಪುರದಿಂದಲೇ ಸ್ಪರ್ಧಿಸಲಿದ್ದಾರೆ. ಈ ಕ್ಷೇತ್ರದಲ್ಲಿ ಹೆಚ್ಚಿನ ಮತಗಳ ಅಂತರದಿಂದ ಗೆಲುವು ಸಾಧಿಸುತ್ತಾರೆ ಎಂಬ ವಿಶ್ವಾಸವಿದೆ' ಎಂದರು.

ಶಶಿಭೂಷಣ ಹೆಗಡೆ ಬಿಜೆಪಿಗೆ ಸೇರ್ಪಡೆ

ಬೆಂಗಳೂರು/ಸಿದ್ದಾಪುರ (ಉತ್ತರ ಕನ್ನಡ): ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶಿರಸಿ-ಸಿದ್ದಾಪುರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಶಶಿಭೂಷಣ ಹೆಗಡೆ ತಮ್ಮ ಬೆಂಬಲಿಗರೊಂದಿಗೆ ಸೋಮವಾರ ಅಧಿಕೃತವಾಗಿ ಬಿಜೆಪಿಗೆ ಸೇರ್ಪಡೆಯಾದರು.

ಬಿಜೆಪಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಪಕ್ಷದ ಬಾವುಟ ನೀಡಿ ಬರಮಾಡಿಕೊಂಡರು. ಕೇಂದ್ರ ಸಚಿವರಾದ ಭಗವಂತ ಖೂಬಾ, ಶೋಭಾ ಕರಂದ್ಲಾಜೆ ಮತ್ತಿತರರು ಇದ್ದರು.

'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, 'ಸದ್ಯದ ಪರಿಸ್ಥಿತಿಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಮುಂಚೂಣಿಯಲ್ಲಿವೆ. ಈ ಪರಿಸ್ಥಿತಿಯಲ್ಲಿ ಪ್ರಾದೇಶಿಕ ಪಕ್ಷಗಳನ್ನು ಬೆಳೆಸುವುದು ಕಷ್ಟ. ಬೆಂಬಲಿಗರು, ಹಿತೈಷಿಗಳ ಸಲಹೆಯಂತೆ ಬಿಜೆಪಿಗೆ ಸೇರ್ಪಡೆಗೊಂಡಿದ್ದೇನೆ' ಎಂದರು. 'ಜೆಡಿಎಸ್ ಪಕ್ಷ ಮತ್ತು ನಾಯಕ ಕುಮಾರಸ್ವಾಮಿ ಅವರ ಬಗೆಗಿನ ಗೌರವ ಕಡಿಮೆಯಾಗುವುದಿಲ್ಲ' ಎಂದು ಹೇಳಿದರು.

ಜೆಡಿಎಸ್ 2ನೇ ಪಟ್ಟಿ ಪ್ರಕಟ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಮವಾರ ನಿಗದಿಯಾಗಿದ್ದ ಜೆಡಿಎಸ್ ಅಭ್ಯರ್ಥಿಗಳ ಎರಡನೇ ಪಟ್ಟಿ ಪ್ರಕಟಣೆಯನ್ನು ಮುಂದೂಡಿದ್ದು, ಬುಧವಾರ ಅಥವಾ ಗುರುವಾರ ಪ್ರಕಟಿಸುವ ಸಾಧ್ಯತೆ ಇದೆ.

ರಾಮನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿದ್ದ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಸಂಜೆ ಬೆಂಗಳೂರಿಗೆ ವಾಪಸಾಗಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡುವುದಾಗಿ ಹೇಳಿಕೆ ನೀಡಿದ್ದರು. ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಗೆ ಸಿದ್ಧತೆ ನಡೆದಿತ್ತು. ಆದರೆ, ಸಂಜೆ ದಿಢೀರ್ ಸುದ್ದಿಗೋಷ್ಠಿ ರದ್ದುಗೊಳಿಸಿದರು.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರು ರಾಜ್ಯಸಭೆ ಕಲಾಪದಲ್ಲಿ ಪಾಲ್ಗೊಳ್ಳಲು ದೆಹಲಿಗೆ ತೆರಳಿದ್ದಾರೆ. ಬುಧವಾರ ಬೆಂಗಳೂರಿಗೆ ವಾಪಸಾಗುವರು. ದೇವೇಗೌಡರ ಜತೆ

ನನಗೆ 2 ಬಾರಿ ಹೃದಯ ಶಸ್ತ್ರಚಿಕಿತ್ಸೆಯಾಗಿದೆ, ಎಷ್ಟು ದಿನ ಬದುಕಿರುತ್ತೇನೋ ಗೊತ್ತಿಲ್ಲ. 3ನೇ ಬಾರಿಗೆ ಮುಖ್ಯಮಂತ್ರಿಯಾಗುವ ಉದ್ದೇಶ ನನಗಿಲ್ಲ

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಮತ್ತೊಂದು ಸುತ್ತಿನ ಚರ್ಚೆ ನಡೆಸಿದ ಬಳಿಕವೇ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಪ್ರಕಟಿಸಲು ಕುಮಾರಸ್ವಾಮಿ ನಿರ್ಧರಿಸಿದ್ದಾರೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಡಿಸೆಂಬರ್ ತಿಂಗಳಿನಲ್ಲೇ 93 ವಿಧಾನಸಭಾ ಕ್ಷೇತ್ರಗಳಿಗೆ ಜೆಡಿಎಸ್ ಅಭ್ಯರ್ಥಿಗಳನ್ನು ಪ್ರಕಟಿಸಿತ್ತು. ಹಾಸನ ಕ್ಷೇತ್ರದ ಟಿಕೆಟ್‌ಗಾಗಿ ಎಚ್.ಡಿ. ರೇವಣ್ಣ ಅವರ ಪತ್ನಿ ಭವಾನಿ ಅವರು ಪಟ್ಟು ಹಿಡಿದಿರುವುದರಿಂದಾಗಿ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಲು ಪಕ್ಷದ ವರಿಷ್ಠರು ಹರಸಾಹಸ ಪಡುತ್ತಿದ್ದಾರೆ.

ಹಾಸನ ಟಿಕೆಟ್–ದೇವೇಗೌಡರ ನಿರ್ಧಾರ ಅಂತಿಮ: ಎಚ್‌ಡಿಕೆ

ರಾಮನಗರ: 'ದೇವೇಗೌಡರು ದೆಹಲಿಗೆ ತೆರಳಿದ್ದು, ವಾಪಸ್ ಬಂದ ನಂತರ ಹಾಸನ ಕ್ಷೇತ್ರದ ಅಭ್ಯರ್ಥಿಯ ಹೆಸರು ಪ್ರಕಟಿಸುತ್ತಾರೆ. ಈ ವಿಚಾರದಲ್ಲಿ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಚನ್ನಪಟ್ಟಣದಲ್ಲಿ ಸೋಮವಾರ ಪತ್ರಕರ್ತರ ಜೊತೆ ಅವರು ಮಾತನಾಡಿದರು.

'ಹಾಸನದಲ್ಲಿ ಜನಾಭಿಪ್ರಾಯ ಹಾಗೂ ಕಾರ್ಯಕರ್ತರ ಅಭಿಪ್ರಾಯಕ್ಕೆ ಮನ್ನಣೆ ನೀಡಲಾಗುತ್ತದೆ. ದೇವೇಗೌಡರು ಎಲ್ಲರ ಅಭಿಪ್ರಾಯ ಸಂಗ್ರಹಿಸಿದ್ದು, ಅವರೇ ತೀರ್ಮಾನ ಮಾಡುತ್ತಾರೆ' ಎಂದು ಸೂಚ್ಯವಾಗಿ ಹೇಳಿದರು.

ಚುನಾವಣಾ ಪೂರ್ವ ಸಮೀಕ್ಷೆ ಕುರಿತು ಪ್ರತಿಕ್ರಿಯಿಸಿದ ಅವರು, 'ದುಡ್ಡು ಕೊಟ್ಟರೆ ಜೆಡಿಎಸ್‌ಗೆ 200 ಸೀಟು ಬರುತ್ತದೆ ಎಂದು ತೋರಿಸುವವರೂ ಇದ್ದಾರೆ. ಹೀಗಾಗಿ, ಸಮೀಕ್ಷೆಗಳ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ' ಎಂದರು.

ಇದೇ 17ರಂದು ರಾಮನಗರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಹಾಗೂ 19ರಂದು ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿಯಾಗಿ ತಾವು ನಾಮಪತ್ರ ಸಲ್ಲಿಸುವುದಾಗಿ ತಿಳಿಸಿದರು.

ಮೊಳಕಾಲ್ಮುರು ಕ್ಷೇತ್ರದಿಂದ ಬಿ. ಯೋಗೇಶ್ ಬಾಬು ಅವರಿಗೆ ಟಿಕೆಟ್ ನೀಡುವಂತೆ ಆಗ್ರಹಿಸಿ ಅವರ ಬೆಂಬಲಿಗರು ಕೆಪಿಸಿಸಿ ಕಚೇರಿಯ ಮುಂಭಾಗದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ

ಅಕ್ರಮ: ಈವರೆಗೆ 316 ಎಫ್‌ಐಆರ್ ದಾಖಲು

ಒಟ್ಟು ₹ 47.43 ಕೋಟಿ ನಗದು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಚುನಾವಣಾ ನೀತಿಸಂಹಿತೆ ಜಾರಿಯಾದ ದಿನದಿಂದ ಈವರೆಗೆ ಚುನಾವಣಾ ಅಕ್ರಮಕ್ಕೆ ಸಂಬಂಧಿಸಿ ₹ 47.43 ಕೋಟಿ ಮೌಲ್ಯದ ನಗದು, ಮದ್ಯ, ಮತದಾರರಿಗೆ ಆಮಿಷ ಒಡ್ಡಲು ಬಳಸುವ ವಸ್ತುಗಳು, ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಕುರಿತು ಪ್ರಕಟಣೆ ನೀಡಿರುವ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ, ₹ 12.82 ಕೋಟಿ ನಗದು ವಶಪಡಿಸಿಕೊಳ್ಳಲಾಗಿದೆ. ₹ 16.02 ಕೋಟಿ ಮೌಲ್ಯದ 2.78 ಲಕ್ಷ ಲೀಟರ್ ಮದ್ಯ, ₹ 6.72 ಕೋಟಿ ಮೌಲ್ಯದ 13.5 ಕೆ.ಜಿ. ಚಿನ್ನ, ₹ 63.98 ಲಕ್ಷ ಮೌಲ್ಯದ 88.7 ಕೆ.ಜಿ. ಬೆಳ್ಳಿ, ₹ 41.26 ಲಕ್ಷ ಮೌಲ್ಯದ 79.44 ಕೆ.ಜಿ. ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದೆ.

ಮತದಾರರಿಗೆ ಆಮಿಷ ಒಡ್ಡಲು ಸಂಗ್ರಹಿಸಿದ್ದ ಹಾಗೂ ಸಾಗಿಸುತ್ತಿದ್ದ ₹ 10.79 ಕೋಟಿ ಮೌಲ್ಯದ ವಿವಿಧ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಚುನಾವಣಾ ಅಕ್ರಮಗಳಿಗೆ ಬಳಸುತ್ತಿದ್ದ ಆರೋಪದಡಿ 270 ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ವಿವರ ನೀಡಿದೆ.

ಚುನಾವಣಾ ಅಕ್ರಮದ ಆರೋಪದಡಿ ಈವರೆಗೆ 316 ಎಫ್‌ಐಆರ್‌ಗಳನ್ನು ದಾಖಲು ಮಾಡಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ 1,416 ಪ್ರಕರಣ ದಾಖಲಿಸಿ, 1,869 ಜನರಿಂದ ಬಾಂಡ್ ಭದ್ರತೆ ಪಡೆಯಲಾಗಿದೆ ಎಂದು ತಿಳಿಸಿದೆ.

₹26 ಲಕ್ಷ ಮೌಲ್ಯದ ಮದ್ಯ ವಶ– (ಮೈಸೂರು ವರದಿ): ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಕಳೆದ 24 ಗಂಟೆಯಲ್ಲಿ ತಿ.ನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚೆಕ್‌ಪೋಸ್ಟ್‌ನಲ್ಲಿ ಕಾರ್ಯಾಚರಣೆ ನಡೆಸಿದ ಫ್ಲೈಯಿಂಗ್ ಸ್ಕ್ವಾಡ್ ಸಿಬ್ಬಂದಿ ₹ 26,20,186 ಮೌಲ್ಯದ 36,045 ಲೀ ಮದ್ಯ ಹಾಗೂ ₹ 20 ಲಕ್ಷ ಮೌಲ್ಯದ ಎರಡು ವಾಹನವನ್ನು ವಶಕ್ಕೆ ಪಡೆದಿದ್ದಾರೆ ಎಂದು ಚುನಾವಣಾ ಅಧಿಕಾರಿ ತಿಳಿಸಿದ್ದಾರೆ.

₹20 ಲಕ್ಷ ನಗದು ವಶ– (ದೇವದುರ್ಗ ವರದಿ): ದಾಖಲೆ ಇಲ್ಲದೇ ಕಾರಿನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ₹ 20 ಲಕ್ಷ ನಗದನ್ನು ತಾಲ್ಲೂಕಿನ ಗಬ್ಬೂರು ಠಾಣೆ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ರಾಯಚೂರಿನಿಂದ ದೇವದುರ್ಗದತ್ತ ಬರುತ್ತಿದ್ದ ವೇಳೆ ಗಬ್ಬೂರು ಚೆಕ್‌ಪೋಸ್ಟ್ ಹತ್ತಿರ ವಶಕ್ಕೆ ಪಡೆಯಲಾಗಿದೆ ಎಂದು ಚುನಾವಣಾಧಿಕಾರಿ ಎಂ.ಎನ್. ಚೇತನ ಕುಮಾರ್ ತಿಳಿಸಿದ್ದಾರೆ.

ದಾಖಲೆಗಳಿಲ್ಲದೆ ಸಾಗಣೆ: ₹21.78 ಲಕ್ಷ ಮೌಲ್ಯದ ವಸ್ತುಗಳು ವಶ– (ಶಿವಮೊಗ್ಗ ವರದಿ): ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧೆಡೆ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ಕಾರ್ಯ ನಡೆಸಿರುವ ಪೊಲೀಸರು, ₹ 21.78 ಲಕ್ಷ ಮೌಲ್ಯದ ವಸ್ತುಗಳನ್ನು ಸೋಮವಾರ ವಶಪಡಿಸಿಕೊಂಡಿದ್ದಾರೆ.

ಮದುಮಗನಿಂದ ₹1.20 ಲಕ್ಷ ವಶ

ತೋವಿನಕೆರೆ(ತುಮಕೂರು ಜಿಲ್ಲೆ): ಸಮೀಪದ ಜೋನಿಗರಹಳ್ಳಿ ಕ್ರಾಸ್‌ನಲ್ಲಿ ನಿರ್ಮಿಸಿರುವ ಚೆಕ್‌ಪೋಸ್ಟ್‌ನಲ್ಲಿ ಸೋಮವಾರ ಬೆಳಿಗ್ಗೆ ದ್ವಿಚಕ್ರವಾಹನದಲ್ಲಿ ಸಾಗಿಸುತ್ತಿದ್ದ ₹1.20 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ.

ಚೇಳೂರು ಗ್ರಾಮದ ಮುನಿಸ್ವಾಮಿ ಎಂಬುವರು ಕೊರಟಗೆರೆಯಲ್ಲಿ ಸಿದ್ಧವಾಗಿರುವ ಒಡವೆ ತರಲು ಹಣದ ಜತೆ ಹೋಗುತ್ತಿದ್ದರು. ತೋವಿನಕೆರೆ ತಪಾಸಣಾ ಕೇಂದ್ರದಲ್ಲಿ ಪರಿಶೀಲನೆ ನಡೆಸಿದಾಗ ನಗದು ಪತ್ತೆಯಾಗಿದೆ. ಹಣದ ದಾಖಲಾತಿ ನೀಡುವಂತೆ ಅಧಿಕಾರಿಗಳು ತಿಳಿಸಿದ್ದಾರೆ.

ಏ. 23ರಂದು ಮುನಿಸ್ವಾಮಿಗೆ ಮದುವೆ ನಿಗದಿಯಾಗಿದೆ.

ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ ಸಭೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಗೆ 99 ಕ್ಷೇತ್ರಗಳಿಗೆ ಪಕ್ಷದ ಅಭ್ಯರ್ಥಿಗಳನ್ನು ಅಖೈರುಗೊಳಿಸಲು ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ ಸಭೆಯು (ಸಿಇಸಿ) ಮಂಗಳವಾರ ಬೆಳಿಗ್ಗೆ 10.30ಕ್ಕೆ ನಡೆಯಲಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಪಕ್ಷದ ನಾಯಕ ರಾಹುಲ್ ಗಾಂಧಿ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಪಕ್ಷದ ಮುಖಂಡರಾದ ಎಂ. ವೀರಪ್ಪ ಮೊಯಿಲಿ, ಜಿ.ಪರಮೇಶ್ವರ, ಪರಿಶೀಲನಾ ಸಮಿತಿ ಸದಸ್ಯರು ಭಾಗವಹಿಸಲಿದ್ದಾರೆ.

ಕಾಂಗ್ರೆಸ್ 124 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಈಗಾಗಲೇ ಪ್ರಕಟಿಸಿದೆ. ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ರೈತ ಸಂಘದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಬೆಂಬಲಿಸಲು ಪಕ್ಷ ತೀರ್ಮಾನಿಸಿದೆ. 99 ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಗಾಗಿ ಮೋಹನ್ ಪ್ರಕಾಶ್ ನೇತೃತ್ವದ ಪರಿಶೀಲನಾ ಸಮಿತಿ ಹಲವು ಸುತ್ತಿನ ಸಭೆ ನಡೆಸಿದೆ. ಸಮಿತಿಯು 60 ಕ್ಷೇತ್ರಗಳಿಗೆ ತಲಾ ಒಬ್ಬ ಆಕಾಂಕ್ಷಿಯ ಹೆಸರನ್ನು ಮಾತ್ರ ಶಿಫಾರಸು ಮಾಡಿದೆ. 32 ಕ್ಷೇತ್ರಗಳಿಗೆ ತಲಾ ಇಬ್ಬರು ಆಕಾಂಕ್ಷಿಗಳ ಹೆಸರನ್ನು ಸೂಚಿಸಿದೆ. ಉಳಿದ ಏಳು ಕ್ಷೇತ್ರಗಳಿಗೆ ತಲಾ ನಾಲ್ವರ ಹೆಸರನ್ನು ಶಿಫಾರಸು ಮಾಡಿದೆ. ಕಡೂರು, ಚಿತ್ರದುರ್ಗ, ತರೀಕೆರೆ, ಮದ್ದೂರು ಸೇರಿದಂತೆ ಹಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಕಗ್ಗಂಟಾಗಿದೆ.

'99 ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಅಖೈರುಗೊಳಿಸಲಾಗುವುದು. ಒಬ್ಬ ಅಭ್ಯರ್ಥಿಯ ಹೆಸರು ಇರುವ ಪಟ್ಟಿ (ಎರಡನೇ ಪಟ್ಟಿ) ಶುಕ್ರವಾರದ ಹೊತ್ತಿಗೆ ಪ್ರಕಟವಾಗಲಿದೆ. ಮತ್ತೊಂದು ಪಟ್ಟಿ ಸ್ವಲ್ಪ ವಿಳಂಬವಾಗಬಹುದು' ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ಹೇಳಿದರು.

ಮತ್ತೆ 'ಕೈ' ಹಿಡಿದ ಗೋಪಾಲಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಕೂಡ್ಲಿಗಿ ಕ್ಷೇತ್ರದ ಬಿಜೆಪಿ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರು ಸೋಮವಾರ ಮರಳಿ 'ಕೈ' ಹಿಡಿದಿದ್ದಾರೆ. ಅವರನ್ನು ಮೊಳಕಾಲ್ಮುರು ಕ್ಷೇತ್ರದಿಂದ ಕಣಕ್ಕಿಳಿಸಲು ಕಾಂಗ್ರೆಸ್ ಮುಂದಾಗಿದೆ.

ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಪಕ್ಷದ ಬಾವುಟ ನೀಡಿ, ಶಾಲು ಹೊದಿಸಿ ಗೋಪಾಲಕೃಷ್ಣ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಅವರ ಜತೆ ನೂರಾರು ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, 'ನಮ್ಮ ನಡೆ ಅಧಿಕಾರದ ಕಡೆ ಆಗುತ್ತಿದೆ. ಜನ ತೋರಿಸುತ್ತಿರುವ ಪ್ರೀತಿ, ಬಿಜೆಪಿ ತೊರೆದು ನಮ್ಮ ಮನೆ ಬಾಗಿಲು ತಟ್ಟುತ್ತಿರುವ ಶಾಸಕರು ಇದಕ್ಕೆ ಸಾಕ್ಷಿ. ಅರಸೀಕೆರೆ ಕ್ಷೇತ್ರದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಶಿವಲಿಂಗೇಗೌಡರು 9ರಂದು ತಮ್ಮ ಕ್ಷೇತ್ರದಲ್ಲೇ ಕಾಂಗ್ರೆಸ್ ಸೇರುತ್ತೇನೆ ಎಂದಿದ್ದಾರೆ' ಎಂದರು.

'ಕಾಂಗ್ರೆಸ್ ಎಂಬ ಸಾಗರಕ್ಕೆ ನದಿಗಳ ರೀತಿಯಲ್ಲಿ ವಿವಿಧ ಪಕ್ಷಗಳ ನಾಯಕರು ಬರುತ್ತಿದ್ದಾರೆ. ಅವರಿಗೆ ಕಾಲಾವಕಾಶ ಕಲ್ಪಿಸಲು ನಮಗೆ ಆಗುತ್ತಿಲ್ಲ. ಡಬಲ್ ಎಂಜಿನ್ ಸರ್ಕಾರದಿಂದ ಯಾವುದೇ ಪ್ರಯೋಜನ ಆಗಿಲ್ಲ ಎನ್ನುವುದು ಗೊತ್ತಾಗಿದೆ' ಎಂದರು.

'ನೀವು ಶಾಸಕರು, ಕ್ಷೇತ್ರ ಇದೆ ಯಾಕೆ ಬರುತ್ತಿದ್ದೀರಿ ಎಂದು ಗೋಪಾಲಕೃಷ್ಣ ಅವರನ್ನು ಕೇಳಿದೆ. ಅಲ್ಲಿ ನಾನು ಹೋಗಿ ಎಲ್ಲವನ್ನೂ ನೋಡಿದ್ದೇನೆ. ನನ್ನ ಸಾವು ಕಾಂಗ್ರೆಸ್‌ನಲ್ಲಿ ಆಗಬೇಕೆಂದು ಬಂದಿದ್ದೇನೆ ಎಂದಿದ್ದಾರೆ. ಅವರು ಕಾಂಗ್ರೆಸ್ ಸಿದ್ಧಾಂತಕ್ಕೆ ಬದ್ಧವಾದ ನಾಯಕ' ಎಂದರು.

ಗೋಪಾಲಕೃಷ್ಣ ಅವರು, 'ನನಗೆ ಕಾಂಗ್ರೆಸ್ಸಿನಿಂದ ದೊಡ್ಡ ಬೆಂಬಲ ಇತ್ತು. ನನ್ನ ತಾಯಿ ಕೂಡಾ ಜಿಲ್ಲಾ ಪಂಚಾಯಿತಿ ಚುನಾವಣೆಗೆ ನಿಲ್ಲುವಾಗ ಕಾಂಗ್ರೆಸ್‌ನಿಂದ ನಿಲ್ಲುತ್ತೇನೆ ಎಂದಿದ್ದರು. ಅಂದು ಅವರನ್ನು ನಾನು, ಅಣ್ಣ ಸೇರಿ ಗೆಲ್ಲಿಸಿಕೊಂಡಿದ್ದೆವು. ನಾನು ಕಳೆದುಕೊಂಡಿದ್ದ ಜಾಗಕ್ಕೆ ಮತ್ತೆ ಬಂದಿದ್ದೇನೆ' ಎಂದರು.

ಆಕಾಂಕ್ಷಿಗಳ ಬೆಂಬಲಿಗರ ರಂಪಾಟ

ಕೆಪಿಸಿಸಿ ಕಚೇರಿ ಮುಂಭಾಗದಲ್ಲಿ ಟಿಕೆಟ್ ಆಕಾಂಕ್ಷಿಗಳ ಬೆಂಬಲಿಗರು ಸೋಮವಾರ ದೊಡ್ಡ ಪ್ರಮಾಣದಲ್ಲಿ ರಂಪಾಟ ನಡೆಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಸುತ್ತುವರಿದು, ತಮ್ಮ ನಾಯಕರಿಗೆ ಟಿಕೆಟ್ ನೀಡಬೇಕು ಎಂದು ಪಟ್ಟು ಹಿಡಿದರು. ಘೋಷಣೆ ಕೂಗಿದರು. ಕೆಪಿಸಿಸಿ ಕಚೇರಿಗೂ ನುಗ್ಗಿ ಕೂಗಾಡಿದರು. ಇವರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು.

ಚಿಕ್ಕಮಗಳೂರಿನ ತರೀಕೆರೆ ಕ್ಷೇತ್ರದಿಂದ ಎಚ್.ಎಂ.ಗೋಪಿಕೃಷ್ಣ ಅವರಿಗೆ ಟಿಕೆಟ್ ನೀಡಬೇಕು ಎಂದು ಆಗ್ರಹಿಸಿ ಅವರ ಬೆಂಬಲಿಗರು ಮತ್ತು ಮಡಿವಾಳ ಸಮುದಾಯದವರು ಮೊದಲು ಪ್ರತಿಭಟಿಸಿದ್ದರು. ಈ ಸಂದರ್ಭದಲ್ಲಿ ಒಬ್ಬ ಆತ್ಮಹತ್ಯೆಗೆ ಯತ್ನಿಸಿದ ಘಟನೆಯೂ ನಡೆಯಿತು. ಸ್ಥಳದಲ್ಲಿದ್ದ ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದರು.

ಮೊಳಕಾಲ್ಮುರು ಕ್ಷೇತ್ರದಿಂದ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದ ಬಿ.ಯೋಗೇಶ್ ಬಾಬು ಬೆಂಬಲಿಗರು, ತಮ್ಮ ನಾಯಕನಿಗೆ ಟಿಕೆಟ್‌ಗೆ ಆಗ್ರಹಿಸಿ ಕೂಗಾಡಿದರು. ಇದೇ ವೇಳೆ ಪ್ರತಿಯಾಗಿ ಎನ್.ವೈ.ಗೋಪಾಲಕೃಷ್ಣ ಬೆಂಬಲಿಗರೂ ಟಿಕೆಟ್‌ಗಾಗಿ ಘೋಷಣೆ ಕೂಗಿದರು.

'ಅಭ್ಯರ್ಥಿಗಳ ವಿರುದ್ಧ ಪೋಸ್ಟ್ ಹಾಕಿದರೆ ಕ್ರಮ'

ಪಕ್ಷ ಘೋಷಿಸಿರುವ ಅಭ್ಯರ್ಥಿಗಳ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಪೋಸ್ಟ್ ಅಥವಾ ಕಮೆಂಟ್ಸ್ ಹಾಕಿದರೆ, ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕೆಪಿಸಿಸಿ ಶಿಸ್ತು ಪಾಲನಾ ಸಮಿತಿ ಎಚ್ಚರಿಕೆ ನೀಡಿದೆ.

ಪುತ್ರರ ಭವಿಷ್ಯಕ್ಕೆ ನಾಯಕರ ಹರಸಾಹಸ

ಮೂರು ಪ್ರಮುಖ ಪಕ್ಷಗಳ ಪ್ರಭಾವಿ ನಾಯಕರು ತಮ್ಮ ಮಕ್ಕಳ ರಾಜಕೀಯ ಭವಿಷ್ಯಕ್ಕಾಗಿ ಟೊಂಕ ಕಟ್ಟಿ ನಿಂತು, ತಂತ್ರಗಾರಿಕೆಯಲ್ಲಿ ನಿರತರಾಗಿರುವುದು ಈ ಬಾರಿಯ ವೈಶಿಷ್ಟ್ಯ. ಇಡೀ ಪಕ್ಷವನ್ನು ಮುನ್ನಡೆಸಿ ಅಧಿಕಾರ ಹಿಡಿಯುವಷ್ಟು ಬಹುಮತ ದಕ್ಕಿಸಿಕೊಡುವ ಜವಾಬ್ದಾರಿ ಹೊತ್ತವರು ಮಕ್ಕಳಿಗೊಂದು ಕ್ಷೇತ್ರ ಗಟ್ಟಿ ಮಾಡಿಕೊಡಲು ಬೆವರು ಹರಿಸುತ್ತಿದ್ದಾರೆ. ಅವರ ನಡೆ, ನುಡಿ, ದುಡಿಮೆ ಈ ದಿಕ್ಕಿನಲ್ಲೂ ಕೇಂದ್ರೀಕೃತವಾಗಿವೆ.

• ವೈ. ಗ. ಜಗದೀಶ್

ವಿಜಯೇಂದ್ರ ರಂಗಪ್ರವೇಶಕ್ಕೆ ಬಿಎಸ್‌ವೈ ಪಣ

ಬಿಜೆಪಿಯನ್ನು ದಶಕಗಳ ಕಾಲ ತಮ್ಮ ಕೈಯ-ಳತೆಯಲ್ಲಿಟ್ಟುಕೊಂಡಿದ್ದ ಬಿ.ಎಸ್. ಯಡಿಯೂರಪ್ಪ, ತಾವು ಮುಖ್ಯಮಂತ್ರಿಯಾಗಿದ್ದಾಗಲೇ ಪಕ್ಷದವರ ವಿರೋಧ ಕಟ್ಟಿಕೊಂಡು 2009ರ ಲೋಕಸಭೆ ಚುನಾವಣೆಯಲ್ಲಿ ತಮ್ಮ ಮಗ ಬಿ.ವೈ. ರಾಘವೇಂದ್ರ ಅವರನ್ನು ಶಿವಮೊಗ್ಗ ಕ್ಷೇತ್ರದಿಂದ ಗೆಲ್ಲಿಸಿಕೊಂಡು ಬಂದರು. 2018ರಲ್ಲಿ ಬಿಜೆಪಿ ಅಧ್ಯಕ್ಷರಾಗಿದ್ದ ಯಡಿಯೂರಪ್ಪ, ಆ ವಿಧಾನಸಭೆ ಚುನಾವಣೆಯಲ್ಲಿಯೇ ವರುಣಾ ಕ್ಷೇತ್ರದಿಂದ ಯತೀಂದ್ರ

ವಿರುದ್ಧ ತಮ್ಮ ಮತ್ತೊಬ್ಬ ಮಗ ಬಿ.ವೈ. ವಿಜಯೇಂದ್ರ ಅವರನ್ನು ಕಣಕ್ಕೆ ಇಳಿಸಲು ಯತ್ನ ನಡೆಸಿದ್ದರು. ಆದರೆ, ಅದು ಕೈಗೂಡಲಿಲ್ಲ.

2019ರಲ್ಲಿ ಮುಖ್ಯಮಂತ್ರಿಯಾದ ವೇಳೆ ಮಗ ಬಿ.ವೈ. ವಿಜಯೇಂದ್ರ ಅವರನ್ನು ವಿಧಾನಸೌಧದ ಮೆಟ್ಟಿಲು ಹತ್ತಿಸಲು ಹರಸಾಹಸಪಟ್ಟರು. ವಿಜಯೇಂದ್ರ ಅವರಿಗೆ ರಾಜಕೀಯ ದೀಕ್ಷೆ ನೀಡುವ ಕೆಲಸ ಆಗಲೇಬೇಕು ಎಂದು ಅವರ ಮೂವರು ಹೆಣ್ಣುಮಕ್ಕಳು ಒತ್ತಡ ಹಾಕುತ್ತಲೇ ಇದ್ದರು. ಪ್ರತಿ ಉಪ ಚುನಾವಣೆ ನಡೆದಾಗಲೂ ವಿಜಯೇಂದ್ರ ಹೆಸರು ಒಂದಿಲ್ಲೊಂದು ಕ್ಷೇತ್ರದಿಂದ ಕಾಣಿಸಿಕೊಳ್ಳುತ್ತಿತ್ತು. ಆದರೆ, ಅದು ಈಡೇರಲೇ ಇಲ್ಲ. ಮುಖ್ಯಮಂತ್ರಿ ಗಾದಿಯಿಂದ ಇಳಿದ ಬಳಿಕ, ತಾವು ದಶಕಗಳ ಕಾಲ ಪ್ರತಿನಿಧಿಸುತ್ತಿದ್ದ ಶಿಕಾರಿಪುರವನ್ನು ಬಿಟ್ಟುಕೊಡುವುದಾಗಿ ನಿಶ್ಚಯಿಸಿದರು. ಹಾಗೆಂದು ಶಿಕಾರಿಪುರದಲ್ಲೇ ಘೋಷಣೆಯನ್ನೂ ಮಾಡಿದರು. ‘ಯಾರನ್ನು ಕಣಕ್ಕೆ ಇಳಿಸಬೇಕು ಎಂದು ಪಕ್ಷ ನಿರ್ಧಾರ ಮಾಡುತ್ತದೆ; ನೀವು ಘೋಷಿಸುವಂತಿಲ್ಲ’ ಎಂಬ ಫರ್ಮಾನು ವರಿಷ್ಠರಿಂದ ಹೊರಬಿದ್ದ ಬಳಿಕ, ‘ಈ ವಿಷಯದಲ್ಲಿ ಪಕ್ಷದ ತೀರ್ಮಾನವೇ ಅಂತಿಮ’ ಎಂದು ಮಾತು ಬದಲಿಸಿದರು.

ಏತನ್ಮಧ್ಯೆ ವಿಜಯೇಂದ್ರ ಶಿಕಾರಿಪುರವನ್ನೇ ಕೇಂದ್ರೀಕರಿಸಿ ಚುನಾವಣೆಯ ಸಿದ್ಧತೆಯನ್ನೂ ಮಾಡಿಕೊಂಡರು. ವರುಣಾದಿಂದ ಮತ್ತೆ ಸಿದ್ದರಾಮಯ್ಯ ಸ್ಪರ್ಧಿಸುವುದು ಖಚಿತವಾಗುತ್ತಿದ್ದಂತೆ, ಅವರ ಎದುರು ವಿಜಯೇಂದ್ರ ಅವರನ್ನೇ ಕಣಕ್ಕೆ ಇಳಿಸಲಾಗುತ್ತದೆ ಎಂಬ ಸುದ್ದಿಯನ್ನು ಮಾಧ್ಯಮಗಳಿಗೆ ಹರಿಬಿಡಲಾಯಿತು. ವರಿಷ್ಠರ ತೀರ್ಮಾನವೇ ಅಂತಿಮ ಎಂದು ಮೊದಲು ಪ್ರತಿಕ್ರಿಯಿಸಿದ ಯಡಿಯೂರಪ್ಪ, ಪುತ್ರನ ರಾಜಕೀಯ ರಕ್ಷಣೆಗಾಗಿ ಮಾರನೇ ದಿನ ಮತ್ತೆ ರಂಗ ಪ್ರವೇಶಿಸಿದರು. ‘ಶಿಕಾರಿಪುರದಿಂದಲೇ ವಿಜಯೇಂದ್ರ ಸ್ಪರ್ಧಿಸಲಿದ್ದಾನೆ. ಯಾವುದೇ ಕಾರಣಕ್ಕೂ ವರುಣಾಕ್ಕೆ ಹೋಗುವುದಿಲ್ಲ’ ಎಂದು ಸವಾಲಿನ ಧ್ವನಿಯಲ್ಲೇ ಹೇಳಿದರು.

ಚುನಾವಣೆ ಘೋಷಣೆಯಾದ ಮೇಲೆ ಅಂದರೆ ಕೊನೆ ಗಳಿಗೆಯಲ್ಲಿ ವರುಣಾದಿಂದ ಕಣಕ್ಕೆ ಇಳಿದರೆ, ಸಿದ್ದರಾಮಯ್ಯನವರ ಒಂದು ಕಾಲದ ಭದ್ರಕೋಟೆಯಲ್ಲಿ ಗೆಲ್ಲುವುದು ಕಷ್ಟ. ಅದರ ಬದಲು ಗೆದ್ದು, ವಿಧಾನಸಭೆ ಪ್ರವೇಶಿಸಬೇಕಾದರೆ ಶಿಕಾರಿಪುರವೇ ಸುರಕ್ಷಿತ ಕ್ಷೇತ್ರ ಎಂಬುದು ಯಡಿಯೂರಪ್ಪರಿಗೆ ಗೊತ್ತಿಲ್ಲದ ಸಂಗತಿಯಲ್ಲ. ತಮ್ಮ ಕುಟುಂಬವನ್ನು ರಾಜಕೀಯವಾಗಿ ಮುಗಿಸುವ ಸಲುವಾಗಿಯೇ ವಿಜಯೇಂದ್ರನನ್ನು ವರುಣಾಗೆ ದೂಡಿ, ಸೋಲಿಸಲು ವ್ಯವಸ್ಥಿತವಾಗಿ ತಂತ್ರ ಹೂಡಲಾಗಿದೆ ಎಂಬುದರಿತ ಯಡಿಯೂರಪ್ಪ, ಮಗನಿಗಾಗಿ ಮೌನ ಮುರಿದು ಸ್ಪಷ್ಟ ಮಾತುಗಳಲ್ಲಿ ವರಿಷ್ಠರಿಗೆ ಸಂದೇಶ ಕಳುಹಿಸಿದ್ದಾರೆ ಎಂಬ ಮಾತುಗಳು ರಾಜಕೀಯ ಪಡಸಾಲೆಯಲ್ಲಿ ಕೇಳಿಬರುತ್ತಿವೆ. 2019ರಲ್ಲಿ ಬಿಜೆಪಿ ಅಧಿಕಾರ ಹಿಡಿದಾಗಿನಿಂದ ನಡೆದ ಅನೇಕ ಉಪ ಚುನಾವಣೆಯ ಉಸ್ತುವಾರಿಯನ್ನು ವಿಜಯೇಂದ್ರಗೆ ವಹಿಸಲಾಗಿತ್ತು. ಅವುಗಳ ಪೈಕಿ ಕೆಲವು ಕಡೆ ಬಿಜೆಪಿ ಅಭ್ಯರ್ಥಿಗಳು ಗೆದ್ದಿದ್ದರು. ಈ ಹೊತ್ತಿನಲ್ಲಿ, ‘ಗೆಲುವಿನ ತಂತ್ರಗಾರಿಕೆಯಲ್ಲಿ ವಿಜಯೇಂದ್ರ ಚಾಣಕ್ಯ’ ಎಂದು ಅವರ ಆಪ್ತರು ಮಾಧ್ಯಮಗಳ ಮೂಲಕ ಹೊಗಳಿಸಿದ್ದರು. ಇಂತಹ ವಿಶೇಷಣಗಳನ್ನು ಹೊಂದಿದ ವಿಜಯೇಂದ್ರ ವರುಣಾದಲ್ಲಿ ಸೋತರೆ, ಅದೇ ನೆವ ಮುಂದೊಡ್ಡಿ ಅವರ ರಾಜಕೀಯ ಭವಿಷ್ಯವನ್ನೇ ಮಸುಕುಗೊಳಿಸುವ ಹುನ್ನಾರ ನಡೆದಿದೆ ಎಂಬುದು ಸ್ಪಷ್ಟವಾಗುತ್ತಿದ್ದಂತೆ ಯಡಿಯೂರಪ್ಪ, ‘ಶಿಕಾರಿಪುರಕ್ಕೆ ವಿಜಯೇಂದ್ರ’ ಎಂಬ ಹೇಳಿಕೆ ನೀಡಿದರು ಎನ್ನಲಾಗುತ್ತಿದೆ.

ಯತೀಂದ್ರಗಾಗಿ ಎರಡು ಕ್ಷೇತ್ರಕ್ಕೆ ಬೇಡಿಕೆ

ವಿರೋಧ ಪಕ್ಷದ ನಾಯಕರಾಗಿರುವ ಸಿದ್ದರಾಮಯ್ಯ ಪುತ್ರ ವ್ಯಾಮೋಹದ ಕಾರಣಕ್ಕೆ ಹಿಂದಿನ ಬಾರಿಯೇ ತಮ್ಮ ಕ್ಷೇತ್ರ ವರುಣಾವನ್ನು ಯತೀಂದ್ರ ಅವರಿಗೆ ಬಿಟ್ಟುಕೊಟ್ಟರು. ಮುಖ್ಯಮಂತ್ರಿಯಾಗಿ ಚುನಾವಣೆ ಎದುರಿಸಿದ್ದ ಅವರು, ಕ್ಷೇತ್ರವಿಂಗಡಣೆಗೂ ಮುನ್ನ ತಮ್ಮ ಮೂಲ ಕ್ಷೇತ್ರವಾಗಿದ್ದ ಚಾಮುಂಡೇಶ್ವರಿಯನ್ನು ಆಯ್ದುಕೊಂಡರು. ಅಲ್ಲಿ ಗೆಲುವು ಸಲೀಸಲ್ಲ ಎಂಬ ಕಾರಣಕ್ಕೆ, ಪಕ್ಷದಲ್ಲಿನ ತಮ್ಮ ಪ್ರಭಾವ ಬಳಸಿಕೊಂಡು ಬಾದಾಮಿಯನ್ನೂ ತೆಕ್ಕೆಗೆ ತೆಗೆದುಕೊಂಡರು. ಚಾಮುಂಡಿ ಕೋಪಕ್ಕೆ ಬೆದರಿ ಬಾದಾಮಿಗೆ ಓಡಿದ್ದ ಅವರು, ಚಾಮುಂಡೇಶ್ವರಿಯಲ್ಲಿ ಸೋತರು. ಕಡಿಮೆ ಅಂತರದಲ್ಲಿ ಬಾದಾಮಿಯಲ್ಲಿ ಗೆದ್ದರು. ಹೀಗೆ ಎರಡು ಕ್ಷೇತ್ರದಲ್ಲಿ ಸ್ಪರ್ಧಿಸಿದ್ದು ಆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮುಳುವಾಯಿತು.

ಈ ಬಾರಿ ಬಾದಾಮಿ ಅಷ್ಟೇನೂ ಸುರಕ್ಷಿತ ಕ್ಷೇತ್ರವಲ್ಲ ಎಂದರಿತ ಅವರು, ಮೊದಲು ಕೋಲಾರವನ್ನು ಆಯ್ದುಕೊಂಡರು. ಅಲ್ಲಿಯ ಗೆಲುವು ಅಷ್ಟು ಸುಲಭವಲ್ಲ ಎಂಬ ವರದಿ ಹೈಕಮಾಂಡ್ ಸೇರಿತು. ಅದಾದ ಬಳಿಕ, ವರಿಷ್ಠರ ಸೂಚನೆ ಮೇರೆಗೆ ತಾವು ಹಿಂದೆ ಗೆದ್ದಿದ್ದ, ಮಗ ಯತೀಂದ್ರ ಪ್ರತಿನಿಧಿಸುವ ವರುಣಾವನ್ನೇ ಆಯ್ದುಕೊಂಡಿದ್ದಾರೆ. ಜತೆಗೆ ಕೋಲಾರದಲ್ಲಿ ಸ್ಪರ್ಧಿಸುವ ಇರಾದೆಯನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಿದ್ದಾರೆ.

ಕೋಲಾರದಲ್ಲಿ ನಿಂತರೆ, ಆ ಜಿಲ್ಲೆ ಮತ್ತು ಪಕ್ಕದ ಚಿಕ್ಕಬಳ್ಳಾಪುರ ಜಿಲ್ಲೆಯ ಹಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಅನುಕೂಲಕಾರಿ ವಾತಾವರಣ ನಿರ್ಮಾಣವಾಗಲಿದೆ ಎಂಬ ಅಭಿಪ್ರಾಯ ಪಕ್ಷದಲ್ಲಿದೆ. ಸಿದ್ದರಾಮಯ್ಯ ಸ್ಪರ್ಧಿಸಿದರೆ ಹೆಚ್ಚು ಕ್ಷೇತ್ರಗಳಲ್ಲಾಗುವ ಗೆಲುವು ಪಕ್ಷವನ್ನು ಅಧಿಕಾರದ ದಡ ಮುಟ್ಟಿಸಬಹುದು ಎಂಬ ಉದ್ದೇಶದಿಂದ, ಕೋಲಾರ ದಕ್ಕುವ ಸಾಧ್ಯತೆಯೂ ಇದೆ.

ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಗೆದ್ದರೆ ವರುಣಾವನ್ನು ತಮ್ಮ ಮಗ ಯತೀಂದ್ರಗೆ ಬಿಟ್ಟುಕೊಡುವ ಜತೆಗೆ, ಅವರ ಭವಿಷ್ಯವನ್ನು ಭದ್ರ ಪಡಿಸಿಕೊಳ್ಳುವುದು ಇದರ ಹಿಂದಿನ ಲೆಕ್ಕಾಚಾರ ಎಂಬ ಚರ್ಚೆಗಳು ಪಕ್ಷದೊಳಗೆ ನಡೆಯುತ್ತಿವೆ. ಇದೇ ಕಾರಣಕ್ಕೆ ಎರಡು ಕ್ಷೇತ್ರಕ್ಕೆ ಸಿದ್ದರಾಮಯ್ಯ ಬೇಡಿಕೆ ಮಂಡಿಸಿದ್ದಾರೆ ಎಂದೂ ಹೇಳಲಾಗುತ್ತಿದೆ.

ನಿಖಿಲ್‌ಗಾಗಿ ಕುಮಾರಸ್ವಾಮಿ ‘ತ್ಯಾಗ’

ರಾಮನಗರ ಮತ್ತು ಚನ್ನಪಟ್ಟಣ ತಮ್ಮ ಎರಡು ಕಣ್ಣುಗಳು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳುವುದುಂಟು. 2018ರಲ್ಲಿ ಎರಡೂ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಗೆದ್ದಿದ್ದ ಕುಮಾರಸ್ವಾಮಿ, ರಾಮನಗರ ಕ್ಷೇತ್ರಕ್ಕೆ ರಾಜೀನಾಮೆ ಕೊಟ್ಟಿದ್ದರು. ಬಳಿಕ ಅಲ್ಲಿ ತಮ್ಮ ಪತ್ನಿ ಅನಿತಾ ಅವರನ್ನು ಕಣಕ್ಕೆ ಇಳಿಸಿ ಗೆಲ್ಲಿಸಿಕೊಂಡಿದ್ದರು. ಪತ್ನಿಗೆ ನೀಡಿದ್ದ ಕಣ್ಣನ್ನು ಈ ಬಾರಿ ಮಗನಿಗೆ ನೀಡಿದ್ದಾರೆ.

ಸಿನಿಮಾ ನಟರೂ ಆಗಿರುವ ನಿಖಿಲ್‌ಗೆ ರಾಜಕೀಯ ಭವಿಷ್ಯ ಕಲ್ಪಿಸುವುದು ಅವರ ಕುಟುಂಬದೊಳಗಿನ ಒತ್ತಡ. ಹೀಗಾಗಿಯೇ, ಅವರು ಮುಖ್ಯಮಂತ್ರಿಯಾಗಿದ್ದಾಗ ನಡೆದ ಲೋಕಸಭೆ ಚುನಾವಣೆಯಲ್ಲಿ ತಮಗೆ ಮನಸ್ಸು ಇಲ್ಲದೇ ಇದ್ದರೂ ನಿಖಿಲ್ ಅವರನ್ನು ಮಂಡ್ಯದಿಂದ ಕಣಕ್ಕೆ ಇಳಿಸಿದ್ದರು ಕುಮಾರಸ್ವಾಮಿ. ಆದರೆ, ನಿಖಿಲ್ ಗೆಲುವಿಗೆ ಸ್ವಪಕ್ಷೀಯ ನಾಯಕರೇ ಮೊದಲ ಅಡ್ಡಿಯಾಗಿದ್ದರಿಂದಾಗಿ ಗೆಲುವು ಸಾಧ್ಯವೇ ಆಗಲಿಲ್ಲ. ಈಗ ಮತ್ತೆ, ರಾಮನಗರದಿಂದ ಸ್ಪರ್ಧಿಸಲಿರುವ ನಿಖಿಲ್, ತಮ್ಮ ಅದೃಷ್ಟವನ್ನು ಪರೀಕ್ಷೆಗೆ ಒಡ್ಡಲಿದ್ದಾರೆ. ತಾವು ಸತತವಾಗಿ ಪ್ರತಿನಿಧಿಸಿದ ಕ್ಷೇತ್ರದಿಂದ ಪುತ್ರನಿಗೆ ಅದೃಷ್ಟ ಲಕ್ಷ್ಮಿ ಒಲಿಯಬಹುದೆಂಬ ಲೆಕ್ಕಾಚಾರ ಕುಮಾರಸ್ವಾಮಿ ಅವರದ್ದಾಗಿದೆ. ಇದೇ ಕಾರಣಕ್ಕೆ ಮಗನಿಗಾಗಿ ಕ್ಷೇತ್ರ ತ್ಯಾಗವನ್ನು ಮಾಡಿದ್ದಾರೆ ಹಾಲಿ ಶಾಸಕಿ ಅನಿತಾ ಕುಮಾರಸ್ವಾಮಿ.

ಹಾಸನದಲ್ಲಿ ಭವಾನಿ ರೇವಣ್ಣ ಅವರಿಗೆ ಟಿಕೆಟ್ ಕೊಡಲು ಸಾಧ್ಯವೇ ಇಲ್ಲ ಎಂದು ಹಟಕ್ಕೆ ಬಿದ್ದಿರುವ ಕುಮಾರಸ್ವಾಮಿ, ತಮ್ಮ ಪುತ್ರ ನಿಖಿಲ್‌ಗೆ ಟಿಕೆಟ್ ಘೋಷಣೆ ಮಾಡಿರುವುದು ಎಷ್ಟು ಸರಿ ಎಂದು ರೇವಣ್ಣ ಕುಟುಂಬ ಪ್ರಶ್ನಿಸುತ್ತಿದೆ. ರೇವಣ್ಣ ಶಾಸಕ, ಅವರ ಮಗ ಪ್ರಜ್ವಲ್ ಸಂಸದ, ಮತ್ತೊಬ್ಬ ಮಗ ಸೂರಜ್ ವಿಧಾನ ಪರಿಷತ್ತಿನ ಸದಸ್ಯ. ಹಾಸನದಲ್ಲೂ ಟಿಕೆಟ್ ಕೊಟ್ಟರೆ, ಇಡೀ ಕುಟುಂಬವೇ ರಾಜಕೀಯಕ್ಕೆ ಬಂದಂತಾಗುತ್ತದೆ. ಲೋಕಸಭೆ ಚುನಾವಣೆಯಲ್ಲಿ ಮಂಡ್ಯ, ತುಮಕೂರಿನಲ್ಲಿ ಕುಟುಂಬ ರಾಜಕಾರಣವೇ ಮುಳುವಾದಂತೆ, ಹಾಸನ ಮಾತ್ರವಲ್ಲ; ಉಳಿದ ಕ್ಷೇತ್ರಗಳಲ್ಲೂ ಇದು ಪರಿಣಾಮ ಬೀರಬಹುದು ಎಂಬುದು ಕುಮಾರಸ್ವಾಮಿ ತರ್ಕ. ಇದರ ಜತೆಗೆ, ಒಂದು ವೇಳೆ ಭವಾನಿ ಗೆದ್ದರೆ ಹಾಸನ ರಾಜಕೀಯ, ತಮ್ಮ ಕೈತಪ್ಪಿ ಪೂರ್ಣ ಪ್ರಮಾಣದಲ್ಲಿ ಅವರ ಹಿಡಿತಕ್ಕೆ ಸಿಲುಕಿಬಿಡುತ್ತದೆ ಎಂಬ ಆತಂಕವೂ ಕುಮಾರಸ್ವಾಮಿಯವರನ್ನು ಕಾಡುತ್ತಿದೆ ಎಂದೂ ಹೇಳಲಾಗುತ್ತಿದೆ.

ಪ್ರಜಾ ಪತ್ರ

ಸಂಕಷ್ಟಕ್ಕೆ ಸ್ಪಂದಿಸುವ ಜನನಾಯಕ ಬೇಕು

ಪ್ರಜೆಗಳ ಅಭಿವೃದ್ಧಿಯತ್ತ ಗಮನಹರಿಸುವ ಮತ್ತು ಬೇಡಿಕೆಗಳನ್ನು ಪೂರೈಸಿ ಅವರ ಸಂಕಷ್ಟಗಳಿಗೆ ಸ್ಪಂದಿಸುವ ಜನನಾಯಕ ಬೇಕು. ಪ್ರಜಾಪ್ರಭುತ್ವದ ಏಳಿಗೆಗೆ ವಿವಿಧ ಉದ್ದೇಶಗಳನಿಟ್ಟುಕೊಂಡು ಕೆಲಸ ಮಾಡಬೇಕು. ಒಂದು ಮರಕ್ಕೆ ಬೇರು ಎಷ್ಟು ಮುಖ್ಯವೋ ಹಾಗೆಯೇ ಒಂದು ದೇಶದ ಅಭಿವೃದ್ಧಿಗೆ ಒಬ್ಬ ರಾಜಕಾರಣಿಯೂ ಅಷ್ಟೇ ಮುಖ್ಯ. ಯುವಸಮೂಹ ಉದ್ಯೋಗವಿಲ್ಲದೇ ಆತ್ಮವಿಶ್ವಾಸ ಕಳೆದುಕೊಂಡಿದೆ. ಇದಕ್ಕೆ ಪೂರಕವಾಗಿ ಪರಿಹಾರ ಕೊಡುವ ಸರ್ಕಾರ ಬೇಕು. ಯೋಜನೆಗಳನ್ನು ರೂಪಿಸುವುದಷ್ಟೇ ಅಲ್ಲದೆ ಅದನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಗಮನಹರಿಸಬೇಕು.

ಶ್ರೀನಿಧಿ ಕೆ., ದಾವಣಗೆರೆ

ಹಗರಣಗಳು ನಿಲ್ಲಬೇಕು

ಪ್ರಣಾಳಿಕೆಯಲ್ಲಿ ಹೇಳಿದಂತೆ ರಾಜಕೀಯ ಪಕ್ಷಗಳು ಅಭಿವೃದ್ಧಿ ಕಾರ್ಯ ಮಾಡುವುದಿಲ್ಲ. ಸರ್ಕಾರಿ ನೌಕರಿಯ ಸಣ್ಣ ಪುಟ್ಟ ಹುದ್ದೆಯಿಂದ– ಉನ್ನತ ಹುದ್ದೆಗಳ ನೇಮಕಾತಿಯಲ್ಲಿ ನಡೆಯುವ ಅಕ್ರಮಗಳು ನಿಲ್ಲಬೇಕು. ಗ್ರಾಮೀಣ ಭಾಗದಲ್ಲಿ ದೂಳು ತಿನ್ನುತ್ತಿರುವ ಗ್ರಂಥಾಲಯ, ಸೋರುತ್ತಿರುವ ಸರ್ಕಾರಿ ಶಾಲೆ, ಬಯಲು ಶೌಚ, ಅಕ್ರಮ ಮದ್ಯ– ಪೆಟ್ರೋಲ್ ಮಾರಾಟ, ಜೂಜಾಟ, ಅವೈಜ್ಞಾನಿಕ ಮರಳು ಸಾಗಾಣಿಕೆ ಮುಂತಾದ ಸಮಸ್ಯೆಗಳಿಗೆ ಮತ್ತು ಅಕ್ರಮಗಳಿಗೆ ಮುಕ್ತಿ ಸಿಗಬೇಕು. ಕೃಷಿ ಉತ್ಪನ್ನಗಳಿಗೆ ಸಕಾಲಕ್ಕೆ ಬೆಂಬಲ ಬೆಲೆ ಘೋಷಿಸಿ, ಖರೀದಿ ಕೇಂದ್ರ ತೆರೆಯಬೇಕು. ನಕಲಿ ಬೀಜ– ಕ್ರಿಮಿನಾಶಕಗಳ ಹಾವಳಿ ತಪ್ಪಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಜನನಾಯಕ ಜನ ಸಾಮಾನ್ಯರ ಮನ ಅರಿತುಕೊಂಡು ಕಾರ್ಯನಿರ್ವಹಿಸಬೇಕು. ಸುಮ್ಮನೆ ಕಾರಲ್ಲಿ ಬಂದು ಕೈ ಬಿಸಿ ಹೋಗುವಂತಿರಬಾರದು.

ಬಸನಗೌಡ ಮಂಜುನಾಥಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಮಾತಿನೇಟು

ಕಾಂಗ್ರೆಸ್ ಪಕ್ಷಕ್ಕೆ ಗುಂಡಿಗೆಯೂ ಇದೆ, ಗಟ್ಟಿತನವೂ ಇದೆ. ಭವಿಷ್ಯದಲ್ಲಿ ಅಭಿವೃದ್ಧಿಗೆ ಬೇಕಾದ ದೃಷ್ಟಿಕೋನವೂ ಇದೆ. ಪರಿಸರ ಸಚಿವ ಆನಂದ್ ಸಿಂಗ್ ಗಂಡಸುತನ ಪದ ಬಳಕೆ ಮಾಡಿದ್ದು ಯಾಕೆ ಎನ್ನುವುದನ್ನು ಅವರೇ ಹೇಳಬೇಕು. ಅವರಷ್ಟು ಕೀಳುಮಟ್ಟಕ್ಕೆ ನಾನು ಇಳಿಯುವುದಿಲ್ಲ. ಚುನಾವಣೆಯಲ್ಲಿ ಅವರ ಕ್ಷೇತ್ರದ ಜನ ತಕ್ಕ ಪಾಠ ಕಲಿಸುತ್ತಾರೆ.

ಕೆ. ರಾಘವೇಂದ್ರ ಹಿಟ್ನಾಳ, ಶಾಸಕ

ಗಾಳಿ ಮಾತು

‘ಎರಡು ಕಡೆ (ವರುಣಾ ಮತ್ತು ಕೋಲಾರ) ಸಿದ್ದರಾಮಯ್ಯ ಟಿಕೆಟ್ ಕೇಳುತ್ತಾರೆಂದರೆ, ನಾನೂ ಎರಡು ಕಡೆ (ಕೊರಟಗೆರೆ, ಪುಲಕೇಶಿನಗರ) ಯಾಕೆ ಕೇಳಬಾರದು?’ ಎಂದು ಹಿರಿಯ ಕಾಂಗ್ರೆಸ್ಸಿಗ, ಶಾಸಕ ಜಿ. ಪರಮೇಶ್ವರ ಹೊರಟಿದ್ದಾರಂತೆ...

ಕಾಂಗ್ರೆಸ್ ಪ್ರಕಟಿಸಿದ ಮೊದಲ ಪಟ್ಟಿಯಲ್ಲಿ ವರುಣಾ ಕ್ಷೇತ್ರದಿಂದ ಸಿದ್ದರಾಮಯ್ಯ ಅವರಿಗೆ ಟಿಕೆಟ್ ಘೋಷಿಸಲಾಗಿದೆ. ಆದರೆ, ಕೋಲಾರದಿಂದಲೂ ಕಣಕ್ಕಿಳಿಯಲು ಅವರು ನಿರ್ಧರಿಸಿದ್ದಾರೆ. ಆ ಬೆನ್ನಲ್ಲೆ, ಎಚ್ಚೆತ್ತುಕೊಂಡಿರುವ ಪರಮೇಶ್ವರ ಅವರು ಎರಡು ಟಿಕೆಟ್ ಕೇಳಲು ಮುಂದಾಗಿದ್ದಾರೆ ಎಂಬ ಮಾತುಗಳು ಹರಿದಾಡಿವೆ.

‘ಪಕ್ಷದ ಬೇರೆ ಯಾವುದೇ ನಾಯಕರಿಗೆ ಎರಡು ಕ್ಷೇತ್ರಗಳಲ್ಲಿ ಕಣಕ್ಕಿಳಿಯುವ ಅವಕಾಶ ಇಲ್ಲ. ಹೀಗಿರುವಾಗ, ಸಿದ್ದರಾಮಯ್ಯ ಅವರಿಗೆ ಮಾತ್ರ ಎರಡು ಕ್ಷೇತ್ರಗಳ ವಿಶೇಷ ಪರಿಗಣನೆ ಯಾಕೆ?’ ಎಂಬ ಚರ್ಚೆ ಕೆಪಿಸಿಸಿ ಕಚೇರಿಯಲ್ಲೇ ಶುರುವಾಗಿದೆ.

ಮಾರ್ಚ್ 30ರಂದು ನಡೆದ ಕಾಂಗ್ರೆಸ್ ‘ಸ್ಕ್ರೀನಿಂಗ್ ಸಮಿತಿ’ ಸಭೆಯಲ್ಲಿ ಈ ಪ್ರಸ್ತಾವ ಆಗಿದೆ. ಕೊರಟಗೆರೆ ಕ್ಷೇತ್ರದ ಜೊತೆಗೆ, ಪುಲಕೇಶಿನಗರದಿಂದಲೂ ಟಿಕೆಟ್ ನೀಡುವಂತೆ ಪರಮೇಶ್ವರ ಬೇಡಿಕೆ ಇಟ್ಟಿದ್ದಾರೆ. ‘ಸ್ಕ್ರೀನಿಂಗ್ ಸಮಿತಿ’ಯ ಸಭೆಯಲ್ಲಿ ಪ್ರಸ್ತಾವವಾದ ಈ ವಿಚಾರ ವರಿಷ್ಠರ ಅಂಗಳಕ್ಕೂ ತಲುಪಿದೆಯಂತೆ.

ಅಂದಹಾಗೆ ಪರಮೇಶ್ವರ ಅವರ ಈ ಬೇಡಿಕೆ, ಇನ್ನೊಂದು ಕ್ಷೇತ್ರದಿಂದ ಟಿಕೆಟ್ ಪಡೆಯಲು ತಂತ್ರವೋ? ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಮುಂದಾಗಿರುವ ಸಿದ್ದರಾಮಯ್ಯ ಅವರ ಬೇಡಿಕೆಗೆ ಅಡ್ಡಗಾಲಿಡಲು ಪ್ರತಿತಂತ್ರವೋ? ಎಂಬ ಮಾತು ಕೆಪಿಸಿಸಿ ಕಚೇರಿ ಅಂಗಳದಲ್ಲಿ ರಿಂಗಣಿಸುತ್ತಿದೆ.

ಮತ ಆಮಿಷ, ಸಿಕ್ಕಿದ್ದೇನು?

₹ 30 ಲಕ್ಷ ನಗದು
ಬೆಂಗಳೂರಿನ ಅಮೃತಹಳ್ಳಿ

₹ 20 ಲಕ್ಷ ನಗದು
ದೇವದುರ್ಗ ತಾಲ್ಲೂಕಿನ ಗಬ್ಬೂರು ಚೆಕ್ ಪೋಸ್ಟ್

36,045 ಲೀ ಮದ್ಯ ತಿ. ನರಸೀಪುರ

ಜಿಗಿ ನೆಗೆದಾಟ



ಆಯನೂರು ಮಂಜುನಾಥ

ಬಿಜೆಪಿ → ಜನತಾ ಪಕ್ಷ → ಕಾಂಗ್ರೆಸ್ → ಬಿಜೆಪಿ → ?



ಎನ್.ವೈ.ಗೋಪಾಲಕೃಷ್ಣ

ಕಾಂಗ್ರೆಸ್ → ಬಿಜೆಪಿ → ಕಾಂಗ್ರೆಸ್

ಶಶಿಭೂಷಣ ಹೆಗಡೆ

ಜೆಡಿಎಸ್ → ಬಿಜೆಪಿ

ಸೆಲೆಬ್ರಿಟಿ ಮಾತು

ನೈತಿಕ ಅಧಿಕಾರಕ್ಕಾಗಿ ಮತದಾನ ಮಾಡಿ

ಅನು ಪ್ರಭಾಕರ್ ಮುಖರ್ಜಿ, ಚಿತ್ರನಟಿ

ಮತ್ತೆ ಚುನಾವಣೆ ಬಂದಿದೆ. ನಮ್ಮ ಜವಾಬ್ದಾರಿಯನ್ನು ನೆನಪಿಸಿಕೊಂಡು ನಿರ್ವಹಿಸುವ ಸಮಯವಿದು. ಅನೇಕರಿಗೆ ಈ ವರ್ಷ 18 ತುಂಬಿ ಮೊದಲ ಬಾರಿಗೆ ಮತದಾನ ಮಾಡುವ ಸಂದರ್ಭವಿದೆ. ನಿಮ್ಮ ಮತದಾರರ ಚೀಟಿ ಸಿದ್ಧವಿಟ್ಟುಕೊಳ್ಳಿ. ಚುನಾವಣೆಯ ದಿನ ತಪ್ಪದೆ ಮತದಾನ ಮಾಡಿ. ನಾವು ಮತದಾನ ಮಾಡಿದರೆ ಮಾತ್ರ, ಆಯ್ಕೆ ಮಾಡಿದ ನಾಯಕರನ್ನು ಪ್ರಶ್ನಿಸುವ ನೈತಿಕ ಅಧಿಕಾರ ಇರುತ್ತದೆ. ಮತದಾನದ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸಿ. ನಾನು ಮತದಾನ ಮಾಡುತ್ತೇನೆ. ನೀವೂ ಮತದಾನ ಮಾಡಿ.

ಮತದಾನ ಬಹಿಷ್ಕರಿಸಿ ಮನೆ ಮುಂದೆ ಫಲಕ

ಮಡಿಕೇರಿ: ಮಡಿಕೇರಿ ತಾಲ್ಲೂಕಿನ ಪಾಲೆಮಾಡುವಿನ 260 ಕುಟುಂಬಗಳು ನಿವೇಶನದ ಹಕ್ಕುಪತ್ರಕ್ಕೆ ಆಗ್ರಹಿಸಿ ಚುನಾವಣೆ ಬಹಿಷ್ಕರಿಸಿವೆ. ಈ ಕುರಿತ ಫಲಕಗಳನ್ನು ಮನೆ ಮುಂದೆ ಹಾಕಿರುವ ಅವರು ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಅವರೇ ಸ್ಥಳಕ್ಕೆ ಬಂದು ಸಮಸ್ಯೆ ಬಗೆಹರಿಸಬೇಕು ಎಂದು ಪಟ್ಟು ಹಿಡಿದಿದ್ದಾರೆ. ಜತೆಗೆ, ಅಹೋರಾತ್ರಿ ಪ್ರತಿಭಟನೆಯನ್ನೂ ಆರಂಭಿಸಿದ್ದಾರೆ.

ನಿವಾಸಿ ಪಿ.ಎ. ಧನಂಜಯ ಮಾತನಾಡಿ, ‘2005ರಲ್ಲಿ ಜಿಲ್ಲೆಯ ಲೈನ್‌ಮನೆಗಳಿಂದ ಬಂದ ಜನರು ಇಲ್ಲಿ ಟೆಂಟ್ ಹಾಕಿಕೊಂಡು ವಾಸವಿದ್ದಾರೆ. ಇದು ಸರ್ಕಾರಿ ಜಾಗವಾಗಿದ್ದು, ಸದ್ಯ 10x10 ಅಳತೆಗಷ್ಟೇ ಹಕ್ಕುಪತ್ರ ನೀಡಲಾಗಿದೆ. ಇಷ್ಟು ಚಿಕ್ಕ ಜಾಗದಲ್ಲಿ ಮನೆ ನಿರ್ಮಿಸಲು ಸಾಧ್ಯವಿಲ್ಲ. ಕನಿಷ್ಠ 40x50 ಅಳತೆ ನಿವೇಶನದ ಹಕ್ಕುಪತ್ರ ನೀಡಬೇಕು’ ಎಂದು ಒತ್ತಾಯಿಸಿದರು.

ಕುಶಾಲನಗರ ತಾಲ್ಲೂಕಿನ ಗಂಧದಕೋಟೆಯ ಬಡಾವಣೆಯಲ್ಲಿ ಮೂಲಸೌಕರ್ಯ ಕಲ್ಪಿಸಲು ಆಗ್ರಹಿಸಿ 25 ಮಂದಿ ಚುನಾವಣೆ ಬಹಿಷ್ಕರಿಸಿದ್ದಾರೆ. ಸೋಮವಾರಪೇಟೆ ತಾಲ್ಲೂಕಿನ ದೊಡ್ಡಮಳ್ತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶನಿವಾರಸಂತೆಯಿಂದ ಕೊಣನೂರು ರಾಜ್ಯ ಹೆದ್ದಾರಿ ಸಂಪರ್ಕಿಸುವ ರಸ್ತೆ ದುರಸ್ತಿಗೆ ಆಗ್ರಹಿಸಿದ್ದಾರೆ.

ಪ್ರಚಾರದ ಭರಾಟೆ..

ವಿಧಾನಸಭೆ ಚುನಾವಣೆ ಅಂಗವಾಗಿ ದಾವಣಗೆರೆಯ ಶಾಮನೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್ ಮಲ್ಲಿಕಾರ್ಜುನ ಅವರು ನಡೆಸಿದ ಮೊದಲ ದಿನದ ಪ್ರಚಾರದ ವೇಳೆ ನೆತ್ತಿ ಸುಡುತ್ತಿದ್ದ ಬಿಸಿಲಿನ ನಡುವೆ ಮಹಿಳೆಯೊಬ್ಬರು ತನ್ನ ಮಗುವಿಗೆ ಪಕ್ಷದ ಟೋಪಿ ಹಾಕಿ ರಕ್ಷಿಸಿದರು

ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ್

ಬಿಜೆಪಿ ಸಂಸದರಿಗೆ ಟಿಕೆಟ್ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ಕೆಲ ಸಂಸದರು ವಿಧಾನಸಭೆ ಚುನಾವಣೆ ಮೂಲಕ ರಾಜ್ಯ ರಾಜಕೀಯ ಪ್ರವೇಶಿಸಲು ಬಯಸಿದ್ದಾರೆ. ಆದರೆ, ಯಾವುದೇ ಸಂಸದರಿಗೂ ಟಿಕೆಟ್ ನೀಡುವ ಸಾಧ್ಯತೆ ಇಲ್ಲ.

ಬಿಜೆಪಿಯ ಜಿಲ್ಲಾ ಕೋರ್ ಕಮಿಟಿ ಸಭೆಯ ವೇಳೆ ಈ ಅಂಶವನ್ನು ಸ್ಪಷ್ಟಪಡಿಸಲಾಗಿದ್ದು, ಇದರಿಂದ ವಿಧಾನಸಭೆಯನ್ನು ಪ್ರವೇಶಿಸಬೇಕೆಂಬ ಸಂಸದರಿಗೆ ಹಿನ್ನಡೆ ಆಗಿದೆ ಎಂದು ವ್ಯಾಖ್ಯಾನಿಸಲಾಗಿದೆ.

ಸಂಸದರಾದ ಸಂಗಣ್ಣ ಕರಡಿ, ಶಿವಕುಮಾರ್ ಉದಾಸಿ ಸೇರಿದಂತೆ ಕೆಲವರು ರಾಜ್ಯ ರಾಜಕೀಯ ಪ್ರವೇಶಿಸುವ ಬಯಕೆ ಹೊಂದಿದ್ದರು. ಟಿಕೆಟ್‌ಗೆ ಪ್ರಯತ್ನ ನಡೆಸಿದ್ದರು. ಆದರೆ, ಇವರಿಗೆ ಮಣೆ ಹಾಕುವ ಸೂಚನೆಯನ್ನು ಬಿಜೆಪಿ ವರಿಷ್ಠರು ನೀಡಿಲ್ಲ ಎಂದು ಮೂಲಗಳು ಹೇಳಿವೆ.

ಬಿಜೆಪಿ ಮೂಲಗಳ ಪ್ರಕಾರ, ‘ಸಂಸದರಿಗೆ ವಿಧಾನಸಭೆಗೆ ಸ್ಪರ್ಧಿಸಲು ಟಿಕೆಟ್ ನೀಡುವುದು ಬೇಡ. ಒಂದಿಬ್ಬರಿಗೆ ನೀಡಿದರೆ, ಉಳಿದವರು ಅದೇ ಹಾದಿ ಹಿಡಿಯಬಹುದು. ಅಭ್ಯರ್ಥಿ ಆಯ್ಕೆಗೆ ಕಗ್ಗಂಟು ಆಗುವುದಲ್ಲದೇ, ಮುಂದೆ ಲೋಕಸಭೆಗೆ ಸಮರ್ಥ ಅಭ್ಯರ್ಥಿಗಳ ಕೊರತೆಯೂ ಕಾಡಬಹುದು’.

ಹಲವು ಶಾಸಕರ ಬಗ್ಗೆ ಅತೃಪ್ತಿ: ಹಾಲಿ ಶಾಸಕರಲ್ಲಿ ಬಹುತೇಕರ ಬಗ್ಗೆ ಜಿಲ್ಲಾ ಕೋರ್ ಕಮಿಟಿ ಸಭೆಯಲ್ಲಿ ಪದಾಧಿಕಾರಿಗಳು ಅತೃಪ್ತಿ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ಹೇಳಿವೆ.

‘ಶಾಸಕರಾಗಿ ಆಯ್ಕೆ ಆದ ಬಳಿಕ ವರಸೆ ಬದಲಾಗುತ್ತದೆ. ಕಾರ್ಯಕರ್ತರನ್ನು ಹತ್ತಿರ ಬಿಟ್ಟುಕೊಳ್ಳುವುದಿಲ್ಲ. ತಮ್ಮ ಬಂಧುಗಳು, ಜಾತಿ ಜನರ ಜತೆ ಮಾತ್ರ ಒಡನಾಟ ಹೊಂದಿರುತ್ತಾರೆ. ಇಂತಹವರ ಪರ ಏಕೆ ಕೆಲಸ ಮಾಡಬೇಕು ಎಂಬ ಪ್ರಶ್ನೆಯನ್ನು ಕೇಳಿದ್ದಾರೆ’ ಎಂದು ಹೇಳಲಾಗಿದೆ.

ಹಲವು ಪ್ರಶ್ನೆ ಹುಟ್ಟುಹಾಕಿದ ಹಾಲಾಡಿ ನಡೆ

• ಬಾಲಚಂದ್ರ ಎಚ್.

ಉಡುಪಿ: ಕುಂದಾಪುರ ಬಿಜೆಪಿ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಅವರು ಏಕಾಏಕಿ ಚುನಾವಣಾ ಕಣದಿಂದ ಹಿಂದೆ ಸರಿದಿರುವುದು ರಾಜಕೀಯ ವಲಯದಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಹಾಲಾಡಿ ಅವರದ್ದು ಸ್ವಯಂಪ್ರೇರಿತ ನಿರ್ಧಾರವೇ ಅಥವಾ ರಾಜಕೀಯ ಒತ್ತಡವೇ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ.

ಕುಂದಾಪುರ ವಿಧಾನಸಭಾ ಕ್ಷೇತ್ರದಿಂದ 5 ಬಾರಿ ಶಾಸಕರಾಗಿರುವ ಹಾಲಾಡಿ ಶ್ರೀನಿವಾಸ ಶೆಟ್ಟಿ ಸಜ್ಜನ ರಾಜಕಾರಣಿ ಎಂದು ಗುರುತಿಸಿಕೊಂಡವರು. ಅಭಿಮಾನಿಗಳಿಂದ ‘ಕುಂದಾಪುರದ ವಾಜಪೇಯಿ’ ಎಂದೇ ಪ್ರೀತಿಯಿಂದ ಕರೆಸಿಕೊಂಡವರು. ರಾಜಕೀಯ ಲೆಕ್ಕಾಚಾರಗಳನ್ನೆಲ್ಲ ತಲೆಕೆಳಗು ಮಾಡಿ, ಆಡಳಿತ ವಿರೋಧಿ ಅಲೆಯನ್ನೂ ಮೀರಿ ಪ್ರತಿ ವಿಧಾನಸಭಾ ಚುನಾವಣೆಯಲ್ಲೂ ಮತಗಳಿಕೆ ಪ್ರಮಾಣವನ್ನು ಹೆಚ್ಚಿಸಿಕೊಂಡು ಬಂದಿರುವ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ.

ಒಮ್ಮೆಯೂ ಸೋಲು ಕಾಣದ, ಐದು ಬಾರಿ ಶಾಸಕರಾದರೂ ಸಚಿವ ಸ್ಥಾನಕ್ಕೆ ಹಪಹಪಿಸದ

ಹಾಲಾಡಿ ಶ್ರೀನಿವಾಸ ಶೆಟ್ಟಿ

ಹಾಲಾಡಿ ಶ್ರೀನಿವಾಸ ಶೆಟ್ಟಿ ಅವರ ದಿಢೀರ್ ನಿರ್ಧಾರ ಅಭಿಮಾನಿಗಳಲ್ಲಿ, ಕಾರ್ಯಕರ್ತರಲ್ಲಿ ತೀವ್ರ ನೋವು ಹಾಗೂ ಅಸಮಾಧಾನ ಉಂಟುಮಾಡಿದೆ. ಶಿಷ್ಯರೊಬ್ಬರಿಗೆ ಗಟ್ಟಿಯಾದ ರಾಜಕೀಯ ನೆಲೆ ಕಲ್ಪಿಸಲು ಕ್ಷೇತ್ರ ಬಿಟ್ಟುಕೊಟ್ಟಿದ್ದಾರಾ ಅಥವಾ ಒತ್ತಡಕ್ಕೆ ಮಣಿದು ನಿರ್ಧಾರ ತೆಗೆದುಕೊಂಡರಾ ಎಂಬ ಚರ್ಚೆಗಳು ಮುನ್ನಲೆಗೆ ಬಂದಿದೆ. ಹಾಲಾಡಿ ಚುನಾವಣೆಯಿಂದ ಸ್ಪರ್ಧಿಸದಿರಲು ಇದುವರೆಗೂ ಸ್ಪಷ್ಟವಾದ ಕಾರಣಗಳಂತೂ ಸಿಕ್ಕಿಲ್ಲ.

ರಾಜಕೀಯ ಹಾದಿ: ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಕುಂದಾಪುರ ಕ್ಷೇತ್ರದಲ್ಲಿ ಬಿಜೆಪಿಯ ಕಮಲ ಅರಳಲು ಪ್ರಮುಖ ಪಾತ್ರ ವಹಿಸಿದವರು ಹಾಲಾಡಿ. 1999ರ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಕಾಂಗ್ರೆಸ್‌ನ ಪ್ರಬಲ ಪ್ರತಿಸ್ಪರ್ಧಿಯಾಗಿದ್ದ ಕೆ.ಪ್ರತಾಪ್‌ಚಂದ್ರ ಶೆಟ್ಟಿ ಅವರನ್ನು 1,021 ಮತಗಳಿಂದ ಮಣಿಸಿದರು.

2004ರ ಚುನಾವಣೆಯಲ್ಲೂ ಬಿಜೆಪಿಯಿಂದ ಕಣಕ್ಕಿಳಿದು ಕಾಂಗ್ರೆಸ್‌ನ ಅಶೋಕ್ ಕುಮಾರ್ ಹೆಗ್ಡೆ ವಿರುದ್ಧ 19,665 ಮತಗಳ ಅಂತರದ ಗೆಲುವು ಪಡೆದರು. 2008ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಕೆ.ಜಯಪ್ರಕಾಶ್ ಹೆಗ್ಡೆ ಅವರನ್ನು 25,083 ಮತಗಳ ಅಂತರದಿಂದ ಪರಾಭವಗೊಳಿಸಿದ್ದರು.

ಸಚಿವ ಸ್ಥಾನ ನೀಡುವುದಾಗಿ ಬೆಂಗಳೂರಿಗೆ ಕರೆಸಿಕೊಂಡು ಸಚಿವ ಸ್ಥಾನ ಕೊಡದೆ ವಾಪಸ್ ಕಳಿಸಿದ ಬಿಜೆಪಿ ನಾಯಕರಿಗೆ ಸೆಡ್ಡುಹೊಡೆದು 2013ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಹಾಲಾಡಿ ಅವರು ಕಾಂಗ್ರೆಸ್‌ನ ಮಲ್ಯಾಡಿ ಶಿವರಾಮ ಶೆಟ್ಟಿ ಅವರಿಗೆ 40,611 ಮತಗಳಿಂದ ಸೋಲುಣಿಸಿದ್ದರು. ಈ ಮೂಲಕ ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷಕ್ಕಿಂತ ವ್ಯಕ್ತಿಯ ವರ್ಚಸ್ಸು ಹೆಚ್ಚು ಎಂಬುದನ್ನು ಸಾಬೀತುಪಡಿಸಿದ್ದರು.

ಬಳಿಕ ಮತ್ತೆ 2018ರಲ್ಲಿ ಬಿಜೆಪಿಯಿಂದ ಕಣಕ್ಕಿಳಿದು ಕಾಂಗ್ರೆಸ್ ಅಭ್ಯರ್ಥಿ ರಾಕೇಶ್ ಮಲ್ಲಿ ವಿರುದ್ಧ 56,405 ಮತಗಳ ಅಂತರದ ಗೆಲವು ಪಡೆದರು. ಹಾಲಾಡಿ ಅವರ ಗೆಲುವಿನ ಹಾದಿಯನ್ನು ಗಮನಿಸಿದರೆ ಪ್ರತಿ ಚುನಾವಣೆಯಲ್ಲೂ ಗೆಲುವಿನ ಅಂತರ ಹಿಗ್ಗುತ್ತಲೇ ಹೋಗಿತ್ತು.

ಕಣದಿಂದ ಹಿಂದೆ ಸರಿದ ಹಾಲಾಡಿ

ಕುಂದಾಪುರ (ಉಡುಪಿ ಜಿಲ್ಲೆ): ಕುಂದಾಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡದಿರಲು ನಿರ್ಧರಿಸಿದ್ದಾರೆ.

ಸೋಮವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಹಾಲಾಡಿ ‘ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸ್ವಇಚ್ಛೆಯಿಂದ ಸ್ಪರ್ಧಿಸದಿರಲು ನಿಶ್ಚಯಿಸಿದ್ದೇನೆ. ಈ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸುವ ಅಭ್ಯರ್ಥಿಗೆ ಮತದಾರರು ಸಹಕಾರ ನೀಡಬೇಕು’ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್‌ಗೆ ಬೆಂಬಲ ಘೋಷಿಸಿದ ಎಚ್. ವಿಶ್ವನಾಥ್ ‘ಭ್ರಷ್ಟ ಸರ್ಕಾರದ ಹುಟ್ಟಿಗೆ ಕಾರಣವಾದ ಬಗ್ಗೆ ಪಶ್ಚಾತ್ತಾಪ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಬಿಜೆಪಿಯ ಭ್ರಷ್ಟ ಸರ್ಕಾರದ ಹುಟ್ಟಿಗೆ ಕಾರಣನಾದೆಯಲ್ಲ ಎಂದು ಅಂತರಾತ್ಮ ತಿವಿಯುತ್ತಿದೆ. ಹೀಗಾಗಿ 2023ರ ಚುನಾವಣೆಯಲ್ಲಿ ನನ್ನ ತಾಯಿಯಂತಿರುವ ಕಾಂಗ್ರೆಸ್ ಪಕ್ಷವನ್ನು ಸ್ನೇಹಿತರೊಂದಿಗೆ ಬೆಂಬಲಿಸಲಿದ್ದೇನೆ’ ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಘೋಷಿಸಿದರು.

ನ್ಯಾಯಾಲಯದ ಬಳಿ ಇರುವ ಗಾಂಧಿ ಪ್ರತಿಮೆ ಮುಂಭಾಗ ಸೋಮವಾರ ಆಯೋಜಿಸಿದ್ದ ಪಶ್ಚಾತ್ತಾಪ ಸತ್ಯಾಗ್ರಹದಲ್ಲಿ ಮಾತನಾಡಿ ‘ಮಂತ್ರಿ ಸ್ಥಾನ ದೊರೆಯದಿದ್ದುದಕ್ಕೆ ಜೆಡಿಎಸ್ ತೊರೆದಿದ್ದೆ ಎಂಬುದು ಸುಳ್ಳು. ಸಮ್ಮಿಶ್ರ ಸರ್ಕಾರದಲ್ಲಿನ ರಾಕ್ಷಸಿ ಪ್ರವೃತ್ತಿ ಕಂಡು, ಅದರಿಂದ ರಾಜ್ಯಕ್ಕೂ ಅನುಕೂಲವಿಲ್ಲವೆಂದು ತಿಳಿದು ಹೊಸ ಸರ್ಕಾರ ರಚನೆಗೆ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದ್ದೆ’ ಎಂದರು.

‘ದೇವೇಗೌಡರಿಂದಾಗಿ ನಾನು ಹುಣಸೂರು ಶಾಸಕನಾದೆ. ಅವರನ್ನು ಮತ್ತು ಡಿ.ದೇವರಾಜ ಅರಸು ಅವರನ್ನು ಸದಾ ಗೌರವಿಸುತ್ತೇನೆ. ಐವತ್ತು ವರ್ಷಗಳ ಸಕ್ರಿಯ ರಾಜಕಾರಣದ ಪೈಕಿ 4 ದಶಕಗಳಿಗಿಂತಲೂ ಹೆಚ್ಚು ಕಾಲ ಕಾಂಗ್ರೆಸ್‌ನಲ್ಲಿದ್ದೆ’ ಎಂದರು.

‘ಕೇಂದ್ರ–ರಾಜ್ಯದಲ್ಲಿ ಒಂದೇ ಪಕ್ಷ ಆಡಳಿತದಲ್ಲಿದ್ದರೆ ಜನರಿಗೆ ಒಳಿತಾಗುತ್ತದೆಂದು ನಂಬಿ ಬಿಜೆಪಿಯ ಡಬಲ್ ಎಂಜಿನ್ ಸರ್ಕಾರವನ್ನು ಬೆಂಬಲಿಸಿದ್ದೆವು. ಆದರೆ, ಕನಸು ನುಚ್ಚು ನೂರಾಯಿತು. ಭ್ರಷ್ಟ ಸರ್ಕಾರಕ್ಕೆ ಸಹಕರಿಸಿದೆವೆಂದು ಅರಿವಾಯಿತು. ಆಗ ಹಣ ಪಡೆದು ಪಕ್ಷಾಂತರ ಮಾಡಿದೆನೆಂದು ಹಲವರು ಆಡಿಕೊಂಡಿದ್ದರು. ಆದರೆ, ಬಿಜೆಪಿ ಕಚೇರಿಯಲ್ಲಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಸಮ್ಮುಖದಲ್ಲಿ, ಯಡಿಯೂರಪ್ಪ ಅವರನ್ನು, ನೀವು ಭ್ರಷ್ಟ ಮುಖ್ಯಮಂತ್ರಿ, ರಾಜೀನಾಮೆ ನೀಡಿ ಕೆಳಗಿಳಿಯಿರಿ ಎಂದಿದ್ದೆ. ಹಣ ಪಡೆದಿದ್ದರೆ ಅವರನ್ನು ಟೀಕಿಸುವ ನೈತಿಕತೆ ಇರುತ್ತಿರಲಿಲ್ಲ’ ಎಂದರು.

‘ನನ್ನ ಹರಿತ ನಾಲಗೆಯನ್ನು ಮೊಂಡು ಮಾಡುವ ಅನೇಕ ಪ್ರಯತ್ನಗಳು ನಡೆದರೂ ನಾನು ಸುಮ್ಮನಾಗಿಲ್ಲ. ಮುಂದೆಯೂ ಅದೇ ನೀತಿಗಳಿಗೆ ಬದ್ಧನಾಗಿರುತ್ತೇನೆ’ ಎಂದರು.

‘ಬಿಜೆಪಿಯಿಂದಾಗಿ ವಿಧಾನ ಪರಿಷತ್ ಸದಸ್ಯನಾಗಿದ್ದೇನೆಂಬ ಮಾತುಗಳಿವೆ. ನಾನು ಸಾಂಸ್ಕೃತಿಕ ಮತ್ತು ಸಾಹಿತ್ಯದ ಕೋಟಾದಡಿ ರಾಜ್ಯಪಾಲರಿಂದ ನಾಮಕರಣಗೊಂಡ ಸದಸ್ಯ ಹಾಗೂ ಯಾವುದೇ ಪಕ್ಷದ ಸಿದ್ಧಾಂತಕ್ಕೆ ಸೇರಿದವನಲ್ಲ ಎಂಬುದನ್ನು ಟೀಕಿಸುವವರು ತಿಳಿಯಬೇಕು’ ಎಂದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ನೀಡಿದ ಸಾಲಕ್ಕಾಗಿ ಬಡ್ಡಿ ಕೊಡುವುದು ಕೃತಜ್ಞತೆಯಿಂದ ನೀಡುವ ಧನವಾಗಿರಬೇಕೆ ವಿನಾ ಬಡಜನರ ರಕ್ತ ಹೀರುವ ಜಿಗಣೆಯಾಗಬಾರದು. –ಶಿವಕುಮಾರ ಸ್ವಾಮೀಜಿ

ಜಾನುವಾರು ಸಾಗಿಸುತ್ತಿದ್ದ ವ್ಯಕ್ತಿ ಕೊಲೆ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಲಿ

ಜಾನುವಾರುಗಳನ್ನು ಸಾಗಿಸುತ್ತಿದ್ದ ಇದ್ರೀಷ್ ಪಾಷ ಎನ್ನುವ ವ್ಯಕ್ತಿಯನ್ನು ಪುಂಡರು ಥಳಿಸಿ ಕೊಂದಿದ್ದಾರೆ ಎನ್ನಲಾದ ಪ್ರಕರಣವು ಕಾನೂನು ಸುವ್ಯವಸ್ಥೆಯನ್ನು ಅಣಕಿಸುವಂತಹದ್ದು ಹಾಗೂ ಧಾರ್ಮಿಕ ಸಾಮರಸ್ಯಕ್ಕೆ ಧಕ್ಕೆ ತರುವಂತಹದ್ದು. ಕನಕಪುರ ತಾಲ್ಲೂಕಿನ ಸಾತನೂರು ಹತ್ತಿರದಲ್ಲಿ ಈ ಕೃತ್ಯ ನಡೆದಿದ್ದು, ಗೋಸಂರಕ್ಷಣೆ ರೀತಿಯ ಭಾವುಕ ವಿಷಯವನ್ನು ಬಳಸಿಕೊಂಡು ನಡೆಸಿರುವ ಹೇಯ ಗೂಂಡಾಗಿರಿ ಖಂಡನೀಯ. ಮದ್ದೂರು ಸಮೀಪದ ತೆಂಡೆಕೆರೆ ಸಂತೆಯಲ್ಲಿ ಜಾನುವಾರುಗಳನ್ನು ಖರೀದಿಸಿ ಒಯ್ಯುವಾಗ ಮಾರ್ಗ ಮಧ್ಯದಲ್ಲಿ ದುಷ್ಕರ್ಮಿಗಳು ಅಡ್ಡಗಟ್ಟಿ ದಾಳಿ ನಡೆಸಿದ್ದಾರೆ. ಸಾವಿಗೀಡಾದ ವ್ಯಕ್ತಿ ಜಾನುವಾರುಗಳ ಖರೀದಿಗೆ ಸಂಬಂಧಿಸಿದ ರಸೀದಿಗಳನ್ನು ತೋರಿಸಿದರೂ ದಾಳಿಕೋರರು ಸುಮ್ಮನಾಗಿಲ್ಲ. ಆರೋಪಿಗಳು ₹ 2 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು ಹಾಗೂ ವಾಹನದಿಂದ ಇಳಿದು ಓಡಿಹೋಗಿ ಪೊದೆಯಲ್ಲಿ ಅವಿತುಕೊಂಡಿದ್ದ ಇದ್ರೀಷ್ ಅವರನ್ನು ಹೊರಗೆ ಎಳೆತಂದು ಹಲ್ಲೆ ನಡೆಸಿದರು ಎಂದು ವರದಿಯಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಅನೇಕ ವದಂತಿಗಳು ಹರಿದಾಡುತ್ತಿವೆ. ಸಮರ್ಪಕ ತನಿಖೆ ನಡೆಯುವ ಮೂಲಕವೇ ಸತ್ಯ ಸಂಗತಿ ಹೊರಬರಬೇಕಾಗಿದೆ. ಇದ್ರೀಷ್ ಪಾಷ ಅವರ ಕೊಲೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಮುಖಂಡ ಪುನೀತ್ ಕೆರೆಹಳ್ಳಿ ವಿರುದ್ಧ ಪ್ರಕರಣ ದಾಖಲಾಗಿದೆ. ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು ಪೊಲೀಸರ ಕೆಲಸ. ಚುನಾವಣೆ ಸಂದರ್ಭದಲ್ಲಿ ನಡೆದಿರುವ ಈ ಕೃತ್ಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇಂಥ ಕೃತ್ಯಗಳ ಲಾಭ ಪಡೆದು ಕೋಮುದ್ವೇಷಕ್ಕೆ ಪ್ರಚೋದನೆ ನೀಡಲು ಕಿಡಿಗೇಡಿಗಳು ಸಮಯ ಕಾಯುತ್ತಿರುತ್ತಾರೆ. ಪುಂಡರ ಚಟುವಟಿಕೆಗಳನ್ನು ಚಿಗುರಿನಲ್ಲೇ ಚಿವುಟಿ ಹಾಕುವುದು ಅಗತ್ಯ. ಸರ್ಕಾರದ ಜೊತೆಗೆ ರಾಜಕೀಯ ಪಕ್ಷಗಳೂ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾದ ಸಂದರ್ಭವಿದು. ರಾಜಕಾರಣಿಗಳ ಕಾಳಜಿ, ಆತಂಕ ಹಾಗೂ ಪ್ರತಿಭಟನೆಗಳು ಸಂತ್ರಸ್ತ ವ್ಯಕ್ತಿಯ ಧರ್ಮವನ್ನು ಆಧರಿಸಿರಬಾರದು. ಕಾನೂನು ಸುವ್ಯವಸ್ಥೆ ಮತ್ತು ಸಾಮಾಜಿಕ ಸೌಹಾರ್ದಕ್ಕೆ ಧಕ್ಕೆಯುಂಟಾದಾಗ ರಾಜಕೀಯ ಮುಖಂಡರು ಪಕ್ಷಭೇದ ಮರೆತು ಧ್ವನಿ ಎತ್ತಬೇಕು ಹಾಗೂ ಸಂತ್ರಸ್ತರ ಬೆಂಬಲಕ್ಕೆ ನಿಲ್ಲಬೇಕು. ರಾಜಕಾರಣಿಗಳು ಸಂವಿಧಾನಕ್ಕೆ ಬದ್ಧರಾಗಿರಬೇಕೆ ವಿನಾ ಧಾರ್ಮಿಕ ಸಂಘಟನೆಗಳಿಗಲ್ಲ.

ಕಾನೂನನ್ನು ಕೈಗೆ ತೆಗೆದುಕೊಳ್ಳುವ ಪುಂಡರ ಬಗ್ಗೆ ಸರ್ಕಾರದ ಮೆದು ಧೋರಣೆ ಸರಿಯಲ್ಲ

ಜಾನುವಾರುಗಳ ವಿಷಯದಲ್ಲಿ ಸ್ವಘೋಷಿತ ಧರ್ಮರಕ್ಷಕರು ಮೂಗು ತೂರಿಸುತ್ತಿದ್ದಾರೆ. ಸಂಸ್ಕೃತಿ ಹಾಗೂ ಧರ್ಮದ ಹೆಸರಿನಲ್ಲಿ ಕೆಲವರನ್ನು ಹೀಯಾಳಿಸುವ, ಬೆದರಿಸುವ, ಹಲ್ಲೆ ನಡೆಸುವ ಘಟನೆಗಳು ಹೆಚ್ಚಾಗುತ್ತಿವೆ. ಸಾಮಾಜಿಕ ಸಾಮರಸ್ಯ ಕದಡುವ ಕೃತ್ಯಗಳು ದೇಶದ ಬೇರೆ ಬೇರೆ ಭಾಗಗಳಿಂದ ವರದಿಯಾಗುತ್ತಿದ್ದವು. ಈಚಿನ ದಿನಗಳಲ್ಲಿ ರಾಜ್ಯದಲ್ಲೂ ಹೆಚ್ಚಾಗುತ್ತಿರುವುದು ದುರದೃಷ್ಟಕರ. ಕೋಮು ವೈಮನಸ್ಯಕ್ಕೆ ಆಸ್ಪದ ಕಲ್ಪಿಸುವ ಚಟುವಟಿಕೆಗಳ ವಿಚಾರದಲ್ಲಿ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಕಾನೂನನ್ನು ಕೈಗೆ ತೆಗೆದುಕೊಳ್ಳುವುದನ್ನು ಸರ್ಕಾರ ಸಹಿಸಿಕೊಳ್ಳುವುದಿಲ್ಲ ಎನ್ನುವ ಸ್ಪಷ್ಟ ಸಂದೇಶ ರವಾನೆಯಾಗಬೇಕು. ಅಕ್ರಮವಾಗಿ ಗೋವುಗಳನ್ನು ಸಾಗಿಸಿದರೆ ಕಾನೂನು ರೀತ್ಯ ಕ್ರಮ ಜರುಗಿಸಲು ಪೊಲೀಸ್ ಇಲಾಖೆ ಹಾಗೂ ನ್ಯಾಯಾಂಗ ವ್ಯವಸ್ಥೆಯಿದೆ. ಈ ಸಾಂವಿಧಾನಿಕ ವ್ಯವಸ್ಥೆಗೆ ಪರ್ಯಾಯವೆಂಬಂತೆ ಕೆಲವರು ನಡೆದುಕೊಳ್ಳುವುದನ್ನು ಸಹಿಸಲಾಗದು. ಧರ್ಮ ಮತ್ತು ಸಂಸ್ಕೃತಿಯ ಹೆಸರಿನಲ್ಲಿ ಕೆಲವರು ಪುಂಡಾಟಿಕೆ ನಡೆಸುತ್ತಿದ್ದಾರೆ, ಹಣ ವಸೂಲಿ ಮಾಡುವ ದಂಧೆ ನಡೆಸುತ್ತಿದ್ದಾರೆ ಹಾಗೂ ತಾವೇ ಶಿಕ್ಷೆ ನೀಡಲು ಮುಂದಾಗಿರುವ ಉದಾಹರಣೆಗಳೂ ಇವೆ. ಲವ್ ಜಿಹಾದ್, ಗೋಸಂರಕ್ಷಣೆ ಹೆಸರಿನಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ನೈತಿಕತೆ ಹೆಸರಿನಲ್ಲಿ ಅನೈತಿಕ ಪೊಲೀಸ್‌ಗಿರಿ ನಡೆಯುತ್ತಿದೆ. ಜಾತ್ರೆಗಳಲ್ಲಿ ನಡೆಯುವ ವ್ಯಾಪಾರ ವಹಿವಾಟಿನಲ್ಲಿ ನಿರ್ದಿಷ್ಟ ಧರ್ಮದ ವ್ಯಾಪಾರಿಗಳನ್ನು ದೂರವಿಡುವ ಪ್ರಯತ್ನಗಳೂ ನಡೆದಿವೆ. ಇಂಥ ಕೃತ್ಯಗಳನ್ನು ಕೆಲವು ಧಾರ್ಮಿಕ ಸಂಘಟನೆಗಳು ಉತ್ತೇಜಿಸುತ್ತಿವೆ. ಯಾವುದೇ ಸಂದರ್ಭದಲ್ಲಿ ಯಾರೊಬ್ಬರಿಗೂ ಕಾನೂನು ಕೈಗೆ ತೆಗೆದುಕೊಳ್ಳುವ ಅಧಿಕಾರವಿಲ್ಲ. ಕಾನೂನನ್ನು ಕೈಗೆ ತೆಗೆದುಕೊಳ್ಳುವ ಪುಂಡರ ಬಗ್ಗೆ ಸರ್ಕಾರದ ಮೆದುಧೋರಣೆಯೂ ಸರಿಯಲ್ಲ. ಆರೋಪಕ್ಕೆ ಗುರಿಯಾದ ವ್ಯಕ್ತಿಯ ಧರ್ಮದ ಹಿನ್ನೆಲೆಯಲ್ಲಿ, ಕೃತ್ಯವನ್ನು ವೈಭವೀಕರಿಸುವ ಇಲ್ಲವೇ ನಿರ್ಲಕ್ಷಿಸುವ ಧೋರಣೆ ಪ್ರಜಾಸತ್ತಾತ್ಮಕವಾದುದಲ್ಲ. ತಪ್ಪಿತಸ್ಥರು ಯಾರೇ ಆದರೂ ಸರ್ಕಾರ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಬೇಕು. ಸರ್ಕಾರದ ಮೌನ ಅಥವಾ ಕಾನೂನು ಕ್ರಮ ಜರುಗಿಸುವಲ್ಲಿನ ವಿಳಂಬನೀತಿ ಕಿಡಿಗೇಡಿಗಳಿಗೆ ಅನುಕೂಲಕರವಾಗಿ ಪರಿಣಮಿಸಬಹುದು.

ದಿನದ ಟ್ವೀಟ್

ಗಂಭೀರವಾಗಿ ಪರಿಗಣಿಸಿ

ಕರ್ನಾಟಕದಲ್ಲಿ 2014 ಮತ್ತು 2021ರ ನಡುವಿನ ಅವಧಿಯಲ್ಲಿ ರಸ್ತೆಗುಂಡಿ ಅಪಘಾತಗಳಿಂದ ಮೃತಪಟ್ಟ 269 ಪ್ರಕರಣಗಳು 'ಅಧಿಕೃತ'ವಾಗಿ ವರದಿಯಾಗಿವೆ ಮತ್ತು ಅವುಗಳಲ್ಲಿ ಹೆಚ್ಚಿನವು ಬೆಂಗಳೂರಿನಲ್ಲಿ ಸಂಭವಿಸಿವೆ. ಇಂತಹ ಪ್ರಕರಣಗಳು ಸಾಮಾನ್ಯವಾಗಿ ವರದಿಯಾಗುವುದು ಕಡಿಮೆ ಮತ್ತು ಅಂತಹ ಅಪಘಾತಗಳಿಗೆ ಹೆಚ್ಚಾಗಿ ಗುರಿಯಾಗುವವರು ದ್ವಿಚಕ್ರ ವಾಹನ ಸವಾರರು.

ಚಂದ್ರಾ ಆರ್. ಶ್ರೀಕಾಂತ್, ಪತ್ರಕರ್ತೆ

ಕಿಡಿನುಡಿ

ಕೆ.ಆರ್.ಪೇಟೆ ಕ್ಷೇತ್ರದಲ್ಲಿ ನಮ್ಮವರೇ ಬೆನ್ನಿಗೆ ಚೂರಿ ಹಾಕುತ್ತಿದ್ದಾರೆ. ನೆಂಟರೇ ಬಂದು ಜೆಡಿಎಸ್ ಅಭ್ಯರ್ಥಿಯನ್ನು ಸೋಲಿಸಿ ಎನ್ನಬಹುದು. ಅವರ ಮಾತುಗಳನ್ನು ಕೇಳಬೇಡಿ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 4-4-1998

• ಶಿಗ್ಗಾಂವಿ, ಸಿಂಧನೂರು ಮೊದಲಿನ ಜಿಲ್ಲೆಯಲ್ಲೇ: ಕೋರ್ಟ್ ಆದೇಶ

ಬೆಂಗಳೂರು, ಏಪ್ರಿಲ್ 3– ರಾಜ್ಯ ಸರ್ಕಾರ ಜಿಲ್ಲೆಗಳನ್ನು ಪುನರ್ವಿಂಗಡಿಸಿ ಹೊಸ ಜಿಲ್ಲೆಗಳ ರಚನೆಯಲ್ಲಿ ಶಿಗ್ಗಾಂವಿ ತಾಲ್ಲೂಕನ್ನು ಹಾವೇರಿ ಜಿಲ್ಲೆಗೂ ಸಿಂಧನೂರು ತಾಲ್ಲೂಕನ್ನು ಕೊಪ್ಪಳ ಜಿಲ್ಲೆಗೂ ಸೇರಿಸಿರುವುದನ್ನು ಹೈಕೋರ್ಟ್ ಇಂದು ರದ್ದುಗೊಳಿಸಿತಲ್ಲದೆ ಅವು ಮೊದಲಿನ ಜಿಲ್ಲೆಗಳ ವ್ಯಾಪ್ತಿಯಲ್ಲೇ ಮುಂದುವರಿಯಲಿವೆ ಎಂದು ಆದೇಶಿಸಿತು.

ತಾಂತ್ರಿಕ ಲೋಪದಿಂದಾಗಿ ಈ ತಾಲ್ಲೂಕುಗಳನ್ನು ಹೊಸ ಜಿಲ್ಲೆಗಳ ವ್ಯಾಪ್ತಿಗೆ ಸೇರಿಸಿರುವುದು ರದ್ದಾಗಿದ್ದು, ಹೊಸದಾಗಿ ಪೂರ್ವಭಾವಿ ಸೂಚನೆ ಹೊರಡಿಸಿ, ಸಂಬಂಧಪಟ್ಟವರಿಂದ ಆಕ್ಷೇಪಣೆ ಆಹ್ವಾನಿಸಿ, ಅವುಗಳನ್ನು ಪರಿಶೀಲಿಸಿ ನಂತರ ಅಂತಿಮ ಅಧಿಸೂಚನೆ ಹೊರಡಿಸಬಹುದೆಂದು ಸೂಚಿಸಿತು.

• ಇಂದು ರಾಜ್ಯ ಸಚಿವ ಸಂಪುಟ ವಿಸ್ತರಣೆ

ಬೆಂಗಳೂರು, ಏಪ್ರಿಲ್ 3– ಜೆ.ಎಚ್. ಪಟೇಲ್ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ಡಿ.ಮಂಜುನಾಥ್ ಮತ್ತು ಬಿ.ಸೋಮಶೇಖರ್ ಅವರನ್ನು ಸಂಪುಟ ಸಚಿವರಾಗಿ ನೇಮಿಸಿರುವುದಾಗಿ ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಅವರು ಇಂದು ರಾತ್ರಿ ಪ್ರಕಟಿಸಿದ್ದಾರೆ. ಹೊಸ ಸಚಿವರು ನಾಳೆ ಬೆಳಿಗ್ಗೆ ರಾಜಭವನದಲ್ಲಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಈ ತಿಂಗಳ 15ರಂದು ಆರಂಭವಾಗಲಿರುವ ವಿಧಾನಮಂಡಲ ಅಧಿವೇಶನ ಮುಕ್ತಾಯದ ನಂತರ ಸಂಪುಟ ಪುನರ್ ರಚಿಸುವುದಾಗಿ ಈ ಮುನ್ನ ಪ್ರಕಟಿಸಿದ್ದ ಪಟೇಲ್ ಅವರು, ತರಾತುರಿಯಿಂದ ಇಬ್ಬರನ್ನು ಸೇರಿಸಿಕೊಳ್ಳುವ ಮೂಲಕ ಆಶ್ಚರ್ಯ ಉಂಟುಮಾಡಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 4-4-1973

• ಉಪಖಂಡದ ಶಾಂತಿಗೆ ವಸ್ತುಸ್ಥಿತಿ ಮನ್ನಣೆ ಅಗತ್ಯ: ಅನ್ಯರ ಹಸ್ತಕ್ಷೇಪ ಸಲ್ಲದು

ನವದೆಹಲಿ, ಏಪ್ರಿಲ್ 3– ಉಪಖಂಡದಲ್ಲಿ ಚಿರಶಾಂತಿ ಮತ್ತು ಬಾಂಧವ್ಯ ಸುಧಾರಣೆ ಸಾಧನೆಗೆ ವಸ್ತುಸ್ಥಿತಿಯನ್ನು ಅಂಗೀಕರಿಸಿ ಮಾನ್ಯ ಮಾಡಬೇಕಾದದ್ದು ಪೂರ್ವಾಪೇಕ್ಷಿತವಾದುದು ಎಂಬ ಭಾರತದ ಅಭಿಪ್ರಾಯವನ್ನು ಇಂಡೊನೇಷ್ಯಾ ಒಪ್ಪುತ್ತದೆ.

ವಿದೇಶಾಂಗ ಸಚಿವ ಸ್ವರಣ್ ಸಿಂಗ್ ಮತ್ತು ಇಂಡೊನೇಷ್ಯಾದ ವಿದೇಶಾಂಗ ಸಚಿವ ಡಾ. ಆದಾಂ ಮಾಲಿಕ್ ನಡುವಣ ಮಾತುಕತೆ ನಂತರ ಬಿಡುಗಡೆ ಮಾಡಲಾದ ಜಂಟಿ ಹೇಳಿಕೆ, ಉಪಖಂಡದ ವ್ಯವಹಾರಗಳಲ್ಲಿ ಮೂರನೇ ರಾಷ್ಟ್ರದ ಹಸ್ತಕ್ಷೇಪವನ್ನು ತಳ್ಳಿ ಹಾಕಿದೆ. ಈ ಗುರಿಗಳನ್ನು ಸಂಬಂಧಿಸಿದ ರಾಷ್ಟ್ರಗಳ ನಡುವೆ ನೇರ ಸಂಧಾನಗಳ ಮೂಲಕ ಸಾಧಿಸಬಹುದು ಎಂದು ಹೇಳಿದೆ.

• ಒರಟು ಧಾನ್ಯ ವ್ಯಾಪಾರವನ್ನೂ ಸರ್ಕಾರ ವಹಿಸಿಕೊಳ್ಳಬೇಕೆಂದು ಮೂವತ್ತು ಎಂ.ಪಿಗಳ ಆಗ್ರಹ

ನವದೆಹಲಿ, ಏಪ್ರಿಲ್ 3– ಆಹಾರಧಾನ್ಯ ವರ್ತಕರ ಸವಾಲನ್ನು ಸರ್ಕಾರ ದಿಟ್ಟತನದಿಂದ ಎದುರಿಸಿ, ಮುಂದಿನ ಸುಗ್ಗಿಯಿಂದ ರಾಗಿ, ನವಣೆ, ಸಜ್ಜೆ ಮುಂತಾದ ಒರಟು ಧಾನ್ಯಗಳ ಸಗಟು ವ್ಯಾಪಾರವನ್ನೂ ವಹಿಸಿಕೊಳ್ಳಬೇಕೆಂದು ಸಂಸತ್ತಿನ 30 ಕಾಂಗ್ರೆಸ್ ಸದಸ್ಯರು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಆಹಾರಧಾನ್ಯ ವರ್ತಕರ ಖಾಲಿಯಾಗಿರುವ ಉಗ್ರಾಣಗಳನ್ನು ಸರ್ಕಾರ ರಕ್ಷಣಾ ಕಾನೂನಿನನ್ವಯ ವಶಕ್ಕೆ ತೆಗೆದುಕೊಳ್ಳಬೇಕೆಂದು ಜಂಟಿ ಹೇಳಿಕೆಯಲ್ಲಿ ಹೇಳಿದ್ದಾರೆ.

ಪ್ರಚಾರ ಮತ್ತು ವಾಸ್ತವದ ನಡುವಿನ ಅಂತರ ದಿನದಿನಕ್ಕೂ ವಿಸ್ತರಿಸುತ್ತಿದೆ

'ಪ್ರಜಾಪ್ರಭುತ್ವದ ತಾಯಿ'ಗೆ ಇದು ಸಮ್ಮತವೇ?



ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಭಾರತಕ್ಕೆ ಮೊದಲ ಬಾರಿಗೆ ಜಿ-20 ಸಮೂಹದ ಅಧ್ಯಕ್ಷತೆ ವಹಿಸುವ ಅವಕಾಶ ಸಿಕ್ಕಿರುವುದು ಗೌರವಾರ್ಹ ಹಾಗೂ ಸಮಸ್ತ ದೇಶವಾಸಿಗಳಿಗೂ ಅಭಿಮಾನ ತರುವ ಸಂಗತಿ. ಆದರೆ ಸೆಪ್ಟೆಂಬರ್‌ನಲ್ಲಿ ಜರುಗಲಿರುವ ಶೃಂಗಸಭೆಗೆ ಸಂಬಂಧಿಸಿದಂತೆ ಸರ್ಕಾರ ಎಲ್ಲೆಡೆ ನಡೆಸಿರುವ ಪ್ರಚಾರದ ವೈಖರಿಯನ್ನು ನೋಡಿದರೆ, ಭಾರತಕ್ಕೆ ಈಗಾಗಲೇ 'ವಿಶ್ವಗುರು' ಮನ್ನಣೆ ಪ್ರಾಪ್ತವಾಗಿಬಿಟ್ಟಿದೆ ಹಾಗೂ ಜಗತ್ತಿನ ಎಲ್ಲ ಪ್ರಮುಖ ರಾಷ್ಟ್ರಗಳೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಒಪ್ಪಿಕೊಂಡುಬಿಟ್ಟಿವೆ ಎಂಬಂತಹ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಇದು ಪ್ರತಿವರ್ಷವೂ ಸರದಿಯಲ್ಲಿ (ರೊಟೇಟಿಂಗ್ ಪ್ರೆಸಿಡೆನ್ಸಿ) ಬರುವ ಅಧ್ಯಕ್ಷತೆ. 2022ರಲ್ಲಿ ಇಂಡೊನೇಷ್ಯಾ ಜಿ-20 ಅಧ್ಯಕ್ಷತೆ ವಹಿಸಿತ್ತು, 2024ರಲ್ಲಿ ಬ್ರೆಜಿಲ್ ವಹಿಸಲಿದೆ. 2008ರಿಂದ ನಡೆಯುತ್ತಿರುವ ಈ ಸಭೆಗಳಲ್ಲಿ ಅಮೆರಿಕ, ಟರ್ಕಿ, ಚೀನಾ, ಸೌದಿ ಅರೇಬಿಯಾದಂತಹ ದೇಶಗಳು ಈಗಾಗಲೇ ಈ ಗೌರವಕ್ಕೆ ಪಾತ್ರವಾಗಿವೆ. ಆದರೆ ಅಧ್ಯಕ್ಷತೆ ವಹಿಸಿರುವ ರಾಷ್ಟ್ರವೇ ಪ್ರಪಂಚದ ಮುಖಂಡ, ಅಲ್ಲಿನ ಮುಖ್ಯಸ್ಥರೇ ಜಗತ್ತಿನ ನೇತಾರ ಎಂಬ ರೀತಿಯಲ್ಲಿ ಈಗ ನಡೆಯುತ್ತಿರುವಂತಹ ಪ್ರಚಾರ, ಈ ಹಿಂದೆ ಯಾವ ದೇಶದಲ್ಲಿಯೂ ನಡೆದಿರಲಿಲ್ಲ.

1983ರಲ್ಲಿ ಭಾರತದ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ನಡೆದ ಅಲಿಪ್ತ ರಾಷ್ಟ್ರಗಳ ಶೃಂಗಸಭೆಯಲ್ಲಿ 140 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಆಗಿನ ಪ್ರಧಾನಿ ಇಂದಿರಾ ಗಾಂಧಿ ಅವರು ಇಂದಿನ ಹಾಗೆ ನೂರಾರು ಕೋಟಿ ರೂಪಾಯಿ ಖರ್ಚು ಮಾಡಿ, ದೇಶದಾದ್ಯಂತ ತಮ್ಮದೇ ಪೋಸ್ಟರುಗಳನ್ನು ಹಚ್ಚಿಸಿ ಸ್ವಗುಣಗಾನ ಮಾಡಿಕೊಂಡಿರಲಿಲ್ಲ. ಆದರೆ ಪ್ರಚಾರವೇ ಆಡಳಿತದ ಮುಖ್ಯ ಗುರಿ ಎಂದು ನಂಬಿರುವ ಬಿಜೆಪಿ ನೇತೃತ್ವದ ಇಂದಿನ ಸರ್ಕಾರ, 2024ರ ಸಂಸದೀಯ ಚುನಾವಣಾಪೂರ್ವದಲ್ಲಿ ಜಿ-20 ಅಧ್ಯಕ್ಷತೆಯನ್ನೂ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಇಲ್ಲಿ ಆಶ್ಚರ್ಯದ ಸಂಗತಿಯೆಂದರೆ, ಭಾರತವೇ ಜಗತ್ತಿನ 'ಪ್ರಜಾಪ್ರಭುತ್ವದ ತಾಯಿ' ಎಂಬ ಮೋದಿ ನೇತೃತ್ವದ ಸರ್ಕಾರದ ಘೋಷಣೆ. ಸಾವಿರಾರು ವರ್ಷಗಳ ಹಿಂದೆಯೂ ಭಾರತೀಯ ಉಪಖಂಡದಲ್ಲಿ ಗಣತಂತ್ರದ ಹಲವು ಮೌಲ್ಯಗಳು, ವ್ಯವಸ್ಥೆಗಳು ಇದ್ದವು. ರಾಜ ಮಹಾರಾಜರ ಕಾಲದಲ್ಲಿಯೂ ಗ್ರಾಮಪಾತಳಿಯಲ್ಲಿ ಪಂಚಾಯಿತಿ ಪದ್ಧತಿ ಜೀವಂತವಾಗಿತ್ತು. ಆದರೆ 'ಭಾರತವೇ ಪ್ರಜಾಪ್ರಭುತ್ವದ ಜನನಿ' ಎಂದು ಈಗ ಡಂಗುರ ಬಾರಿಸುತ್ತಿರುವ ಸರ್ಕಾರ, ಪ್ರಜಾಪ್ರಭುತ್ವದ ನೀತಿ ನಿಯಮಗಳನ್ನು, ಸಂವಿಧಾನದ ಆಶಯಗಳನ್ನು ಪಾಲಿಸುತ್ತಿದೆಯೇ? ಇಲ್ಲ. ಪ್ರಚಾರ ಮತ್ತು ವಾಸ್ತವದ ನಡುವಿನ ಅಂತರ ದಿನದಿನಕ್ಕೂ ವಿಸ್ತರಿಸುತ್ತಿದೆ.

ಪ್ರಜಾಪ್ರಭುತ್ವದ ಮೊದಲನೇ ನಿಯಮವೆಂದರೆ, ಭಿನ್ನಾಭಿಪ್ರಾಯಗಳನ್ನು ಗೌರವಿಸುವುದು. ಸ್ವಾತಂತ್ರ್ಯದ ನಂತರ ಭಾರತದಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು, ಸಂಸ್ಕೃತಿಯನ್ನು ಪೋಷಿಸುವುದರಲ್ಲಿ ಎಲ್ಲರಿಗಿಂತ ಹೆಚ್ಚು ಕೊಡುಗೆ ನೀಡಿದ ಜವಾಹರಲಾಲ್ ನೆಹರೂ ಒಂದು ಮಾತನ್ನು ಹೇಳುತ್ತಿದ್ದರು: 'ನಾನು ನಿಮ್ಮ ವಿಚಾರಗಳನ್ನು ಒಪ್ಪದೇ ಇರಬಹುದು. ಆದರೆ ನಿಮ್ಮ ವಿಚಾರಗಳನ್ನು ಮುಕ್ತವಾಗಿ ಪ್ರಕಟಿಸುವ ನಿಮ್ಮ ಹಕ್ಕನ್ನು ನನ್ನ ಪ್ರಾಣವನ್ನು ಪಣಕ್ಕಿಟ್ಟಾದರೂ ಸಂರಕ್ಷಿಸುವೆ'. ರಾಜಕೀಯ ವಿರೋಧಿಗಳನ್ನು ಶತ್ರುಗಳೆಂದು ಭಾವಿಸಬಾರದು ಎಂದು ಅಟಲ್ ಬಿಹಾರಿ ವಾಜಪೇಯಿ ಅನೇಕ ಬಾರಿ ಹೇಳುತ್ತಿದ್ದರು. ಅಂದಿಗೂ ಇಂದಿಗೂ ಎಷ್ಟೊಂದು ವ್ಯತ್ಯಾಸ? ಇಂದು ಸರ್ಕಾರದ ನೀತಿ ನಿರ್ಣಯಗಳನ್ನು ವಿರೋಧಿಸುವವರು 'ರಾಷ್ಟ್ರ ವಿರೋಧಿಗಳು' ಎಂಬಂಥ ವಿಷಪೂರಿತ ವಾತಾವರಣವನ್ನು ಸೃಷ್ಟಿಸಲಾಗಿದೆ.

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರ ಉದ್ಧಟತನದ ನಡೆಯೂ ಗಮನಾರ್ಹ. ನ್ಯಾಯಮೂರ್ತಿಗಳಿಗೆ ಬೆದರಿಕೆ ಹಾಕುವುದಕ್ಕೂ ಅವರು ಹಿಂದೆಮುಂದೆ ನೋಡಲಿಲ್ಲ. 'ಕೆಲವು ನಿವೃತ್ತ ನ್ಯಾಯಮೂರ್ತಿಗಳು ದೇಶವಿರೋಧಿ ಗುಂಪುಗಳ ಭಾಗವಾಗಿದ್ದಾರೆ. ಅವರು ಇದಕ್ಕಾಗಿ ಬೆಲೆ ತೆರಲೇಬೇಕಾಗುತ್ತದೆ. ಯಾರೂ ತಪ್ಪಿಸಿಕೊಳ್ಳಲು ನಾವು ಬಿಡುವುದಿಲ್ಲ' ಎಂದು ಅವರು ಎಚ್ಚರಿಕೆ ನೀಡಿದರು. ಸರ್ಕಾರದ ವಿರೋಧವೇ ರಾಷ್ಟ್ರವಿರೋಧ ಎಂಬ ಸಲೀಸಾದ ಸಮೀಕರಣವು ಪ್ರಜಾಪ್ರಭುತ್ವಕ್ಕೆ ಘಾತುಕವಾದುದು. ಆದ್ದರಿಂದ ನ್ಯಾಯಾಂಗ ವ್ಯವಸ್ಥೆಗೆ ಸಂಬಂಧಿಸಿದ ಎಲ್ಲರೂ- ಹಾಲಿ ಮತ್ತು ನಿವೃತ್ತ ನ್ಯಾಯಮೂರ್ತಿಗಳು, ವಕೀಲರು ಹಾಗೂ ನಾಗರಿಕರು- ಇದನ್ನು ಪ್ರತಿಭಟಿಸಲೇಬೇಕು.

ಎಲ್ಲರಿಗೂ ಸಮಾನ ನ್ಯಾಯ ಎಂಬುದು ಪ್ರಜಾಪ್ರಭುತ್ವದ ಒಂದು ಮೂಲ ತತ್ವ. ಆದರೆ '75 ವರ್ಷಗಳಿಂದ ದೇಶದಲ್ಲಿ ಪಸರಿಸಿರುವ ಭ್ರಷ್ಟಾಚಾರವನ್ನು ನಿರ್ಮೂಲಗೊಳಿಸುತ್ತೇವೆ' ಎಂದು ಸಾರಿದ ಮೋದಿ ನೇತೃತ್ವದ ಸರ್ಕಾರ ಇಂದು ಮಾಡುತ್ತಿರುವುದೇನು? ಭ್ರಷ್ಟಾಚಾರದ ನಿರ್ಮೂಲನೆಗಾಗಿ ತೆಗೆದುಕೊಂಡ ಕ್ರಮಗಳನ್ನು ಎಲ್ಲರೂ ಸ್ವಾಗತಿಸಲೇಬೇಕು. ಆದರೆ ವಿರೋಧ ಪಕ್ಷಗಳ ಮುಖಂಡರ ವಿರುದ್ಧ ಮಾತ್ರ ಜಾರಿ ನಿರ್ದೇಶನಾಲಯ, ಸಿಬಿಐ, ಆದಾಯ ತೆರಿಗೆ ಇಲಾಖೆ ಅಂತಹವುಗಳನ್ನು ದುರುಪಯೋಗಪಡಿಸಿಕೊಂಡು, ಅವರನ್ನು ಜೈಲಿಗೆ ಕಳಿಸುವ ಇಂದಿನ ಪರಿಪಾಟ ಪಕ್ಷಪಾತಿ ಧೋರಣೆಯಿಂದ ಕೂಡಿದ್ದಲ್ಲವೇ? ಹಾಗಿದ್ದರೆ ಬಿಜೆಪಿಯಲ್ಲಿ ಭ್ರಷ್ಟ ರಾಜಕಾರಣಿಗಳು ಇಲ್ಲವೇ? ಭಯಮುಕ್ತ ರಾಜಕಾರಣ, ನಿರ್ಭೀತ ಸಮಾಜ ಇವು ಕೂಡ ಪ್ರಜಾಪ್ರಭುತ್ವದ ನಡೆಗಳು ತಾನೇ? ಆದರೆ ಇಂದು ಆಳುವ ಪಕ್ಷವನ್ನು ಬೆಂಬಲಿಸದಿರುವ ಎಲ್ಲರಲ್ಲೂ ಹೆದರಿಕೆಯನ್ನು ಹುಟ್ಟಿಸಲಾಗಿದೆ ಹಾಗೂ ಇಂಥ ಹೆದರಿಕೆಯನ್ನೇ ವಿರೋಧಿಗಳ ವಿರುದ್ಧದ ಅಸ್ತ್ರವನ್ನಾಗಿ ಬಳಸಿಕೊಳ್ಳಲಾಗುತ್ತಿದೆ.

ಮಾಧ್ಯಮ ಸ್ವಾತಂತ್ರ್ಯವು ಪ್ರಜಾಪ್ರಭುತ್ವದ ಅಡಿಗಲ್ಲು. ಇಂದು ದೇಶದಲ್ಲಿನ ಅನೇಕ ಮಾಧ್ಯಮ ಸಂಸ್ಥೆಗಳು ಬೃಹತ್ ಉದ್ಯಮಿಗಳ ಕೈವಶವಾಗುತ್ತಿವೆ. ಈ ಧನಾಢ್ಯ ಉದ್ಯಮಿಗಳಿಗೆ ವಾಕ್ ಸ್ವಾತಂತ್ರ್ಯವಾಗಲಿ, ಮಾಧ್ಯಮ ಸ್ವಾತಂತ್ರ್ಯವಾಗಲಿ ಅಥವಾ ಸಾಂವಿಧಾನಿಕ ಹಕ್ಕುಗಳ ರಕ್ಷಣೆಯಾಗಲಿ ಮುಖ್ಯವಲ್ಲ, ಅವರ ಔದ್ಯೋಗಿಕ ಹಿತಾಸಕ್ತಿಗಳೇ ಮುಖ್ಯ. ಇಂಥವರು ಸರ್ಕಾರದ ತಪ್ಪುಗಳನ್ನು ಎತ್ತಿತೋರಿಸುವ ಸಾಹಸ ಮಾಡಲಾರರು. ಏಕೆಂದರೆ ಇವರು ಕೂಡ ಭಯಗ್ರಸ್ತರೇ. ಹಿಂದಿನ ವರ್ಷದ ವರ್ಲ್ಡ್ ಪ್ರೆಸ್ ಸೂಚ್ಯಂಕದ ಪ್ರಕಾರ, ಮಾಧ್ಯಮ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಜಗತ್ತಿನ ದೇಶಗಳಲ್ಲಿ ಭಾರತದ ಸ್ಥಾನ 150ಕ್ಕೆ ಇಳಿದಿದೆ. ಇದೇ ಪರಿಸ್ಥಿತಿ ಮುಂದುವರಿದರೆ, ಈ ವಿಷಯದಲ್ಲಿ ನಮ್ಮ ದೇಶವು ಕಮ್ಯುನಿಸ್ಟ್ ಚೀನಾಕ್ಕೆ ಪೈಪೋಟಿ ಕೊಡಬಲ್ಲದು.

ಕೊನೆಯಲ್ಲಿ, ರಾಹುಲ್ ಗಾಂಧಿ ಅವರ ಮೇಲೆ ಕೈಗೊಳ್ಳಲಾದ ಕ್ರಮವನ್ನು ನೋಡೋಣ. 2019ರಲ್ಲಿ ಕೋಲಾರದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಷಣ ಮಾಡುವಾಗ ಅವರ ನಾಲಿಗೆ ತಪ್ಪಿದ್ದು ನಿಜ. ಪ್ರಬುದ್ಧ ಮುಖಂಡರು ಹೀಗೆ ಮಾಡಬಾರದು. ಆದರೂ ಅವರಿಗಿಂತ ಅನೇಕ ಪಟ್ಟು ಆಕ್ಷೇಪಾರ್ಹ ಹೇಳಿಕೆಗಳನ್ನು ಇತರ ಪಕ್ಷಗಳ ನೇತಾರರೂ, ಅಷ್ಟೇ ಅಲ್ಲ ಸ್ವತಃ ಮೋದಿಯವರೂ ಕೊಟ್ಟಿದ್ದಾರೆ. ಆದರೆ ರಾಹುಲ್ ಅವರನ್ನೇ ಗುರಿ ಮಾಡಿ, ಸಂಶಯಾಸ್ಪದ ರೀತಿಯಲ್ಲಿ ನಡೆದ ಮಾನಹಾನಿ ಪ್ರಕರಣದ ವಿಚಾರಣೆಯಲ್ಲಿ ಅವರಿಗೆ ಜೈಲುವಾಸದ ಶಿಕ್ಷೆ ನೀಡಿ, ಮರುದಿನವೇ ಅವರ ಲೋಕಸಭಾ ಸದಸ್ಯತ್ವವನ್ನು ರದ್ದುಗೊಳಿಸಿದ ನಿರ್ಣಯವು ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಅಭೂತಪೂರ್ವ. ಇವೆಲ್ಲ ಅಚಾನಕ್ ಆಗಿ ನಡೆದ ಘಟನಾವಳಿಗಳಲ್ಲ. ಇದರ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿಯವರ 4,000 ಕಿಲೊಮೀಟರುಗಳ ಯಶಸ್ವಿ 'ಭಾರತ ಜೋಡೊ' ಯಾತ್ರೆಗೆ ದೊರಕಿದ ಜನಬೆಂಬಲವೂ ಇದೆ ಹಾಗೂ ಹಿಂಡನ್‌ಬರ್ಗ್ ವರದಿ ಬಹಿರಂಗಗೊಂಡ ನಂತರ ಅವರು ಅದಾನಿ- ಮೋದಿ ನಡುವಿನ ಸಂಬಂಧದ ಬಗ್ಗೆ ಸಂಸತ್ತಿನಲ್ಲಿ ಎತ್ತಿದ ಅನನುಕೂಲಕರ ಪ್ರಶ್ನೆಗಳ ಕಾರಣವೂ ಇದೆ, ಇದರಿಂದಾಗಿಯೇ ಮಾನಹಾನಿ ಪ್ರಕರಣದ ನೆವದಲ್ಲಿ ಅವರಿಗೆ ಕಠಿಣ ಶಿಕ್ಷೆ ಕೊಡಲಾಯಿತು ಎಂಬುದು ರಾಜಕೀಯ ಪಂಡಿತರಿಗಷ್ಟೇ ಅಲ್ಲ ಸಾಮಾನ್ಯ ಜನರಿಗೆ ಕೂಡ ತಿಳಿದಿದೆ.

ಈ ಬಗೆಯ ಸೇಡಿನ ರಾಜಕಾರಣ ಪ್ರಜಾಪ್ರಭುತ್ವಕ್ಕೆ ಆರೋಗ್ಯಕರವೇ? ಭಾರತದ ಉದ್ಯೋಗ ಕ್ಷೇತ್ರದಲ್ಲಿ ನಡುಕ ಹುಟ್ಟಿಸಿದ ಅದಾನಿ ಪ್ರಕರಣದ ಬಗ್ಗೆ ಸಂಸತ್ತಿನಲ್ಲಿ ಒಂದಿಷ್ಟೂ ಚರ್ಚೆಗೆ ಆಸ್ಪದ ಕೊಡದ ಸರ್ಕಾರವು ಸಂಸತ್ ಸದಸ್ಯರ ಅಧಿಕಾರವನ್ನೂ ಹತ್ತಿಕ್ಕುತ್ತಿಲ್ಲವೇ?

ಒಂದೆಡೆ ಮೋದಿ ಅವರು 'ಪ್ರಜಾಪ್ರಭುತ್ವದ ತಾಯಿ ಭಾರತ' ಎಂದು ಪದೇಪದೇ ಸಾರುತ್ತಿದ್ದಾರೆ. ಅದೇ ಮತ್ತೊಂದೆಡೆ, ಅವರ ನೇತೃತ್ವದ ಸರ್ಕಾರವೇ ಯಾವುದೇ ಹಿಂಜರಿಕೆಯಿಲ್ಲದೆ ಪ್ರಜಾಪ್ರಭುತ್ವದ ಅವಹೇಳನ ಮಾಡುತ್ತಿದೆ. ಈ ಕಪಟಾಚಾರವನ್ನು ಭಾರತದ ಜಾಗೃತ ಜನರೂ ನೋಡುತ್ತಿದ್ದಾರೆ, ಹೊರಗಿನ ಜಗತ್ತೂ ನೋಡುತ್ತಿದೆ.

ಚುರುಮುರಿ

ಮತದಾರರಿಗೆ ಮೈಕ್ರೊಚಿಪ್

• ಸುಮಂಗಲಾ

ಕ್ಯಾಲೆಂಡರ್ ನೋಡುತ್ತಿದ್ದ ಬೆಕ್ಕಣ್ಣ 'ಈ ಸಲ ನಮಗ ಎರಡು ಮೂರ್ಖರ ದಿನ ಅದಾವು ಹೌದಿಲ್ಲೋ? ಏಪ್ರಿಲ್ 1 ಮುಗೀತು, ಇನ್ನು ಮೇ 13, ಚುನಾವಣೆ ಫಲಿತಾಂಶದ ದಿನ ಒಂದು ಬಾಕಿ ಉಳಿದೈತಿ' ಎಂದಿತು.

'ಮೂರೂ ಆಗಬೌದು. ಮೇ 13ಕ್ಕೆ ಮತದಾರರು ಕೆಲವು ಅಭ್ಯರ್ಥಿಗಳನ್ನು, ಪಕ್ಷಗಳನ್ನು ಮೂರ್ಖರನ್ನಾಗಿಸ್ತಾರ. ಅದಾದ ಮೇಲೆ ಯಾವುದೇ ಪಕ್ಷ ಬಹುಮತದಲ್ಲಿ ಗೆದ್ದರೂ 'ಆಪರೇಷನ್ ಕಮಲ' ನಡೆದು, ಕೊನೆಗೆ ಮತದಾರರನ್ನೇ ಮೂರ್ಖರಾಗಿಸೋ ದಿನನೂ ಲೆಕ್ಕಕ್ಕೆ ತಗಂಡರೆ ಈ ವರ್ಷ ಮೂರ್ಖರ ದಿನ ಮೂರು ಅದಾವು' ಎಂದೆ.

'ಹಂಗ ಲೆಕ್ಕ ಹಾಕಿದರೆ 365 ದಿನನೂ ನಿಮಗ ಅಂದರ ಶ್ರೀಸಾಮಾನ್ಯರಿಗೆ ಒಂಥರಾ ಮೂರ್ಖರ ದಿನಾನೆ ಬಿಡು' ಎಂದು ನನ್ನ ಮೂತಿಗೆ ತಿವಿದು ಹಂಗಿಸಿದ ಬೆಕ್ಕಣ್ಣ ಪೇಪರಿನಲ್ಲಿ ತಲೆ ತೂರಿಸಿತು.

'ಹಿಂದಿನ ಹದಿನೆಂಟು- ಇಪ್ಪತ್ತು ದಿನಗಳಲ್ಲಿ ಚುನಾವಣಾ ಆಯೋಗದವರು 58 ಕೋಟಿಗೂ ಹೆಚ್ಚು ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಾರೆ' ಎಂಬ ಸುದ್ದಿ ಓದಿದ ಬೆಕ್ಕಣ್ಣ, 'ಅವನ್ನೆಲ್ಲ ಆಯೋಗದವರು ಏನು ಮಾಡತಾರ' ಎಂದು ಕೇಳಿತು.

ಅಷ್ಟೆಲ್ಲ ಕುಕ್ಕರುಗಳು, ಸೀರೆಗಳು, ವಾಚುಗಳು ಇತ್ಯಾದಿಗಳನ್ನು ಏನು ಮಾಡುತ್ತಾರೆ ಎಂದು ನನಗೂ ಗೊತ್ತಿರಲಿಲ್ಲ.

'ನನಗೊಂದು ಹೊಸಾ ಐಡಿಯಾ ಹೊಳದೈತೆ. ಕರಪತ್ರ ಹಂಚೂ ನೆವದಾಗೆ ಮನೆಗಳಿಗೆ ಹೋಗಿ, ವೋಟು ಹಾಕೋರಿಗೆಲ್ಲ ಒಂದು ಮೈಕ್ರೊಚಿಪ್ ಅಂಟಿಸಿ ಬರ್ರಿ. ಯಾರಿಗೆ ವೋಟು ಹಾಕಬೇಕು ಅಂತ ಅದ್ರಿಂದ ಮಿದುಳಿಗೆ ಒಂದೇ ಸಮನೆ ಸಂದೇಶ ಹೋಗತಿರತೈತೆ ಅಂತ ಎಲ್ಲಾ ಪಕ್ಷದವ್ರಿಗೂ ಹೇಳತೀನಿ' ಎಂದು ಖುಷಿಯಲ್ಲಿ ಬೆಕ್ಕಣ್ಣ ಹೇಳಿತು.

'ಒಬ್ಬೊಬ್ಬ ಮತದಾರರಿಗೆ ಹತ್ತಾರು ಮೈಕ್ರೊಚಿಪ್ ಅಂಟಿಸಿದರೆ, ಅವರು ಕೊನಿಗೆ ಯಾರಿಗೆ ವೋಟು ಹಾಕಬೇಕಲೇ? ಭಯಂಕರ ಗೊಂದಲ ಆಗತೈತಿ'.

'ಯಾವ ಅಭ್ಯರ್ಥಿಯ ಮೈಕ್ರೊಚಿಪ್ ಪವರ್‌ಫುಲ್ ಇರತೈತೆ ಅವರಿಗೆ ಮತದಾರರು ವೋಟು ಒತ್ತುತಾರೆ ಅಷ್ಟೇ' ಎಂದು ಬೆಕ್ಕಣ್ಣ ಗಹಗಹಿಸಿತು!

ಸಂಗತ

ಮಕ್ಕಳು ಕಳೆದುಹೋಗಿದ್ದೆಲ್ಲಿ?

ಶಾಲೆಗೆ ಮಕ್ಕಳ ಗೈರುಹಾಜರಿ ಈ ವರ್ಷ ದಾಖಲೆ ಮಟ್ಟದಲ್ಲಿರುವುದು ಕಳವಳಕಾರಿ

• ಸದಾಶಿವ್ ಸೊರಟೂರು

ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭವಾಗಿವೆ. ಈ ವರ್ಷ ಒಟ್ಟು 8.69 ಲಕ್ಷ ಮಕ್ಕಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ. ಅಷ್ಟೂ ಮಕ್ಕಳಿಗೆ ಇದು ಅವರ ಬದುಕಿನ ಮೊದಲನೆಯ ದೊಡ್ಡ ಪರೀಕ್ಷೆ. ಈ ಪರೀಕ್ಷೆಯನ್ನು ಮಕ್ಕಳ ಬದುಕಿನ ಒಂದು ದೊಡ್ಡ ತಿರುವು ಎಂದು ಹಲವರು ವ್ಯಾಖ್ಯಾನಿಸುತ್ತಾರೆ. ಅದು ಸರಿ ಕೂಡ. ಈ ಬಾರಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದವರಲ್ಲಿ 27 ಸಾವಿರ ಮಕ್ಕಳಿಗೆ ಹಾಜರಾತಿ ಕೊರತೆಯಿಂದ ಪ್ರವೇಶಪತ್ರ ಲಭ್ಯವಾಗಿಲ್ಲ.

ಪ್ರತೀ ವಿದ್ಯಾರ್ಥಿ ಪರೀಕ್ಷೆ ಬರೆಯಲು ಶೇಕಡ 75ರಷ್ಟು ಹಾಜರಾತಿ ಹೊಂದುವುದು ಕಡ್ಡಾಯವಾಗಿರುತ್ತದೆ. ಹೀಗಾಗಿ ಈ ವರ್ಷ ಇಷ್ಟೂ ಮಕ್ಕಳು ಪರೀಕ್ಷೆ ಬರೆಯುವುದರಿಂದ ವಂಚಿತರಾಗಿದ್ದಾರೆ. ಗೈರುಹಾಜರಿ ಈ ವರ್ಷ ದಾಖಲೆ ಮಟ್ಟದಲ್ಲಿರುವುದು ಕಳವಳದ ವಿಷಯ. ಅಷ್ಟೊಂದು ಮಕ್ಕಳು ಯಾಕೆ ಶಾಲೆ ಕಡೆ ಮುಖ ಮಾಡಲಿಲ್ಲ? ಶಾಲೆ ಬಿಟ್ಟು ಎತ್ತ ಹೊರಳಿಕೊಂಡರು? ಕಲಿಯಬೇಕಾದ ವಯಸ್ಸಿನಲ್ಲಿ, ತರಗತಿಯಲ್ಲಿ ಇರಬೇಕಾದ ಸಮಯದಲ್ಲಿ ಆಚೆ ಯಾವುದರಲ್ಲಿ ಕಳೆದುಹೋದರು ಎಂಬುದರ ಬಗ್ಗೆ ನಾವು ಯೋಚಿಸಬೇಕಿದೆ.

ನಮ್ಮ ಶಾಲೆಯ ಹತ್ತನೇ ತರಗತಿಯ ವಿದ್ಯಾರ್ಥಿಯೊಬ್ಬ ಆಗಾಗ ಗೈರುಹಾಜರಾಗುತ್ತಿದ್ದ. ವಿಚಾರಿಸಲು ಮನೆಗೆ ಹೋದಾಗ ಆ ವಿದ್ಯಾರ್ಥಿಯ ತಾಯಿ ಅಕ್ಷರಶಃ ಕಣ್ಣೀರಾದರು. ಮಗ ಮಾತು ಕೇಳುತ್ತಿಲ್ಲ, ಶಾಲೆಗೆ ಹೋಗು ಎಂದರೆ ಹೋಗುತ್ತಿಲ್ಲ, ಮೊದಲು ಹೀಗೆ ಇರಲಿಲ್ಲ, ಈಗೀಗ ಅವನನ್ನು ನಿಯಂತ್ರಿಸುವುದು ಕಷ್ಟವಾಗುತ್ತಿದೆ ಎಂದು ಅಲವತ್ತುಕೊಂಡರು.

ಎಂಟನೇ ತರಗತಿಗೆ ಶಿಸ್ತಿನಿಂದ ಬರುವ ಕೆಲವು ಮಕ್ಕಳು ಹತ್ತನೇ ತರಗತಿಗೆ ಬರುತ್ತಲೇ ತಪ್ಪು ದಾರಿ ಆಯ್ದುಕೊಳ್ಳುತ್ತಾರೆ. ಅವರು ಹರೆಯಕ್ಕೆ ಹೊರಳುತ್ತಾರೆ. ತಲೆಯೊಳಗೆ ಅಲೆಗಳೇಳುತ್ತವೆ. ಆಕರ್ಷಣೆಗೆ ಸೋಲುತ್ತಾರೆ. ಕೆಲವು ಗೆಳೆಯರ ಸಹವಾಸ ಅವರನ್ನು ಮತ್ತಷ್ಟು ಹಾದಿ ತಪ್ಪಲು ಕುಮ್ಮಕ್ಕು ನೀಡುತ್ತದೆ. ತೀರಾ ದೊಡ್ಡವರೂ ಅಲ್ಲದ ಇತ್ತ ಮಗುವೂ ಅಲ್ಲದ ಅವರ ವಯಸ್ಸು ಅವರನ್ನು ಆಡಿಸುತ್ತದೆ. ಅವರ ಕೈಗೆ ಮೊಬೈಲ್ ಫೋನ್ ಸಿಕ್ಕರಂತೂ ಮುಗಿದೇಹೋಯಿತು. ಇಂದು ಶಾಲೆಯ ಕಡೆ, ಓದಿನ ಕಡೆ ಮಕ್ಕಳು ವಿಮುಖರಾಗಲು ಇರುವ ಪ್ರಮುಖ ಕಾರಣಗಳಲ್ಲಿ ಮೊಬೈಲ್ ಮೊದಲ ಸ್ಥಾನದಲ್ಲಿದೆ. ಮಕ್ಕಳು ಆನ್‌ಲೈನ್ ಜಗತ್ತಿನಲ್ಲಿ ಮುಳುಗಿ ಒದ್ದಾಡುತ್ತಿದ್ದಾರೆ.

ಚಿಕ್ಕಮಗಳೂರಿನಲ್ಲಿ ನಾಲ್ವರು ಶಾಲಾ ಮಕ್ಕಳು ಇತ್ತೀಚೆಗೆ ಹೆತ್ತವರಿಗೆ ಗೊತ್ತಿಲ್ಲದೆ ಮನೆಬಿಟ್ಟು ಹೊರಡಲು ಮಾಡಿಕೊಂಡ ಯೋಜನೆ ಬಹಿರಂಗವಾಯಿತು. ಅವರ ಮೊಬೈಲ್ ಗೇಮ್ ಗೀಳು, ಅದರಲ್ಲಿ ಮಾಡಿದ ಹಣ, ಹೆತ್ತವರಿಗೆ ಗೊತ್ತಿಲ್ಲದೆ ಖರೀದಿಸಿದ ವಸ್ತುಗಳು, ಮನೆ ಬಂಧನವೆನ್ನಿಸಿ ಅದನ್ನು ತೊರೆಯಲು ಮಾಡಿದ ಪ್ರಯತ್ನಗಳು ಗೊತ್ತಾದವು. ಬರೀ ಮೊಬೈಲ್ ಗೇಮ್ ಹುಡುಗರನ್ನು ಈ ಪರಿ ತಲೆಕೆಡಿಸಿರುವಾಗ ಮಕ್ಕಳನ್ನು ದಾರಿ ತಪ್ಪಿಸಲು ಇನ್ನೂ ಏನೇನೆಲ್ಲಾ ಇವೆ ನಮ್ಮ ನಡುವೆ. ಇವುಗಳನ್ನೆಲ್ಲಾ ನಿಯಂತ್ರಿಸಿಕೊಂಡು ವಿದ್ಯಾರ್ಥಿ ಶಾಲೆಯ ಕಡೆ ಹೊರಡುವುದು ಹೇಗೆ? ವಿದ್ಯಾರ್ಥಿಗಳು ಶಾಲೆ ತಪ್ಪಿಸುತ್ತಾರೆ. ಹೆತ್ತವರ ಕಣ್ಣನ್ನೂ ತಪ್ಪಿಸುತ್ತಾರೆ.

ಹತ್ತನೇ ತರಗತಿಗೆ ಬರುವ ವಿದ್ಯಾರ್ಥಿಗೆ ಒತ್ತಡಗಳು ಹೆಚ್ಚು. ತರಗತಿಗಳಂತೂ ಅಂಕದ ಕುಲುಮೆಗಳಾಗುತ್ತವೆ. ಮನೆ ಅಂಕದ ಜೈಲಾಗುತ್ತದೆ. ಹೆಚ್ಚು ಅಂಕ ಪಡೆಯಬೇಕು ಎನ್ನುವ ಸತತ ದಾಳಿಗಳು ಅವನ ಮೇಲೆ ಆಗುತ್ತವೆ. ಅವನು ಬಹಳಷ್ಟು ಒತ್ತಡಕ್ಕೆ ಒಳಗಾಗುತ್ತಾನೆ. ಪ್ರತಿಯೊಂದು ಮಗುವಿಗೂ ಅದರದೇ ಆದ ಬುದ್ಧಿಮತ್ತೆ ಇರುತ್ತದೆ. ಇದನ್ನು ಪರಿಗಣಿಸದೆ ಹೇರುವ ನಿರಂತರ ಒತ್ತಡ ಮಕ್ಕಳನ್ನು ಕಂಗಾಲಾಗಿಸುತ್ತದೆ.

ಪ್ರೌಢಶಾಲೆಗೆ ಬರುವ ವೇಳೆಗೆ ಮಕ್ಕಳು ದೊಡ್ಡವರಾಗಿರುತ್ತಾರೆ. ಕೂಲಿಗೆ ಕಳುಹಿಸಿದರೆ ಮನೆಯ ಬಡತನ ನೀಗಬಹುದೆಂದು ಮಕ್ಕಳನ್ನು ಕೂಲಿಗೆ ಕಳುಹಿಸುವ ಕೆಲವು ಪೋಷಕರಿರಬಹುದು. ಆದರೆ ಅವರ ಸಂಖ್ಯೆ ತೀರಾ ವಿರಳ. ತಮಗೆ ಎಷ್ಟೇ ಕಷ್ಟವಿದ್ದರೂ ಮಕ್ಕಳು ನಾಲ್ಕು ಅಕ್ಷರ ಕಲಿಯಲಿ ಎಂದು ಪೋಷಕರು ಬಯಸುತ್ತಾರೆ. ಅದನ್ನು ಮೀರಿಯೂ ಕೆಲವು ಮಕ್ಕಳು ದುಡಿಯುತ್ತಿರುವ ಉದಾಹರಣೆಗಳುಂಟು. ಹೆಣ್ಣುಮಕ್ಕಳಿಗೆ ಮದುವೆಯಂತಹ ಪ್ರಸ್ತಾಪಗಳು ಕೂಡ ಮಕ್ಕಳನ್ನು ಓದಿನ ಕಡೆ ಸೆಳೆಯಲು ಅಡ್ಡಿಯಾಗುತ್ತವೆ.

ವಿದ್ಯಾರ್ಥಿಯ ಮನೆಯ ಕೌಟುಂಬಿಕ ಸ್ಥಿತಿ, ಒಡೆದ ಕುಟುಂಬಗಳು, ಬಡತನ, ಶಾಲೆಯ ಸ್ಥಿತಿಗತಿ, ಕೆಲವು ಶಿಕ್ಷಕರ ಆಕರ್ಷಕವಲ್ಲದ ಬೋಧನೆ, ಶಾಲೆಯು ಹೇರುವ ಮಾನಸಿಕ ಒತ್ತಡ, ಗೆಳೆಯರ ಧೋರಣೆಗಳು, ವಿದ್ಯಾರ್ಥಿಯ ಆರೋಗ್ಯದ ಸ್ಥಿತಿ ಇವೆಲ್ಲವೂ ಶಾಲೆಗೆ ಬರದಂತೆ ನಿಯಂತ್ರಿಸಬಹುದು (ಸರಿಯಾದ ಶೌಚಾಲಯ ಇಲ್ಲದೆ ಶಾಲೆ ತೊರೆದ ಮಕ್ಕಳು ಕೂಡ ಇದ್ದಾರೆ).

27 ಸಾವಿರ ಅನ್ನುವುದು ಬರೀ ಒಂದು ಸಂಖ್ಯೆ ಅಲ್ಲ. ಅದು 27 ಸಾವಿರ ಬದುಕು, 27 ಸಾವಿರ ಭವಿಷ್ಯ. ಶಿಕ್ಷಣ ಮಗುವಿನ ಒಳ್ಳೆಯ ನಾಳೆಗಳ ಹೆಬ್ಬಾಗಿಲು. ಆ ಬಾಗಿಲು ಮುಚ್ಚಿಹೋದರೆ ಅದರ ನಾಳೆಗಳು ಕತ್ತಲಾಗುತ್ತವೆ. ಹತ್ತನೇ ತರಗತಿಗೆ ಬರುವ ವಿದ್ಯಾರ್ಥಿ ಹರೆಯದ ಬಾಗಿಲು ಬಡಿಯುವುದರಿಂದ, ಆ ವಯಸ್ಸಿನಲ್ಲಿ ಸೂಕ್ತ ತಿಳಿವಳಿಕೆ, ಮಾರ್ಗದರ್ಶನದ ಅವಶ್ಯಕತೆ ಇದೆ. ಒತ್ತಡ ನಿಭಾಯಿಸಿಕೊಳ್ಳುವುದನ್ನು ಕಲಿಸಬೇಕಿದೆ. ಬದುಕಿಗೆ ಶಿಕ್ಷಣ ಎಷ್ಟು ಮುಖ್ಯ ಎಂಬುದನ್ನು ತಿಳಿಹೇಳಬೇಕಿದೆ.

ಮಕ್ಕಳ ಜೊತೆ ಜೊತೆಗೆ ಈಗೀಗ ಹೆತ್ತವರಿಗೂ ಮಕ್ಕಳನ್ನು ಬೆಳೆಸುವ ಬಗ್ಗೆ ತರಗತಿಗಳನ್ನು ತೆಗೆದುಕೊಳ್ಳಬೇಕಾದ ಅಗತ್ಯವಿದೆ ಅನಿಸುತ್ತದೆ. ಸತತ ಗೈರಾಗುವ ಮಕ್ಕಳನ್ನು ಶಾಲೆಯ ಆರಂಭದ ದಿನಗಳಲ್ಲೇ ಗುರುತಿಸಿ, ನಿಖರ ಕಾರಣ ಪತ್ತೆ ಹಚ್ಚಿ ಓದಿಗೆ ಅನುಕೂಲ ಕಲ್ಪಿಸುವುದು ನಮ್ಮೆಲ್ಲರ ಆದ್ಯತೆ ಆಗಬೇಕು.

ವಾಚಕರ ವಾಣಿ

ಮುತ್ತಿಡುವುದು ಕೆಟ್ಟದ್ದಲ್ಲ...

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಜೆಡಿಎಸ್‌ನ ಪಂಚರತ್ನ ಯಾತ್ರೆಯ ಸಂದರ್ಭದಲ್ಲಿ ಮಹಿಳೆಯೊಬ್ಬರು ಪಕ್ಷದ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರ ಕೆನ್ನೆಗೆ ಮುತ್ತಿಟ್ಟ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ರಾಜಕೀಯ ನಾಯಕರಿಗೆ, ಸಿನಿಮಾ ನಟನಟಿಯರಿಗೆ ಅಥವಾ ಇತರ ಕ್ಷೇತ್ರಗಳ ಸಾಧಕರಿಗೆ ಬಹಿರಂಗವಾಗಿ ಮುತ್ತಿಡುವ ಪರಿಪಾಟವೇನೂ ಹೊಸದಲ್ಲ. ಇಂತಹ ಸಂಸ್ಕೃತಿ ಪರದೇಶಗಳಲ್ಲಿ ಸಹ ಚಾಲ್ತಿಯಲ್ಲಿದೆ.

ಕೆಲವು ವರ್ಷಗಳ ಹಿಂದೆ, ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಮಾವೇಶವೊಂದರಲ್ಲಿ ಮಹಿಳೆಯೊಬ್ಬರು ಬಹಿರಂಗವಾಗಿ ಮುತ್ತು ಕೊಟ್ಟಾಗ ದೊಡ್ಡಮಟ್ಟದ ಸುದ್ದಿಯಾಗಿತ್ತು. ಮುತ್ತಿಕ್ಕುವ ಇಂತಹ ಪ್ರಸಂಗಗಳು ಆಗಾಗ ನಡೆಯುತ್ತಲೇ ಇರುತ್ತವೆ. ಮುತ್ತಿಡುವುದು ಕೆಟ್ಟದ್ದೇನೂ ಅಲ್ಲ. ಅದರಲ್ಲಿ ಕೆಟ್ಟ ಉದ್ದೇಶವನ್ನು ಕೂಡ ಹುಡುಕಬೇಕಿಲ್ಲ. ಅದು ಪ್ರೀತಿಯ ದ್ಯೋತಕವೆಂದು ಹೇಳಬಹುದು.

ಕೆ.ವಿ.ವಾಸು, ಮೈಸೂರು

ನೀತಿ ಸಂಹಿತೆಗೆ ಬರುವುದೇ ಹಲ್ಲು?

ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಟಿ.ಎಸ್.ಕೃಷ್ಣಮೂರ್ತಿ ಅವರು ಕೆಲವು ವರ್ಷಗಳ ಹಿಂದೆ ಚಿತ್ರದುರ್ಗದ ಮುರುಘಾಮಠದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಬಂದಿದ್ದರು. ಆ ಸಂದರ್ಭದಲ್ಲಿ ಅವರು ಚುನಾವಣೆ ನೀತಿ ಸಂಹಿತೆ ಕುರಿತು ಪ್ರಶ್ನೋತ್ತರ ಕಾರ್ಯಕ್ರಮ ನಡೆಸಿಕೊಟ್ಟರು. ಊರಿನ ಗಣ್ಯಮಾನ್ಯರು ಹಾಜರಿದ್ದ ಆ ಸಭೆಯಲ್ಲಿ ವಿದ್ಯಾರ್ಥಿಯೊಬ್ಬ 'ಚುನಾವಣಾ ಸಂದರ್ಭದಲ್ಲಿ ನೀತಿ ಸಂಹಿತೆಯನ್ನು ಅತೀವವಾಗಿ ಉಲ್ಲಂಘಿಸಲಾಗುತ್ತದೆ. ಬಹುತೇಕರಿಗೆ ಯಾವ ಶಿಕ್ಷೆಯೂ ಆದಂತಿಲ್ಲ. ಇದಕ್ಕೇನು ಕಾರಣ?' ಎಂದು ಕೇಳಿದ. ಆ ಪ್ರಶ್ನೆಗೆ ಉತ್ತರಿಸಿದ ಕೃಷ್ಣಮೂರ್ತಿ ಅವರು 'ಚುನಾವಣಾ ನೀತಿ ಸಂಹಿತೆಯ ನಿಯಮಗಳು ನ್ಯಾಯಬದ್ಧಕ್ಕಿಂತ ಹೆಚ್ಚಾಗಿ ನೀತಿಬದ್ಧ' ಎಂದು ಹೇಳಿ ಅರ್ಥಗರ್ಭಿತವಾಗಿ ನಕ್ಕರು. ಈಗಲಾದರೂ ಚುನಾವಣಾ ನೀತಿ ಸಂಹಿತೆಗೆ ಕಾನೂನಿನ ಹಲ್ಲುಗಳು ಬರಲಿ ಎಂದು ಆಶಿಸಬಹುದಲ್ಲವೇ?

ಕೆ.ವೆಂಕಣ್ಣಾಚಾರ್, ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಇಹಲೋಕ ತೊರೆಯುವ ಮುನ್ನ...

ನಮ್ಮ ದೇಶದಲ್ಲಿ ಎಂದಾದರೂ ನಾವು ರೈತಸ್ನೇಹಿ, ಕಾರ್ಮಿಕಸ್ನೇಹಿ, ಯೋಧಸ್ನೇಹಿ, ಉದ್ಯಮಸ್ನೇಹಿ, ತೆರಿಗೆಸ್ನೇಹಿ, ಬಡವರಸ್ನೇಹಿ, ಪರಿಸರಸ್ನೇಹಿ, ನಾಗರಿಕಸ್ನೇಹಿ, ವಿದ್ಯಾರ್ಥಿಸ್ನೇಹಿ ಆಗಿರುವಂತಹ ಸರ್ಕಾರಗಳನ್ನು ಕಾಣಬಹುದೇ? ಒಂದು ವೇಳೆ, ಅಕಸ್ಮಾತ್ ಮತ್ತು ಅದೃಷ್ಟವಶಾತ್ ಕಂಡರೆ, ನಿಟ್ಟುಸಿರು ಬಿಟ್ಟು ಇಹಲೋಕ ತೊರೆಯುವ ಕೊನೆಯಾಸೆ ಇದೆ.

ಮುರುಗೇಶ ಹನಗೋಡಿಮಠ, ಹುಬ್ಬಳ್ಳಿ

ಪಠ್ಯಪುಸ್ತಕ, ಸಮವಸ್ತ್ರ: ನಡೆಯಲಿ ಸಿದ್ಧತೆ

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಇತ್ತೀಚಿನ ವರ್ಷಗಳಲ್ಲಿ ನಿಗದಿತ ಸಮಯಕ್ಕೆ ಪಠ್ಯಪುಸ್ತಕ ಹಾಗೂ ಸಮವಸ್ತ್ರಗಳನ್ನು ಪೂರೈಸುವ ಹೊಣೆಗಾರಿಕೆ ನಿರ್ವಹಿಸುವಲ್ಲಿ ನಮ್ಮ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿರುವುದನ್ನು ನಾವು ಕಂಡಿದ್ದೇವೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿನ ಅಗತ್ಯಗಳನ್ನು ಅಂದಾಜು ಮಾಡಿ, ಮುದ್ರಣ ಮತ್ತು ಇತರ ಸಿದ್ಧತೆಗಳನ್ನು ಈಗಿನಿಂದಲೇ ನಡೆಸಲು ಬದ್ಧತೆ ತೋರಬೇಕಾದುದು ಶಿಕ್ಷಣ ಇಲಾಖೆಯ ಜವಾಬ್ದಾರಿ.

ಈ ದಿಸೆಯಲ್ಲಿ ಕೈಗೊಳ್ಳಬೇಕಾದ ಪೂರ್ವಭಾವಿ ಕ್ರಮಗಳನ್ನು ಅಗತ್ಯವಾಗಿ ಕೈಗೊಳ್ಳಬೇಕು. ಮುದ್ರಕರು ಮತ್ತು ಸರಬರಾಜುದಾರರಿಗೆ ಗುಣಮಟ್ಟ ಹಾಗೂ ಪ್ರಮಾಣ ಷರತ್ತುಗಳನ್ನು ವಿಧಿಸಿ, ಕಟ್ಟುನಿಟ್ಟಾಗಿ ಪಾಲಿಸಬೇಕು. ಈ ಶೈಕ್ಷಣಿಕ ವರ್ಷದಲ್ಲಾದರೂ ಶಾಲಾರಂಭದ ಸಮಯಕ್ಕೆ ಆಗತ್ಯವಾದ ಎಲ್ಲಾ ಪಠ್ಯಪುಸ್ತಕ ಮತ್ತು ಸಮವಸ್ತ್ರ ವಿತರಣೆ ಕಾರ್ಯ ಯಶಸ್ವಿಯಾಗಲು ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಡಾ. ಟಿ.ವಿ.ನಾಗರಾಜ, ಬೆಂಗಳೂರು

ಕನ್ನಡ ಸಂವರ್ಧನೆ ಕುರಿತೇಕೆ ಮೌನ?

ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆಯೇ ರಾಜ್ಯ ಸರ್ಕಾರವು ಮೀಸಲಾತಿ ಹೆಚ್ಚಳ, ಒಳಮೀಸಲಾತಿ, ಜಾತಿಗೊಂದು ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿತು. ವಿರೋಧ ಪಕ್ಷಗಳು ಹಲವು ಭಾಗ್ಯಗಳು, ಸಾಲ ಮನ್ನಾ, ಉಚಿತ ಕೊಡುಗೆಗಳಂತಹ ಭರಪೂರ ಭರವಸೆಗಳನ್ನು ನೀಡಿವೆ. ಆದರೆ, ಕನ್ನಡಿಗರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆಯಾಗಲಿ, ಕರ್ನಾಟಕದ ಸರ್ವಾಂಗೀಣ ಪ್ರಗತಿಗೆ ಪೂರಕವಾದ ಯಾವ ಭರವಸೆಯನ್ನಾಗಲಿ ಮೂರೂ ಪ್ರಮುಖ ರಾಜಕೀಯ ಪಕ್ಷಗಳು ನೀಡಿಲ್ಲ. ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ಒದಗಿಸುವ ಮಹಿಷಿ ವರದಿಯ ಅನುಷ್ಠಾನದ ಬಗ್ಗೆಯಾಗಲಿ, ಶಾಸ್ತ್ರೀಯ ಕನ್ನಡ ಭಾಷೆಗೆ ಸಿಗಬೇಕಾದ ಸವಲತ್ತು ಒದಗಿಸುವ ವಿಚಾರವಾಗಲಿ, ಸರ್ಕಾರಿ ಶಾಲೆಗಳನ್ನು ಉತ್ತಮಪಡಿಸುವ ವಿಚಾರವಾಗಲಿ ಒಟ್ಟಾರೆಯಾಗಿ ಕನ್ನಡದ ವಿಷಯವನ್ನು ಯಾರೂ ಪ್ರಸ್ತಾಪಿಸುತ್ತಿಲ್ಲ. ಕನ್ನಡದ ಭವಿಷ್ಯದ ದೃಷ್ಟಿಯಿಂದ ಇದು ಆತಂಕಕಾರಿ ಬೆಳವಣಿಗೆ.

ರಾಜಕಾರಣಿಗಳು ಶ್ರೀಸಾಮಾನ್ಯರ ಆಶೋತ್ತರಗಳನ್ನು ಬಿಂಬಿಸುವ ಬದಲು ಪಕ್ಷವನ್ನು ಅಧಿಕಾರಕ್ಕೆ ತರಲು ಜನರನ್ನು ದಾರಿ ತಪ್ಪಿಸುವ ಹುಸಿ ಭರವಸೆಗಳನ್ನು ನೀಡುತ್ತಿರುವುದು, ಕನ್ನಡ ಸಂವರ್ಧನೆ ಕುರಿತು ಮೌನ ತಾಳಿರುವುದು ಅಪಾಯಕಾರಿ ಬೆಳವಣಿಗೆ. 18 ವರ್ಷದವರೆಗಿನ ಎಲ್ಲ ಮಕ್ಕಳಿಗೆ ಉಚಿತ, ಏಕರೂಪದ ಮಾತೃಭಾಷಾ ಮಾಧ್ಯಮದ ಶಿಕ್ಷಣ, ಪರಿಷ್ಕೃತ ಮಹಿಷಿ ವರದಿಯ ಅನುಷ್ಠಾನ, ಕನ್ನಡ ಶಾಸ್ತ್ರೀಯ ಭಾಷೆಗೆ ಸಿಗಬೇಕಾದ ಸವಲತ್ತುಗಳನ್ನು ಒದಗಿಸುವುದು, ಕನ್ನಡದ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ಯೋಜನೆಗಳು, ಒಟ್ಟಾರೆಯಾಗಿ ಸ್ವಾಭಿಮಾನಿ ಕರ್ನಾಟಕ ನಿರ್ಮಾಣ, ಕನ್ನಡ ಭಾಷೆ, ಸಂಸ್ಕೃತಿಯ ಬಗೆಗಿನ ಸಂಗತಿಗಳನ್ನು ಪ್ರಣಾಳಿಕೆಯಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ.

ರಾ.ನಂ.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಜ್ರಮಹೋತ್ಸವ ಸಂಭ್ರಮದಲ್ಲಿ ಸಿಬಿಐ

ಪ್ರಜಾವಾಣಿ ವಾರ್ತೆ

ಸಿಬಿಐ 'ಪಂಜರದ ಗಿಳಿ' ಮತ್ತು 'ತನ್ನ ಯಜಮಾನನ ದನಿಯಲ್ಲೇ ಮಾತನಾಡುವ ಸಂಸ್ಥೆ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಆರ್.ಎಂ. ಲೋಧಾ ಅವರು 2013ರಲ್ಲಿ ಹೇಳಿದ್ದರು. ಕಲ್ಲಿದ್ದಲು ಹಗರಣದಲ್ಲಿ ತನಿಖಾ ವರದಿಯನ್ನು ಬದಲಿಸಿದ್ದರ ಬಗ್ಗೆ ಸುಪ್ರೀಂ ಕೋರ್ಟ್ ಮಾಡಿದ್ದ ಕಟುಟೀಕೆ ಇದಾಗಿತ್ತು. ದೇಶದ ಅತ್ಯುನ್ನತ ತನಿಖಾ ಸಂಸ್ಥೆಯಾದ ಸಿಬಿಐ ಅನ್ನು ಸುಪ್ರೀಂ ಕೋರ್ಟ್ ಆಗ ತೀವ್ರ ತರಾಟೆಗೆ ತೆಗೆದುಕೊಂಡಿತ್ತು. ಸಿಬಿಐ ಸ್ಥಾಪನೆಯಾಗಿ ಸೋಮವಾರಕ್ಕೆ 60 ವರ್ಷ ತುಂಬಿದೆ. ಸಿಬಿಐನ ವಜ್ರಮಹೋತ್ಸವ ಸಂಭ್ರಮಾಚರಣೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದಾರೆ. ಆದರೆ, ಯುಪಿಎ ಸರ್ಕಾರ ಇದ್ದಾಗ ಎದುರಿಸುತ್ತಿದ್ದ ಆರೋಪಗಳನ್ನು, ಈಗ ಎನ್‌ಡಿಎ ಸರ್ಕಾರದ ಅವಧಿಯಲ್ಲೂ ಸಿಬಿಐ ಎದುರಿಸುತ್ತಿದೆ.

ಸಿಬಿಐ ಅನ್ನು 1963ರ ಏಪ್ರಿಲ್ 3ರಂದು ಸ್ಥಾಪಿಸಲಾಯಿತು. ಆ ಲೆಕ್ಕಾಚಾರದಲ್ಲಿ ಸಿಬಿಐಗೆ ಇದೇ ಸೋಮವಾರ (ಏಪ್ರಿಲ್ 3, 2023) 60 ವರ್ಷ ತುಂಬಿದೆ. ಈ ಅರವತ್ತು ವರ್ಷಗಳಲ್ಲಿ ಸಿಬಿಐ ಹಲವು ಬದಲಾವಣೆಗಳನ್ನು ಕಂಡಿದೆ. ಆರಂಭದಲ್ಲಿ ಕೆಲವೇ ಸ್ವರೂಪದ ಅಪರಾಧಗಳನ್ನು ತನಿಖೆಗೆ ಒಳಪಡಿಸುವ ಅಧಿಕಾರ ಹೊಂದಿದ್ದ ಸಿಬಿಐ, ಈಗ ಹತ್ತಾರು ಸ್ವರೂಪದ ಅಪರಾಧಗಳನ್ನು ತನಿಖೆಗೆ ಒಳಪಡಿಸುವ ಅಧಿಕಾರ ಹೊಂದಿದೆ.

ಸಿಬಿಐ ಅನ್ನು 1963ರಲ್ಲಿ ಏಕಾಏಕಿ ಸ್ಥಾಪನೆ ಮಾಡಲಿಲ್ಲ. ಅದರ ಇತಿಹಾಸ 1941ರವರೆಗೂ ಚಾಚಿದೆ. 40ರ ದಶಕದಲ್ಲಿ ಎರಡನೇ ವಿಶ್ವಯುದ್ಧದಲ್ಲಿ ಭಾರತವೂ ಭಾಗಿಯಾಗಿತ್ತು. ತಮ್ಮ ಆಳ್ವಿಕೆಯಲ್ಲಿ ಇದ್ದ ಭಾರತದ ಸೇನೆಯನ್ನು ಬ್ರಿಟಿಷರು ಎರಡನೇ ಮಹಾಯುದ್ಧಕ್ಕೆ ಬಳಸಿಕೊಂಡಿದ್ದರು. ಸೇನಾ ಸಾಮಗ್ರಿಗಳ ಸಾಗಣೆ ಮತ್ತು ಪೂರೈಕೆಯಲ್ಲಿ ಭ್ರಷ್ಟಾಚಾರ ಮಿತಿಮೀರಿತ್ತು. ಸಾಮಾನ್ಯ ಪೊಲೀಸರಿಂದ ಈ ಭ್ರಷ್ಟಾಚಾರವನ್ನು ಹತೋಟಿಗೆ ತರಲು ಸಾಧ್ಯವಿಲ್ಲ ಎಂದಾದಾಗ, 1941ರಲ್ಲಿ ಕಾರ್ಯಕಾರಿ ಆದೇಶ ಹೊರಡಿಸುವ ಮೂಲಕ ವಿಶೇಷ ಪೊಲೀಸ್ ಪಡೆ (ಎಸ್‌ಪಿಇ) ಸ್ಥಾಪಿಸಲಾಯಿತು. ಸೇನಾ ಮತ್ತು ಯುದ್ಧ ಸಾಮಗ್ರಿಗಳ ಪೂರೈಕೆಯಲ್ಲಿನ ಭ್ರಷ್ಟಾಚಾರವನ್ನು ತನಿಖೆಗೆ ಒಳಪಡಿಸುವ ಅಧಿಕಾರವನ್ನು ಎಸ್‌ಪಿಇಗೆ ನೀಡಲಾಯಿತು. ರೈಲ್ವೆ ಇಲಾಖೆಯಲ್ಲಿ ನಡೆಯುವ ಭ್ರಷ್ಟಾಚಾರ ಪ್ರಕರಣಗಳನ್ನು ತನಿಖೆಗೆ ಒಳಪಡಿಸುವ ಅಧಿಕಾರವನ್ನು ಎಸ್‌ಪಿಇಗೆ ನೀಡಲಾಯಿತು. ನಂತರದ ವರ್ಷಗಳಲ್ಲಿ 'ದೆಹಲಿ ಸ್ಪೆಷಲ್ ಪೊಲೀಸ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆ'ಯನ್ನು ರಚಿಸಿ, ಎಸ್‌ಪಿಇಯನ್ನು ಆ ಕಾಯ್ದೆಯ ವ್ಯಾಪ್ತಿಗೆ ತರಲಾಯಿತು. ವರ್ಷಗಳು ಕಳೆದಂತೆ ಆರ್ಥಿಕ ಅಪರಾಧಗಳು, ಕ್ರಿಮಿನಲ್ ಅಪರಾಧಗಳನ್ನು ತನಿಖೆಗೆ ಒಳಪಡಿಸುವ ಅಧಿಕಾರವನ್ನು ಎಸ್‌ಇಪಿಗೆ ನೀಡಲಾಯಿತು. 1963ರಲ್ಲಿ ಎಸ್‌ಇಪಿಯನ್ನು ರದ್ದುಪಡಿಸಿ, ಸಿಬಿಐ ಅನ್ನು ಸ್ಥಾಪಿಸಲಾಯಿತು. ಅದರ ಅಧಿಕಾರ ಮತ್ತು ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲಾಯಿತು.

ಎಸ್‌ಪಿಇ ಮತ್ತು ಆನಂತರದಲ್ಲಿ ಸಿಬಿಐಯ ಮೂಲ ಕಾರ್ಯವ್ಯಾಪ್ತಿ, ಸರ್ಕಾರಿ ಸಿಬ್ಬಂದಿಯ ಭ್ರಷ್ಟಾಚಾರವನ್ನು ತನಿಖೆಗೆ ಒಳಪಡಿಸುವುದೇ ಆಗಿದೆ. ಹೀಗಾಗಿ ಈ ಸಂಸ್ಥೆಯು ಗೃಹ ಸಚಿವಾಲಯದ ಅಧೀನದಲ್ಲಿ ಬರುವುದಿಲ್ಲ. ಬದಲಿಗೆ ಸಿಬ್ಬಂದಿ ಇಲಾಖೆಯ ಅಡಿಯಲ್ಲಿ ಕೆಲಸ ಮಾಡುತ್ತದೆ. ಈ ಇಲಾಖೆಯು ಸಿಬ್ಬಂದಿ, ಪಿಂಚಣಿ ಮತ್ತು ಸಾರ್ವಜನಿಕ ಅಹವಾಲು ಸಚಿವಾಲಯದ ಅಧೀನ ಸಂಸ್ಥೆಯಾಗಿದೆ. ಭ್ರಷ್ಟಾಚಾರ, ಆರ್ಥಿಕ ಅಪರಾಧ ಮತ್ತು ಕ್ರಿಮಿನಲ್ ಅಪರಾಧಗಳ ತನಿಖೆ ನಡೆಸುವ ಅಧಿಕಾರ ಹೊಂದಿದ್ದರೂ ಕೇಂದ್ರ ಸರ್ಕಾರದ ಅನುಮತಿಯ ಮೇರೆಗೇ ಈ ಸಂಸ್ಥೆ ಕೆಲಸ ಮಾಡಬೇಕಾಗುತ್ತದೆ. ಹೀಗಾಗಿಯೇ ಕೇಂದ್ರ ಸರ್ಕಾರದ ಆಣತಿಯಂತೆ ಕೆಲಸ ಮಾಡುವ ಸಂಸ್ಥೆ ಎಂಬ ಆರೋಪ ಸಿಬಿಐ ಮೇಲೆ ಇದೆ. ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಸಿಬಿಐ ಅನ್ನು 'ಕಾಂಗ್ರೆಸ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್' ಎಂದು ಅಂದಿನ ವಿರೋಧ ಪಕ್ಷಗಳು ಲೇವಡಿ ಮಾಡುತ್ತಿದ್ದವು. ಈಗ ಬಿಜೆಪಿ ಸರ್ಕಾರವು ತನ್ನ ವಿರೋಧಿಗಳನ್ನು ನಾಶ ಮಾಡಲು ಸಿಬಿಐ ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ.

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಸಿಬಿಐ ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ಟಿಎಂಸಿ ಕಾರ್ಯಕರ್ತರು ಕೋಲ್ಕತ್ತದಲ್ಲಿ 2022ರ ಸೆಪ್ಟೆಂಬರ್ 7ರಂದು ಪ್ರತಿಭಟನೆ ನಡೆಸಿದ್ದರು

ಕೇಂದ್ರ ಸರ್ಕಾರಕ್ಕೇ ಹೆಚ್ಚು ಅಧಿಕಾರ

ಯಾವುದೇ ಸ್ವರೂಪದ ಅಪರಾಧ ಕೃತ್ಯಗಳನ್ನು ಸಿಬಿಐ ತನಿಖೆಗೆ ಒಳಪಡಿಸುವ ಅಧಿಕಾರವನ್ನು ಕೇಂದ್ರ ಸರ್ಕಾರ ಹೊಂದಿದೆ. ತನಗೆ ಉಚಿತ ಎನಿಸುವ, ಅಗತ್ಯ ಎನಿಸುವ ಅಪರಾಧ ಕೃತ್ಯಗಳ ಕುರಿತು ತನಿಖೆ ನಡೆಸಲು ಕೇಂದ್ರ ಸರ್ಕಾರವು ಸಿಬಿಐಗೆ ಆದೇಶಿಸಬಹುದು. ಆದರೆ, ಆ ಆದೇಶವನ್ನು ಗೆಜೆಟ್‌ನಲ್ಲಿ ಪ್ರಕಟಿಸಬೇಕು ಎಂದು ದೆಹಲಿ ವಿಶೇಷ ಪೊಲೀಸ್ ಪಡೆ ಕಾಯ್ದೆಯ 3ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ಆಯ್ದ ಕೆಲವು ಕೃತ್ಯಗಳನ್ನು ಸಿಬಿಐನ ತನಿಖೆಗೆ ವಹಿಸಲೂ ಈ ಅಧಿಕಾರವನ್ನು ಕೇಂದ್ರ ಸರ್ಕಾರ ಬಳಸಿಕೊಳ್ಳಬಹುದು. ಜತೆಗೆ ಕೆಲವು ಸ್ವರೂಪದ ಕೃತ್ಯಗಳನ್ನು ಸಿಬಿಐ ವ್ಯಾಪ್ತಿಗೆ ತರುವ ಮೂಲಕ, ಸಿಬಿಐನ ಅಧಿಕಾರವನ್ನು ಹೆಚ್ಚಿಸುವುದಕ್ಕೂ ಈ ಅಧಿಕಾರವನ್ನು ಕೇಂದ್ರ ಸರ್ಕಾರ ಬಳಸಿಕೊಳ್ಳಬಹುದು. ಈ ಅಧಿಕಾರವನ್ನು ಬಳಸಿಕೊಂಡೇ, ಆರ್ಥಿಕ ಅಪರಾಧಗಳು ಮತ್ತು ಗಂಭೀರ ಅಪರಾಧಗಳನ್ನು ಸಿಬಿಐ ವ್ಯಾಪ್ತಿಗೆ ತರಲಾಗಿದೆ. ಇದೇ ರೀತಿ ಸಿಬಿಐ ಅಧಿಕಾರವನ್ನು ತೆಗೆದುಹಾಕಲೂ ಸರ್ಕಾರವು ಈ ಸೆಕ್ಷನ್ ಅನ್ನು ಬಳಸಿಕೊಳ್ಳಲು ಅವಕಾಶವಿದೆ.

ಕೇಂದ್ರ ಸರ್ಕಾರ ಯಾವುದೇ ಕೃತ್ಯ ಅಥವಾ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿದರೂ, ಸಂಪೂರ್ಣ ಸ್ವತಂತ್ರವಾಗಿ ತನಿಖೆ ನಡೆಸುವ ಅಧಿಕಾರ ಸಿಬಿಐಗೆ ಇಲ್ಲ. ಕೇಂದ್ರ ಸರ್ಕಾರದ ಇಲಾಖೆಗಳು, ಸಚಿವಾಲಯಗಳು ಭಾಗಿಯಾದ ಪ್ರಕರಣಗಳಲ್ಲಿ ತನಿಖೆ ನಡೆಸುವ ಮುನ್ನ ಸಿಬಿಐ ಪೂರ್ವಾನುಮತಿ ಪಡೆಯಬೇಕು ಎಂದು ಈ ಕಾಯ್ದೆಯ 6ನೇ ಎ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಕೇಂದ್ರ ಸರ್ಕಾರದ ಇಲಾಖೆಗಳು ಮತ್ತು ಸಚಿವಾಲಯಗಳಲ್ಲಿ ಇರುವ ಜಂಟಿ ಕಾರ್ಯದರ್ಶಿ ಹಾಗೂ ಅದಕ್ಕಿಂತಲೂ ಉನ್ನತ ಹುದ್ದೆ ಹೊಂದಿರುವ ಯಾವ ಅಧಿಕಾರಿಯ ವಿರುದ್ಧವೂ ಸಿಬಿಐ ವಿಚಾರಣೆ, ತನಿಖೆಯನ್ನು ನೇರವಾಗಿ ನಡೆಸುವಂತಿಲ್ಲ. ಅಂತಹ ಅಧಿಕಾರಿಗಳನ್ನು ತನಿಖೆಗೆ ಒಳಪಡಿಸಲು ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಲೇಬೇಕು. ಸರ್ಕಾರವು ಅನುಮತಿಯನ್ನು ನಿರಾಕರಿಸಿದರೆ, ಸಿಬಿಐ ತನಿಖೆಯನ್ನು ಕೈಬಿಡಬೇಕಾಗುತ್ತದೆ.

ಸಿಬಿಐ ತನಿಖಾ ವ್ಯಾಪ್ತಿ

ಕೇಂದ್ರ ಸರ್ಕಾರ ಜಾರಿ ಮಾಡಿರುವ ಸಾರ್ವಜನಿಕ ವಲಯದ ಯೋಜನೆಗಳು, ಕೇಂದ್ರ ಸರ್ಕಾರದ ಹಣಕಾಸು ನೆರವಿನ ಶಾಸನಾತ್ಮಕ ಸಂಸ್ಥೆಗಳೂ ಸಿಬಿಐ ತನಿಖಾ ವ್ಯಾಪ್ತಿಯಲ್ಲಿವೆ. ಕೇಂದ್ರದ ಕಾನೂನುಗಳ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳು, ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ, ಆಮದು–ರಫ್ತು ನಿಯಂತ್ರಣ ಆದೇಶಗಳ ಗಂಭೀರ ಉಲ್ಲಂಘನೆ ಪ್ರಕರಣಗಳನ್ನು ಸಂಸ್ಥೆ ತನಿಖೆಗೆ ಒಳಪಡಿಸಬಹುದು.

ರೈಲ್ವೆ, ಅಂಚೆ ಮತ್ತು ದೂರಸಂಪರ್ಕ ವಲಯ, ವಿಮಾನಯಾನ ಕ್ಷೇತ್ರದಲ್ಲಿ ನಡೆಯುವ ಅಪರಾಧಗಳು, ಪಾಸ್‌ಪೋರ್ಟ್ ಅಕ್ರಮಕ್ಕೆ ಸಂಬಂಧಿಸಿದ ಪ್ರಕರಣಗಳೂ ಇದರ ವ್ಯಾಪ್ತಿಯಲ್ಲಿವೆ. ಭಾರತದ ರಕ್ಷಣಾ ಕಾಯ್ದೆಯ ಕೆಲವು ವಿಭಾಗಗಳಲ್ಲಿ ಸಿಬಿಐ ತನಿಖೆಗೆ ಅವಕಾಶವಿದೆ.

ವಿವಿಧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ವೃತ್ತಿಪರ ಅಪರಾಧಿಗಳು ನಡೆಸಿರಬಹುದಾದ ಸಂಘಟಿತ ಅಪರಾಧಕ್ಕೆ ಸಂಬಂಧಿಸಿದ ಮುಖ್ಯ ಹಾಗೂ ಗಂಭೀರ ಪ್ರಕರಣಗಳನ್ನು ತನಿಖೆಗೆ ಒಳಪಡಿಸುತ್ತದೆ. ಮಕ್ಕಳ ಅಪಹರಣ, ಅಂತರರಾಜ್ಯ ಮಾದಕವಸ್ತು ಸಾಗಣೆ ಪ್ರಕರಣಗಳ ತನಿಖೆಗೆ ರಾಜ್ಯ ಸರ್ಕಾರಗಳು ಮನವಿ ಮಾಡಿದರೆ, ತನಿಖೆಯನ್ನು ಕೈಗೆತ್ತಿಕೊಳ್ಳುತ್ತದೆ.

ಸಂಸ್ಥೆಯೊಂದರ ಆಂತರಿಕ ತನಿಖಾ ತಂಡಕ್ಕೆ ಈಗಾಗಲೇ ವಹಿಸಿರುವ ಪ್ರಕರಣಗಳು, ರಾಜ್ಯ ಸರ್ಕಾರಗಳ ತನಿಖಾ ಸಂಸ್ಥೆಗಳು ಈಗಾಗಲೇ ತನಿಖೆಗೆ ಎತ್ತಿಕೊಂಡಿರುವ ಪ್ರಕರಣಗಳನ್ನು, ಕೋರಿಕೆ ಅಥವಾ ನಿರ್ದೇಶನದ ಮೇರೆಗೆ ಸಿಬಿಐ ತನಿಖೆಗೆ ಎತ್ತಿಕೊಳ್ಳಲು ಅವಕಾಶವಿದೆ.

ಭಯೋತ್ಪಾದಕರು, ತೀವ್ರವಾದಿಗಳು ಎಸಗುವ ಹತ್ಯೆ, ಅಪಹರಣಗಳು, ಬೃಹತ್ ಬ್ಯಾಂಕ್‌ಗಳು ಹಾಗೂ ವಿಮಾ ವಲಯದ ಅವ್ಯವಹಾರಗಳೂ ಇದರ ವ್ಯಾಪ್ತಿಯಲ್ಲಿವೆ. ಭೋಪಾಲ್ ಅನಿಲ ದುರಂತದಂತಹ ಪ್ರಕರಣಗಳ ತನಿಖೆಯನ್ನೂ ಸಿಬಿಐ ನಿಭಾಯಿಸಿದೆ.

ಕೇಂದ್ರ–ರಾಜ್ಯಗಳ ಜಟಾಪಟಿ

ಸಿಬಿಐಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಹೊಂದಿರುವ ಅಧಿಕಾರವು ಪರಸ್ಪರ ಜಟಾಪಟಿಗೆ ಕಾರಣವಾಗಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷದ, ವಿರೋಧ ಪಕ್ಷಗಳು ಅಧಿಕಾರದಲ್ಲಿ ಇರುವ ರಾಜ್ಯಗಳಲ್ಲಿ ಇಂತಹ ಜಟಾಪಟಿ ಹೆಚ್ಚು ನಡೆದಿವೆ.

ಸಿಬಿಐ, ಸಿಬಿಐ ತಂಡ ಮತ್ತು ಇತರೆ ಸಿಬ್ಬಂದಿ ದೇಶದ ಯಾವ ಪ್ರದೇಶದಲ್ಲಿ ಕೆಲಸ ಮಾಡಬೇಕು ಮತ್ತು ಯಾವ ರೀತಿ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶನ ನೀಡುವ ಅಧಿಕಾರವನ್ನು ಈ ಕಾಯ್ದೆಯ 5ನೇ ಸೆಕ್ಷನ್ ಕೇಂದ್ರ ಸರ್ಕಾರಕ್ಕೆ ನೀಡುತ್ತದೆ. ಅಂತಹ ಅಧಿಕಾರಿಗಳನ್ನು ಕರ್ತವ್ಯಕ್ಕೆ ಹೇಗೆ ನಿಯೋಜನೆ ಮಾಡಬೇಕು ಮತ್ತು ಪೊಲೀಸ್ ಸಿಬ್ಬಂದಿಯನ್ನು ಸಿಬಿಐಗೆ ಹೇಗೆ ನಿಯೋಜನೆ ಮಾಡಿಕೊಳ್ಳಬೇಕು ಎಂಬುದನ್ನು ಈ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಈ ಸೆಕ್ಷನ್ ಪರಮಾಧಿಕಾರ ನೀಡುತ್ತದೆ.

ಆದರೆ, ಕೇಂದ್ರ ಸರ್ಕಾರದ ಪರಮಾಧಿಕಾರಕ್ಕೂ ಈ ಕಾಯ್ದೆಯ ಬೇರೆ ಸೆಕ್ಷನ್ ಅಡಿಯಲ್ಲಿ ತಡೆ ಒಡ್ಡಲಾಗಿದೆ. 'ಸಿಬಿಐನ ಯಾವುದೇ ಅಧಿಕಾರಿ ಮತ್ತು ಸಿಬ್ಬಂದಿ ರಾಜ್ಯ ಸರ್ಕಾರದ ಅನುಮತಿ ಪಡೆಯದೇ, ಆ ರಾಜ್ಯದಲ್ಲಿ ತನ್ನ ಅಧಿಕಾರ ಚಲಾಯಿಸುವಂತಿಲ್ಲ' ಎಂದು ಈ ಕಾಯ್ದೆಯ 6ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಅನುಮತಿಯನ್ನು ನೀಡುವ ಅಥವಾ ನಿರಾಕರಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಲಾಗಿದೆ.

ಅನುಮತಿ ಸಂಘರ್ಷ: ರಾಜ್ಯ ಸರ್ಕಾರಗಳು ತಮ್ಮ ರಾಜ್ಯದ ಭೌಗೋಳಿಕ ವ್ಯಾಪ್ತಿಯಲ್ಲಿ ತನಿಖೆ ನಡೆಸಲು ಇಚ್ಛಿಸುವ ಸಿಬಿಐಗೆ ಎರಡು ರೀತಿಯ ಅನುಮತಿಗಳನ್ನು ನೀಡುತ್ತವೆ. ಒಂದು ಸಾಮಾನ್ಯ ಮತ್ತೊಂದು ನಿರ್ದಿಷ್ಟ. ಸಾಮಾನ್ಯ ಅನುಮತಿಯ ಪ್ರಕಾರ, ಸಿಬಿಐ ರಾಜ್ಯದ ಎಲ್ಲಿ ಬೇಕಾದರೂ ತನಿಖೆ ನಡೆಸುವ ಹಾಗೂ ರಾಜ್ಯಕ್ಕೆ ಎಷ್ಟು ಸಾರಿ ಬೇಕಾದರೂ ಭೇಟಿ ನೀಡುವ ಅವಕಾಶ ನೀಡುತ್ತದೆ. ಆದರೆ ನಿರ್ದಿಷ್ಟ ಅನುಮತಿ ಪ್ರಕಾರ, ಸಿಬಿಐಗೆ ಈ ಸ್ವಾತಂತ್ರ್ಯ ಇರುವುದಿಲ್ಲ. ನಿರ್ದಿಷ್ಟ ಪ್ರಕರಣದ ತನಿಖೆ ನಡೆಸುವ ಸಲುವಾಗಿ ರಾಜ್ಯ ಸರ್ಕಾರದ ಅನುಮತಿ ಪಡೆದೇ ಮುನ್ನಡೆಯಬೇಕು. ಪ್ರತೀ ಬಾರಿ ರಾಜ್ಯಕ್ಕೆ ಬರುವಾಗಲೂ ಅನುಮತಿ ಕೇಳಿಯೇ ಬರಬೇಕಾಗುತ್ತದೆ.

ಬಿಜೆಪಿಯೇತರ ಸರ್ಕಾರಗಳಿರುವ ಬಹುತೇಕ ರಾಜ್ಯಗಳು ಸಿಬಿಐಗೆ ನೀಡಿದ್ದ ಸಾಮಾನ್ಯ ಅನುಮತಿಯನ್ನು ವಾಪಸ್ ಪಡೆದಿವೆ. ಪಶ್ಚಿಮ ಬಂಗಾಳ, ರಾಜಸ್ಥಾನ, ಕೇರಳ, ಛತ್ತೀಸಗಡ, ಮಹಾರಾಷ್ಟ್ರ ಮೊದಲಾದ ರಾಜ್ಯಗಳು ಈ ಸಾಲಿನಲ್ಲಿವೆ. ಆದರೆ ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಸರ್ಕಾರ ಬದಲಾವಣೆಯಾದ ಬಳಿಕ, ಸಾಮಾನ್ಯ ಅನುಮತಿಯನ್ನು ಸಿಬಿಐಗೆ ಮತ್ತೆ ನೀಡಲಾಗಿದೆ.

ಸಿಬಿಐ ಮಮತಾ ಜಟಾಪಟಿ: ಶಾರದಾ ಹಗರಣ ಹಾಗೂ ರೋಸ್‌ವ್ಯಾಲಿ ಹಗರಣದಲ್ಲಿ ಕೋಲ್ಕತ್ತ ಪೊಲೀಸ್ ಆಯುಕ್ತ ರಾಜೀವ್ ಕುಮಾರ್ ಅವರನ್ನು ವಿಚಾರಣೆಗೆ ಒಳಪಡಿಸಲು ಮುಂದಾಗಿದ್ದ ಸಿಬಿಐಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರವು ತಡೆ ಒಡ್ಡಿತ್ತು. ಇದು ಸಂಸ್ಥೆ ಹಾಗೂ ಸರ್ಕಾರದ ನಡುವೆ ಜಟಾಪಟಿಗೆ ಕಾರಣವಾಗಿತ್ತು. ರಾಜೀವ್ ಕುಮಾರ್ ಅವರನ್ನು ತನಿಖೆಗೆ ಒಳಪಡಿಸುವುದನ್ನು ಪ್ರತಿಭಟಿಸಿ ಮಮತಾ ಅವರು ಧರಣಿ ಕುಳಿತಿದ್ದರು. ತನಿಖೆಗೆ ಅನುಮತಿ ನೀಡುವಂತೆ ಸುಪ್ರೀಂ ಕೋರ್ಟ್ ಸೂಚಿಸಿತ್ತು. ಆದರೆ, ಮಮತಾ ಅವರು ಅವಕಾಶ ನೀಡದ್ದರಿಂದ, ನ್ಯಾಯಾಂಗ ನಿಂದನೆ ಪ್ರಕರಣವನ್ನು ಸಿಬಿಐ ದಾಖಲಿಸಿತ್ತು. ಸಂಸತ್ತಿನಲ್ಲೂ ಈ ವಿಷಯ ಪ್ರಸ್ತಾಪವಾಗಿತ್ತು. ಬಿಜೆಪಿ ವಿರೋಧಿ ಪಕ್ಷಗಳು ಮಮತಾ ಪರ ನಿಂತಿದ್ದವು.

ಆರು ವಿಭಾಗಗಳು

ಕೇಂದ್ರೀಯ ತನಿಖಾ ಸಂಸ್ಥೆಯು ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರಕರಣಗಳಿಗೆ ಸೀಮಿತವಾಗಿಲ್ಲ. ಸಂಸ್ಥೆಯ ತನಿಖಾ ವ್ಯಾಪ್ತಿ ಹಿಗ್ಗಿದ್ದರಿಂದ, ವಿವರವಾದ ತನಿಖಾ ಪ್ರಕ್ರಿಯೆಯನ್ನು ಕೈಗೊಳ್ಳುವ ಉದ್ದೇಶದಿಂದ ಆರು ವಿಭಾಗಗಳನ್ನು ಮಾಡಲಾಗಿದೆ.

1 **ಭ್ರಷ್ಟಾಚಾರ ತಡೆ ವಿಭಾಗ:** ರಾಜಕಾರಣಿಗಳು, ಅಧಿಕಾರಿಗಳು ಅಥವಾ ಸಂಸ್ಥೆಗಳು ಎಸಗುವ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಸಿಬಿಐನ ಭ್ರಷ್ಟಾಚಾರ ತಡೆ ವಿಭಾಗವು ನಿಭಾಯಿಸುತ್ತದೆ

2 **ಆರ್ಥಿಕ ಅಪರಾಧ ವಿಭಾಗ:** ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಆರ್ಥಿಕ ಅವ್ಯವಹಾರಗಳು, ವ್ಯಾಪಾರ ಕಾನೂನು ಉಲ್ಲಂಘನೆ ಕುರಿತ ಅಪರಾಧ ಪ್ರಕರಣಗಳನ್ನು ಈ ವಿಭಾಗ ನೋಡಿಕೊಳ್ಳುತ್ತದೆ

3 **ತನಿಖಾ ನಿರ್ದೇಶನಾಲಯ:** 2001ರಲ್ಲಿ, ಕಾನೂನು ವಿಭಾಗವನ್ನು ತನಿಖಾ ನಿರ್ದೇಶನಾಲಯ ಎಂಬುದಾಗಿ ಮರು ರಚಿಸಲಾಯಿತು

4 **ಆಡಳಿತಾತ್ಮಕ ವಿಭಾಗ:** ಸಿಬಿಐನ ಎಲ್ಲ ವಿಭಾಗಗಳು ಹಾಗೂ ಪ್ರಾದೇಶಿಕ ಕಚೇರಿಗಳ ಆಡಳಿತವನ್ನು ಈ ವಿಭಾಗ ನಿರ್ವಹಣೆ ಮಾಡುತ್ತದೆ. ಆಡಳಿತಾತ್ಮಕ ನಿರ್ಧಾರಗಳನ್ನು ಇಲ್ಲಿ ತೆಗೆದುಕೊಳ್ಳಲಾಗುತ್ತದೆ

5 **ನೀತಿ ಮತ್ತು ಸಹಕಾರ ವಿಭಾಗ:** ಕಾನೂನುಗಳು ಹಾಗೂ ಸರ್ಕಾರದ ನಿಯಮಗಳಿಗೆ ಅನುಗುಣವಾಗಿ, ತನಿಖೆಯ ವೇಳೆ ಅನುಸರಿಸಬೇಕಾದ ನೀತಿಗಳು ಹಾಗೂ ವಿವಿಧ ಇಲಾಖೆಗಳ ಜೊತೆ ವ್ಯವಹರಿಸುವಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಗಮನ ಹರಿಸುತ್ತದೆ

6 **ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯ:** ಸಿಬಿಐ ನಡೆಸುವ ಎಲ್ಲ ರೀತಿಯ ತನಿಖೆಗಳಲ್ಲಿ ವಿಧಿವಿಜ್ಞಾನ ಸಾಕ್ಷ್ಯಗಳ ಕೂಲಂಕಷ ತನಿಖೆ ಕೈಗೊಳ್ಳಲು ಪ್ರತ್ಯೇಕ ವಿಭಾಗವನ್ನೇ ಸ್ಥಾಪಿಸಲಾಗಿದೆ. ತನಿಖೆಗೆ ನೆರವಾಗುವ ಎಲ್ಲ ರೀತಿಯ ವೈಜ್ಞಾನಿಕ ಅಂಶಗಳನ್ನು ಈ ವಿಭಾಗ ನಿರ್ವಹಿಸುತ್ತದೆ

ಆಧಾರ: ಸಿಬಿಐ, ದೆಹಲಿ ವಿಶೇಷ ಪೊಲೀಸ್ ಪಡೆ ಕಾಯ್ದೆ–1946, ರಾಯಿಟರ್ಸ್, ಪಿಟಿಐ

ಸಿನಿ ಬಿಟ್ಸ್

'45' ಚಿತ್ರದಲ್ಲಿ ಶಿವಣ್ಣನಿಗೆ ನಾಯಕಿಯಾಗಿ ಕೌಸ್ತುಭ ಮಣಿ

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಈ ಹಿಂದೆ '45'ಚಿತ್ರ ಘೋಷಿಸಿದ್ದರು. ಶಿವರಾಜಕುಮಾರ್, ರಿಯಲ್ ಸ್ಟಾರ್ ಉಪೇಂದ್ರ ಅಭಿನಯಿಸುತ್ತಿರುವ ಚಿತ್ರದ ಕುರಿತು ದೊಡ್ಡ ನಿರೀಕ್ಷೆಯಿದೆ. ಇದೀಗ ಚಿತ್ರತಂಡದಿಂದ ಮತ್ತೊಂದು ಅಪ್‌ಡೇಟ್ ಸಿಕ್ಕಿದೆ. ಚಿತ್ರದ ನಾಯಕಿಯಾಗಿ 'ನನ್ನರಸಿ ರಾಧೆ' ಧಾರಾವಾಹಿಯ ನಟಿ ಕೌಸ್ತುಭ ಮಣಿ ಆಯ್ಕೆಯಾಗಿದ್ದಾರೆ.

'ನನ್ನ ಪಾತ್ರದ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. ಆಡಿಷನ್ ಕರೆದಿದ್ದರು. ಅದಕ್ಕೆ ಹೋಗಿದ್ದೆ. ಬಳಿಕ ಪಾತ್ರಕ್ಕೆ ಆಯ್ಕೆ ಮಾಡಿರುವುದಾಗಿ ಚಿತ್ರತಂಡವರಿಂದ ಕರೆ ಬಂತು. ಚಿತ್ರೀಕರಣದ ಕುರಿತು ಯಾವುದೇ ಮಾಹಿತಿ ಇಲ್ಲ. ಈ ತಿಂಗಳ 27ರಿಂದ ಚಿತ್ರೀಕರಣ ಇರಬಹುದು ಎಂದು ನಿರ್ದೇಶಕರು ಹೇಳಿದ್ದಾರೆ. ಚಿತ್ರದಲ್ಲಿ ಒಂದಕ್ಕಿಂತ ಹೆಚ್ಚು ನಾಯಕಿಯರು ಇರಬಹುದು. ಆ ಬಗ್ಗೆಯೂ ಗೊತ್ತಿಲ್ಲ' ಎಂದು ನಟಿ ಕೌಸ್ತುಭ ತಿಳಿಸಿದ್ದಾರೆ.

ಕಿರುತೆರೆಯಲ್ಲಿ ಜನಪ್ರಿಯರಾಗಿರುವ ಕೌಸ್ತುಭ, ಈವಾರ ತೆರೆಗೆ ಬರಲಿರುವ 'ರಾಮಾಚಾರಿ 2.0' ಚಿತ್ರದಲ್ಲಿಯೂ ನಾಯಕಿಯಾಗಿದ್ದಾರೆ. ತಮ್ಮ ಅಭಿನಯದಿಂದ ಪ್ರೇಕ್ಷಕರ ಮನ ಗೆದ್ದಿರುವ ಅವರು ತೆಲುಗು ಧಾರಾವಾಹಿಯಲ್ಲಿಯೂ ನಟಿಸಿದ್ದಾರೆ. ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ ಈ ಚಿತ್ರದ ಚಿತ್ರೀಕರಣ ಇನ್ನಷ್ಟೇ ಪ್ರಾರಂಭವಾಗಬೇಕಿದೆ. ಪೂರ್ವಸಿದ್ಧತೆಗಳು ಮುಗಿದಿದ್ದು, ಶಿವಣ್ಣ–ಉಪೇಂದ್ರ ಸಮಯ ನೀಡುತ್ತಿದ್ದಂತೆ ಚಿತ್ರೀಕರಣ ಪ್ರಾರಂಭವಾಗಲಿದೆ ಎಂದು ಚಿತ್ರತಂಡ ಹೇಳಿದೆ.

'ಗಾಳಿಪಟ–2' ಚಿತ್ರದ ಯಶಸ್ಸಿನ ನಂತರ ನಿರ್ಮಾಪಕ ರಮೇಶ್ ರೆಡ್ಡಿ ಇಬ್ಬರು ಸೂಪರ್‌ಸ್ಟಾರ್‌ಗಳೊಂದಿಗೆ ಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದಾರೆ. 'ಗರುಡ ಗಮನದ' ನಟ ರಾಜ್ ಬಿ ಶೆಟ್ಟಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇದೊಂದು ಆ್ಯಕ್ಷನ್ ಎಂಟರ್‌ಟೈನ್‌ಮೆಂಟ್ ಸಿನಿಮಾ ಎಂದು ತಂಡ ಹೇಳಿದೆ.

ನಟಿ ಕೌಸ್ತುಭ ಮಣಿ

ಮಾಫಿಯಾ ಚಿತ್ರೀಕರಣ ಪೂರ್ಣ

ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ನಾಯಕರಾಗಿ ನಟಿಸಿರುವ 'ಮಾಫಿಯಾ' ಚಿತ್ರದ ಚಿತ್ರೀಕರಣ ಮುಕ್ತಾಯಗೊಂಡಿದೆ. ಆ್ಯಕ್ಷನ್ ಥ್ರಿಲ್ಲರ್ ಕಥೆ ಹೊಂದಿರುವ ಚಿತ್ರಕ್ಕೆ 'ಮಮ್ಮಿ' ಖ್ಯಾತಿಯ ನಿರ್ದೇಶಕ ಲೋಹಿತ್ ಮನು ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಬೆಂಗಳೂರು, ಮೈಸೂರು ಹಾಗೂ ಹೈದರಾಬಾದ್‌ನಲ್ಲಿ ಸುಮಾರು 60 ದಿನಗಳ ಕಾಲ ಚಿತ್ರೀಕರಣ ನಡೆಸಿದ್ದೇವೆ. ಚಿತ್ರೀಕರಣದ ನಂತರದ ಕೆಲಸಗಳು ಪ್ರಾರಂಭವಾಗಿದ್ದು ಜೂನ್ ವೇಳೆಗೆ ಚಿತ್ರವನ್ನು ತೆರೆಗೆ ತರುವ ಆಲೋಚನೆಯಿದೆ. ಆ್ಯಕ್ಷನ್ ಕ್ರೈಂ ಸಿನಿಮಾ' ಎಂದು ನಿರ್ದೇಶಕ ಲೋಹಿತ್ ತಿಳಿಸಿದ್ದಾರೆ.

ಕುಮಾರ್. ಬಿ ನಿರ್ಮಾಣದ ಈ ಚಿತ್ರ ಪ್ರಜ್ವಲ್ ಅವರ 35ನೇ ಚಿತ್ರವಾಗಿದೆ. 'ಮಾಫಿಯಾ' ಚಿತ್ರದಲ್ಲಿ ಐದು ಸಾಹಸ ಸನ್ನಿವೇಶಗಳಿವೆ. ಅದಿತಿ ಪ್ರಭುದೇವ್ ಚಿತ್ರದ ನಾಯಕಿ. ದೇವರಾಜ್, ಸಾಧುಕೋಕಿಲಾ ಸೇರಿದಂತೆ ದೊಡ್ಡ ನಟರ ದಂಡೇ ಚಿತ್ರದಲ್ಲಿದೆ.

'ಚಿತ್ರದಲ್ಲಿ ಹಲವು ಶೇಡ್‌ಗಳಿದ್ದು, ಪ್ರಜ್ವಲ್ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಇದಕ್ಕಾಗಿ ಅವರು ಸಾಕಷ್ಟು ಶ್ರಮ ಹಾಕಿದ್ದಾರೆ. 3 ಹಾಡುಗಳಿದ್ದು, ಅಂದುಕೊಂಡಷ್ಟು ದಿನಗಳಲ್ಲಿಯೇ ಚಿತ್ರೀಕರಣ ಪೂರ್ಣಗೊಳಿಸಿದ್ದೇವೆ. ಆ್ಯಕ್ಷನ್ ಪ್ರಿಯರಿಗೆ ಖಚಿತವಾಗಿ ಮನರಂಜನೆ ನೀಡುವ ಚಿತ್ರ' ಎಂದು ಚಿತ್ರತಂಡ ಹೇಳಿದೆ. ಶೀರ್ಷಿಕೆಗೆ ತಕ್ಕಂತೆ ಮಾಫಿಯಾವೊಂದರ ವಿರುದ್ಧ ಹೋರಾಡುವ ಖಡಕ್ ಪಾತ್ರದಲ್ಲಿ ಪ್ರಜ್ವಲ್ ದೇವರಾಜ್ ಕಾಣಿಸಿಕೊಂಡಿದ್ದಾರೆ.

ಮಾಫಿಯಾ ಚಿತ್ರತಂಡದೊಂದಿಗೆ ನಟ ಪ್ರಜ್ವಲ್ ದೇವರಾಜ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸರ್ವಜನಮಾನ್ಯವಾದ ಹಿತ

ಸುಲಭವೇನಲ್ಲ ನರಲೋಕಹಿತನಿರ್ಧಾರ |
ಬಲಕೆ ನೋಳ್ಪರ್ ಕೆಲರು, ಕೆಲರೆಡಕೆ ನೋಳ್ಪರ್ ||
ವಿಲವಿಲನೆ ಚಪಲಿಸುವ ಮನುಜಸ್ವಭಾವದಲಿ |
ನೆಲೆಗೊತ್ತು ಹಿತಕೆಲ್ಲಿ ?- ಮಂಕುತಿಮ್ಮ || 855 ||

ಪದ-ಅರ್ಥ: ಸುಲಭವೇನಲ್ಲ = ಸುಲಭವೇನೂ + ಅಲ್ಲ, ನೋಳ್ಪರ್ = ನೋಡುವವರು, ಕೆಲರು = ಕೆಲವರು, ಕೆಲರೆಡಕೆ = ಕೆಲರು + ಎಡಕೆ, ಚಪಲಿಸುವ = ಚಪಲವಿರುವ, ನೆಲಗೊತ್ತು = ನೆಲೆ(-ತಾಣ,ಸ್ಥಳ) + ಗೊತ್ತು (ದಾರಿ).

ವಾಚ್ಯಾರ್ಥ: ಇಡೀ ನರಲೋಕಕ್ಕೆ ಸಾಮಾನ್ಯವಾದ ಹಿತದ ನಿರ್ಧಾರ ಸುಲಭವಲ್ಲ. ಕೆಲವರು ಎಡಕ್ಕೆ ನೋಡಿದರೆ ಮತ್ತೆ ಕೆಲವರು ಬಲಕ್ಕೆ ನೋಡುತ್ತಾರೆ. ಹೀಗೆ ಸದಾಕಾಲ ಚಂಚಲವಾದ ಮನುಷ್ಯ ಸ್ವಭಾವದಲ್ಲಿ ಒಂದು ಹಿತಕ್ಕೆ ನೆಲೆ, ಗೊತ್ತು ಎಲ್ಲಿದೆ?

ವಿವರಣೆ: ಈ ಪೃಕೃತಿಯ ರಚನಾತ್ಮಕ, ವಿನಾಶಾತ್ಮಕ, ವಿಕಾಸಾತ್ಮಕ ಮತ್ತು ಆಕುಂಚನಾತ್ಮಕ ಸ್ವಭಾವವನ್ನು ಬದಲಿಸುವುದು ಸಾಧ್ಯವೇ ಇಲ್ಲ. ಇಲ್ಲಿ ಹುಟ್ಟಿ ಬಂದ ಜೀವಿಗಳು ಅದರ ಪರಿಣಾಮದ ಪ್ರವಾಹದಲ್ಲೇ ಹರಿಯುವವರು. ಹೀಗಾಗಿ ಅವರೆಲ್ಲ ದೈಹಿಕವಾಗಿ, ಮಾನಸಿಕವಾಗಿ ಪ್ರಕೃತಿಯ ಪ್ರಭಾವದಿಂದ ಬೇರೆ ಬೇರೆ ಸ್ವಭಾವಗಳನ್ನು ಪಡೆದವರು. ಸಾಮಾನ್ಯ ಮನುಷ್ಯರನ್ನು ಬಿಡಿ, ಅತ್ಯಂತ ಶ್ರೇಷ್ಠ ಜ್ಞಾನಿಗಳೂ ಅದಕ್ಕೆ ಹೊರತಲ್ಲ. ಉದಾಹರಣೆಗೆ ದತ್ತಾತ್ರೇಯ, ನಾರದ, ವಿಶ್ವಾಮಿತ್ರ, ವಶಿಷ್ಠ ನಾಲ್ವರೂ ಮಹರ್ಷಿಗಳೇ. ಆದರೆ ಪ್ರಕೃತಿಯ ಕೈವಾಡದಿಂದ ದತ್ತಾತ್ರೇಯ ಧ್ಯಾನಮೂರ್ತಿಯಾದ, ನಾರದ ಗಾನಲೋಲನಾದ, ವಿಶ್ವಾಮಿತ್ರ ಉಗ್ರನಾದ, ವಶಿಷ್ಠತಪೋನಿಧಿಯಾದ. ಅಂತೆಯೇ ಮನುಷ್ಯರೆಲ್ಲರೂ ಒಂದೇ ಸ್ವಭಾವ ಹೊಂದುವುದು ಅಸಾಧ್ಯ. ಆದ್ದರಿಂದ ಅವರ ಬಯಕೆಗಳು, ನಿರೀಕ್ಷೆಗಳು ಬೇರೆ ಬೇರೆಯಾಗಿಯೇ ಇವೆ. ದಾರಿಯಲ್ಲಿ ಒಬ್ಬ ಸುಂದರ ಯುವತಿ ಹೋಗುತ್ತಿದ್ದಾಳೆ. ಅವಳಿಗೆ ಎದುರಾಗಿ ಇಬ್ಬರು ತರುಣರು ಬಂದರು. ಒಬ್ಬ ಅವಳ ಅಪೂರ್ವ ಸೌಂದರ್ಯವನ್ನು ಕಂಡ. ಭಗವಂತನ ಸೃಷ್ಟಿ ಅದ್ಭುತವಾದದ್ದು ಎಂದು ಅವನ ಕಲಾತ್ಮಕತೆಗೆ ವಂದಿಸಿ ನಡೆದ. ಮತ್ತೊಬ್ಬ ಆಕೆಯ ಸುಂದರ ರೂಪದ ಮೇಲೆ ಕಾಮದ ಪರದೆ ಎಳೆದ. ಬುದ್ಧಿ ಭ್ರಮಿಸಿತು, ಮನಸ್ಸಿಗೆ ಶಾಂತಿ ಇಲ್ಲವಾಯಿತು. ಒಬ್ಬಳೇ ತರುಣಿ, ಆದರೆ ಇಬ್ಬರ ಮೇಲೆ ಪರಿಣಾಮ ಬೇರೆ. ಮೊದಲಿನವ ವಿರಾಗಿ, ಎರಡನೆಯವ ರಾಗಿ. ಮೊದಲನೆಯವನು ಸುಖಿ, ಎರಡನೆಯವನು ಅಸುಖಿ. ಅದಕ್ಕೇ ಕಗ್ಗ ಹೇಳುತ್ತದೆ, ಇಡೀ ನರಲೋಕಕ್ಕೆಲ್ಲ ಒಂದೇ ಹಿತವನ್ನು ನೀಡುವ ನಿರ್ಧಾರ ಸುಲಭದ್ದಲ್ಲ. ಯಾಕೆಂದರೆ ಒಬ್ಬರು ಒಂದನ್ನು ಬಯಸಿದರೆ ಮತ್ತೊಬ್ಬರು ಅದಕ್ಕೆ ವಿರುದ್ಧವಾದದ್ದನ್ನು ಬಯಸುತ್ತಾರೆ. ಒಬ್ಬ ವಿಜ್ಞಾನಿ ಪ್ರಪಂಚದ ಬಳಕೆಗೆ ಅಸಾಮಾನ್ಯ ಶಕ್ತಿಯನ್ನು ನೀಡುವುದಕ್ಕೆ ಅಣುವನ್ನು ವಿಭಜಿಸಿದ. ಮತ್ತೊಬ್ಬ ಅದನ್ನೇ ಪರಮಾಣು ಅಸ್ತ್ರವನ್ನಾಗಿ ಮಾಡಿ ಅನಾಹುತ ಮಾಡಿದ. ಒಬ್ಬ ನಿಸರ್ಗವನ್ನು ಮತ್ತಷ್ಟು ಸುಂದರವನ್ನಾಗಿ ಮಾಡಲು ಸಾವಿರಾರು ಮರಗಳನ್ನು ನೆಟ್ಟ. ಇನ್ನೊಬ್ಬ ಮರಗಳನ್ನೆಲ್ಲ ಸವರಿ ಹಾಕಿ ಕಾಂಕ್ರೀಟ್ ಮಹಲು ಕಟ್ಟಿಸಿದ. ಇದಷ್ಟೇ ಅಲ್ಲದೆ ಮನುಷ್ಯನ ಮನಸ್ಸು ಬಹಳ ಚಂಚಲವಾದದ್ದು. ಇಂದು ಬೇಕಾದದ್ದು ನಾಳೆ ಬೇಡ. ಹೀಗೆ ಸ್ವಭಾವದಲ್ಲಿ ಭಿನ್ನರಾದ, ಸದಾ ಚಂಚಲಚಿತ್ತರಾದ ಮನುಷ್ಯರೆಲ್ಲರಿಗೂ ಒಪ್ಪಿತವಾದ ಹಿತ ಯಾವುದು ಎಂದು ಹೇಳುವುದು ಸಾಧ್ಯವೇ? ಅದನ್ನೇ ಕಗ್ಗ, "ನೆಲೆಗೊತ್ತು ಹಿತಕೆಲ್ಲಿ?" ಎನ್ನುತ್ತದೆ. ಈ ಸರ್ವಜನಮಾನ್ಯವಾದ ಹಿತಕ್ಕೆ ಒಂದು ನೆಲೆ, ಗುರಿ ಏನಾದರೂ ಇದೆಯೇ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಏಪ್ರಿಲ್ 4, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ತ್ರಯೋದಶಿ ಗಂ. 08-06 ನಕ್ಷತ್ರ: ಪೂರ್ವಫಲ್ಗುನಿ ಗಂ. 09-36 ಯೋಗ: ವೃದ್ಧಿ ಗಂ. 27-39, ಕರಣ: ತೈತಿಲ ಗಂ. 08-06, ಮೀನ ಮಾಸದ 20 ನೇ ದಿನ, ಮಳೆನಕ್ಷತ್ರ: ರೇವತಿ 1. ರಾಹುಕಾಲ : ಮಧ್ಯಾಹ್ನ 03-00 – 04-30, ಸೂರ್ಯೋದಯ : 06-28 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 12 ರಂಜಾನ್, ದಿನ ವಿಶೇಷ : ಮಹಾವೀರ ಜಯಂತಿ (ಜೈನ್), ದಮನಕ ಚತುರ್ದಶಿ, ಫಂಗಿನಿ ಉತ್ತಿರಮ್
ಅದೃಷ್ಟ ಸಂಖ್ಯೆ : 5, 9

ಮೇಷ: ವಾದ-ವಿವಾದಗಳನ್ನು ಮಾಡಿ ಸಮಯ ಹಾಳು ಮಾಡುವ ಬದಲು ಸಮಾಧಾನದಿಂದ ಕೆಲಸ ಮಾಡಿದಲ್ಲಿ ನಿಧಾನವಾದರೂ ಜಯ ನಿಮ್ಮದಾಗುವುದು. ಅನವಶ್ಯಕ ಖರ್ಚುಗಳು ಸಂಭವಿಸಬಹುದು.

ವೃಷಭ: ರಾಜಕಾರಣಿಗಳಿಗೆ ನಾಯಕತ್ವದಲ್ಲಿ ಬದಲಾವಣೆ. ಸಗಟು ವ್ಯಾಪಾರಿಗಳಿಗೆ ಖರ್ಚು-ವೆಚ್ಚಗಳು ಆದಾಯದ ಮಿತಿಯೊಳಗಿರುವುದು. ರೇಷ್ಮೆ ನೇಕಾರರು ಉತ್ತಮ ಮಟ್ಟದ ನೇಯ್ಗೆಯಿಂದ ಏಳಿಗೆ ಹೊಂದುವ ಸಾಧ್ಯತೆ.

ಮಿಥುನ: ನಾಜೂಕಿನ ಕೆಲಸ ಕಾರ್ಯಗಳಿಂದಾಗಿ ವಿಶೇಷ ಮನ್ನಣೆ ಗಳಿಸುವಿರಿ. ಜೊತೆಯಲ್ಲಿ ಸಹೋದ್ಯೋಗಿಗಳೊಂದಿಗೆ ಹೊಂದಿಕೊಡು ಹೋಗುವ ಗುಣ ಸ್ವಭಾವ ಅಳವಡಿಸಿಕೊಳ್ಳುವುದು ಒಳ್ಳೆಯದು.

ಕರ್ಕಾಟಕ: ಆತ್ಮವಿಶ್ವಾಸದಿಂದ ಕೆಲಸ ಕಾರ್ಯಗಳಲ್ಲಿ ಯಶಸ್ಸನ್ನು ಹೊಂದುವಿರಿ. ಎದುರಾಳಿಗೆ ಪರಿಣಾಮಕಾರಿ ನಿರ್ಧಾರಗಳು ಅಗತ್ಯವಾಗಿ ತೆಗೆದುಕೊಳ್ಳಿ. ರಫ್ತು ವ್ಯಾಪಾರಗಳು ಮಾಡುವವರಿಗೆ ಸಂಪರ್ಕದಲ್ಲಿ ಅಡೆತಡೆ.

ಸಿಂಹ: ಸಾಮಾಜಿಕ ಚಟುವಟಿಕೆಗಳು ಹೆಚ್ಚಲಿದೆ. ಪರಿಸ್ಥಿತಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ. ನಂಬಿಕೆ ಪ್ರತಿಪಾದಿಸಲು ಅಂಜಿಕೆ ಬೇಡ. ಇತರರ ಬಗ್ಗೆ ಅನುಕಂಪ ತೋರುವ ನೀವು, ನಿಮ್ಮ ಬಗ್ಗೆ ಗಮನವಿರಿಸಿಕೊಳ್ಳಿ.

ಕನ್ಯಾ: ಹೊಸ ಕ್ಲಿನಿಕ್ ಆರಂಭದ ಶುಭ ಕಾರ್ಯಗಳ ಬಗ್ಗೆ ಹಿರಿಯರೊಡನೆ ಸಮಾಲೋಚನೆ ನಡೆದು ತೀರ್ಮಾನ ಸಿಗಲಿದೆ. ರಾಜಕೀಯ ವಿದ್ಯಮಾನಗಳಿಂದ ವಿಶ್ರಾಂತಿ ಪಡೆಯಿರಿ. ಶಿಕ್ಷಣ ಮುಂದುವರಿಸಲು ಬಂಧುಗಳ ಸಹಾಯ.

ತುಲಾ: ಉದ್ಯೋಗದಲ್ಲಿ ಬದಲಾವಣೆಯ ಆಲೋಚನೆ ಹೊಂದಿದವರು ಸದ್ಯಕ್ಕೆ ಆ ಯೋಚನೆಯನ್ನು ಮರೆಯುವುದು ಒಳ್ಳೆಯದು. ಪಾಲುದಾರರಲ್ಲಿ ಒಮ್ಮತ ಮೂಡಿಸುವಲ್ಲಿ ಯಶಸ್ವಿಯಾಗುವಿರಿ. ಬಾಕಿ ಕೆಲಸ ಪೂರ್ಣಗೊಳಿಸುವಿರಿ.

ವೃಶ್ಚಿಕ: ನ್ಯಾಯಾಲಯದ ವಿಚಾರಣೆಗಳಲ್ಲಿ ಜಯ ನಿಮ್ಮದಾಗಿರುತ್ತದೆ. ಕಬ್ಬಿಣ ಕೆಲಸ ಮಾಡುವವರು ಜಾಗ್ರತೆ ವಹಿಸಿ. ಕಂಪನಿಯ ಹೊಸ ಯೋಜನೆಯ ಜವಾಬ್ದಾರಿ ಯಶಸ್ವಿ ನಿರ್ವಹಿಸುವ ಹೆಗ್ಗಳಿಕೆ ನಿಮ್ಮದಾಗಲಿದೆ.

ಧನು: ಉನ್ನತ ಅಧಿಕಾರಿಗಳ ಸಂಪರ್ಕ ಉಂಟಾಗುವುದು. ಸಂಪರ್ಕ ಸಾಧನದಂತಹ ಉದ್ಯೋಗದಲ್ಲಿ ನಿರತರಾದ ವ್ಯಕ್ತಿಗಳಿಗೆ ಸನ್ಮಾನ ಅಥವಾ ವಿಶೇಷ ಗೌರವಗಳು ಲಭಿಸುವುದು. ಶುಭಕ್ಕಾಗಿ ಗಣಪತಿಯನ್ನು ಆರಾಧಿಸಿ.

ಮಕರ: ವೈದ್ಯರ ಸಲಹೆಯಂತೆ ದೇಹಾರೋಗ್ಯಕ್ಕಾಗಿ ಆಹಾರ ಸೇವನೆಯಲ್ಲಿ ಕೆಲವೊಂದು ಬದಲಾವಣೆ ಮಾಡಿ ಕೊಳ್ಳಬೇಕಾಗಬಹುದು. ಸ್ವಂತವಾಗಿ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ. ವ್ಯಾಪಾರದಲ್ಲಿ ಹಿನ್ನಡೆ.

ಕುಂಭ: ಅದೃಷ್ಟ ದೇವತೆ ನಿಮ್ಮ ಕೈ ಹಿಡಿದಿದ್ದಾಳೆ. ನಿಮ್ಮ ವ್ಯಾಪಾರ ವ್ಯವಹಾರ ಅಧಿಕ ವರಮಾನಗಳನ್ನು ತರಲಿದೆ. ಮಗನಿಂದ ಶುಭ ಸುದ್ದಿ ಕೇಳುವಿರಿ. ಮಕ್ಕಳಿಗೆ ಓದಿನಲ್ಲಿ ಏಕಾಗ್ರತೆ ಹೆಚ್ಚುವುದು. ಅನಾರೋಗ್ಯ ನಿರ್ಲಕ್ಷಿಸಬೇಡಿ.

ಮೀನ: ಖರ್ಚು–ವೆಚ್ಚಗಳು ನಿಯಂತ್ರಣದಲ್ಲಿ ಇರಲಿಕ್ಕಾಗಿ ಹರಸಾಹಸ. ಅಲಂಕಾರಿಕ ವಸ್ತುಗಳ ಖರೀದಿಗಾಗಿ ಅಧಿಕ ಖರ್ಚು. ಸಣ್ಣಸಣ್ಣ ವಿಚಾರದಲ್ಲಿ ಅಶಾಂತಿ ತೋರಿಬಂದು ದಾಂಪತ್ಯದಲ್ಲಿ ಕಿರಿಕಿರಿ ಎನಿಸುವುದು.

ಪದಬಂಧ 5278

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕನ್ನಡಿಗನಿಗೆ ನೀಡಿದ ಟ್ರೇನಿಂಗ್ ! (4)
3.ಅಂಗದಲ್ಲಿಯೇ ಸುಗಂಧ ಲೇಪನ (4)
5.ಕಸುಗಾಯಿ ಹಿಡಿದಿದ್ದಕ್ಕೇ ಈ ಸ್ಪಂದನ! (3)
6.ವರ ಪಡೆದಿರುವ ಶಬರ ಇಲ್ಲಿದ್ದಾನೆ (4)
8.ರಕ್ತವಿಲ್ಲಿ ವಿರಳವಾಗಿ ಕಾಣುತ್ತಿದೆ (3)
10.ಅವನ ಮುಖ ಇಲ್ಲಿದೆ (3)
11.ಮಳೆಯಲ್ಲಿರುವ ಸ್ತ್ರೀ (3)
12.ಹಿಗ್ಗು ಈ ರೀತಿ ಬಂದಿದೆ (3)
14.ಹೆಣ್ಣು ದುಂಬಿಯಿದು (4)
17.ಯೋಗವಿದ್ದರೂ ಪ್ರಿಯರ ಅಗಲಿಕೆ! (3)
18.ಕೊನೆಗೆ ವಿಕ್ರಯಿಸು ಎಂದಾಗಿನ ಅಸ್ತವ್ಯಸ್ತ (4)
19.ಪ್ರತಿಫಲಾಕ್ಷೆ ಇಲ್ಲದೆ ಸಹಾಯ ಮಾಡುವವ (4)

ಮೇಲಿಂದ ಕೆಳಕ್ಕೆ
1.ತಿರುಗಿ ನಿಂತಿರುವ ಹೆಂಗಸು (3)
2.ಕತ್ತಲಲ್ಲಿ ವ್ಯಕ್ತಗೊಂಡಿರುವ ಅಜ್ಞಾನ (3)
3.ವ್ಯತ್ಯಾಸವು ಈ ತರ ಬಂದಿದೆಯಲ್ಲಾ (3)
4.ಗಮ್ಮತ್ತು ನೋಡಿ! ಅದರಲ್ಲೇ ದರ್ಪ ಇದೆ (2)
7.ಈ ರೀತಿ ಕೋಮಲವಾಗಿರು (5)
9.ಶಿರವೆತ್ತಿರುವ ಕುಂಟಣಿಗ (5)
13.ತುಂಬಾ ನಾಜೂಕಾದುದು (3)
14. ಹುಟ್ಟು ತಿರುವು ಮುರುವಾಗಿಬಿಟ್ಟಿದೆ (3)
15.ದುರಸ್ತಿಯನ್ನು ಹೀಗೆನ್ನಿ (3)
16.ಕೊಡು ಕೊಡು ಎನ್ನುತ್ತಿರುವ ಅಜ್ಜ (2)



5277ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗಮಕಿ 4.ಕಡಿತ 6.ಲಾಭಬಡುಕ 7.ರಸ 9.ಕಡ 10.ಸರ 11.ರಿಪು 16.ನಯವಂಚಕ 17.ನಡುಕ 18.ರಜತ

ಮೇಲಿಂದ ಕೆಳಕ್ಕೆ: 1.ಗತ್ಯಂತರ 2.ಕಿಲಾಡಿ 3.ಕಂಬಳ 4.ಕಕವ 5.ತಡಬಡ 8.ಸವಾರ 9.ಕಚೇರಿ 10.ಸಮಾಧಾನ 12.ಪುರೋಹಿತ 13.ಪಾನಕ 14.ಲವಂಗ 15.ಮಕರ

ಸುಡೊಕು 5664

3	9		2		5		6	
			4			8		5
	4	5			9		3	
4	6		9		7			
				4		1		6
8		7	5		6		4	
		4			2			7
7	2			5		6		3
	8		7				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5663 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಷೇರುಪೇಟೆ ವಹಿವಾಟು 114



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,360
ಇಂದಿನ ಅಂತ್ಯ	17,398
▲	38
ದಿನದ ಗರಿಷ್ಠ	17,428

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1690 (1680)
ಸೋಯಾ (ರಿಫೈನ್ಡ್)	₹1070 (1060)
ಸೂರ್ಯಕಾಂತಿ (ರಿಫೈನ್ಡ್)	₹1075 (1075)
ಪಾಮೋಲಿನ್	₹985 (970)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹146.50
ಆರ್ಎಸ್ಎಸ್-5	₹139.50
ಗುಡ್ ಲಾಟ್	₹131.50

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14300
ಎಸಿ	₹7560
ಆರ್‌ಪಿ	₹10250
ಆರ್‌ಸಿ	₹5275

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹366-578
ದ್ವಿತಳಿ (ಬಿ.ವಿ)	₹255-640

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹800-1300
ಮಧ್ಯಮ	₹500-800
ಸಣ್ಣ	₹300-500

ಮೂರು ತಿಂಗಳ ಗರಿಷ್ಠ ಮಟ್ಟಕ್ಕೆ ತಯಾರಿಕಾ ವಲಯದ ಚಟುವಟಿಕೆ



ಮುಖ್ಯಾಂಶಗಳು

- ಸತತ 21ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಬೆಳವಣಿಗೆ
- ಎರಡೂವರೆ ವರ್ಷಗಳ ಕನಿಷ್ಠ ಮಟ್ಟಕ್ಕೆ ತಯಾರಿಕಾ ವೆಚ್ಚದಲ್ಲಿನ ಏರಿಕೆ
- ಸುಧಾರಿಸಿದ ಕಚ್ಚಾ ಸಾಮಗ್ರಿಗಳ ಲಭ್ಯತೆ

ನವದೆಹಲಿ (ಪಿಟಿಐ): ತಯಾರಿಕಾ ವಲಯದ ಚಟುವಟಿಕೆಗಳು ಮಾರ್ಚ್‌ನಲ್ಲಿ ಮೂರು ತಿಂಗಳ ಗರಿಷ್ಠ ಮಟ್ಟ ತಲುಪಿವೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ಹೇಳಿದೆ. ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಫೆಬ್ರುವರಿಯಲ್ಲಿ 55.3 ಇದ್ದಿದ್ದು ಮಾರ್ಚ್‌ನಲ್ಲಿ 56.4ಕ್ಕೆ ಏರಿಕೆ ಆಗಿದೆ.

ಬೇಡಿಕೆ ಉತ್ತಮ ಸ್ಥಿತಿಯಲ್ಲಿ ಇರುವುದು ಹಾಗೂ ವೆಚ್ಚದ ಒತ್ತಡ ಕಡಿಮೆ ಆಗಿರುವುದರ ಜೊತೆಗೆ ತಯಾರಿಕೆ ಮತ್ತು ಹೊಸ ಯೋಜನೆಗಳು ತ್ವರಿತವಾಗಿ ಹೆಚ್ಚಾಗುತ್ತಿವೆ. ಹೀಗಾಗಿ, ವಲಯದ ಚಟುವಟಿಕೆಗಳು ಈ ಪ್ರಮಾಣದ ಬೆಳವಣಿಗೆ ಕಂಡಿವೆ ಎಂದು ಅದು ತಿಳಿಸಿದೆ.

ಭಾರತದ ಉತ್ಪನ್ನಗಳಿಗೆ ಮಾರ್ಚ್‌ನಲ್ಲಿ ಭಾರಿ ಬೇಡಿಕೆ ಕಂಡು ಬಂದಿದೆ. ಇದರಿಂದಾಗಿ ತಯಾರಿಕೆಯು ತ್ವರಿತವಾಗಿ ಏರಿಕೆ ಆಗಿದೆ. ಕಂಪನಿಗಳು ತಮ್ಮ ದಾಸ್ತಾನು ಹೆಚ್ಚಿಸಿಕೊಳ್ಳುವ ಪ್ರಯತ್ನ ನಡೆಸುತ್ತಿವೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ತಿಳಿಸಿದ್ದಾರೆ.

ಪೂರೈಕೆ ವ್ಯವಸ್ಥೆ ಮತ್ತು ಕಚ್ಚಾ ಸಾಮಗ್ರಿಗಳ ಲಭ್ಯತೆಯಲ್ಲಿ ಸುಧಾರಣೆ ಕಂಡುಬಂದಿರುವುದರಿಂದ ಮಾರ್ಚ್‌ನಲ್ಲಿ ತಯಾರಿಕಾ ವೆಚ್ಚದಲ್ಲಿನ ಏರಿಕೆಯು ಎರಡೂವರೆ ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ.

ವೆಚ್ಚದ ಹೊರೆಯಲ್ಲಿ ಫೆಬ್ರುವರಿಯಿಂದ ಮಾರ್ಚ್‌ವರೆಗೆ ಯಾವುದೇ ಬದಲಾವಣೆ ಆಗಿಲ್ಲ ಎಂದು ಶೇ 96ರಷ್ಟು ಕಂಪನಿಗಳು ಹೇಳಿವೆ. ವಹಿವಾಟಿನ ಪ್ರಮಾಣವು ಅತ್ಯಲ್ಪ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಹೀಗಾಗಿ ಕಂಪನಿಗಳು ಮಾರ್ಚ್‌ನಲ್ಲಿ ಸಿಬ್ಬಂದಿ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಉತ್ಪಾದನೆ ಕಡಿತ, ಜಿಗಿದ ತೈಲ ಬೆಲೆ

ಅಮೆರಿಕದ ಆಗ್ರಹ ಕಡೆಗಣಿಸಿ ಒಪೆಕ್+ ದೇಶಗಳ ತೀರ್ಮಾನ; ದಿನಕ್ಕೆ 10 ಲಕ್ಷ ಬ್ಯಾರಲ್ ಇಳಿಕೆ

ಲಂಡನ್/ಮುಂಬೈ/ನವದೆಹಲಿ (ಎಎಫ್‌ಪಿ/ಪಿಟಿಐ): ಕಚ್ಚಾ ತೈಲ ಉತ್ಪಾದನೆ ಮಾಡುವ ಕೆಲವು ಪ್ರಮುಖ ದೇಶಗಳು ಸೌದಿ ಅರೇಬಿಯಾ ನೇತೃತ್ವದಲ್ಲಿ ಉತ್ಪಾದನೆಯನ್ನು ಕಡಿಮೆ ಮಾಡುವ ತೀರ್ಮಾನ ಕೈಗೊಂಡಿವೆ. ಇದರ ಪರಿಣಾಮವಾಗಿ ಜಾಗತಿಕ ಮಾರುಕಟ್ಟೆಗಳಲ್ಲಿ ಕಚ್ಚಾ ತೈಲದ ಬೆಲೆಯು ಏರಿಕೆ ಕಂಡಿದೆ.

ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸುವ ಉದ್ದೇಶದಿಂದ, ಕಚ್ಚಾ ತೈಲ ಉತ್ಪಾದನೆಯನ್ನು ಹೆಚ್ಚಿಸಬೇಕು ಎಂದು ಅಮೆರಿಕ ಆಗ್ರಹಿಸಿದ್ದರೂ, ಉತ್ಪಾದನೆಯನ್ನು ಕಡಿಮೆ ಮಾಡುವ ತೀರ್ಮಾನ ಕೈಗೊಳ್ಳಲಾಗಿದೆ. ಮುಂಬೈನಿಂದ ಬಂದಿರುವ ವರದಿ ಪ್ರಕಾರ, ಕಚ್ಚಾ ತೈಲದ ಬೆಲೆಯಲ್ಲಿ ಶೇ 5ರಷ್ಟು ಹೆಚ್ಚಳವಾಗಿದ್ದು ಪ್ರತಿ ಬ್ಯಾರಲ್ ಬೆಲೆಯು 84.19 ಡಾಲರ್‌ಗೆ ತಲುಪಿದೆ.

ಕಚ್ಚಾ ತೈಲ ಮಾರುಕಟ್ಟೆಯಲ್ಲಿ ಸ್ಥಿರತೆ ಸಾಧಿಸುವ ಉದ್ದೇಶದಿಂದ ಒಪೆಕ್+ (ಪೆಟ್ರೋಲಿಯಂ ರಫ್ತುದಾರ ದೇಶಗಳು ಹಾಗೂ ರಷ್ಯಾ ಇರುವ ಗುಂಪು) ಸದಸ್ಯರ ಪೈಕಿ ಕೆಲವು ದೇಶಗಳು ಕಚ್ಚಾ ತೈಲದ ಉತ್ಪಾದನೆಯನ್ನು ಪ್ರತಿದಿನ 10 ಲಕ್ಷ ಬ್ಯಾರಲ್‌ಗೂ ಹೆಚ್ಚಿನ ಪ್ರಮಾಣದಲ್ಲಿ ಕಡಿಮೆ ಮಾಡಲು ತೀರ್ಮಾನಿಸಿವೆ.

ಸೌದಿ ಅರೇಬಿಯಾ, ಇರಾಕ್, ಕುವೈತ್, ಒಮಾನ್, ಅಲ್ಜೀರಿಯಾ ಮತ್ತು ಯುಎಇ ಒಟ್ಟಾಗಿ ತೆಗೆದುಕೊಂಡಿರುವ ಈ ತೀರ್ಮಾನವು ಮೇ ತಿಂಗಳಿನಲ್ಲಿ ಜಾರಿಗೆ ಬರಲಿದೆ. ವರ್ಷಾಂತ್ಯದವರೆಗೂ ಇದು ಜಾರಿಯಲ್ಲಿ ಇರಲಿದೆ. ಒಪೆಕ್+ ಸದಸ್ಯ ರಾಷ್ಟ್ರವಾಗಿರುವ ರಷ್ಯಾ ಪ್ರತಿದಿನ 5 ಲಕ್ಷ ಬ್ಯಾರಲ್‌ನಷ್ಟು ಕಚ್ಚಾ ತೈಲ ಉತ್ಪಾದನೆ ಕಡಿತ ಮಾಡುವುದಾಗಿ ಹೇಳಿದೆ.

ಪರಿಷ್ಕರಣೆ ಸಾಧ್ಯತೆ ಕ್ಷೀಣ: ಒಪೆಕ್+ ಕೈಗೊಂಡಿರುವ ತೀರ್ಮಾನವು ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯ ಪರಿಷ್ಕರಣೆಯು ಇನ್ನಷ್ಟು ವಿಳಂಬವಾಗುವಂತೆ ಮಾಡಲಿದೆ ಎಂದು ಉದ್ಯಮದ ಮೂಲಗಳು ಹೇಳಿವೆ.

ಭಾರತಕ್ಕೆ ಪೂರೈಕೆಯಾಗುವ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 73–74 ಡಾಲರ್ ಇದ್ದಾಗ, ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯು ಕಡಿಮೆ ಆಗಬಹುದು ಎಂಬ ನಿರೀಕ್ಷೆ ಮೂಡಿತ್ತು.

ಕಚ್ಚಾ ತೈಲದ ಬೆಲೆಯು ಆ ಮಟ್ಟದಲ್ಲೇ ಇದ್ದಿದ್ದರೆ ತೈಲ ಮಾರಾಟ ಕಂಪನಿಗಳು ಪೆಟ್ರೋಲ್, ಡೀಸೆಲ್ ದರವನ್ನು ಪ್ರತಿನಿತ್ಯ ಪರಿಷ್ಕರಿಸಲು ಆರಂಭಿಸಬಹುದಿತ್ತು ಎಂದು ಮೂಲಗಳು ಹೇಳಿವೆ.

ಯೂರಲ್ಸ್ ಬೆಲೆ 47 ಡಾಲರ್

ಮಾಸ್ಕೊ (ರಾಯಿಟರ್ಸ್): ರಷ್ಯಾದ ಯೂರಲ್ಸ್ ಕಚ್ಚಾ ತೈಲವನ್ನು ಫೆಬ್ರುವರಿಯಲ್ಲಿ ಪ್ರತಿ ಬ್ಯಾರಲ್‌ಗೆ 47.85 ಡಾಲರ್‌ಗೆ ಮಾರಾಟ ಮಾಡಲಾಗಿದೆ ಎಂದು ರಷ್ಯಾದ ಹಣಕಾಸು ಸಚಿವಾಲಯವು ಸೋಮವಾರ ಹೇಳಿದೆ. ಇದು ಹಿಂದಿನ ವರ್ಷ ಇದೇ ಅವಧಿಯಲ್ಲಿ ಇದ್ದ ಬೆಲೆಗಿಂತ 1.86 ಪಟ್ಟು ಕಡಿಮೆ. ರಷ್ಯಾ–ಉಕ್ರೇನ್ ಯುದ್ಧ ಆರಂಭವಾದ ನಂತರದಲ್ಲಿ ಭಾರತವು ರಷ್ಯಾದಿಂದ ಯೂರಲ್ಸ್ ಕಚ್ಚಾ ತೈಲವನ್ನು ಖರೀದಿಸಿದೆ ಎಂಬ ವರದಿಗಳು ಇವೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹8084-8084
ತುರುವೇಕೆರೆ	₹9400-9400

ನೇರ ತೆರಿಗೆ ಸಂಗ್ರಹ ಶೇ 18 ಹೆಚ್ಚಳ

ನವದೆಹಲಿ (ಪಿಟಿಐ): 2022–23ನೆಯ ಹಣಕಾಸು ವರ್ಷದಲ್ಲಿ ದೇಶದಲ್ಲಿ ನಿವ್ವಳ ನೇರ ತೆರಿಗೆ ಸಂಗ್ರಹವು ಶೇಕಡ 18ರಷ್ಟು ಹೆಚ್ಚಾಗಿದ್ದು, ₹ 16.61 ಲಕ್ಷ ಕೋಟಿಗೆ ತಲುಪಿದೆ ಎಂದು ಹಣಕಾಸು ಸಚಿವಾಲಯ ಹೇಳಿದೆ. ಇದು ಬಜೆಟ್‌ನ ಪರಿಷ್ಕೃತ ಅಂದಾಜಿನಲ್ಲಿ ಇದ್ದ ನಿರೀಕ್ಷೆಗಿಂತ ಹೆಚ್ಚು.

2021–22ನೆಯ ಹಣಕಾಸು ವರ್ಷದಲ್ಲಿ ನೇರ ತೆರಿಗೆ ಸಂಗ್ರಹ ₹ 14.12 ಲಕ್ಷ ಕೋಟಿ ಆಗಿತ್ತು. 2022–23ನೆಯ ಸಾಲಿಗೆ ಬಜೆಟ್ ಅಂದಾಜಿನ ಪ್ರಕಾರ ಸಂಗ್ರಹವು ₹ 14.20 ಲಕ್ಷ ಕೋಟಿ ಆಗುವ ನಿರೀಕ್ಷೆ ಇತ್ತು. ಪರಿಷ್ಕೃತ ಅಂದಾಜಿನ ಪ್ರಕಾರ ₹ 16.50 ಲಕ್ಷ ಕೋಟಿ ಆಗಿತ್ತು.

ಮುಂಬೈ ಧಾರಣೆ

ಶೇಂಗಾ 3-4-2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1740 (1690)
ಒಂದು ವಾರದ ಡೆಲಿವರಿ	1695 (1685)
ಸೋಯಾ ಕಚ್ಚಾ	980 (960)
ಪಾಮ್ ವಾರದ ಡೆಲಿವರಿ	983 (968)
ಸೂರ್ಯಕಾಂತಿ ಎಣ್ಣೆ ಕಚ್ಚಾ	950 (950)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,500 (59,350)
ಬೆಳ್ಳಿ ಕೆ.ಜಿ
71,600 (71,700)

ಆವರಣದಲ್ಲಿ ಶನಿವಾರದ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಎರಡನೇ ವರ್ಷದ ಪುಣ್ಯಸ್ಮರಣೆ



ಶ್ರೀ ಆರ್. ಶ್ರೀನಿವಾಸಮೂರ್ತಿ
(B. R. M. ENGINEERING WORKS)
ಜನನ: 02/02/1952 – ಮರಣ: 04/04/2021
ಇಂತಿ ದುಃಖತಪ್ತರು:
ಜಿತೇಂದ್ರ ಷಹ ಮತ್ತು ಕುಟುಂಬದವರು

ಕಾಂಗ್ರೆಸ್‌ನಿಂದ ರಾಷ್ಟ್ರವ್ಯಾಪಿ ಪೋಸ್ಟ್ ಕಾರ್ಡ್ ಅಭಿಯಾನ

ನವದೆಹಲಿ (ಪಿಟಿಐ): ರಾಷ್ಟ್ರವ್ಯಾಪಿ ಮನೆ-ಮನೆ ಪೋಸ್ಟ್ ಕಾರ್ಡ್ ಅಭಿಯಾನವನ್ನು ಸೋಮವಾರದಿಂದ ಪ್ರಾರಂಭಿಸಿರುವ ಭಾರತೀಯ ಯುವ ಕಾಂಗ್ರೆಸ್, ಈ ಮೂಲಕ ಮೂರು ಪ್ರಶ್ನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರಿಂದ ಉತ್ತರ ಕೋರಲಿದೆ. ಇದರಲ್ಲಿ 'ಅದಾನಿ ಬಿಜೆಪಿಗೆ ಎಷ್ಟು ಹಣ ನೀಡಿದ್ದಾರೆ? ಎಂಬ ಪ್ರಶ್ನೆಯೂ ಒಳಗೊಂಡಿದೆ.

ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಸಂಘಟನೆಯ ದೆಹಲಿ ಉಸ್ತುವಾರಿ ಕೊಕೊ ಪಾಧಿ, 'ಇದು ಮನೆ-ಮನೆ ಅಭಿಯಾನವಾಗಿದ್ದು, ನಂತರ ಈ ಪೋಸ್ಟ್ ಕಾರ್ಡ್ ಗಳನ್ನು ಪ್ರಧಾನಿಗೆ ಕಳುಹಿಸುತ್ತೇವೆ' ಎಂದರು.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ಲೋಕಸಭೆಯಿಂದ ಅನರ್ಹಗೊಳಿಸಿದ ಕೆಲ ದಿನಗಳ ನಂತರ ಈ ಅಭಿಯಾನ ಆರಂಭಿಸಲಾಗಿದೆ.

ಪ್ರಧಾನಿ ಶೈಕ್ಷಣಿಕ ಮಾಹಿತಿ ದೇಶಕ್ಕೆ ತಿಳಿಯಲಿ: ಸಂಜಯ್ ರಾವುತ್

ಸಂಜಯ್ ರಾವುತ್

ಮುಂಬೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಶೈಕ್ಷಣಿಕ ಅರ್ಹತೆ ಕುರಿತ ಮಾಹಿತಿ ತಿಳಿಸಲು ಮುಂದೆ ಬರಬೇಕು ಮತ್ತು ಅದನ್ನು ಮರೆಮಾಚುವ ಅಗತ್ಯವೇನಿದೆ ಎಂದು ಶಿವಸೇನಾ ನಾಯಕ ಸಂಜಯ್ ರಾವುತ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ರಾವುತ್, ಸಂಸತ್ ಭವನದ ಪ್ರವೇಶ ದ್ವಾರದಲ್ಲಿ ಪ್ರಧಾನಿ ಅವರ ಪದವಿ ವಿವರ ಪ್ರದರ್ಶಿಸಬೇಕು. ಜನಪ್ರತಿನಿಧಿಗಳು ಮತ್ತು ದೇಶಕ್ಕೆ ಅವರ ಮಾಹಿತಿ ತಿಳಿಯಬೇಕು ಎಂದರು.

ನರೇಂದ್ರ ಮೋದಿ ಅವರ ಪದವಿ ಮಾಹಿತಿಯನ್ನು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ನೀಡುವಂತೆ ಕೇಂದ್ರ ಮಾಹಿತಿ ಆಯೋಗ (ಸಿಐಸಿ) ನೀಡಿದ್ದ ಆದೇಶವನ್ನು ಗುಜರಾತ್ ಹೈಕೋರ್ಟ್ ರದ್ದುಗೊಳಿಸಿ, ಕೇಜ್ರಿವಾಲ್‌ಗೆ ₹ 25 ಸಾವಿರ ದಂಡವನ್ನು ಮೂರು ದಿನಗಳ ಹಿಂದೆಯಷ್ಟೇ ವಿಧಿಸಿತ್ತು.

ರಾಷ್ಟ್ರಪತಿ, ಹೈಕೋರ್ಟ್, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ಅಥವಾ ನಮ್ಮ ಶೈಕ್ಷಣಿಕ ಪದವಿ ಬಗ್ಗೆ ಕೇಳಬಹುದಾದರೆ, ಪ್ರಧಾನಿಯ ಶೈಕ್ಷಣಿಕ ಅರ್ಹತೆ ಏಕೆ ಮರೆಮಾಚಬೇಕು? ಈ ಬಗ್ಗೆ ಮೋದಿ ಸ್ಪಷ್ಟೀಕರಣ ನೀಡಬೇಕು ಎಂದು ಹೇಳಿದರು.

ಬಿಜೆಪಿಯ ಹೆಚ್ಚಿನ ನಾಯಕರು 'ನಕಲಿ' ಪದವಿ ಹೊಂದಿದ್ದಾರೆ. ಇದು ನಕಲಿ ಪದವಿಗಳ ಕಾರ್ಖಾನೆ ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಎಚ್‌ಎಂಎಸ್‌ಐ ಭವಿಷ್ಯದ ನೀಲನಕ್ಷೆ ಅನಾವರಣ

'ಸುಸ್ಥಿರ ಇ.ವಿ ಮಾರುಕಟ್ಟೆ ಸೃಷ್ಟಿ'

• ಬಿ.ಎಸ್. ಷಣ್ಮುಖಪ್ಪ

ಅಟ್ಸುಶಿ ಒಗಾಟ

HONDA

ಗುರುಗ್ರಾಮ: ಭಾರತದಲ್ಲಿ ಆರೋಗ್ಯಕರ ಮತ್ತು ಸುಸ್ಥಿರ ವಿದ್ಯುತ್ ಚಾಲಿತ ವಾಹನ (ಇ.ವಿ) ಮಾರುಕಟ್ಟೆ ಸೃಷ್ಟಿಸುವ ಮಹತ್ವಾಕಾಂಕ್ಷೆಯೊಂದಿಗೆ ಹೋಂಡಾ ಮೋಟಾರ್ ಸೈಕಲ್ ಮತ್ತು ಸ್ಕೂಟರ್ ಇಂಡಿಯಾ (ಎಚ್‌ಎಂಎಸ್‌ಐ) ತನ್ನ ಎಲೆಕ್ಟ್ರಿಕ್ ವೆಹಿಕಲ್ ಮಾರ್ಗಸೂಚಿ ಪ್ರಕಟಿಸಿದೆ.

ಕಂಪನಿಯ ಭವಿಷ್ಯದ ಇ.ವಿ ಮಾರ್ಗಸೂಚಿಯನ್ನು ಎಚ್‌ಎಂಎಸ್‌ಐ ಅಧ್ಯಕ್ಷ ಮತ್ತು ಸಿಇಒ ಆದ ಅಟ್ಸುಶಿ ಒಗಾಟ, ಇತ್ತೀಚೆಗೆ ಗುರುಗ್ರಾಮದ ಉತ್ಪಾದನಾ ಘಟಕದಲ್ಲಿ ಪ್ರಸ್ತುತಪಡಿಸಿದರು.

'ನಮ್ಮ ಅಭಿವೃದ್ಧಿಯ ನೀಲನಕ್ಷೆಯು, ಹೊಸ ಇ.ವಿ ತಂತ್ರಜ್ಞಾನ ಮತ್ತು ಮೂಲಸೌಕರ್ಯದತ್ತ ಗಮನ ಹರಿಸುವುದೇ ಆಗಿದೆ. 2040ರ ವೇಳೆಗೆ ಎಲೆಕ್ಟ್ರಿಕ್ ವಾಹನ ಮತ್ತು ಫ್ಯೂಯಲ್ ಸೆಲ್ ವೆಹಿಕಲ್ ಘಟಕಗಳಿಂದ ಆಗುವ ಮಾರಾಟವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸುವುದು ಹೋಂಡಾದ ಜಾಗತಿಕ ಗುರಿಯಾಗಿದೆ. ಇದರ ಜೊತೆಗೆ, ಫ್ಲೆಕ್ಸ್ ಫ್ಯೂಯಲ್ ಎಂಜಿನ್ ಅನ್ನು ಪರಿಚಯಿಸುವ ಮೂಲಕ ನಾವು 'ಐಸಿಇ' ಎಂಜಿನ್‌ಗಳ ದಕ್ಷತೆ ಮತ್ತು ಸುಧಾರಣೆಯನ್ನು ಮುಂದುವರಿಸುತ್ತೇವೆ' ಎಂದರು.

ಇ.ವಿ ಉತ್ಪಾದನಾ ಘಟಕ: 'ಎಲೆಕ್ಟ್ರಿಕ್ ವಾಹನಗಳ ಬೇಡಿಕೆಯನ್ನು ಪೂರೈಸಲು, ಕರ್ನಾಟಕದ ಎಚ್‌ಎಂಎಸ್‌ಐನ ನರಸಾಪುರ ಸ್ಥಾವರದಲ್ಲಿ ಫ್ಯಾಕ್ಟರಿ-ಇ ಘಟಕವನ್ನು ಸ್ಥಾಪಿಸಲಾಗುತ್ತಿದೆ' ಎಂದರು.

'ಮೇಕ್ ಇನ್ ಇಂಡಿಯಾ ಮತ್ತು ಸ್ಥಳೀಯ ಆದ್ಯತೆಗಳ ನಿರ್ದೇಶನಗಳಿಗೆ ಅನುಗುಣವಾಗಿ, ದೇಶೀಯವಾಗಿ ತಯಾರಿಸಲಾದ ಇವಿ ಬ್ಯಾಟರಿ ಮತ್ತು ಪಿಸಿಯುನಂತಹ ಸಾಧನಗಳನ್ನು ಹೋಂಡಾ ಬಳಸುತ್ತದೆ. ಎಚ್‌ಎಂಎಸ್‌ಐನ ಎಲೆಕ್ಟ್ರಿಕ್ ವಾಹನಗಳಿಗಾಗಿ ಮೋಟರ್ ಅನ್ನು ಹೋಂಡಾ ವಿನ್ಯಾಸಗೊಳಿಸಿ, ಉತ್ಪಾದಿಸಲಿದೆ' ಎಂದು ತಿಳಿಸಿದರು.

(ಕಂಪನಿಯ ಆಹ್ವಾನದ ಮೇರೆಗೆ ಪ್ರತಿನಿಧಿ ಗುರುಗ್ರಾಮಕ್ಕೆ ತೆರಳಿದ್ದರು)

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ: ನೃತ್ಯ ಪ್ರಾಧ್ಯಾಪಕನ ಬಂಧನ

ಚೆನ್ನೈ (ಪಿಟಿಐ): ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಪ್ರಕರಣದಲ್ಲಿ ಚೆನ್ನೈನ ಕಲಾಕ್ಷೇತ್ರ ಫೌಂಡೇಶನ್ ರುಕ್ಮಿಣಿ ದೇವಿ ಕಲಾ ಕಾಲೇಜಿನ ನೃತ್ಯ ಪ್ರಾಧ್ಯಾಪಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಪ್ರೊಫೆಸರ್ ಹರಿ ಪದ್ಮನ್ ಬಂಧಿತ ಆರೋಪಿ. ಪ್ರಕರಣದಲ್ಲಿ ಇದೇ ಕಾಲೇಜಿನ ಇನ್ನೂ ಮೂವರು ಅಧ್ಯಾಪಕರು ಆರೋಪಿಗಳಾಗಿದ್ದು, ಅವರ ವಿರುದ್ಧವೂ ಪ್ರಕರಣ ದಾಖಲಾಗಿದೆ. ಈ ಮೂವರಿಗೂ ಕಾಲೇಜಿನ ಆವರಣಕ್ಕೆ ಪ್ರವೇಶ ನೀಡಬಾರದು ಎಂದು ರಾಜ್ಯ ಮಹಿಳಾ ಆಯೋಗ ಕಾಲೇಜಿನ ಆಡಳಿತಕ್ಕೆ ಸೂಚಿಸಿದ್ದಾರೆ.

ಉತ್ತರ ಪ್ರದೇಶದ ಬೋರ್ಡ್ ಶಾಲೆಗಳಲ್ಲಿ ಎನ್‌ಸಿಇಆರ್‌ಟಿ

12ನೇ ತರಗತಿಗಿಲ್ಲ ಮೊಘಲ್ ಅಧ್ಯಾಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮುಂಬರುವ ಶೈಕ್ಷಣಿಕ ವರ್ಷದಿಂದ ಪರಿಷ್ಕೃತ ಪಠ್ಯ
- ಇತಿಹಾಸ ಬದಲಾಗದು: ಸಮಾಜವಾದಿ ಪಕ್ಷ

ಲಖನೌ: ಎನ್‌ಸಿಇಆರ್‌ಟಿ ಪಠ್ಯಕ್ರಮವನ್ನು ಅನುಸರಿಸುವ ಉತ್ತರ ಪ್ರದೇಶದ ಬೋರ್ಡ್ ಶಾಲೆಗಳಲ್ಲಿ 12ನೇ ತರಗತಿ ವಿದ್ಯಾರ್ಥಿಗಳಿಗೆ ಇನ್ನು ಮುಂದೆ ಮೊಘಲ್ ಇತಿಹಾಸದ ಅಧ್ಯಾಯ ಇರುವುದಿಲ್ಲ.

ಮುಂಬರುವ ಶೈಕ್ಷಣಿಕ ವರ್ಷದಿಂದ ಪರಿಷ್ಕೃತ ಪಠ್ಯಕ್ರಮವನ್ನು ಅನುಸರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಮೊಘಲ್ ನ್ಯಾಯಾಲಯಕ್ಕೆ ಸಂಬಂಧಿಸಿದ ಅಧ್ಯಾಯಗಳು, ಅಕ್ಬರ್‌ನಾಮ, ಬಾದಶಹಾನಾಮ ಮತ್ತು ಇತರರ ಅಧ್ಯಾಯಗಳನ್ನು ಕೈಬಿಡಲಾಗಿದೆ ಎಂದು ಉತ್ತರ ಪ್ರದೇಶ ಬೋರ್ಡ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

11ನೇ ತರಗತಿಯ ಇತಿಹಾಸ ಪುಸ್ತಕದಿಂದ 'ರೈಸ್ ಆಫ್ ಇಸ್ಲಾಂ' ಮತ್ತು 'ಸಾಂಸ್ಕೃತಿಕ ಸಂಘರ್ಷ'ದಂತಹ ಅಧ್ಯಾಯಗಳನ್ನು ತೆಗೆದುಹಾಕಲಾಗಿದೆ. ಅದೇ ರೀತಿ 'ಶೀತಲ ಸಮರ'ದ ಅಧ್ಯಾಯಗಳು ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಪಾತ್ರದ ಕೆಲವು ಅಧ್ಯಾಯಗಳನ್ನು ತೆಗೆದುಹಾಕಲಾಗಿದೆ ಎಂದು ಮೂಲಗಳು ತಿಳಿಸಿವೆ.

ಎಡಪಂಥೀಯ ಮತ್ತು ಕಾಂಗ್ರೆಸ್ ಒಲವು ಹೊಂದಿರುವ ಲೇಖಕರು ದೇಶದ ಇತಿಹಾಸವನ್ನು ತಿರುಚಿದ್ದಾರೆ. ಹಾಗಾಗಿ ಅದನ್ನು ಸರಿಪಡಿಸಬೇಕಾಗಿದೆ ಎಂದಿರುವ ಬಿಜೆಪಿ ನಾಯಕರು, ಪಠ್ಯಕ್ರಮದ ಪರಿಷ್ಕರಣೆಯನ್ನು ಸ್ವಾಗತಿಸಿದ್ದಾರೆ. ವಿರೋಧ ಪಕ್ಷಗಳು ಈ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿವೆ.

'ನಾವು ಕೇವಲ ಇತಿಹಾಸವನ್ನು ಸರಿಪಡಿಸುತ್ತಿದ್ದೇವೆ. ವಿದ್ಯಾರ್ಥಿಗಳು ಸತ್ಯವನ್ನು ಓದುವುದು ಮುಖ್ಯವಾಗಿದೆ' ಎಂದು ಉಪ ಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ಸೋಮವಾರ ಸುದ್ದಿಗಾರರಿಗೆ ತಿಳಿಸಿದರು. ಸಮಾಜವಾದಿ ಪಕ್ಷದ ನಾಯಕರು, ಮೊಘಲ್ ರಾಜರಿಗೆ ಸಂಬಂಧಿಸಿದ ಅಧ್ಯಾಯಗಳನ್ನು ತೆಗೆದುಹಾಕುವುದರಿಂದ ಇತಿಹಾಸ ಬದಲಾಗುವುದಿಲ್ಲ ಎಂದಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಚಾಲಿ	32199-35621	ಬಿಳಿಗೋಟು	24869-32899
ಕೋಕ	12500-25000	ಕೆಂಪುಗೋಟು	25899-32899	ಚಾಲಿ	33369-36610
ಹೊಸತು	22500-40000	ರಾಶಿ	40818-43899	ಕೋಕ	18899-30699
ಹಳತು	48000-54500	ಕಾರ್ಕಳ		ಕೆಂಪುಗೋಟು	24899-34299
ಶಿರಸಿ		ಹೊಸತು	30000-38000	ರಾಶಿ	40469-48115
ಬೆಟ್ಟೆ	36209-40808	ಹೊಸತು	40000-53000	ತಟ್ಟಿಬೆಟ್ಟೆ	36369-42889
ಬಿಳಿಗೋಟು	24199-31599	ಯಲ್ಲಾಪುರ			

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ಬೆಂಗಳೂರು -54 ಸಂಪರ್ಕಿಸಿ: ಹೆಚ್ಚಿನ ಮಾಹಿತಿಗಾಗಿ 9148525233, 7899235388

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಪ್ರವಾಸ

Travel

03.05.2023 21.05.2023 22.06.2023 ಸಿಂಗಾಪುರ್,ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 16.05.2023 20.06.2023 ನೇಪಾಳ 9 ದಿನಗಳು. 18.05.2023 13.06.2023 ಭೂತಾನ್ 8 ದಿನಗಳು. 29.04.2023 25.05.2023 12.06.2023 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 6 ದಿನಗಳು. 27.04.2023 16.05.2023 06.06.2023 ಶಿಮ್ಲಾ,ಮನಾಲಿ 8 ದಿನಗಳು. ಜೈನ್ ಟ್ರಾವಲ್ಸ್, ಮಲ್ಲೇಶ್ವರಂ. ಬೆಂಗಳೂರು.03 9448402248 7022547922

TRAVEL CORNER

★ವಿಮಾನದಲ್ಲಿ ಪ್ರವಾಸ★ 14.05.2023 9/13ದಿನಗಳು ಆಗ್ರಾ,ದೆಹಲಿ,ಕಾಶಿ,ಗಯಾ, ಪ್ರಯಾಗ,.19.06.2023 13ದಿನಗಳು ಕಾಶಿ,ನೇಪಾಳ ಮುಕ್ತಿನಾಥ,ಗಜೇಂದ್ರಮೋಕ್ಷ, ಜನಕಪುರ್ ಪ್ರವಾಸ. ಆರ್.ಗಾಂಧಿ ಟೂರ್ಸ್.(ರಿ).ತ್ಯಾಗರಾಜನಗರ. 9945445809/ 9902433500

5.07.2023 ರಿಂದ 13 ದಿನಗಳು ಅಮರನಾಥ, ವೈಷ್ಣೋದೇವಿ ಶ್ರೀನಗರ, ಅಮೃತಸರ, ಸಂಪರ್ಕಿಸಿ: ಶ್ರೀ ಗಂಗಾ ಟೂರಿಸ್ಟ್, ಬೆಂಗಳೂರು. 9480253807/ 8105522123

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 17/04/23 ಜಾರ್ಖಂಡ್, ಕೋಲ್ಕತಾ, ಭುವನೇಶ್ವರ. 26/04/23 ಜಮ್ಮು, ಕಾಶ್ಮೀರ್, ವೈಷ್ಣೋದೇವಿ. 08/06/23 ಚಾರ್ಧಾಮ್ ಯಾತ್ರ. 9964527782, 9591017782

ಸುವರ್ಣ ಯಾತ್ರ.130423 ನೇಪಾಳ, ಮುಕ್ತಿನಾಥ ಪ್ರವಾಸ 9 ದಿನಗಳು. 240423.ಕಾಶಿ ಪ್ರವಾಸ 7 ದಿನಗಳು.9008381022, 9019462508.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಕೆಂಚೇನಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಚೌಡೇಶ್ವರಿ ವಾರ್ಡ್ 2, ಬೆಂಗಳೂರು ಉತ್ತರ– 560064 ವಿಳಾಸ ದಲ್ಲಿರುವ ಮತ್ತು ಬಿಬಿಎಂಪಿ ಕಾರ್ಪೊರೇಶನ್ ವ್ಯಾಪ್ತಿಗೆ ಒಳಪಡುವ, ದಿ ಮೆಂಬರ್ಸ್ ಆಫ್ ಸೈನಿಕ ವಿಹಾರ ಸೈಟ್/ಹೌಸ್ ಒನರ್ಸ್ ವೆಲ್‌ಫೇರ್ ಅಸೋಸಿಯೇಶನ್ (ನೋಂ.) ಇವರಿಗೆ ಸಂಬಂಧಿತ, ಸರ್ವೆ ನಂ. 33 ಮತ್ತು 34 ರಲ್ಲಿ (ಪ್ರಸಕ್ತ ಸರ್ವೆ ನಂ. 33/1, 33/3, 33/5 ಮತ್ತು 34/2, 34/3) ರೂಪಿಸಲಾಗಿರುವ ಎಲ್ಲಾ ನಿವೇಶನಗಳು ಮತ್ತು ಅದರಲ್ಲಿ ನಿರ್ಮಿಸಲಾಗಿರುವ ಮನೆಗಳು ಕೂಡ, ಸನ್ 2004ರಿಂದಲೇ ಅಸೋಸಿಯೇಶನ್ ಸದಸ್ಯರ ಸಂಪೂರ್ಣ ಮತ್ತು ಪರಿಶುದ್ಧ ಹಕ್ಕು, ಅಧಿಕಾರಕ್ಕೆ ಒಳಪಟ್ಟಿರುತ್ತವೆ ಮತ್ತು ಅವರವರ ಸ್ವಾಧೀನತೆಯಲ್ಲಿರುತ್ತವೆ. ಸದರಿ ಬಡಾವಣೆಯಲ್ಲಿ ಅತಿಕ್ರಮ ಮಾಡುವವರು ಶಿಕ್ಷೆಗೆ ಗುರಿಯಾಗುತ್ತಾರೆ ಮತ್ತು ಸದರಿ ಬಡಾವಣೆಯಲ್ಲಿನ ನಿವೇಶನಗಳಿಗೆ ಅಥವಾ ಮನೆಗಳಿಗೆ ಸಂಬಂಧಿಸಿದಂತೆ ಅಜ್ಮತ್ ಉಲ್ಲಾಖಾನ್, ಜಿ ವೆಂಕಟರಮಣ ಮತ್ತು/ ಅಥವಾ ಅವರ ಏಜೆಂಟ್‌ರೊಂದಿಗೆ ಅಗ್ರೀಮೆಂಟ್ ಮಾಡಿಕೊಂಡಲ್ಲಿ ಅಥವಾ ಯಾವುದೇ ವ್ಯವಹಾರ ಮಾಡಿದಲ್ಲಿ, ಅದು ಅನೂರ್ಜಿತ ವಾಗಿರುತ್ತದೆ.
ಎಚ್ಚರಿಕೆ: ಸಾರ್ವಜನಿಕರು ಇದರಲ್ಲಿ ವ್ಯವಹರಿಸಿ ಲಿಟಿಗೇಶನ್‌ಗೆ ಒಳಾಗಗಬಾರದೆಂದು ಜಾಗ್ರತೆ ಸೂಚಿಸಲಾಗಿದೆ.
ವಂದನೆಗಳೊಂದಿಗೆ
ಸಹಿ /– ಕಾರ್ಯದರ್ಶಿಗಳು, ಸೈನಿಕ ವಿಹಾರ ಸೈಟ್/ಹೌಸ್ ಒನರ್ಸ್ ವೆಲ್‌ಫೇರ್ ಅಸೋಸಿಯೇಶನ್ (ನೋಂ.) 122, 9ನೇ ಮುಖ್ಯರಸ್ತೆ, ಸೈನಿಕ ವಿಹಾರ ಬಡಾವಣೆ, ಕೆಂಚೇನಹಳ್ಳಿ, ಯಲಹಂಕ ಹೋಬಳಿ, ಬೆಂಗಳೂರು – 560064.
ಬೆಂಗಳೂರು ದಿನಾಂಕ: 04/04/2023

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

ನೀಲಿ ಚಿತ್ರ ತಾರೆಗೆ ಹಣ ನೀಡಿದ ಪ್ರಕರಣ

ಕೋರ್ಟ್‌ಗೆ ಟ್ರಂಪ್ ಇಂದು ಹಾಜರು

ಟ್ರಂಪ್

ವಾಷಿಂಗ್ಟನ್ (ಪಿಟಿಐ): 2016 ಅಮೆರಿಕ ಅಧ್ಯಕ್ಷೀಯ ಚುನಾವಣೆ ವೇಳೆ ನೀಲಿಚಿತ್ರ ನಟಿ ಸ್ಟಾರ್ಮಿ ಡೇನಿಯಲ್ಸ್ ಅವರಿಗೆ ಹಣ ಪಾವತಿಸಿದ್ದ ಪ್ರಕರಣದಲ್ಲಿ ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿರುದ್ಧ ಮ್ಯಾನ್‌ಹಟನ್ ಗ್ರಾಂಡ್ ಜ್ಯೂರಿಯು ದೋಷಾರೋಪ ಹೊರಿಸಿರುವ ಹಿನ್ನೆಲೆಯಲ್ಲಿ ಟ್ರಂಪ್ ಮಂಗಳವಾರ ನ್ಯಾಯಾಲಯದ ಎದುರು ಹಾಜರಾಗಲಿದ್ದಾರೆ.

ಈ ಮೂಲಕ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿರುವ ಅಮೆರಿಕದ ಪ್ರಥಮ ಮಾಜಿ ಅಧ್ಯಕ್ಷ ಟ್ರಂಪ್ ಎನ್ನಲಾಗಿದೆ.

ತಮ್ಮ ಮಾರ್-ಎ-ಲೊಗೊದ ತಮ್ಮ ನಿವಾಸದಿಂದ ಟ್ರಂಪ್ ಅವರು ಸೋಮವಾರವೇ ನ್ಯೂಯಾರ್ಕ್‌ಗೆ ತೆರಳಿದರು. ನ್ಯಾಯಾಲಯದ ಎದುರು ಹಾಜರಾದ ಬಳಿಕ ಅವರು ಫ್ಲೋರಿಡಾದ ತಮ್ಮ ನಿವಾಸಕ್ಕೆ ಮರಳಲಿದ್ದಾರೆ. ಅಲ್ಲಿ ಅದೇ ರಾತ್ರಿ ಅವರ ಬೆಂಬಲಿಗರ ಎದುರು ಅವರು ಮಾತನಾಡಲಿದ್ದಾರೆ ಎಂದು ಅವರ ಕಚೇರಿ ಮಾಹಿತಿ ನೀಡಿದೆ.

ವಿಚಾರಣೆಯು ಅಲ್ಪಾವಧಿಯದ್ದಾಗಿರುತ್ತದೆ. ವಿಚಾರಣೆ ವೇಳೆಯೇ ಟ್ರಂಪ್ ಅವರ ಅಪರಾಧವನ್ನು ಓದಲಾಗುತ್ತದೆ. ಟ್ರಂಪ್ ಅವರ ವಿರುದ್ಧ ಯಾವ ಅಪರಾಧದ ಅಡಿ ಎಷ್ಟು ಮೊಕದ್ದಮೆಗಳನ್ನು ಹೊರಿಸಲಾಗುತ್ತದೆ ಎಂದು ಇನ್ನೂ ತಿಳಿದುಬಂದಿಲ್ಲ ಎನ್ನಲಾಗಿದೆ.

ತಮ್ಮ ವಿರುದ್ಧ ಹೊರಿಸಲಾಗಿರುವ ದೋಷಾರೋಪಗಳನ್ನ ಟ್ರಂಪ್ ಅವರು ನಿರಾಕರಿಸಿದ್ದಾರೆ ಮತ್ತು ಪ್ರಾಸಿಕ್ಯೂಟರ್, ನ್ಯಾಯಾಧೀಶರ ವಿರುದ್ಧ ಹರಿಹಾಯ್ದಿದ್ದಾರೆ. 'ನನ್ನ ವಿರುದ್ಧ ಉದ್ದೇಶಪೂರ್ವಕವಾಗಿ ಕ್ರಮ ಜರುಗಿಸುವ ಕೆಲಸಕ್ಕೆ ನ್ಯಾಯಾಧೀಶರು ನಿಯೋಜಿತರಾಗಿದ್ದಾರೆ' ಎಂದು ಅವರು ಸಾಮಾಜಿಕ ಜಾಲತಾಣಗಳಲ್ಲಿ ಕಿಡಿಕಾರಿದ್ದಾರೆ.

2024ರ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಡೋನಾಲ್ಡ್ ಟ್ರಂಪ್ ಘೋಷಣೆ ಮಾಡಿದ್ದಾರೆ.

ಅಪಘಾತ: ಭಾರತ ಮೂಲದ ದತ್ತಾಂಶ ವಿಶ್ಲೇಷಕ ಸಾವು

ನ್ಯೂಯಾರ್ಕ್: ಸ್ನೇಹಿತರೊಬ್ಬರನ್ನು ಕರೆತರಲು ಬೋಸ್ಟನ್‌ನ ಲೋಗನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗಿದ್ದ ಭಾರತೀಯ-ಅಮೆರಿಕನ್ ದತ್ತಾಂಶ ವಿಶ್ಲೇಷಕರೊಬ್ಬರಿಗೆ ಬಸ್ಸೊಂದು ಡಿಕ್ಕಿ ಹೊಡೆದ ಪರಿಣಾಮ ಅವರು ಸ್ಥಳದಲ್ಲೇ ಸಾವಿಗೀಡಾದ ಘಟನೆ ನಡೆದಿದೆ ಎಂದು ಇಲ್ಲಿನ ಮಾಧ್ಯಮವೊಂದು ವರದಿ ಮಾಡಿದೆ.

ಮಾರ್ಚ್ 28ರ ಸಂಜೆ 5 ಗಂಟೆ ಸುಮಾರಿಗೆ ಈ ಘಟನೆ ನಡೆದಿದ್ದು, ಆಂಧ್ರ ಪ್ರದೇಶದ ವಿಶ್ವಚಂದ ಕೊಲ್ಲ ಸಾವಿಗೀಡಾದವರು. ಅವರು ತಕೇಡ ಫಾರ್ಮಾಸ್ಯೂಟಿಕಲ್ ಕಂಪನಿಯ ಉದ್ಯೋಗಿಯಾಗಿದ್ದರು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರಿದ್ದಾರೆ.

ವಿಶ್ವಚಂದ ಅವರು ಮಾರ್ಚ್ 28ರಂದು ತಮ್ಮ ಸಂಗೀತಗಾರ ಸ್ನೇಹಿತರೊಬ್ಬರನ್ನು ಕರೆತರಲು ಬೋಸ್ಟನ್‌ನ ಲೋಗನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 'ಬಿ'ನ ಕೆಳಹಂತಕ್ಕೆ ತೆರಳಿದ್ದರು.

'ಅಕ್ಯುರ್ ಎಸ್‌ಯುವಿ ವಾಹನದಲ್ಲಿ ತೆರಳಿದ್ದ ವಿಶ್ವಚಂದ ಕಾರಿನ ಚಾಲಕನ ಪಕ್ಕದ ಬಾಗಿಲ ಬಳಿ ನಿಂತಿದ್ದರು. ಆಗ ಅದೇ ಮಾರ್ಗದಲ್ಲಿ ಚಲಿಸುತ್ತಿದ್ದ ಡಾರ್ಟ್‌ಮೌತ್ ಸಾರಿಗೆಯ ಬಸ್ ವಿಶ್ವಚಂದ ಅವರಿಗೆ ತಾಗಿ ಅವರನ್ನು ಕಾರಿನ ಸಮೇತ ಎಳೆದುಕೊಂಡು ಹೋಗಿದೆ' ಎಂದು ಸ್ಥಳೀಯ ಪೊಲೀಸರು ಮಾಹಿತಿ ನೀಡಿದ್ದಾರೆ.

'ಬಸ್ ಅವರಿಗೆ ಡಿಕ್ಕಿ ಹೊಡೆದಾಗ ಕರ್ತವ್ಯನಿರತ ನರ್ಸ್‌ವೊಬ್ಬರು ಅವರಿಗೆ ಸಹಾಯ ಮಾಡಲು ಧಾವಿಸಿದರಾದರೂ ಅವರು ಸ್ಥಳದಲ್ಲೇ ಸಾವಿಗೀಡಾದರು' ಎಂದು ಮಾಧ್ಯಮದ ವರದಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಅರುಣಾಚಲದ 11 ಸ್ಥಳಗಳ ಹೆಸರು ಬದಲಿಸಿದ ಚೀನಾ

ಬೀಜಿಂಗ್: ಅರುಣಾಚಲ ಪ್ರದೇಶದಲ್ಲಿ ಹಕ್ಕು ಸಾಧಿಸುವ ಸಲುವಾಗಿ ಚೀನಾವು ಮತ್ತೆ ಇಲ್ಲಿನ 11 ಸ್ಥಳಗಳ ಹೆಸರುಗಳನ್ನು ಬದಲಿಸಿದೆ.

ಚೀನಾದ ನಾಗರಿಕ ವ್ಯವಹಾರಗಳ ಸಚಿವಾಲಯವು ಮೂರನೇ ಹಂತದಲ್ಲಿ ಹೆಸರುಗಳನ್ನು ಬದಲಿಸಿದೆ ಎಂದು 'ಗ್ಲೋಬಲ್ ಟೈಮ್ಸ್' ಸೋಮವಾರ ವರದಿ ಮಾಡಿದೆ. ಅರುಣಾಚಲ ಪ್ರದೇಶದ ಆರು ಸ್ಥಳಗಳಿಗೆ 2017ರಲ್ಲಿ ಹಾಗೂ 15 ಸ್ಥಳಗಳಿಗೆ 2021ರಲ್ಲಿ ಚೀನಾ ಮರುನಾಮಕರಣ ಮಾಡಿತ್ತು.

ಮಲೇಷ್ಯಾ: ಕಡ್ಡಾಯ ಮರಣದಂಡನೆ ರದ್ದು

ಕ್ವಾಲಾಲಂಪುರ (ರಾಯಿಟರ್ಸ್): ಕಡ್ಡಾಯ ಮರಣದಂಡನೆ ಶಿಕ್ಷೆ ರದ್ದು ಸೇರಿದಂತೆ ಕಾನೂನು ವ್ಯವಸ್ಥೆಯಲ್ಲಿ ಆಮೂಲಾಗ್ರ ಸುಧಾರಣೆ ತರುವ ನಿಯಮಗಳಿಗೆ ಮಲೇಷ್ಯಾ ಸಂಸತ್ತು ಸೋಮವಾರ ಅನುಮೋದನೆ ನೀಡಿತು.ಮರಣದಂಡನೆಗೆ ಒಳಪಡುವ ಅಪರಾಧಗಳ ಸಂಖ್ಯೆಯನ್ನು ತಗ್ಗಿಸುವ ನಿರ್ಧಾರ ಕೈಗೊಂಡಿತು. ಜೀವಾವಧಿ ಶಿಕ್ಷೆಯನ್ನು ರದ್ದು ಮಾಡುವ ಪ್ರಸ್ತಾವವನ್ನೂ ಅಂಗೀಕರಿಸಿತು. ಮರಣ ದಂಡನೆಗೆ ಬದಲಾಗಿ ಚಾಟಿಯಲ್ಲಿ ಥಳಿಸುವುದು, 30ರಿಂದ 40 ವರ್ಷ ಜೈಲು ಶಿಕ್ಷೆ ವಿಧಿಸಲು ಕಾಯ್ದೆಗೆ ತಿದ್ದುಪಡಿ ತರಲಾಗಿದೆ.

ಸುಂಟರಗಾಳಿ: ಸಾವಿನ ಸಂಖ್ಯೆ 32ಕ್ಕೆ ಏರಿಕೆ

ವಾಷಿಂಗ್ಟನ್ (ಎಪಿ): ಅಮೆರಿಕದ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಕಳೆದ ವಾರದಿಂದ ಬೀಸುತ್ತಿರುವ ಭೀಕರ ಸುಂಟರಗಾಳಿಗೆ ಸಾವನ್ನಪ್ಪಿದವರ ಸಂಖ್ಯೆ 32ಕ್ಕೆ ಏರಿಕೆಯಾಗಿದೆ. ಅರ್ಕಾನ್‌ಸಾಸ್ ರಾಜಧಾನಿ ಲಿಟ್ಲ್ ರಾಕ್ ಮೂಲಕ ಹಾದುಹೋದ ಸುಂಟರಗಾಳಿಯು 11 ರಾಜ್ಯಗಳಲ್ಲಿ ಹಾನಿ ಮಾಡಿದೆ. ಅಧ್ಯಕ್ಷ ಜೋ ಬೈಡನ್ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ.

ಬೈಕ್‌ನಲ್ಲಿ ಅಪಾಯಕಾರಿ ಸಾಹಸ: ಯುವಕನ ಬಂಧನ

ಮುಂಬೈ: ಬೈಕ್‌ನಲ್ಲಿ ಇಬ್ಬರು ಯುವತಿಯರನ್ನು ಕೂರಿಸಿಕೊಂಡು ಅಪಾಯಕಾರಿ ಸಾಹಸ ಮಾಡಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ಬಳಿಕ ಯುವಕನೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. 24 ವರ್ಷದ ಯುವಕನ ವಿರುದ್ಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅದಾನಿ ಸಮೂಹದ ಮೇಲಿನ ಆರೋಪ: ಜೆಪಿಸಿ ತನಿಖೆಗೆ ವಿರೋಧ ಪಕ್ಷಗಳ ಆಗ್ರಹ

ಸಂಸತ್ ಕಲಾಪ ಮತ್ತೆ ಮುಂದೂಡಿಕೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಷೇರುಗಳ ಮೌಲ್ಯವನ್ನು ತಿರುಚಲಾಗಿದೆ ಎಂಬ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ತನಿಖೆಗೆ ಒಳಪಡಿಸಬೇಕು ಎಂದು ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳು ಸೋಮವಾರವೂ ಪ್ರತಿಭಟನೆ ನಡೆಸಿದ್ದರಿಂದ ಉಭಯ ಸದನಗಳ ಕಲಾಪವನ್ನು ಒಂದು ದಿನದ ಮಟ್ಟಿಗೆ ಮುಂದೂಡಲಾಯಿತು.

'ಮಹಾವೀರ ಜಯಂತಿ'ಗೆ ಮಂಗಳವಾರ ರಜೆ ಇರುವ ಕಾರಣ ಕಲಾಪವು ಬುಧವಾರ ಮತ್ತೆ ಆರಂಭವಾಗಲಿದೆ.

ಇತ್ತೀಚೆಗೆ ಮೃತಪಟ್ಟ ಸಂಸದ ಗಿರೀಶ್ ಬಾಪಟ್ ಮತ್ತು ಮಾಜಿ ಸಂಸದ ಇನ್ನಸೆಂಟ್ ಅವರಿಗೆ ಲೋಕಸಭೆಯಲ್ಲಿ ಬೆಳಿಗ್ಗೆ ಕಲಾಪ ಆರಂಭವಾದ ನಂತರ ಸಂತಾಪ ಸೂಚಿಸಿ ಗೌರವಾರ್ಥವಾಗಿ ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು. ಕಲಾಪ ಮರು ಆರಂಭವಾದ ನಂತರ ಪ್ರತಿಪಕ್ಷಗಳು ಅದಾನಿ ವಿಚಾರವಾಗಿ ಸರ್ಕಾರದ ವಿರುದ್ಧ ಘೋಷಣೆ ಕೂಗಲು ಆರಂಭಿಸಿದವು. ಗದ್ದಲ ಮುಂದುವರೆದ ಕಾರಣ ಸ್ಪೀಕರ್ ಕಲಾಪವನ್ನು ಒಂದು ದಿನದ ಮಟ್ಟಿಗೆ ಮುಂದೂಡಿದರು.

ಇನ್ನು ರಾಜ್ಯಸಭೆ ಕಲಾಪಕ್ಕೆ ಕಾಂಗ್ರೆಸ್ ಸಂಸದರು ಕಪ್ಪು ಬಟ್ಟೆ ಧರಿಸಿ ಬಂದಿದ್ದರೆ, ಟಿಎಂಸಿ ಸದಸ್ಯರು ಕಪ್ಪು ಮಾಸ್ಕ್ ಧರಿಸಿ ಬಂದಿದ್ದರು. ಕಲಾಪ ಆರಂಭವಾಗುತ್ತಿದ್ದಂತೆಯೇ, ಅದಾನಿ ಸಮೂಹದ ವಿರುದ್ಧ ಜೆಪಿಸಿ ತನಿಖೆಗೆ ಆಗ್ರಹಿಸಿ ಘೋಷಣೆ ಕೂಗಲು ಆರಂಭಿಸಿದರು. ಸಭಾಪತಿ ಜಗದೀಪ್ ಧನಕರ್ ಅವರು ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಿದರು.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸ್ಪರ್ಧಾತ್ಮಕ (ತಿದ್ದುಪಡಿ) ಮಸೂದೆ–2023 ಅನ್ನು ಮಧ್ಯಾಹ್ನ ಮಂಡಿಸಿದರು. ಪ್ರತಿಪಕ್ಷಗಳ ಸದಸ್ಯರ ಪ್ರತಿಭಟನೆ ನಡುವೆಯೇ ಯಾವುದೇ ಚರ್ಚೆ ಇಲ್ಲದೆ ಧ್ವನಿ ಮತದ ಮೂಲಕ ಮಸೂದೆಯನ್ನು ಅಂಗೀಕರಿಸಲಾಯಿತು. ಬಳಿಕ ಕಲಾಪವನ್ನು ಒಂದು ದಿನದ ಮಟ್ಟಿಗೆ ಮುಂದೂಡಲಾಯಿತು. ಮಸೂದೆಯು ಲೋಕಸಭೆಯಲ್ಲಿ ಮಾ.29ರಂದು ಅಂಗೀಕಾರಗೊಂಡಿತ್ತು.

ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಭಾಗದ ಕಲಾಪ ಮಾ.13ರಿಂದ ಆರಂಭವಾಗಿದೆ. ಆದರೆ ಅದಾನಿ ಸಮೂಹದ ವಿರುದ್ಧ ಜೆಪಿಸಿ ತನಿಖೆಗೆ ಆಗ್ರಹಿಸಿ ವಿಪಕ್ಷಗಳು ಪ್ರತಿಭಟನೆ ನಡೆಸುತ್ತಿರುವ ಕಾರಣ ಹಾಗೂ ರಾಹುಲ್ ಗಾಂಧಿ ವಿದೇಶದಲ್ಲಿ ನೀಡಿದ ಹೇಳಿಕೆಗೆ ಕ್ಷಮೆಯಾಚಿಸಬೇಕೆಂದು ಆಡಳಿತಾರೂಢ ಬಿಜೆಪಿ ಸದಸ್ಯರು ಪಟ್ಟು ಹಿಡಿದಿರುವ ಕಾರಣ ಉಭಯ ಸದನಗಳ ಕಲಾಪ ಸುಗಮವಾಗಿ ನಡೆಯುತ್ತಿಲ್ಲ.

ರಾಜ್ಯಸಭಾ ಕಲಾಪದ ವೇಳೆ ಸೋಮವಾರ ಕಂಡುಬಂದ ದೃಶ್ಯ –ಪಿಟಿಐ ಚಿತ್ರ

ಚಿರತೆ ದಾಳಿ: ಮೂರು ವರ್ಷಗಳಲ್ಲಿ 15 ಮಂದಿ ಸಾವು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಚಿರತೆಗಳ ದಾಳಿಯಿಂದ 15 ಮಂದಿ ಮೃತಪಟ್ಟಿದ್ದಾರೆ ಎಂದು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ತಿಳಿಸಿದೆ.

ಲೋಕಸಭೆಯಲ್ಲಿ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಕೇಳಿರುವ ಪ್ರಶ್ನೆಗೆ ಇಲಾಖೆಯ ರಾಜ್ಯ ಸಚಿವ ಅಶ್ವಿನ್ ಕುಮಾರ್ ಚೌಬೆ ಸೋಮವಾರ ಲಿಖಿತ ಉತ್ತರ ನೀಡಿ, '2019–20ರಲ್ಲಿ ತುಮಕೂರಿನಲ್ಲಿ ನಾಲ್ವರು, 2020–21ರಲ್ಲಿ ರಾಮನಗರ, ತುಮಕೂರು ಹಾಗೂ ಕೊಪ್ಪಳದಲ್ಲಿ ತಲಾ ಇಬ್ಬರು ಹಾಗೂ 2022–23ರಲ್ಲಿ ಮೈಸೂರಿನಲ್ಲಿ ನಾಲ್ವರು ಮತ್ತು ದಾವಣಗೆರೆಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ' ಎಂದು ತಿಳಿಸಿದ್ದಾರೆ.

'ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು ಹಾಗೂ ಬೇಲೂರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಕಳೆದ 10 ವರ್ಷಗಳಲ್ಲಿ ಆನೆಗಳ ದಾಳಿಗೆ 42 ಮಂದಿ ಸತ್ತಿದ್ದಾರೆ. ಕಾಡು ಪ್ರಾಣಿಗಳ ದಾಳಿಯಿಂದ ಮೃತಪಟ್ಟವರ ಕುಟುಂಬಗಳಿಗೆ ನೀಡುವ ಪರಿಹಾರದ ಮೊತ್ತವನ್ನು ₹7.5 ಲಕ್ಷದಿಂದ ₹15 ಲಕ್ಷಕ್ಕೆ ಹೆಚ್ಚಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಹಾಸನ ಜಿಲ್ಲೆಯಿಂದ ಕಳೆದ 10 ವರ್ಷಗಳಲ್ಲಿ 34 ಸಮಸ್ಯಾತ್ಮಕ ಆನೆಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಮಹಾವೀರ: ಸುಖದ ಸೇತು

• ಎಸ್. ಸೂರ್ಯಪ್ರಕಾಶ ಪಂಡಿತ್

ಭಾರತೀಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ ಹಲವು ದರ್ಶನಗಳಲ್ಲಿ ಒಂದು: ಜೈನದರ್ಶನ. ಈ ದರ್ಶನದ ಮೂಲತತ್ತ್ವಗಳು ಪ್ರಧಾನವಾಗಿ ಮಹಾವೀರನ ಜೀವನ ಮತ್ತು ಕಾಣ್ಕೆಗಳನ್ನು ಆಶ್ರಯಿಸಿವೆ.

ವಸ್ತುತಃ ಜೈನಮತವು ಮಹಾವೀರನಿಗಿಂತಲೂ ಪ್ರಾಚೀನವಾದುದು; ಮಹಾವೀರ, ಜೈನಪರಂಪರೆಯಲ್ಲಿ ಇಪ್ಪತ್ತನಾಲ್ಕನೆಯ ತೀರ್ಥಂಕರ. ಹೀಗಿದ್ದರೂ ಜೈನಮತದ ಮೇಲೆ ಮಹಾವೀರನ ಪ್ರಭಾವ ತುಂಬ ದೊಡ್ಡದು. ಮಹಾವೀರನ ಕಾಲ ಸುಮಾರು ಕ್ರಿ.ಪೂ. ಆರನೆಯ ಶತಮಾನ. ಇದರಿಂದ ಜೈನಮತದ ಪ್ರಾಚೀನತೆಯನ್ನು ಗ್ರಹಿಸಬಹುದಾಗಿದೆ. ಮಹಾವೀರ ಮತ್ತು ಬುದ್ಧ ಭಗವಂತನು ಸಮಕಾಲೀನರು ಎಂಬ ಎಣಿಕೆಯೂ ಉಂಟು.

ಮಹಾವೀರನು (ವರ್ಧಮಾನ ಎಂಬ ಹೆಸರೂ ಅವನಿಗೆ ಇದ್ದಿತು) ರಾಜಕುಮಾರ. ಆದರೆ ಅವನಿಗೆ ಎಳವೆಯಲ್ಲಿಯೇ ಲೌಕಿಕ ಜಗತ್ತಿನ ಆಸೆ–ಆಕರ್ಷಣೆಗಳಿಂದ ವಿಮುಖತೆ ಒದಗಿತು; ತೀವ್ರವಾದ ತಪಸ್ಸಿನಲ್ಲಿ ತೊಡಗಿದ; ದಿವ್ಯಜ್ಞಾನವನ್ನು ಸಂಪಾದಿಸಿದ; ಮೂವತ್ತನೆಯ ವಯಸ್ಸಿನಲ್ಲೇ ಸನ್ಯಾಸಿಯಾದ. ತಾನು ಕಂಡುಕೊಂಡ ಲೋಕೋತ್ತರವಾದ ಅರಿವನ್ನು ಸಮಾಜದಲ್ಲಿ ಪಸರಿಸುತ್ತ, ತನ್ನ ಎಪ್ಪತ್ತೆರಡನೆಯ ವಯಸ್ಸಿನಲ್ಲಿ ಶರೀರವನ್ನು ತ್ಯಜಿಸಿದ.

ಮಹಾವೀರನು ಸನ್ಯಾಸಿಗಳಿಗೂ ಗೃಹಸ್ಥರಿಗೂ ಆಧ್ಯಾತ್ಮಿಕತೆಯನ್ನೂ ಲೌಕಿಕ ನೀತಿ–ನಿಯಮಗಳನ್ನೂ ಉಪದೇಶಿಸಿದ. ಅವನ ಉಪದೇಶಗಳಲ್ಲಿ ಪ್ರಧಾನವಾಗಿ ಐದು ವ್ರತಗಳನ್ನೂ ಇಪ್ಪತ್ತೆರಡು ವಿಧದ ಸಹನೆಗಳನ್ನೂ ಗುರುತಿಸಬಹುದು. ಇಂದು ಜೈನಧರ್ಮ ಎಂಬುದು ಅಹಿಂಸೆಗೆ ಪರ್ಯಾಯಪದವೇ ಆಗಿರುವುದನ್ನು ನಾವು ಬಲ್ಲೆವು. ಮಹಾವೀರನು ಅಹಿಂಸಾತತ್ತ್ವವನ್ನು ತನ್ನ ದರ್ಶನಪದ್ಧತಿಯಲ್ಲಿ ಗಟ್ಟಿಗೊಳಿಸಿದ.



ಇಂದು ಮಹಾವೀರ ಜಯಂತಿ

ಜೈನಮತ ಇಂದಿಗೂ ಜೀವಂತವಾಗಿರುವ ಜೀವನಪದ್ಧತಿ ಮತ್ತು ದಾರ್ಶನಿಕ ಪಂಥ. ಭಾರತದ ಉದ್ದಗಲಕ್ಕೂ ಇದು ಹರಡಿಕೊಂಡಿರುವುದನ್ನು ಕಾಣಬಹುದು. ಒಂದು ಕಾಲದಲ್ಲಿ ಕರ್ನಾಟಕ ಪ್ರಮುಖ ಜೈನಕೇಂದ್ರಗಳಲ್ಲಿ ಒಂದಾಗಿದ್ದಿತು. ಶ್ರವಣಬೆಳಗೊಳದಲ್ಲಿ ನಡೆಯುವ ಮಹಾಮಸ್ತಕಾಭಿಷೇಕ ಒಂದೇ ಸಾಕು, ಜೈನಮತದ ಜೀವಂತಿಕೆಯನ್ನು ಸಾರಲು. ಈ ಮತದ ಧಾರೆಗಳಾದ ದಿಗಂಬರಪಂಥ ಮತ್ತು ಶ್ವೇತಾಂಬರಪಂಥ – ಈ ಎರಡೂ ಧಾರೆಗಳಲ್ಲಿ ಅಂದಿನಿಂದ ಇಂದಿನವರೆಗೂ ಹಲವರು ತ್ಯಾಗಿಗಳು ಸನ್ಯಾಸವನ್ನು ಸ್ವೀಕರಿಸುತ್ತ, ಜೈನಪರಂಪರೆಯ ತತ್ತ್ವಗಳನ್ನು ಸಮಾಜದಲ್ಲಿ ಎತ್ತಿಹಿಡಿಯುತ್ತಿದ್ದಾರೆ. ಆಧುನಿಕ ಜಗತ್ತಿನ ಎಲ್ಲ ಆಕರ್ಷಣೆಗಳ ನಡುವೆಯೂ ಕಠಿಣವಾದ ಸನ್ಯಾಸಧರ್ಮವನ್ನು ಪಾಲಿಸುತ್ತಿರುವ ಜೈನಮುನಿಗಳ ಬದ್ಧತೆ ದಿಟವಾಗಿಯೂ ಪ್ರಶಂಸಾರ್ಹ.

ಜೈನದರ್ಶನದಲ್ಲಿ ಗೃಹಸ್ಥನು ಅತಿ ಮುಖ್ಯವಾಗಿ ಅನುಸರಿಸಬೇಕಾದ ಐದು ವ್ರತಗಳನ್ನು ಒಕ್ಕಣಿಸಲಾಗಿದೆ; ಇವನ್ನು ಅಣುವ್ರತಗಳು ಎಂದು ಕರೆಯುತ್ತಾರೆ. ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ – ಇವೇ ಆ ವ್ರತಗಳು. ಆಧುನಿಕ ಕಾಲದ ಹಲವು ಸಮಸ್ಯೆಗಳ ಪರಿಹಾರಕ್ಕೆ ಈ ವ್ರತಗಳ ಅನುಸಂಧಾನ ಪೂರಕವಾಗುತ್ತದೆ ಎಂಬುದು ಸ್ಪಷ್ಟ. ಆದರೆ ಆ ದಿಕ್ಕಿನತ್ತ ಸಮಾಜವು ದೃಷ್ಟಿಯನ್ನು ಹರಿಸಬೇಕಷ್ಟೆ.

'ತೀರ್ಥಂಕರ' ಎಂಬುದಕ್ಕೆ 'ಸೇತುವೆಯನ್ನು ಕಟ್ಟುವವನು' ಎಂಬ ಅರ್ಥವೂ ಇದೆ. ಇದರ ಧ್ವನಿ ಏನೆಂದರೆ: ದುಃಖಸಾಗರವನ್ನು ದಾಟಲು ನಮ್ಮ ಸಹಾಯಕ್ಕೆ ಒದಗುವವನೇ ತೀರ್ಥಂಕರ. ವರ್ಧಮಾನ ಮಹಾವೀರ ಅಂಥ ತೀರ್ಥಂಕರ; ನಮ್ಮನ್ನು ದುಃಖದ ದಡದಿಂದ ಸಂತೋಷದ ದಡಕ್ಕೆ ತಲುಪಿಸಬಲ್ಲವನು. ❖

ಜನಪ್ರಿಯ ಜಾಗತಿಕ ನಾಯಕರ ಪಟ್ಟಿ: ಮೋದಿಗೆ ಅಗ್ರಸ್ಥಾನ

ನವದೆಹಲಿ (ಪಿಟಿಐ): ಜನಪ್ರಿಯ ಜಾಗತಿಕ ನಾಯಕರ ಪಟ್ಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಅಗ್ರಸ್ಥಾನಕ್ಕೇರಿದ್ದಾರೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರನ್ನು ಹಿಂದಿಕ್ಕಿ, ಮೋದಿ ಅವರು ಮೊದಲ ಸ್ಥಾನಕ್ಕೇರಿದ್ದಾರೆ ಎಂದು ಜಾಗತಿಕ ನಾಯಕರ ಜನಪ್ರಿಯತೆ ಕುರಿತು ಶ್ರೇಣಿ ನೀಡುವ 'ಮಾರ್ನಿಂಗ್ ಕನ್ಸಲ್ಟ್' ಸಮೀಕ್ಷೆ ಹೇಳಿದೆ.

ಈ ಕುರಿತ ವರದಿಯನ್ನು ಕೇಂದ್ರ ಸಚಿವ ಪೀಯೂಷ್ ಗೋಯಲ್ ಟ್ವಿಟ್ಟರ್‌ನಲ್ಲಿಹಂಚಿಕೊಂಡಿದ್ದು, 'ಪ್ರಧಾನಿಮೋದಿ ಅವರು ಅತ್ಯಂತ ಪ್ರೀತಿಪಾತ್ರ ಮತ್ತು ಮೆಚ್ಚುಗೆ ಪಡೆದ ಜಾಗತಿಕ ನಾಯಕ. 'ಮಾರ್ನಿಂಗ್ ಕನ್ಸಲ್ಟ್' ಸಮೀಕ್ಷೆಯಲ್ಲಿ ಅವರು ಶೇ76ರಷ್ಟು ರೇಟಿಂಗ್ ಪಡೆದುಕೊಂಡಿದ್ದಾರೆ. ಮೆಕ್ಸಿಕೊ ಅಧ್ಯಕ್ಷ ಆಂಡ್ರೆಸ್ ಮ್ಯಾನುಯೆಲ್ ಲೋಪೆಜ್ ಒಬ್ರಡಾರ್ ಎರಡನೇ ಸ್ಥಾನದಲ್ಲಿದ್ದಾರೆ' ಎಂದು ಟ್ವೀಟ್ ಮಾಡಿದ್ದಾರೆ.

ಮಾರ್ಚ್ 22ರಿಂದ 28ರೊಳಗೆ ಸಂಗ್ರಹಿಸಿರುವ ದತ್ತಾಂಶಗಳ ಆಧಾರದಲ್ಲಿ ಸಮೀಕ್ಷೆ ನಡೆಸಲಾಗಿದೆ. 22 ನಾಯಕರ ಪಟ್ಟಿಯಲ್ಲಿ ದಕ್ಷಿಣ ಕೊರಿಯಾದ ಅಧ್ಯಕ್ಷ ಯೂನ್ ಸುಕ್ ಯೋಲ್ ಕೊನೆಯ ಸ್ಥಾನದಲ್ಲಿದ್ದಾರೆ.

ಸಿಬಿಐ ವಜ್ರಮಹೋತ್ಸವ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ

'ಭ್ರಷ್ಟಾಚಾರ ಮುಕ್ತ ಭಾರತ: ಸಿಬಿಐ ಹೊಣೆ'

ನವದೆಹಲಿ (ಪಿಟಿಐ): 'ಭ್ರಷ್ಟಾಚಾರವು ಪ್ರಜಾಪ್ರಭುತ್ವ ವ್ಯವಸ್ಥೆಗೆ ಎದುರಾಗಿರುವ ಬಹುದೊಡ್ಡ ತೊಡಕು. ಭಾರತವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸಬೇಕಿರುವುದು ನ್ಯಾಯಾಂಗ ಹಾಗೂ ಕೇಂದ್ರೀಯ ತನಿಖಾ ಸಂಸ್ಥೆಯ (ಸಿಬಿಐ) ಮಹತ್ವದ ಜವಾಬ್ದಾರಿಯಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಸೋಮವಾರ ಇಲ್ಲಿ ನಡೆದ ಸಿಬಿಐನ ವಜ್ರಮಹೋತ್ಸವ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಭ್ರಷ್ಟಾಚಾರವು ಬಡವರ ಹಕ್ಕನ್ನು ಕಸಿಯುತ್ತದೆ. ಹಲವು ಅಪರಾಧಿಗಳ ಹುಟ್ಟಿಗೂ ದಾರಿ ಮಾಡಿಕೊಡುತ್ತದೆ' ಎಂದಿದ್ದಾರೆ.

'ಭ್ರಷ್ಟಾಚಾರದ ವಿರುದ್ಧ ಕೆಲಸ ಮಾಡುವ ದಿಸೆಯಲ್ಲಿ ಈಗ ರಾಜಕೀಯ ಇಚ್ಛಾಶಕ್ತಿಗೇನೂ ಕೊರತೆ ಇಲ್ಲ. ಭ್ರಷ್ಟರು ಎಷ್ಟೇ ಪ್ರಭಾವಿಗಳಾಗಿರಲಿ. ಅವರ ವಿರುದ್ಧ ಅಧಿಕಾರಿಗಳು ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು' ಎಂದಿದ್ದಾರೆ.

'ಭಾರತದ ಆರ್ಥಿಕ ಶಕ್ತಿ ವೃದ್ಧಿಸುತ್ತಿದೆ. ಇದೇ ಹೊತ್ತಿನಲ್ಲಿ ಇದಕ್ಕೆ ಅಡೆತಡೆಗಳನ್ನು ಸೃಷ್ಟಿಸುವವರೂ ಹೆಚ್ಚುತ್ತಿದ್ದಾರೆ. ದೇಶದ ಸಾಮಾಜಿಕ ರಚನೆ, ಅದರ ಏಕತೆ ಮತ್ತು ಸಹೋದರತ್ವ ಹಾಗೂ ಅದರ ಆರ್ಥಿಕ ಹಿತಾಸಕ್ತಿ ಮತ್ತು ಸಂಸ್ಥೆಗಳ ಮೇಲಿನ ದಾಳಿಯೂ ಹೆಚ್ಚುತ್ತಿದೆ. ಭ್ರಷ್ಟಾಚಾರದ ಹಣವನ್ನು ಇದಕ್ಕಾಗಿ ವಿನಿಯೋಗಿಸಲಾಗುತ್ತಿದೆ. ಭ್ರಷ್ಟಾಚಾರ ಮತ್ತು ಅಪರಾಧದ ಬಹುರಾಷ್ಟ್ರೀಯ ಸ್ವರೂಪವನ್ನು ಅರಿಯುವ ಹಾಗೂ ಈ ಕುರಿತು ಅಧ್ಯಯನ ಕೈಗೊಳ್ಳುವ ಅಗತ್ಯವಿದೆ' ಎಂದು ಸಿಬಿಐ ಅಧಿಕಾರಿಗಳಿಗೆ ತಿಳಿಸಿದರು.

'ಭಾರತವು ಸ್ವಾತಂತ್ರ್ಯದ ಸಮಯದಲ್ಲಿ ಭ್ರಷ್ಟಾಚಾರವನ್ನು ಬಳುವಳಿಯಾಗಿ ಪಡೆಯಿತು. ಕೆಲ ವ್ಯಕ್ತಿಗಳು ಇದನ್ನು ನಿರ್ಮೂಲನೆ ಮಾಡುವ ಬದಲು ಈ ರೋಗವನ್ನು ಪೋಷಿಸುತ್ತಲೇ ಬಂದಿದ್ದಾರೆ. ಭ್ರಷ್ಟಾಚಾರ ನಡೆಸುವುದರಲ್ಲಿ ಯಾರು ಹೊಸ ದಾಖಲೆ ಬರೆಯುತ್ತಾರೆ ಎಂಬ ವಿಚಾರದಲ್ಲಿ ಸ್ಪರ್ಧೆ ಏರ್ಪಟ್ಟಿದೆ. ಹಗರಣಗಳು ಹಾಗೂ ನಿರ್ಭಯತೆಯ ಪ್ರಜ್ಞೆಯು ವ್ಯವಸ್ಥೆಯ ವಿನಾಶಕ್ಕೆ ದಾರಿ ಮಾಡಿಕೊಟ್ಟಿದೆ. ನೀತಿಗಳಲ್ಲಿನ ನಿಸ್ಸತ್ವತೆಯ ವಾತಾವರಣವು ಅಭಿವೃದ್ಧಿಗೆ ತೊಡಕಾಗಿದೆ' ಎಂದು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಚಂಡೀಗಢದ ಎಸಿಬಿ ಎಎಸ್‌ಪಿ ಸೀಮಾ ಪಹುಜಾ ಅವರಿಗೆ ರಾಷ್ಟ್ರಪತಿಯವರ ಪೊಲೀಸ್ ಪದಕ ಪ್ರದಾನ ಮಾಡಿದರು –ಪಿಟಿಐ ಚಿತ್ರ

'ಸ್ವಜನಪಕ್ಷಪಾತ, ವಂಶಾಡಳಿತಕ್ಕೆ ಪ್ರೋತ್ಸಾಹ'

'ಭ್ರಷ್ಟಾಚಾರವು ಸ್ವಜನಪಕ್ಷಪಾತ ಹಾಗೂ ವಂಶಾಡಳಿತಕ್ಕೆ ಪ್ರೋತ್ಸಾಹ ನೀಡುತ್ತದೆ. ಯಾವಾಗ ಸ್ವಜನಪಕ್ಷಪಾತ ಹಾಗೂ ವಂಶಾಡಳಿತ ಹೆಚ್ಚುತ್ತದೆಯೋ ಆಗ ದೇಶದ ಸಾಮರ್ಥ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ. ಇದರಿಂದ ಅಭಿವೃದ್ಧಿಯೂ ಕುಂಠಿತಗೊಳ್ಳುತ್ತದೆ' ಎಂದು ಮೋದಿ ಹೇಳಿದ್ದಾರೆ.

'ದಶಕಗಳಿಂದಲೂ ಭ್ರಷ್ಟಾಚಾರದಿಂದ ಲಾಭ ಪಡೆದಿರುವವರು ವ್ಯವಸ್ಥೆಯೊಂದನ್ನು ಸೃಷ್ಟಿಸಿಬಿಟ್ಟಿದ್ದಾರೆ. ಈ ವ್ಯವಸ್ಥೆಯ ಭಾಗವಾಗಿರುವವರು ತನಿಖಾ ಸಂಸ್ಥೆಗಳ ವಿರುದ್ಧ ದಾಳಿ ನಡೆಸುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

ಕೋವಿಡ್ ರೂಪಾಂತರ: ಎಚ್ಚರಿಕೆಯಿಂದಿರಲು ಸಲಹೆ

ನವದೆಹಲಿ: 'ಕೋವಿಡ್‌ನ ಹೊಸ ರೂಪಾಂತರವು ಹಿಂದಿನಷ್ಟು ಅಪಾಯಕಾರಿ ಅಲ್ಲ ಹಾಗೂ ಹಿಂದಿನಂತೆ ಹೆಚ್ಚಿನ ಪ್ರಮಾಣದಲ್ಲಿ ಜನರು ಆಸ್ಪತ್ರೆಗೆ ದಾಖಲಾಗುತ್ತಿಲ್ಲವಾದರೂ ಜನರು ಈ ಬಗ್ಗೆ ಎಚ್ಚರಿಕೆ ವಹಿಸಬೇಕು' ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಉನ್ನತ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

'ಹೊಸ ರೂಪಾಂತರಿ ತಳಿಗಳು ಬರುತ್ತಲೇ ಇರುತ್ತವೆ. ಈಗ ಬಂದಿರುವುದು ಹೊಸ ರೂಪಾಂತರ. ಈ ಬಗ್ಗೆ ಪ್ರಯೋಗಾಲಯದಲ್ಲಿ ಅಧ್ಯಯನವನ್ನು ಮಾಡಲಾಗಿದೆ' ಎಂದು ಅವರು ಹೇಳಿದ್ದಾರೆ.

'ಪ್ರಸ್ತುತ ಎಕ್ಸ್‌ಬಿಬಿ 1.16 ರೂಪಾಂತರವು ದೇಶದಲ್ಲಿ ಕೋವಿಡ್ ಪ್ರಕರಣಗಳಕ್ಕೆ ಉಲ್ಬಣಕ್ಕೆ ಕಾರಣವಾಗಿದೆ' ಎಂದೂ ಅವರು ಮಾಹಿತಿ ನೀಡಿದ್ದಾರೆ.

ದೇಶದಲ್ಲಿ ಸೋಮವಾರ ಕೋವಿಡ್ ಸೋಂಕು ಪ್ರಕರಣಗಳ ಸಂಖ್ಯೆ 3,641 ಆಗಿದೆ. ದೈನಂದಿನ ಪ್ರಕರಣಗಳ ಪಾಸಿಟಿವಿ ದರವು 6.12 ಇದೆ. 24 ಗಂಟೆಗಳ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ ಮೂವರು, ದೆಹಲಿ, ಕೇರಳ, ಕರ್ನಾಟಕ ಮತ್ತು ರಾಜಸ್ಥಾನದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ ಎಂದು ಸಚಿವಾಲಯದ ಅಂಕಿಅಂಶಗಳು ತಿಳಿಸಿವೆ.

ನೇಪಾಳದಲ್ಲಿ ಓಮೈಕ್ರಾನ್ ಪತ್ತೆ (ಕಠ್ಮಂಡು): ನೇಪಾಳದಲ್ಲಿ ಸೋಮವಾರ 'ಕೋವಿಡ್ 19 ಎಕ್ಸ್‌ಬಿಬಿ 1.16' ಎಂದು ಗುರುತಿಸಲಾದ ಓಮೈಕ್ರಾನ್‌ನ ಹೊಸ ರೂಪಾಂತರವು ಪತ್ತೆಯಾಗಿದೆ. ದೇಶಾದ್ಯಂತ ಒಟ್ಟು 24 ರೋಗಿಗಳ ಪೈಕಿ 10 ರೋಗಿಗಳಲ್ಲಿ ಈ ರೀತಿಯ ಹೊಸ ರೂಪಾಂತರವು ಇರುವುದು ದೃಢಪಟ್ಟಿದೆ.

ಈ ರೀತಿಯ ರೂಪಾಂತರವು ನೆರೆಯ ಭಾರತದಲ್ಲಿ ಪತ್ತೆಯಾಗಿದ್ದು, ಅಲ್ಲಿಂದ ಹರಡುತ್ತಿದೆ. ಈ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕೆಂದು ನೇಪಾಳದ ಆರೋಗ್ಯ ಸಚಿವಾಲಯವು ಸಲಹೆ ನೀಡಿದೆ.

ಬೂಸ್ಟರ್ ಡೋಸ್‌ನಂತೆ 'ಕೊವೊವ್ಯಾಕ್ಸ್': ಸೀರಂ ಮನವಿ

ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಬೆನ್ನಲ್ಲೇ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಪತ್ರ ಬರೆದಿರುವ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾವು, ವಯಸ್ಕರಿಗೆ ಬೂಸ್ಟರ್ ಡೋಸ್‌ನಂತೆ ಕೊವೊವ್ಯಾಕ್ಸ್ ಅನ್ನು ನೀಡಲು ಕೋವಿನ್ ಪೋರ್ಟಲ್‌ನಲ್ಲಿ ಸೇರಿಸಬೇಕೆಂದು ಕೋರಿದೆ ಎಂದು ಮೂಲಗಳು ಸೋಮವಾರ ತಿಳಿಸಿವೆ.

ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ನಿರ್ದೇಶಕ ಪ್ರಕಾಶ್ ಕುಮಾರ್ ಸಿಂಗ್ ಅವರು ಮಾರ್ಚ್ 27ರಂದು ಈ ಕುರಿತು ಆರೋಗ್ಯ ಸಚಿವಾಲಯಕ್ಕೆ ಪತ್ರ ಬರೆದಿದ್ದಾರೆ.

ವೇಲಕಳಿ ಪ್ರದರ್ಶನ

ಪೈಂಗುಣಿ ಉತ್ಸವ ಅಂಗವಾಗಿ ಕೇರಳದ ತಿರುವನಂತಪುರದ ಶ್ರೀ ಪದ್ಮನಾಭಸ್ವಾಮಿ ದೇವಾಲಯದ ಎದುರು ಕಲಾವಿದರು ಸೋಮವಾರ ವೇಲಕಳಿ ಕಲೆ ಪ್ರದರ್ಶಿಸಿದರು –ಪಿಟಿಐ ಚಿತ್ರ

ಯಾಸಿನ್ ಭಟ್ಕಳ್ ವಿರುದ್ಧ ದೋಷಾರೋಪ ನಿಗದಿ

ನವದೆಹಲಿ (ಪಿಟಿಐ): ನಿಷೇಧಿತ ಇಂಡಿಯನ್ ಮುಜಾಹಿದೀನ್ ಭಯೋತ್ಪಾದನಾ ಸಂಘಟನೆಯ ಸಹ ಸ್ಥಾಪಕ ಯಾಸಿನ್ ಭಟ್ಕಳ್ ಹಾಗೂ ಸಂಘಟನೆಯ ಇತರರ ವಿರುದ್ಧ ದೆಹಲಿ ನ್ಯಾಯಾಲಯವು ಸೋಮವಾರ ದೋಷಾರೋಪ ನಿಗದಿ ಮಾಡಿದೆ. 2012ರಲ್ಲಿ ಸೂರತ್ ನಗರದಲ್ಲಿ ಅಣುಬಾಂಬ್ ದಾಳಿ ನಡೆಸಲು ಸಂಚು ರೂಪಿಸಿದ್ದು ಸಾಬೀತಾಗಿದೆ ಎಂದು ನ್ಯಾಯಾಲಯ ಹೇಳಿದೆ.

'ಭಟ್ಕಳ್‌ನಿಂದ ವಶಪಡಿಸಿಕೊಂಡ ಡಿಜಿಟಲ್ ಸಾಧನಗಳಿಂದ ಜಿಹಾದಿ ಸಂಬಂಧಿತ ವಿಡಿಯೊಗಳು ಮತ್ತು ಜಿಹಾದಿ ಹೆಸರಿನಲ್ಲಿ ಮುಸ್ಲಿಮೇತರರ ಹತ್ಯೆ ಮಾಡುವುದನ್ನು ಸಮರ್ಥಿಸಿಕೊಳ್ಳುವ ಬರಹಗಳು ದೊರಕಿವೆ. ಆದ್ದರಿಂದ ಭಟ್ಕಳ್ ಮೇಲೆ ಆರೋಪ ಹೊರಿಸಲು ಸಾಕಷ್ಟು ಸಾಕ್ಷ್ಯಗಳಿವೆ' ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಶೈಲೆಂದರ್ ಮಲಿಕ್ ಹೇಳಿದರು.

'ಮುಸ್ಲಿಮರನ್ನು ಸ್ಥಳಾಂತರಿಸಿ ಸೂರತ್ ಮೇಲೆ ಅಣುಬಾಂಬ್ ದಾಳಿ ನಡೆಸಲು ಸಂಚು ರೂಪಿಸಿದ್ದರ ಕುರಿತು ಮೊಬೈಲ್ ಸಂದೇಶಗಳು ದೊರೆತಿವೆ. ನೇಪಾಳದಲ್ಲಿರುವ ಮಾವೊವಾದಿಗಳಿಂದ ಶಸ್ತ್ರಾಸ್ತ್ರಗಳನ್ನು ಪಡೆದು ಇನ್ನಷ್ಟು ಭಯೋತ್ಪಾದನಾ ಚಟುವಟಿಕೆ ನಡೆಸುವ ಕುರಿತೂ ಸಾಕ್ಷ್ಯ ಇದೆ' ಎಂದರು.

ರೈಲು ಬೋಗಿಯೊಳಗೆ ಬೆಂಕಿ ಹಚ್ಚಿದ ದುಷ್ಕರ್ಮಿ: ಮೂವರ ಸಾವು

ಒಂದನೇ ಪುಟದಿಂದ...

ದುಷ್ಕರ್ಮಿಗೆ ಕೂಡ ಸುಟ್ಟ ಗಾಯಗಳಾಗಿರುವ ಸಾಧ್ಯತೆಗಳಿವೆ. ಚಲಿಸುತ್ತಿದ್ದ ರೈಲಿನಿಂದ ಹೊರಗೆ ಹಾರಿದ ಕಾರಣ ಮೂವರು ಮೃತಪಟ್ಟಿರಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಅಪರಿಚಿತ ವ್ಯಕ್ತಿಯೊಬ್ಬ ಎರಡು ಬಾಟಲಿಯಲ್ಲಿ ಪೆಟ್ರೋಲ್‌ನಂತಹ ದ್ರಾವಣದೊಂದಿಗೆ ರೈಲಿನ ಡಿ1 ಬೋಗಿಯೊಳಗೆ ಪ್ರವೇಶಿಸಿ, ಅದನ್ನು ಪ್ರಯಾಣಿಕರ ಮೇಲೆ ಮತ್ತು ಬೋಗಿಯೊಳಗೆ ಸುರಿದು ಬೆಂಕಿ ಹಚ್ಚಿದ್ದಾನೆ. ಬೆಂಕಿ ಹೊತ್ತಿಕೊಂಡಾಗ ಕೆಲವು ಪ್ರಯಾಣಿಕರು ರೈಲಿನ ಚೈನ್ ಎಳೆದಿದ್ದಾರೆ. ರೈಲು ನಿಂತಾಗ ದುಷ್ಕರ್ಮಿ ಪರಾರಿಯಾಗಿದ್ದಾನೆ. ಬಳಿಕ ಪ್ರಯಾಣಿಕರು ಬೆಂಕಿ ನಂದಿಸಿದ್ದಾರೆ' ಎಂದು ಪ್ರಯಾಣಿಕರು ತಿಳಿಸಿದ್ದಾರೆ. ರೈಲು ಕೋಯಿಕ್ಕೋಡ್ ರೈಲು ನಿಲ್ದಾಣದಿಂದ ಹೊರಟ ಕೂಡಲೇ ಈ ಕೃತ್ಯ ಎಸಗಲಾಗಿದೆ. ರೈಲು ಹಳಿಯಲ್ಲಿ ಬ್ಯಾಗೊಂದು ದೊರೆತಿದೆ. ಅದರಲ್ಲಿ ಪೆಟ್ರೋಲ್ ತುಂಬಿದ ಬಾಟಲಿ, ಮೊಬೈಲ್, ನೋಟ್ ಪುಸ್ತಕ ಮತ್ತು ಬಟ್ಟೆಗಳು ಇದ್ದವು. ನೋಟ್ ಪುಸ್ತಕದಲ್ಲಿ ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ಬರೆಯಲಾಗಿದೆ ಎಂದು ಹೇಳಿದ್ದಾರೆ.

ಆರೋಪಿಯ ರೇಖಾ ಚಿತ್ರ

ಎಸ್‌ಐಟಿ ತನಿಖೆ–ಸಿ.ಎಂ: ಈ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಲಾಗುವುದು ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸೋಮವಾರ ತಿಳಿಸಿದ್ದಾರೆ.

ಹಿಂಸಾಕೃತ್ಯದ ಪ್ರತಿಧ್ವನಿ, ಕಲಾಪಕ್ಕೆ ಅಡ್ಡಿ

ಪಟ್ನಾ (ಪಿಟಿಐ): ರಾಮನವಮಿ ಮೆರವಣಿಗೆ ಸಂದರ್ಭದಲ್ಲಿ ಬಿಹಾರದ ವಿವಿಧೆಡೆ ನಡೆದ ಹಿಂಸಾಚಾರ ಕೃತ್ಯಗಳು ಸೋಮವಾರ ವಿಧಾನಸಭೆಯ ಅಧಿವೇಶನದಲ್ಲಿ ಪ್ರತಿಧ್ವನಿಸಿದ್ದು, ಆಡಳಿತ–ಪ್ರತಿಪಕ್ಷ ಸದಸ್ಯರ ನಡುವೆ ವಾಕ್ಸಮರಕ್ಕೆ ಕಾರಣವಾಯಿತು. ಗದ್ದಲದ ವಾತಾವರಣ ಮೂಡಿತು.

ಸದಸ್ಯರ ಆರೋಪ –ಪ್ರತ್ಯಾರೋಪಗಳ ಹಿನ್ನೆಲೆಯಲ್ಲಿ ಸ್ಪೀಕರ್ ಅವಧ್ ಬಿಹಾರಿ ಚೌಧರಿ ಅವರು ದಿನದ ಕಲಾಪವನ್ನು ಮುಂದೂಡಬೇಕಾಯಿತು. ಬೆಳಿಗ್ಗೆ ಸದನ ಸೇರುತ್ತಿದ್ದಂತೆಯೇ ವಿರೋಧಪಕ್ಷ ಬಿಜೆಪಿಯ ಸದಸ್ಯರು, ವಿಷಯವನ್ನು ಪ್ರಸ್ತಾಪಿಸಿ ಗದ್ದಲ ಎಬ್ಬಿಸಿದರು.

ಬಿಹಾರದ ಸಸರಂ, ಬಿಹಾರ ಶರೀಫ್‌ನಲ್ಲಿರಾಮನವಮಿ ಮೆರವಣಿಗೆ ಸಂದರ್ಭದಲ್ಲಿ ಗುರುವಾರ ಹಿಂಸಾತ್ಮಕ ಕೃತ್ಯಗಳು ನಡೆದಿದ್ದವು. ಅದರ ಹಿಂದೆಯೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಭಾನುವಾರ ಸಸರಂ ಪಟ್ಟಣಕ್ಕೆ ನೀಡಬೇಕಿದ್ದ ಭೇಟಿಯನ್ನು ರದ್ದುಪಡಿಸಿದ್ದರು.

ಪ್ರಧಾನಿಯಾಗುವ ಕನಸು ಬಿಡಿ- ಬಿಜೆಪಿ: ನವದೆಹಲಿ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಅವರು ಆಡಳಿತದ ಮೇಲೆ ಹಿಡಿತ ಕಳೆದುಕೊಂಡಿದ್ದಾರೆ ಎಂಬುದಕ್ಕೆ ರಾಜ್ಯದಲ್ಲಿ ನಡೆದ ಹಿಂಸಾತ್ಮಕ ಘಟನೆಗಳೇ ಸಾಕ್ಷಿ ಎಂದು ಬಿಜೆಪಿ ಸೋಮವಾರ ಆರೋಪಿಸಿದೆ. 'ನಿತೀಶ್ ಪ್ರಧಾನಿಯಾಗುವ ಕನಸು ಕಾಣುವುದನ್ನು ಬಿಟ್ಟು, ರಾಜ್ಯದ ಹಿತಾಸಕ್ತಿ ರಕ್ಷಿಸಲು ಗಮನನೀಡಲಿ' ಎಂದು ಕೇಂದ್ರ ಸಚಿವ ರವಿಶಂಕರ್ ಪ್ರಸಾದ್, ಬಿಹಾರದ ಮಾಜಿ ಉಪಮುಖ್ಯಮಂತ್ರಿ ಸುಶೀಲ್ ಕುಮಾರ್ ಮೋದಿ ಅವರು ಸುದ್ದಿಗೋಷ್ಠಿಯಲ್ಲಿ ಸಲಹೆ ಮಾಡಿದರು.

ಮಾನಹಾನಿ: ರಾಹುಲ್‌ಗೆ ಜಾಮೀನು

ಒಂದನೇ ಪುಟದಿಂದ

'ಪ್ರಕರಣದಲ್ಲಿ ಗುಜರಾತ್ ಸರ್ಕಾರವನ್ನೂ ಪ್ರತಿವಾದಿಯನ್ನಾಗಿ ಮಾಡಲಾಗಿದೆ. ಹೀಗಾಗಿ ನ್ಯಾಯಾಲಯವು ರಾಜ್ಯ ಸರ್ಕಾರಕ್ಕೂ ನೋಟಿಸ್ ಜಾರಿಗೊಳಿಸಿದೆ. ಇನ್ನು ಮುಂದೆ ನಡೆಯುವ ವಿಚಾರಣೆ ವೇಳೆ ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡುವಂತೆ ರಾಹುಲ್ ಮನವಿ ಮಾಡಿದ್ದಾರೆ. ಅವರ ಕೋರಿಕೆಯನ್ನು ನ್ಯಾಯಾಲಯ ಮಾನ್ಯ ಮಾಡಿದೆ' ಎಂದು ಮಾಹಿತಿ ನೀಡಿದ್ದಾರೆ.

ರಾಹುಲ್ ಅವರು ನ್ಯಾಯಾಲಯಕ್ಕೆ ಹಾಜರಾಗುವ ಉದ್ದೇಶದಿಂದ ತಂಗಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೊಂದಿಗೆ ವಿಮಾನದ ಮೂಲಕ ಸೂರತ್‌ಗೆ ಬಂದರು. ಈ ವೇಳೆ ಅವರ ಜೊತೆ, ಕಾಂಗ್ರೆಸ್ ಆಳ್ವಿಕೆ ಇರುವ ರಾಜ್ಯಗಳ ಮುಖ್ಯಮಂತ್ರಿಗಳಾದ ರಾಜಸ್ಥಾನದ ಅಶೋಕ್ ಗೆಹಲೋತ್, ಛತ್ತೀಸಗಡದ ಭೂಪೇಶ್ ಬಘೇಲ್ ಮತ್ತು ಹಿಮಾಚಲ ಪ್ರದೇಶದ ಸುಖವಿಂದರ್ ಸುಖು ಅವರು ಇದ್ದರು.

ಬಳಿಕ ರಾಹುಲ್ ಹಾಗೂ ಪ್ರಿಯಾಂಕಾ ಅವರು ಪಕ್ಷದ ಮುಖಂಡರೊಂದಿಗೆ ಬಸ್‌ನಲ್ಲಿ ವಿಮಾನ ನಿಲ್ದಾಣದಿಂದ ನೇರವಾಗಿ ನ್ಯಾಯಾಲಯಕ್ಕೆ ತೆರಳಿದರು.

ಮಧ್ಯಾಹ್ನ 3 ಗಂಟೆ ಸುಮಾರಿಗೆ ಅರ್ಜಿಯ ವಿಚಾರಣೆ ಆರಂಭವಾಯಿತು. ಈ ವೇಳೆ ರಾಹುಲ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಪ್ರಿಯಾಂಕಾ ಹಾಗೂ ಪಕ್ಷದ ಇತರ ಮುಖಂಡರು ಹಾಜರಿದ್ದರು.

ರಾಹುಲ್ ಗಾಂಧಿ ಅವರು ನ್ಯಾಯಾಲಯದ ಹೊರಾಂಗಣದಲ್ಲಿ ಸೇರಿದ್ದ ಬೆಂಬಲಿಗರತ್ತ ಕೈಬೀಸಿದರು–ಪಿಟಿಐ ಚಿತ್ರ

ರಾಹುಲ್ ಬೆಂಬಲಿಗರು ವಶಕ್ಕೆ

ಮುಂಬೈ/ನವಸಾರಿ (ಪಿಟಿಐ): 'ಸೂರತ್ ನ್ಯಾಯಾಲಯಕ್ಕೆ ಹಾಜರಾಗಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಬೆಂಬಲ ಸೂಚಿಸುವ ಸಲುವಾಗಿ ವಾಹನಗಳ ಮೂಲಕ ರಾಜ್ಯದೊಳಗೆ ಪ್ರವೇಶಿಸಲು ಮುಂದಾಗಿದ್ದ ಅವರ 87 ಮಂದಿ ಬೆಂಬಲಿಗರನ್ನು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಲಾಗಿದೆ' ಎಂದು ಗುಜರಾತ್‌ನ ನವಸಾರಿಯ ಪೊಲೀಸ್ ವರಿಷ್ಠಾಧಿಕಾರಿ ಕರಣ್ ರಾಜ್ ವಘೇಲಾ ಸೋಮವಾರ ಹೇಳಿದ್ದಾರೆ.

'ವಶಕ್ಕೆ ಪಡೆದವರಲ್ಲಿ 51 ಮಂದಿ ಮಹಾರಾಷ್ಟ್ರದವರಿದ್ದರು. ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಮುಂಜಾಗ್ರತಾ ಕ್ರಮವಾಗಿ ಇವರನ್ನೆಲ್ಲಾ ಬೆಳಿಗ್ಗೆ 11 ಗಂಟೆ ಸುಮಾರಿಗೆ ವಶಕ್ಕೆ ಪಡೆದು, ಸಂಜೆ 4 ಗಂಟೆ ವೇಳೆಗೆ ಬಿಡುಗಡೆ ಮಾಡಲಾಯಿತು' ಎಂದಿದ್ದಾರೆ.

'ರಾಹುಲ್ ಅವರಿಗೆ ಬೆಂಬಲ ಸೂಚಿಸುವ ಸಲುವಾಗಿ ಪಕ್ಷದ ಕಾರ್ಯಕರ್ತರು ದೇಶದ ವಿವಿಧ ಭಾಗಗಳಿಂದ ಸೂರತ್‌ನತ್ತ ಪ್ರಯಾಣ ಬೆಳೆಸಿದ್ದರು. ಆದರೆ ಪೊಲೀಸರು ಅವರನ್ನೆಲ್ಲಾ ನಗರದ ಹೊರ ಭಾಗಗಳಲ್ಲೇ ತಡೆದಿದ್ದಾರೆ' ಎಂದು ಕಾಂಗ್ರೆಸ್ ನಾಯಕರು ದೂರಿದ್ದಾರೆ.

'ಸೂರತ್‌ನತ್ತ ಹೊರಟಿದ್ದ ನಮ್ಮ ಕಾರ್ಯಕರ್ತರನ್ನು ಗುಜರಾತ್‌ನಲ್ಲಿನ ಬಿಜೆಪಿ ಸರ್ಕಾರವು ಅಕ್ರಮವಾಗಿ ಬಂಧಿಸಿದೆ. ಬಿಜೆಪಿಯ ಪ್ರಜಾಪ್ರಭುತ್ವ ವಿರೋಧಿ ನಿಲುವು ಪದೇ ಪದೇ ಜಗಜ್ಜಾಹೀರುಗೊಳ್ಳುತ್ತಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

ರಾಹುಲ್ ಜೊತೆ ಪಕ್ಷದ ನಾಯಕರು: ಬಿಜೆಪಿ ಆಕ್ಷೇಪ

ಸೂರತ್‌ನ ಸೆಷನ್ಸ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ವೇಳೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಆಡಳಿತ ಇರುವ ರಾಜ್ಯಗಳ ಮುಖ್ಯಮಂತ್ರಿಗಳಾದ ಅಶೋಕ್ ಗೆಹಲೋತ್, ಭೂಪೇಷ್ ಬಘೇಲ್ ಹಾಗೂ ಸುಖ್ವಿಂದರ್ ಸಿಂಗ್ ಸುಖು ಸೇರಿದಂತೆ ಪಕ್ಷದ ಹಲವು ನಾಯಕರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಜೊತೆಗೂಡಿ ತೆರಳಿದ್ದು ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

'ನ್ಯಾಯಾಂಗದ ಮೇಲೆ ಒತ್ತಡ ಹೇರುವ ಪ್ರಯತ್ನ'

'ನನ್ನ ವಾದವಿಷ್ಟೆ. ಕಾಂಗ್ರೆಸ್ ಪಕ್ಷವು ಯಾಕಾಗಿ ನ್ಯಾಯಾಂಗದ ಮೇಲೆ ಇಷ್ಟೊಂದು ಒತ್ತಡ ಹೇರಲು ಪ್ರಯತ್ನಿಸುತ್ತಿದೆ? ನ್ಯಾಯಾಂಗಕ್ಕೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸಲು ಬೇರೆ ರೀತಿಯ ಹಲವು ಮಾರ್ಗಗಳಿವೆ' ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಹೇಳಿದರು.

'ಪಕ್ಷವೊಂದು ಈ ರೀತಿಯಲ್ಲಿ ನ್ಯಾಯಾಲಯವನ್ನು 'ಮುತ್ತಿಗೆ' ಹಾಕಿದ ಮತ್ತೊಂದು ಪ್ರಕರಣ ಇತಿಹಾಸದಲ್ಲಿ ಸಿಗುವುದಿಲ್ಲ. ಕೇವಲ ರಾಹುಲ್‌ಗಾಗಿ ಕಾಂಗ್ರೆಸ್ ಈ 'ನಾಟಕ' ಆಡುತ್ತಿದೆ. ವ್ಯಕ್ತಿಯೊಬ್ಬರು ದೇಶ ಹಾಗೂ ದೇಶದ ಕಾನೂನಿಗಿಂತ ಮೇಲೆ ಎಂದು ಕಾಂಗ್ರೆಸ್ ಭಾವಿಸಿದೆ' ಎಂದರು.

ಅಸಂಬದ್ಧ ಆರೋಪ: ತರೂರ್

ಸಚಿವ ಕಿರಣ್ ರಿಜಿಜು ಅವರ ಆರೋಪವನ್ನು 'ಅಸಂಬದ್ಧ' ಎನ್ನುವ ಮೂಲಕ ಕಾಂಗ್ರೆಸ್ ನಾಯಕ ಶಶಿ ತರೂರ್ ಅವರು ರಿಜಿಜು ಅವರಿಗೆ ತಿರುಗೇಟು ನೀಡಿದ್ದಾರೆ. 'ನ್ಯಾಯಾಲಯಕ್ಕೆ ಹೋಗುವುದು ಎನ್ನುವುದು ಒತ್ತಡ ಹೇರುವ ಪ್ರಯತ್ನವಲ್ಲ' ಎಂದಿದ್ದಾರೆ.

'ನ್ಯಾಯಾಂಗದ ಮೇಲೆ ಒತ್ತಡ ಇದೆ ಎಂದಾದರೆ ಆ ಒತ್ತಡ ಎಲ್ಲಿಂದ ಬರುತ್ತಿದೆ ಎಂಬುದನ್ನು ನಾವೆಲ್ಲರೂ ಊಹಿಸಬಹುದು. ರಾಹುಲ್ ಅವರು ಪ್ರಮುಖ ವಿರೋಧ ಪಕ್ಷವೊಂದರ ನಾಯಕರಾಗಿದ್ದಾರೆ. ಆದ್ದರಿಂದ ಅವರೊಂದಿಗೆ ನ್ಯಾಯಾಲಯಕ್ಕೆ ಹೋಗುವುದು ಸರಿಯಾಗಿಯೇ ಇದೆ. ಕೊನೆಗೂ, ನ್ಯಾಯಾಲಯದಲ್ಲಿ ಹೇಗೆ ವಾದ ಮಾಡುತ್ತೇವೆ ಎನ್ನುವುದು ಮುಖ್ಯವಾಗುತ್ತದೆ ಹೊರತು ನ್ಯಾಯಾಲಯಕ್ಕೆ ಯಾರೆಲ್ಲಾ ಹೋದರು ಎನ್ನುವುದಲ್ಲ' ಎಂದು ಹೇಳಿದ್ದಾರೆ.

ಬೂಟಾಟಿಕೆಗೆ ಮಿತಿ ಇಲ್ಲ: ನ್ಯಾಯಾಂಗಕ್ಕೆ, ನ್ಯಾಯಾಧೀಶರಿಗೆ ದಿನನಿತ್ಯ ಬೆದರಿಕೆ ಒಡ್ಡುವ, ಇತಿಹಾಸವನ್ನು ತಿರುಚುವ ವ್ಯಕ್ತಿಯೊಬ್ಬರು ಮಾತನಾಡುತ್ತಿದ್ದಾರೆ. ಮೋದಿ ಆಡಳಿತದಲ್ಲಿ ಬೂಟಾಟಿಕೆಗೂ ಮಿತಿ ಇಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಹೇಳಿದ್ದಾರೆ.

'ಶಕ್ತಿ ಪ್ರದರ್ಶನಕ್ಕೆ ಅಲ್ಲ'

'ರಾಹುಲ್ ಗಾಂಧಿ ಅವರೊಂದಿಗೆ ಸೂರತ್ ಸೆಷನ್ಸ್ ನ್ಯಾಯಾಲಯಕ್ಕೆ ಹೋಗಬೇಕು ಎನ್ನುವುದು ಪಕ್ಷದ ನಾಯಕರ ವೈಯಕ್ತಿಕ ನಿರ್ಧಾರವಾಗಿತ್ತು. ಜೊತೆಗೆ, ರಾಹುಲ್ ಅವರೊಂದಿಗೆ ಹೋಗಿರುವುದು ನಮ್ಮ ಶಕ್ತಿ ಪ್ರದರ್ಶನಕ್ಕಾಗಿ ಅಲ್ಲ. ನಮ್ಮ ಬೆಂಬಲ ಸೂಚಿಸುವುದಕ್ಕಾಗಿ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

'ಒಂದು ಸಣ್ಣ ಪ್ರಕರಣವಾದರೂ ಸರಿ, ಕುಟುಂಬದವರೆಲ್ಲಾ ಜೊತೆಗೂಡಿ ನ್ಯಾಯಾಲಯಕ್ಕೆ ಹೋಗುತ್ತಾರೆ. ಇದು ಇಡೀ ಪಕ್ಷದ ವಿಚಾರವಾಗಿದೆ. ರಾಹುಲ್ ಅವರು ದೇಶಕ್ಕಾಗಿ ಹೋರಾಡುತ್ತಿದ್ದಾರೆ' ಎಂದು ಹೇಳಿದರು.

ರಾಮನವಮಿ ಗಲಭೆ: ನಷ್ಟದ ಮೌಲ್ಯ ಅಂದಾಜಿಸಲು ನಿರ್ದೇಶಿಸುವಂತೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಮನವಮಿ (ಮಾರ್ಚ್ 30) ಸಂದರ್ಭದಲ್ಲಿ ಪಶ್ಚಿಮ ಬಂಗಾಳ, ಬಿಹಾರ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಜಾರ್ಖಂಡ್ ಹಾಗೂ ತೆಲಂಗಾಣದಲ್ಲಿ ನಡೆದ ಗಲಭೆಯಲ್ಲಿ ಎಷ್ಟು ಮೌಲ್ಯದ ಆಸ್ತಿ ನಷ್ಟವಾಗಿದೆ ಹಾಗೂ ಎಷ್ಟು ಮಂದಿ ಗಾಯಗೊಂಡಿದ್ದಾರೆ ಎಂದು ಅಂದಾಜಿಸಬೇಕು. ಜೊತೆಗೆ ನಷ್ಟ ಅನುಭವಿಸಿದವರಿಗೆ ತಕ್ಕ ಪರಿಹಾರ ನೀಡಬೇಕು ಎಂದು ಗಲಭೆ ನಡೆದ ಈ ಎಲ್ಲಾ ರಾಜ್ಯ ಸರ್ಕಾರಗಳಿಗೆ ನಿರ್ದೇಶಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿದೆ.

'ಹಿಂದೂ ಫ್ರಂಟ್ ಫಾರ್ ಜಸ್ಟೀಸ್' ಎನ್ನುವ ಸಂಸ್ಥೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದೆ. 'ಶಾಂತಿಯುತವಾಗಿ ಧಾರ್ಮಿಕ ಮೆರವಣಿಗೆ ನಡೆಸಲು, ತಮ್ಮ ಸಂಪ್ರದಾಯವನ್ನು ಆಚರಿಸಲು ಸ್ವತಂತ್ರ ಭಾರತದಲ್ಲಿ ಹಿಂದೂಗಳಿಗೆ ಅವಕಾಶ ನಿರಾಕರಿಸಿರುವುದು ದುರದೃಷ್ಟಕರ. ಜೊತೆಗೆ, ಇಂಥ ಘಟನೆಗಳು ನಡೆಯದಂತೆ ತಡೆಯಲು ಈ ಎಲ್ಲಾ ರಾಜ್ಯ ಸರ್ಕಾರಗಳು ವಿಫಲವಾಗಿವೆ' ಎಂದು ಅರ್ಜಿಯಲ್ಲಿ ದೂರಲಾಗಿದೆ.

ಋತುರಾಜ್, ಕಾನ್ವೆ ಭರ್ಜರಿ ಬ್ಯಾಟಿಂಗ್: ಹೋರಾಡಿ ಸೋತ ಲಖನೌ ಸೂಪರ್ ಜೈಂಟ್ಸ್

ಮೊಯೀನ್ ಮೋಡಿ: ಚೆನ್ನೈಗೆ ಜಯ

ಚೆನ್ನೈ (ಪಿಟಿಐ): ಆರಂಭಿಕ ಬ್ಯಾಟರ್‌ಗಳ ಅಬ್ಬರದ ಆಟ ಹಾಗೂ ಮೊಯೀನ್ ಅಲಿ ಅವರ ಸ್ಪಿನ್ ಮೋಡಿ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಗೆಲುವು ತಂದುಕೊಟ್ಟವು.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಚೆನ್ನೈ 12 ರನ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಮಣಿಸಿತು. ಇದರೊಂದಿಗೆ ಟೂರ್ನಿಯಲ್ಲಿ ಮೊದಲ ಜಯದ ಸಿಹಿ ಸವಿಯಿತು.

ಮೊದಲು ಬ್ಯಾಟ್ ಮಾಡಿದ ಮಹೇಂದ್ರ ಸಿಂಗ್ ಧೋನಿ ಬಳಗ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 217 ರನ್ ಪೇರಿಸಿತು. ಲಖನೌ ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗೆ 205 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಬೃಹತ್ ಮೊತ್ತ ಬೆನ್ನಟ್ಟಿದ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ತಂಡಕ್ಕೆ ಭರ್ಜರಿ ಆರಂಭವೇ ಸಿಕ್ಕಿತು. ರಾಹುಲ್ (20, 18ಎ, 4X2) ಹಾಗೂ ಕೈಲ್ ಮೇಯರ್ಸ್ (53, 22ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ ಕೇವಲ 5.3 ಓವರ್‌ಗಳನ್ನು ಆಡಿ 79 ರನ್ ಸೂರೆ ಮಾಡಿದರು. ಮೊಯೀನ್ ಅಲಿ (26ಕ್ಕೆ 4) ಅವರಿಗೆ ಮೊದಲ ವಿಕೆಟ್ ಆಗಿ ಔಟಾಗುವ ಮುನ್ನ ಮೇಯರ್ಸ್ ಎಂಟು ಬೌಂಡರಿ, ಎರಡು ಸಿಕ್ಸರ್ ಸಿಡಿಸಿದರು.

ಮೇಯರ್ಸ್ ವಿಕೆಟ್ ಪತನದ ಬಳಿಕ ದೀಪಕ್ ಹೂಡಾ (2), ರಾಹುಲ್ ಮತ್ತು ಕೃಣಾಲ್ ಪಾಂಡ್ಯ (9) ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ.

ಮಧ್ಯಮ ಕ್ರಮಾಂಕದಲ್ಲಿ ಮಾರ್ಕಸ್ ಸ್ಟೊಯಿನಿಸ್ (21), ನಿಕೊಲಸ್ ಪೂರನ್ (32), ಆಯುಷ್ ಬಡೋಣಿ (23) ಮತ್ತು ಕೆ. ಗೌತಮ್ (ಔಟಾಗದೆ 17) ಲಖನೌ ಜಯದ ಆಸೆ ಚಿಗುರಿಸಿದ್ದರು. ಆದರೆ ಚೆನ್ನೈ ಬೌಲರ್‌ಗಳ ಚಾಣಾಕ್ಷತನದ ಬೌಲಿಂಗ್ ಅದಕ್ಕೆ ಅವಕಾಶ ಮಾಡಿಕೊಡಲಿಲ್ಲ.

ವಿಕೆಟ್ ಗಳಿಸಿದ ಚೆನ್ನೈ ತಂಡದ ಮೊಯೀನ್ ಅಲಿ (ಬಲ) ಅವರನ್ನು ಅಭಿನಂದಿಸಿದ ಸಹ ಆಟಗಾರ– ಎಎಫ್‌ಪಿ ಚಿತ್ರ

ಚೆನ್ನೈಗೂ ಉತ್ತಮ ಆರಂಭ: ಋತುರಾಜ್ ಗಾಯಕವಾಡ್ (57 ರನ್, 31 ಎ., 4X3, 6X4), ಡೆವೊನ್ ಕಾನ್ವೆ (47 ರನ್, 29 ಎ., 4X5, 6X2) ಮತ್ತು ಕೊನೆಯಲ್ಲಿ ಅಂಬಟಿ ರಾಯುಡು (ಅಜೇಯ 27 ರನ್, 14 ಎ., 4X2, 6X2) ಅವರು ಚೆನ್ನೈ ತಂಡದ ದೊಡ್ಡ ಮೊತ್ತಕ್ಕೆ ಕಾರಣರಾದರು.

ಟಾಸ್ ಗೆದ್ದ ಸೂಪರ್ ಜೈಂಟ್ಸ್ ತಂಡದ ನಾಯಕ ಕೆ.ಎಲ್.ರಾಹುಲ್ ಅವರು ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಕಳುಹಿಸಿದರು. ಆದರೆ ಅವರ ನಿರ್ಧಾರವನ್ನು ಚೆನ್ನೈ ತಂಡದ ಋತುರಾಜ್ ಮತ್ತು ಕಾನ್ವೆ ತಲೆಕೆಳಗಾಗಿಸಿದರು. ಮೊದಲ ವಿಕೆಟ್‌ಗೆ 9.1 ಓವರ್‌ಗಳಲ್ಲಿ 110 ರನ್ ಸೇರಿಸಿ ಭರ್ಜರಿ ಆರಂಭ ನೀಡಿದರು. ಇವರ ಅಬ್ಬರದ ಆಟದಿಂದ ಎಂಟು ಓವರ್‌ಗಳಲ್ಲೇ ತಂಡದ ಮೊತ್ತ 100ರ ಗಡಿ ದಾಟಿತು.

10ನೇ ಓವರ್‌ನ ಮೊದಲ ಎಸೆತದಲ್ಲಿ ಋತುರಾಜ್ ವಿಕೆಟ್ ಪಡೆದ ರವಿ ಬಿಷ್ಣೋಯಿ ಈ ಜತೆಯಾಟ ಮುರಿದರು. ಗುಜರಾತ್ ಟೈಟನ್ಸ್ ವಿರುದ್ಧದ ಮೊದಲ ಪಂದ್ಯದಲ್ಲಿ 50 ಎಸೆತಗಳಲ್ಲಿ 92 ರನ್ ಗಳಿಸಿದ್ದ ಋತುರಾಜ್, ಸತತ ಎರಡನೇ ಅರ್ಧಶತಕ ಗಳಿಸಿದರು. ಅಲ್ಪ ಸಮಯದ ಬಳಿಕ ಕಾನ್ವೆ ಕೂಡಾ ಪೆವಿಲಿಯನ್‌ಗೆ ಮರಳಿದರು. ಮಾರ್ಕ್ ವುಡ್ ಎಸೆತದಲ್ಲಿ ಕೃಣಾಲ್ ಪಾಂಡ್ಯಗೆ ಕ್ಯಾಚಿತ್ತರು. ಎರಡು ವಿಕೆಟ್ ಬಿದ್ದರೂ ಶಿವಂ ದುಬೆ (27 ರನ್, 16 ಎ.) ಮತ್ತು ಮೊಯೀನ್ ಅಲಿ (19 ರನ್, 13 ಎ.) ಅವರು ರನ್‌ರೇಟ್ ತಗ್ಗದಂತೆ ನೋಡಿಕೊಂಡರು. ಕೊನೆಯಲ್ಲಿ ರಾಯುಡು ರಟ್ಟೆಯರಳಿಸಿದ್ದರಿಂದ ತಂಡದ ಮೊತ್ತ 200ರ ಗಡಿ ದಾಟಿತು.

ನಾಯಕ ಧೋನಿ (12 ರನ್, 3 ಎ., 6X2) ತಾವೆದುರಿಸಿದ ಮೊದಲ ಎರಡು ಎಸೆತಗಳಲ್ಲಿ ಸಿಕ್ಸರ್ ಹೊಡೆದು ಪ್ರೇಕ್ಷಕರು ಹುಚ್ಚೆದ್ದು ಕುಣಿಯುವಂತೆ ಮಾಡಿದರು. ಮೂರನೇ ಎಸೆತದಲ್ಲಿ ಔಟಾದರು.

ರವಿ ಬಿಷ್ಣೋಯಿ (28ಕ್ಕೆ 3) ಹೊರತುಪಡಿಸಿ ಲಖನೌ ತಂಡದ ಇತರ ಬೌಲರ್‌ಗಳಿಗೆ ಎದುರಾಳಿ ಬ್ಯಾಟರ್‌ಗಳನ್ನು ಕಟ್ಟಿಹಾಕಲು ಆಗಲಿಲ್ಲ.

ಅಂಗಳದಲ್ಲಿ ಓಡಾಡಿದ ಶ್ವಾನ: ಪಂದ್ಯದ ಆರಂಭಕ್ಕೆ ಮುನ್ನ ನಾಯಿಯೊಂದು ಅಂಗಳದಲ್ಲಿ ಕಾಣಿಸಿಕೊಂಡಿತು. ಆಟಗಾರರು ಮತ್ತು ಅಂಪೈರ್ ಅದನ್ನು ಹೊರಗೆ ಓಡಿಸಲು ಪ್ರಯತ್ನಿಸಿ ವಿಫಲರಾದರು. ಅಂಗಳದ ಸಿಬ್ಬಂದಿ ಕೊನೆಗೂ ನಾಯಿಯನ್ನು ಹೊರಕ್ಕೆ ಓಡಿಸಲು ಯಶಸ್ವಿಯಾದರು. ಇದರಿಂದ ಪಂದ್ಯ 5 ನಿಮಿಷ ತಡವಾಗಿ ಆರಂಭ ವಾಯಿತು.

ಸಂಕ್ಷಿಪ್ತ ಸ್ಕೋರ್: ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 217 (ಋತುರಾಜ್ ಗಾಯಕವಾಡ್ 57, ಡೆವೊನ್ ಕಾನ್ವೆ 47, ಶಿವಂ ದುಬೆ 27, ಮೊಯೀನ್ ಅಲಿ 19, ಬೆನ್ ಸ್ಟೋಕ್ಸ್ 8, ಅಂಬಟಿ ರಾಯುಡು ಔಟಾಗದೆ 27, ಮಹೇಂದ್ರ ಸಿಂಗ್ ಧೋನಿ 12, ರವಿ ಬಿಷ್ಣೋಯಿ 28ಕ್ಕೆ 3, ಮಾರ್ಕ್ ವುಡ್ 49ಕ್ಕೆ 3). ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 205 (ಕೆ.ಎಲ್.ರಾಹುಲ್ 20, ಕೈಲ್ ಮೇಯರ್ಸ್ 53, ಮಾರ್ಕಸ್ ಸ್ಟೊಯಿನಿಸ್ 21, ನಿಕೊಲಸ್ ಪೂರನ್ 32, ಆಯುಷ್ ಬಡೋಣಿ 23, ಕೆ.ಗೌತಮ್ ಔಟಾಗದೆ 17; ತುಷಾರ್ ದೇಶಪಾಂಡೆ 45ಕ್ಕೆ 2, ಮೊಯೀನ್ ಅಲಿ 26ಕ್ಕೆ 4). ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ 12 ರನ್‌ಗಳ ಜಯ

ಧೋನಿ 5,000 ರನ್ ಸಾಧನೆ

ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರು ಈ ಪಂದ್ಯದಲ್ಲಿ 12 ರನ್ ಗಳಿಸುವ ಮೂಲಕ ಟೂರ್ನಿಯಲ್ಲಿ ಒಟ್ಟು 5,000 ರನ್ ಮೈಲುಗಲ್ಲು ದಾಟಿದ ಸಾಧನೆ ಮಾಡಿದರು.ಲಖನೌ ಎದುರಿನ ಪಂದ್ಯಕ್ಕೂ ಮೊದಲು ಧೋನಿ ಅವರಿಗೆ ಈ ಮೈಲುಗಲ್ಲು ತಲುಪಲು ಎಂಟು ರನ್ ಬೇಕಿದ್ದವು. ಈ ಸಾಧನೆಯೊಂದಿಗೆ ಅವರು 5,000ಕ್ಕೂ ಹೆಚ್ಚು ರನ್ ಗಳಿಸಿದ ವಿರಾಟ್ ಕೊಹ್ಲಿ (6,706), ಶಿಖರ್ ಧವನ್ (6,284), ಡೇವಿಡ್ ವಾರ್ನರ್ (5,937), ರೋಹಿತ್ ಶರ್ಮಾ (5,880), ಸುರೇಶ್ ರೈನಾ (5,528) ಮತ್ತು ಎ ಬಿ ಡಿವಿಲಿಯರ್ಸ್ (5,162) ಅವರ ಸಾಲಿಗೆ ಸೇರಿದರು. ಧೋನಿ ಬಳಿ ಈಗ 5,004 ರನ್‌ಗಳಿವೆ.

ಪುಟಿದೇಳುವ ವಿಶ್ವಾಸದಲ್ಲಿ ಡೆಲ್ಲಿ

ಗುಜರಾತ್ ಟೈಟನ್ಸ್ ವಿರುದ್ಧ ಇಂದು ಹಣಾಹಣಿ

ನವದೆಹಲಿ (ಪಿಟಿಐ): ಮೊದಲ ಪಂದ್ಯದಲ್ಲಿ ಸೋತಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡ ಐಪಿಎಲ್ ಟೂರ್ನಿಯ ತನ್ನ ಎರಡನೇ ಪಂದ್ಯದಲ್ಲಿ ಮಂಗಳವಾರ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದ್ದು, ಪುಟಿದೆದ್ದು ನಿಲ್ಲುವ ವಿಶ್ವಾಸದಲ್ಲಿದೆ.

ಡೇವಿಡ್ ವಾರ್ನರ್ ನೇತೃತ್ವದ ಡೆಲ್ಲಿ ತಂಡ 50 ರನ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಮಣಿದಿತ್ತು. ಗೊತ್ತುಗುರಿಯಿಲ್ಲದ ಬೌಲಿಂಗ್ ಮತ್ತು ಕಳಪೆ ಫೀಲ್ಡಿಂಗ್ ಮುಳುವಾಗಿ ಪರಿಣಮಿಸಿತ್ತು. ವೇಗದ ಬೌಲರ್‌ಗಳು ಹೆಚ್ಚಿನ ರನ್‌ಗಳನ್ನು ಬಿಟ್ಟುಕೊಟ್ಟಿದ್ದರು. ಆದ್ದರಿಂದ ತಪ್ಪುಗಳನ್ನು ತಿದ್ದಿಕೊಂಡು ಶಿಸ್ತಿನ ದಾಳಿ ನಡೆಸುವ ಸವಾಲು ಬೌಲರ್‌ಗಳ ಮುಂದಿದೆ.

ಚೇತನ್ ಸಕಾರಿಯಾ ಮತ್ತು ಮುಕೇಶ್ ಕುಮಾರ್ ದೇಸಿ ಕ್ರಿಕೆಟ್‌ನಲ್ಲಿ ಮಿಂಚಿದ್ದರೂ, ಅಂತರರಾಷ್ಟ್ರೀಯ ಬ್ಯಾಟರ್‌ಗಳನ್ನು ಕಾಡುವಂತಹ ವೇಗ ಮತ್ತು ವೈವಿಧ್ಯತೆ ಅವರ ಬೌಲಿಂಗ್‌ನಲ್ಲಿ ಕಾಣಿಸಿಲ್ಲ. ಸಕಾರಿಯಾ ಮೊದಲ ಪಂದ್ಯದಲ್ಲಿ ನಾಲ್ಕು ಓವರ್‌ಗಳಲ್ಲಿ 53 ರನ್ ಬಿಟ್ಟುಕೊಟ್ಟಿದ್ದರು.

ದಕ್ಷಿಣ ಆಫ್ರಿಕಾದ ವೇಗಿಗಳಾದ ಎನ್ರಿಕ್ ನಾರ್ಕಿಯಾ ಮತ್ತು ಲುಂಗಿ ಗಿಡಿ ಅವರು ರಾಷ್ಟ್ರೀಯ ತಂಡಕ್ಕೆ ಆಡುತ್ತಿರುವ ಕಾರಣ ಈ ಪಂದ್ಯಕ್ಕೂ ಅಲಭ್ಯರಾಗಿದ್ದಾರೆ. ಮಂಗಳವಾರದ ಪಂದ್ಯದಲ್ಲಿ ಸಕಾರಿಯಾ ಬದಲು ಬಾಂಗ್ಲಾದೇಶದ ಮುಸ್ತಫಿಜುರ್ ರೆಹಮಾನ್ ಅವರಿಗೆ ಅವಕಾಶ ನೀಡುವ ಸಾಧ್ಯತೆಯಿದೆ. ಹಾಗಾದಲ್ಲಿ ರಿಲೀ ರೂಸೊ ಬೆಂಚ್ ಕಾಯಿಸಬೇಕಾಗಬಹುದು.

ವಾರ್ನರ್ ಅವರು ಬ್ಯಾಟಿಂಗ್‌ನಲ್ಲಿ ಪೃಥ್ವಿ ಶಾ ಮತ್ತು ಸರ್ಫರಾಜ್ ಖಾನ್ ಅವರಿಂದ ಉತ್ತಮ ಆಟವನ್ನು ನಿರೀಕ್ಷಿಸುತ್ತಿದ್ದಾರೆ. ಲಖನೌ ವಿರುದ್ಧ ವಿಫಲರಾಗಿದ್ದ ಮಿಷೆಲ್ ಮಾರ್ಷ್ ಮತ್ತು ರೊವ್ಮನ್ ಪೊವೆಲ್ ಅವರು ಮಿಂಚಿದರಷ್ಟೇ ಡೆಲ್ಲಿಗೆ ಸವಾಲಿನ ಮೊತ್ತ ಕಲೆಹಾಕಲು ಸಾಧ್ಯ.

ಗುಜರಾತ್ ಟೈಟನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ (ಎಡ) ಹಾಗೂ ಶುಭಮನ್ ಗಿಲ್

ಭಾರತದ ಪ್ರಮುಖ ಆಟಗಾರರ ಕೊರತೆ ಡೆಲ್ಲಿ ತಂಡವನ್ನು ಕಾಡುತ್ತಿದೆ. 'ಇಂಪ್ಯಾಕ್ಟ್ ಪ್ಲೇಯರ್' ಆಗಿ ಕಣಕ್ಕಿಳಿಯಬಲ್ಲ ಸಮರ್ಥ ಆಟಗಾರರು ಕೂಡಾ ತಂಡದಲ್ಲಿಲ್ಲ. ಆದ್ದರಿಂದ ವಿದೇಶಿ ಆಟಗಾರರ ಪ್ರದರ್ಶನವೇ ನಿರ್ಣಾಯಕ ಎನಿಸಲಿದೆ.

ಇನ್ನೊಂದೆಡೆ ಮೊದಲ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮಣಿಸಿದ್ದ ಹಾಲಿ ಚಾಂಪಿಯನ್ ಟೈಟನ್ಸ್ ತಂಡದ ಆಟಗಾರರು ಆತ್ಮವಿಶ್ವಾಸದಲ್ಲಿದ್ದಾರೆ. ಕೇನ್ ವಿಲಿಯಮ್ಸನ್ ಅವರು ಗಾಯಗೊಂಡು ಟೂರ್ನಿಯಿಂದ ಹೊರಬಿದ್ದದ್ದು ತಂಡಕ್ಕೆ ಅಲ್ಪ ಹಿನ್ನಡೆ ಉಂಟುಮಾಡಿದೆ. ಮೊಹಮ್ಮದ್ ಶಮಿ, ಹಾರ್ದಿಕ್ ಪಾಂಡ್ಯ, ಅಲ್ಜರಿ ಜೋಸೆಫ್ ಮತ್ತು ರಶೀದ್ ಖಾನ್ ಅವರನ್ನೊಳಗೊಂಡ ಟೈಟನ್ಸ್ ಬೌಲಿಂಗ್ ವಿಭಾಗ, ಎದುರಾಳಿ ಬ್ಯಾಟರ್‌ಗಳಿಗೆ ಸವಾಲಾಗುವುದು ಖಚಿತ.

ಪಂತ್ ಪಂದ್ಯ ವೀಕ್ಷಿಸುವ ಸಾಧ್ಯತೆ: ಕಾರು ಅಫಘಾತದಲ್ಲಿ ಗಾಯಗೊಂಡು ಚೇತರಿಸಿಕೊಳ್ಳುತ್ತಿರುವ ಡೆಲ್ಲಿ ತಂಡದ ಆಟಗಾರ ರಿಷಭ್ ಪಂತ್ ಡಗೌಟ್‌ನಲ್ಲಿ ಕುಳಿತು ಪಂದ್ಯ ವೀಕ್ಷಿಸುವ ಸಾಧ್ಯತೆಯಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಐಪಿಎಲ್: ಜಿಯೊಸಿನೆಮಾದಲ್ಲಿ 147 ಕೋಟಿ ವಿಡಿಯೊ ವೀವ್ಸ್

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಟೂರ್ನಿಯ ಮೊದಲ ವಾರಾಂತ್ಯದ ಪಂದ್ಯಗಳು ಜಿಯೊಸಿನೆಮಾದಲ್ಲಿ ದಾಖಲೆಯ 147 ಕೋಟಿ ವಿಡಿಯೊ ವೀವ್ಸ್ ಪಡೆದಿವೆ.

ಇದು 2022ರ ಐಪಿಎಲ್ ಟೂರ್ನಿಯ ಎಲ್ಲ ಪಂದ್ಯಗಳ ಡಿಜಿಟಲ್ ವೀಕ್ಷಣೆಯ ಪ್ರಮಾಣಕ್ಕಿಂತಲೂ ಅಧಿಕವಾಗಿದ್ದು, ದಾಖಲೆ ಸೃಷ್ಟಿಯಾಗಿದೆ. 2022ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ವೇಳೆ ಪಡೆದಿದ್ದ ವೀವ್ಸ್‌ಗಳ ಸಂಖ್ಯೆಯನ್ನೂ ಮೀರಿಸಿದೆ ಎಂದು ವಯಾಕಾಂ 18 ಸ್ಪೋರ್ಟ್ಸ್ ಸಿಇಒ ಅನಿಲ್ ಜಯರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐಪಿಎಲ್ ಶುರುವಾದ ಬಳಿಕ ಜಿಯೊಸಿನೆಮಾದ 5 ಕೋಟಿ ಆ್ಯಪ್‌ಗಳು ಹೊಸದಾಗಿ ಡೌನ್‌ಲೋಡ್ ಆಗಿದೆ. ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಗುಜರಾತ್ ಟೈಟನ್ಸ್ ನಡುವಣ ಉದ್ಘಾಟನಾ ಪಂದ್ಯದ ದಿನ 2.5 ಕೋಟಿ ಡೌನ್‌ಲೋಡ್ ಆಗಿದೆ ಎಂದಿದ್ದಾರೆ.

14 ಕೋಟಿ ಮಂದಿ ವೀಕ್ಷಣೆ: ಐಪಿಎಲ್ ಟೂರ್ನಿಯ ಮೊದಲ ಪಂದ್ಯವನ್ನು ಟಿ.ವಿ ಮೂಲಕ 14 ಕೋಟಿ ಮಂದಿ ವೀಕ್ಷಿಸಿದ್ದಾರೆ ಎಂದು ಡಿಸ್ನಿಸ್ಟಾರ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಶಸ್ತಿಯೊಂದಿಗೆ ಡೇನಿಯಲ್ ಮೆಡ್ವೆಡೆವ್– ಎಎಫ್‌ಪಿ ಚಿತ್ರ

ಮಿಯಾಮಿ ಟೆನಿಸ್: ಮೆಡ್ವೆಡೆವ್‌ಗೆ ಪ್ರಶಸ್ತಿ

ಮಿಯಾಮಿ ಗಾರ್ಡನ್ಸ್, ಅಮೆರಿಕ (ಎಪಿ): ರಷ್ಯಾದ ಡೇನಿಯಲ್ ಮೆಡ್ವೆಡೆವ್ ಅವರು ಮಿಯಾಮಿ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಭಾನುವಾರ ನಡೆದ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಮೆಡ್ವೆಡೆವ್ 7-5, 6-3ರಿಂದ ಇಟಲಿಯ ಜಾನಿಕ್ ಸಿನ್ನರ್ ಅವರನ್ನು ಪರಾಭವಗೊಳಿಸಿದರು. ಒಂದು ತಾಸು 34 ನಿಮಿಷಗಳ ಕಾಲ ಈ ಪಂದ್ಯ ನಡೆಯಿತು.

ಮೆಡ್ವೆಡೆವ್ ಅವರಿಗೆ ಇದು ನಾಲ್ಕನೇ ಎಟಿಪಿ ಪ್ರಶಸ್ತಿಯಾಗಿದೆ. ಪುರುಷರ ಟೂರ್ ಟೂರ್ನಿಗಳ 25 ಪಂದ್ಯಗಳ ಪೈಕಿ 24ರಲ್ಲಿ ಅವರು ಜಯ ಗಳಿಸಿದ್ದಾರೆ. ಸತತ ಐದು ಟೂರ್ನಿಗಳ ಫೈನಲ್‌ನಲ್ಲಿ ಆಡಿದ್ದಾರೆ.

ಸಿನ್ನರ್ ಅವರು ಸೆಮಿಫೈನಲ್ ಪಂದ್ಯದಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರನ್ನು ಸೋಲಿಸಿದ್ದರು. ನಾಲ್ಕರ ಘಟ್ಟದ ಮತ್ತೊಂದು ಹಣಾಹಣಿಯಲ್ಲಿ ಮೆಡ್ವೆಡೆವ್ ಅವರು ತಮ್ಮದೇ ದೇಶದ ಕರೆನ್ ಕಚನೊವ್ ಎದುರು ಜಯ ಸಾಧಿಸಿದ್ದರು.

ಐಪಿಎಲ್‌ನಿಂದ ಹಿಂದೆ ಸರಿದ ಶಕೀಬ್

ಮುಂಬೈ (ಪಿಟಿಐ): ಬಾಂಗ್ಲಾದೇಶ ತಂಡದ ನಾಯಕ ಶಕೀಬ್ ಅಲ್ ಹಸನ್ ಅವರು ಐಪಿಎಲ್‌ನ ಈ ಬಾರಿಯ ಆವೃತ್ತಿಯಲ್ಲಿ ಆಡದಿರಲು ನಿರ್ಧರಿಸಿದ್ದಾರೆ.

ಇಡೀ ಟೂರ್ನಿಗೆ ಅಲಭ್ಯರಾಗುವ ವಿಷಯವನ್ನು ಅವರು ತಮ್ಮ ಫ್ರಾಂಚೈಸ್ ಕೋಲ್ಕತ್ತ ನೈಟ್ ರೈಡರ್ಸ್‌ಗೆ ತಿಳಿಸಿದ್ದಾರೆ ಎಂದು 'ಕ್ರಿಕ್‌ಇನ್ಫೊ' ವೆಬ್‌ಸೈಟ್ ವರದಿ ಮಾಡಿದೆ.

ಅಂತರರಾಷ್ಟ್ರೀಯ ಪಂದ್ಯಗಳು ಇರುವುದರಿಂದ ಮತ್ತು ವೈಯಕ್ತಿಕ ಕಾರಣಗಳಿಂದಾಗಿ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ವರದಿ ತಿಳಿಸಿದೆ.ಕಳೆದ ಡಿಸೆಂಬರ್‌ನಲ್ಲಿ ನಡೆದಿದ್ದ ಆಟಗಾರರ ಹರಾಜಿನಲ್ಲಿ ಕೆಕೆಆರ್ ತಂಡ ₹ 50 ಲಕ್ಷ ಮೂಲ ಬೆಲೆ ನೀಡಿ ಶಕೀಬ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿತ್ತು.


ಶಕೀಬ್ ಅಲ್ ಹಸನ್– ಎಎಫ್‌ಪಿ ಚಿತ್ರ

ಶಕೀಬ್ ಅವರು ಐರ್ಲೆಂಡ್ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ (ಏ.4 ರಿಂದ 8) ಆಡಲಿದ್ದಾರೆ. ಏ.9 ರಂದು ಕೆಕೆಆರ್ ತಂಡವನ್ನು ಸೇರಿಕೊಳ್ಳುವರು ಎಂದು ನಿರೀಕ್ಷಿಸಲಾಗಿತ್ತು.

ಬಾಂಗ್ಲಾದೇಶದ ಇನ್ನೊಬ್ಬ ಆಟಗಾರ ಲಿಟನ್ ದಾಸ್ ಅವರು ಟೂರ್ನಿಯಲ್ಲಿ ಆಡಲಿದ್ದಾರೆಯೇ ಎಂಬುದು ಖಚಿತವಾಗಿಲ್ಲ.

ಆರ್‌ಸಿಬಿ ವೇಗಿ ಟಾಪ್ಲಿಗೆ ಗಾಯ

ಬೆಂಗಳೂರು (ಪಿಟಿಐ): ಮುಂಬೈ ಇಂಡಿಯನ್ಸ್ ವಿರುದ್ಧ ಭಾನುವಾರ ನಡೆದ ಐಪಿಎಲ್ ಪಂದ್ಯದ ವೇಳೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮಧ್ಯಮವೇಗಿ ರೀಸ್ ಟಾಪ್ಲಿ ಅವರ ಭುಜಕ್ಕೆ ಗಾಯವಾಗಿದೆ.

ಇಲ್ಲಿ ನಡೆದಿದ್ದ ಪಂದ್ಯದಲ್ಲಿ ಬೌಂಡರಿ ತಡೆಯುವ ಯತ್ನದಲ್ಲಿ ಬಿದ್ದು ಇಂಗ್ಲೆಂಡ್ ಆಟಗಾರ ಟಾಪ್ಲಿ ಅವರ ಭುಜದ ಮೂಳೆ ಪಲ್ಲಟಗೊಂಡಿದೆ.

'ಫೀಲ್ಡಿಂಗ್ ಸಂದರ್ಭದಲ್ಲಿ ದುರದೃಷ್ಟವಶಾತ್ ಟಾಪ್ಲಿ ಅವರ ಭುಜಕ್ಕೆ ಗಾಯವಾಗಿದೆ. ವೈದ್ಯರು ಅದನ್ನು ಮರು ಜೋಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸದ್ಯ ಟಾಪ್ಲಿ ಆರೋಗ್ಯವಾಗಿದ್ದಾರೆ. ತಂಡವನ್ನು ಸೇರಿಕೊಳ್ಳುವ ಸಾಧ್ಯತೆಯಿದೆ' ಎಂದು ಆರ್‌ಸಿಬಿ ಮುಖ್ಯ ಕೋಚ್ ಮೈಕ್ ಹೆಸನ್ ತಂಡದ ಯೂಟ್ಯೂಬ್ ಚಾನೆಲ್‌ಗೆ ತಿಳಿಸಿದ್ದಾರೆ.

ಈ ಪಂದ್ಯದಲ್ಲಿ ಬೆಂಗಳೂರು ತಂಡವು ಎಂಟು ವಿಕೆಟ್‌ಗಳಿಂದ ಮುಂಬೈಗೆ ಸೋಲುಣಿಸಿತ್ತು. ಎರಡು ಓವರ್ ಬೌಲ್ ಮಾಡಿದ್ದ ಟಾಪ್ಲಿ 14 ರನ್ ನೀಡಿ 1 ವಿಕೆಟ್ ಗಳಿಸಿದ್ದರು.

ಏಕದಿನ ವಿಶ್ವಕಪ್ ಕ್ರಿಕೆಟ್ ಲೋಗೊ ಬಿಡುಗಡೆ

ನವದೆಹಲಿ: ಈ ವರ್ಷದ ಕೊನೆಯಲ್ಲಿ ಭಾರತದಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಲೋಗೊವನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಬಿಡುಗಡೆಗೊಳಿಸಿದೆ.

ಮಹೇಂದ್ರ ಸಿಂಗ್ ಧೋನಿ ನೇತೃತ್ವದ ಭಾರತ ತಂಡ ಏಕದಿನ ವಿಶ್ವಕಪ್ ಜಯಿಸಿದ 12ನೇ ವರ್ಷಾಚರಣೆ ಸಂದರ್ಭದಲ್ಲೇ ಲೋಗೊ ಅನಾವರಣಗೊಳಿಸಿದೆ.

ವಿಶ್ವಕಪ್ ಟೂರ್ನಿ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ನಡೆಯಲಿದೆ. ಪಂದ್ಯ ವೀಕ್ಷಿಸುವ ವೇಳೆ ಪ್ರೇಕ್ಷಕರಲ್ಲಿ ಉಂಟಾಗುವ ಭಾವನೆಗಳನ್ನು ಲೋಗೊ ಪ್ರತಿಬಿಂಬಿಸುತ್ತದೆ. ಸಂತಸ, ಶಕ್ತಿ, ನಿರಾಸೆ, ಗೌರವ, ಹೆಮ್ಮೆ, ಧೈರ್ಯ, ವೈಭವ, ವಿಸ್ಮಯ ಮತ್ತು ಉತ್ಸಾಹ... ಹೀಗೆ 'ನವರಸ'ಗಳನ್ನು ಬಿಂಬಿಸುವ ಬಣ್ಣ ಮತ್ತು ವಿನ್ಯಾಸದಿಂದ ಲೋಗೊ ಸಿದ್ಧಪಡಿಸಲಾಗಿದೆ.

'ವಿಶ್ವಕಪ್ ಟೂರ್ನಿಗೆ ಕೇವಲ ಆರು ತಿಂಗಳು ಮಾತ್ರ ಇದ್ದು ಕಾತರ, ಕುತೂಹಲ ಗರಿಗೆದರಿದೆ. ತವರು ನೆಲದಲ್ಲಿ ವಿಶ್ವಕಪ್ ಆಡಬೇಕು ಎಂಬುದು ಪ್ರತಿಯೊಬ್ಬ ಆಟಗಾರನ ಕನಸು. ನಾಯಕನಾಗಿ ಆಡುವುದು ಅದಕ್ಕೂ ಮಿಗಿಲಾದ ಅನುಭವ ನೀಡಲಿದೆ' ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಐಸಿಸಿ ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸ್ಟ್ರೇಲಿಯಾ ಮಹಿಳಾ ಕ್ರಿಕೆಟಿಗರ ಸಂಭಾವನೆ ಶೇ 66ರಷ್ಟು ಹೆಚ್ಚಳ

ಮೆಲ್ಬರ್ನ್ (ಎಎಫ್‌ಪಿ/ಎಪಿ): ಆಸ್ಟ್ರೇಲಿಯಾ ಮಹಿಳಾ ಕ್ರಿಕೆಟಿಗರ ಸಂಭಾವನೆಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲಾಗಿದ್ದು, ಕ್ರಿಕೆಟ್ ಆಸ್ಟ್ರೇಲಿಯಾದ (ಸಿಎ) ಗುತ್ತಿಗೆ ವ್ಯಾಪ್ತಿಯಲ್ಲಿರುವ ಕೆಲವು ಆಟಗಾರ್ತಿಯರು ವಾರ್ಷಿಕ ₹ 5.56 ಕೋಟಿಗೂ ಅಧಿಕ ವೇತನ ಪಡೆಯಲಿದ್ದಾರೆ.

ಸಿಎ ಮತ್ತು ಆಸ್ಟ್ರೇಲಿಯಾ ಕ್ರಿಕೆಟಿಗರ ಸಂಸ್ಥೆಯ ನಡುವಣ ಹೊಸ ಒಪ್ಪಂದದ ಪ್ರಕಾರ ವೃತ್ತಿಪರ ಕ್ರಿಕೆಟ್ ಆಟಗಾರ್ತಿಯರ ಸಂಭಾವನೆ ಶೇ 66 ರಷ್ಟು ಹೆಚ್ಚಳವಾಗಲಿದೆ. ಆಸ್ಟ್ರೇಲಿಯಾದ ದೇಸಿ ಟಿ20 ಲೀಗ್ ಮಹಿಳಾ ಬಿಗ್‌ಬ್ಯಾಷ್‌ನಲ್ಲಿ (ಡಬ್ಲ್ಯುಬಿಬಿಎಲ್) ಆಡುವ ಆಟಗಾರ್ತಿಯರ ಸಂಭಾವನೆ ಕೂಡಾ ಏರಿಕೆಯಾಗಲಿದೆ. ಸಿಎ ಮತ್ತು ಡಬ್ಲ್ಯು-ಬಿಬಿಎಲ್ ಗುತ್ತಿಗೆ ಪಟ್ಟಿಯಲ್ಲಿರುವ ಆಸ್ಟ್ರೇ ಲಿಯಾ ತಂಡದ ನಾಯಕಿ ಮೆಗ್ ಲ್ಯಾನಿಂಗ್ ವಾರ್ಷಿಕ ₹ 4.45 ಕೋಟಿ ಸಂಭಾವನೆ ಪಡೆಯಲಿದ್ದಾರೆ. ಭಾರತದಲ್ಲಿ ನಡೆಯುವ ಡಬ್ಲ್ಯುಪಿಎಲ್ ಮತ್ತು ಇಂಗ್ಲೆಂಡ್‌ನ 'ದಿ ಹಂಡ್ರೆಡ್' ಟೂರ್ನಿಯಲ್ಲಿ ಪಡೆಯುವ ವೇತನವನ್ನು ಸೇರಿಸಿದರೆ ಅವರ ವಾರ್ಷಿಕ ಗಳಿಕೆ ₹ 5.56 ಕೋಟಿ ದಾಟಲಿದೆ. ಸಿಎ ಗುತ್ತಿಗೆ ಪಟ್ಟಿಯಲ್ಲಿ ಮೆಗ್ ಲ್ಯಾನಿಂಗ್ ಬಳಿಕದ ಸ್ಥಾನಗಳಲ್ಲಿರುವ ಆರು ಆಟಗಾರ್ತಿಯರು ವಾರ್ಷಿಕ ₹ 2.78 ಕೋಟಿ ಗಳಿಸಲಿದ್ದಾರೆ.

ಅಗ್ರಸ್ಥಾನಕ್ಕೆ ಮರಳಿದ ನೊವಾಕ್

ಪ್ಯಾರಿಸ್ (ಎಎಫ್‌ಪಿ): ಅನುಭವಿ ಆಟಗಾರ ನೊವಾಕ್ ಜೊಕೊವಿಚ್ ಅವರು ಸೋಮವಾರ ಪ್ರಕಟಗೊಂಡ ಎಟಿಪಿ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಮರಳಿದ್ದಾರೆ. ಕೋವಿಡ್ ಲಸಿಕೆ ಪಡೆಯದ್ದಕ್ಕೆ, ಕಳೆದ ತಿಂಗಳು ಅಮೆರಿಕದ ಕೆಲವು ಟೂರ್ನಿಗಳನ್ನು ಕಳೆದುಕೊಂಡಿದ್ದರ ಹೊರತಾಗಿಯೂ ಸರ್ಬಿಯಾದ ಆಟಗಾರನಿಂದ ಈ ಸಾಧನೆ ದಾಖಲಾಗಿದೆ.

ಕಳೆದ ತಿಂಗಳು, ಇಂಡಿಯನ್ ವೆಲ್ಸ್ ಟೂರ್ನಿಯಲ್ಲಿ ಗೆದ್ದ ನಂತರ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರು ಕೆಲದಿನಗಳ ಕಾಲ ಕ್ರಮಾಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದರು.

ಆದರೆ ಶುಕ್ರವಾರ ಅವರು ಮಿಯಾಮಿ ಓಪನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಹೊರಬಿದ್ದ ಕಾರಣ, ಜೊಕೊವಿಚ್‌ಗೆ ದಾಖಲೆಯ 380ನೇ ವಾರ ಅಗ್ರಸ್ಥಾನಕ್ಕೆ ಬರಲು ಸಾಧ್ಯವಾಗಿದೆ.

ನೊವಾಕ್ ಜೊಕೊವಿಚ್

ಜೊಕೊವಿಚ್ (7,160) ಅವರು ಅಲ್ಕರಾಜ್ (6,780) ಅವರಿಗಿಂತ 380 ಪಾಯಿಂಟ್ ಮುಂದಿದ್ದಾರೆ.

ಅವರಿಗಿಂತ ಒಂದು ಸಾವಿರ ಪಾಯಿಂಟ್ಸ್‌ಗೂ ಹೆಚ್ಚು ಹಿಂದೆಯಿರುವ ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಾಸ್ (5,770) ಮೂರನೇ ಸ್ಥಾನದಲ್ಲಿದ್ದಾರೆ. ಡೇನಿಯಲ್ ಮೆಡ್ವೆಡೆವ್ (5,150) ಮತ್ತು ನಾರ್ವೆಯ ಕ್ಯಾಸ್ಪರ್ ರೂಡ್ (5,005) ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನದಲ್ಲಿದ್ದಾರೆ.

ಕೊಡವ ಕೌಟುಂಬಿಕ ಹಾಕಿ: ಸೋಮಯ್ಯ ಹ್ಯಾಟ್ರಿಕ್

ಕುಪ್ಪಂಡ ತಂಡ ಪ್ರಿ ಕ್ವಾರ್ಟರ್ ಫೈನಲ್‌ಗೆ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು): ಕರ್ನಾಟಕ ತಂಡದ ಆಟಗಾರ ಕುಪ್ಪಂಡ ಸೋಮಯ್ಯ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಕುಪ್ಪಂಡ ತಂಡ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಇಲ್ಲಿನ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಈ ಪಂದ್ಯದಲ್ಲಿ ಕುಪ್ಪಂಡ (ಕೈಕೇರಿ) 4-0 ಯಿಂದ ಮುಕ್ಕಾಟಿರ (ಹರಿಹರ) ವಿರುದ್ಧ ಗೆಲುವು ಸಾಧಿಸಿತು.

ಪಳಂಗಂಡ ತಂಡವು 6-1 ಗೋಲುಗಳಿಂದ ಬೊಳ್ಳಂಡ ತಂಡದ ವಿರುದ್ಧ, ಕುಲ್ಲೇಟಿರ 3-0 ಅಂತರದಲ್ಲಿ ತೀತಿಮಾಡ ವಿರುದ್ಧ, ಕಲಿಯಂಡ 1-0 ಗೋಲಿನಿಂದ ಮುಕ್ಕಾಟಿರ (ಕಡಗದಾಳು) ವಿರುದ್ಧ ಗೆಲುವು ಸಾಧಿಸಿದವು.

ಮುರುವಂಡ ತಂಡ 4-0 ಅಂತರದಲ್ಲಿ ಅಚ್ಚಪಂಡ ವಿರುದ್ಧ, ನೆಲ್ಲಮಕ್ಕಡ 2-0ರಲ್ಲಿ ಕಳ್ಳಿಚಂಡ ವಿರುದ್ಧ, ಪೆಮ್ಮಂಡ 3-0ರಲ್ಲಿ ಕೊಳ್ಳೀರ ವಿರುದ್ಧ, ಕಂಬೀರಂಡ 1-0ರಲ್ಲಿ ಕೂತಂಡ ವಿರುದ್ಧ ಗೆದ್ದಿತು. ಚಕ್ಕೇರ ತಂಡ 5-1ರಲ್ಲಿ ಪುಟ್ಟಿಚಂಡ ತಂಡವನ್ನು ಮಣಿಸಿತು.

ಪೆನಾಲ್ಟಿ ಶೂಟೌಟ್‌ನಲ್ಲಿ ಚೌರೀರ ತಂಡವು 4-3 ರಿಂದ ಇಟ್ಟೀರ ತಂಡವನ್ನು, ಬೊಮ್ಮೇರಿಯಂಡ ತಂಡವು 5-3ರಲ್ಲಿ ಕರವಟ್ಟೀರ ತಂಡವನ್ನು ಸೋಲಿಸಿತು.

ಕರ್ನಾಟಕ ಹಾಕಿ ತಂಡದ ಆಟಗಾರ ಕುಪ್ಪಂಡ ಸೋಮಯ್ಯ (ನೀಲಿ ಜರ್ಸಿ ಧರಿಸಿರುವವರು) ಮುಕ್ಕಾಟಿರ (ಹರಿಹರ) ತಂಡದ ವಿರುದ್ಧ ಆಡಿದರು

ಸಡನ್ ಡೆತ್‌ನಲ್ಲಿ ಅಮ್ಮಣಿಚಂಡ ತಂಡವು ಮಾಚಿಮಾಡ ತಂಡವನ್ನು, ಕೊಂಗಂಡ ತಂಡವು ಮಂಡೇಪಂಡ ತಂಡವನ್ನು ಸೋಲಿಸಿತು. ಕರಿನೆರವಂಡ ತಂಡದವರು ಮೇಕೇರಿರ ತಂಡದವರನ್ನು ಮಣಿಸಿದರು. ಅಂತರರಾಷ್ಟ್ರೀಯ ಹಾಕಿ ಆಟಗಾರ ಮೇಕೆರಿರ ನಿತಿನ್ ತಿಮ್ಮಯ್ಯ ತಂಡದಲ್ಲಿ ಆಡಿದರು.

ಇಂದಿನ ಪ್ರಿಕ್ವಾರ್ಟರ್ ಫೈನಲ್ ಪಂದ್ಯಗಳು

ಬೆಳಿಗ್ಗೆ 8.30: ಚೌರೀರ - ಪುದಿಯೊಕ್ಕಡ

ಬೆಳಿಗ್ಗೆ 9.30: ಪೆಮ್ಮಂಡ - ಕುಲ್ಲೇಟಿರ

ಬೆಳಿಗ್ಗೆ 11: ಕಂಬೀರಂಡ - ಮುಕ್ಕಾಟಿರ (ಪುಲಿಕೋಟು)

ಮಧ್ಯಾಹ್ನ 2.30: ನೆಲ್ಲಮಕ್ಕಡ - ಬೊವ್ವೇರಿಯಂಡ

ಅಖಿಲ ಭಾರತ ಅಂತರ ವಿವಿ ಮಹಿಳಾ ಕ್ರಿಕೆಟ್ ಟೂರ್ನಿ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳಾ ಕ್ರಿಕೆಟ್ ಟೂರ್ನಿ ಇದೇ 5ರಿಂದ 11ರವರೆಗೆ ನಗರದ ವಿವಿಧ ಕ್ರೀಡಾಂಗಣಗಳಲ್ಲಿ ನಡೆಯಲಿದೆ.

'ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ, ಅಖಿಲ ಭಾರತ ವಿಶ್ವವಿದ್ಯಾಲಯಗಳ ಒಕ್ಕೂಟದ ಸಹಯೋಗದಲ್ಲಿ ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ ಟೂರ್ನಿ ನಡೆಯಲಿದೆ' ಎಂದು ಜೆಎಸ್‌ಎಸ್ ಎಸ್‌ಟಿಯು ಕುಲಸಚಿವ ಪ್ರೊ. ಎಸ್.ಎ.ಧನರಾಜ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮೈಸೂರು ವಿಶ್ವವಿದ್ಯಾಲಯದ ಗ್ಲೇಡ್ಸ್ ಮೈದಾನ, ಜೆಎಸ್‌ಎಸ್ ಎಎಚ್‌ಇಆರ್ ಮೈದಾನ, ಮಹಾರಾಜ ಕಾಲೇಜು ಮೈದಾನ ಮತ್ತು ಜೆಎಸ್‌ಎಸ್ ಎಸ್‌ಟಿಯು ಗ್ಲೇಡ್ಸ್ ಮೈದಾನದಲ್ಲಿ ಪಂದ್ಯಗಳು ನಡೆಯಲಿವೆ.

'ಏ.5ರಂದು ಸಂಜೆ 4.30ಕ್ಕೆ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಟೂರ್ನಿಯನ್ನು ಉದ್ಘಾಟಿಸಲಿದ್ದಾರೆ' ಎಂದರು.

ತಂಡಗಳು: ಪಂದ್ಯಾವಳಿಯಲ್ಲಿ 16 ತಂಡಗಳು ಭಾಗವಹಿಸಲಿವೆ. ದೇಶದ ಪೂರ್ವ ವಲಯದ ಉತ್ತರ ಪ್ರದೇಶದ ವಿ.ಬಿ.ಎಸ್.ಪಿ ವಿವಿ, ದರ್ಭಾಂಗದ ಎಲ್.ಎನ್.ಮಿಥಿಲಾ ವಿಶ್ವವಿದ್ಯಾಲಯ, ಮಧ್ಯಪ್ರದೇಶದ ಅವಧೇಶ್ ಪ್ರತಾಪ್ ಸಿಂಗ್ ವಿಶ್ವವಿದ್ಯಾಲಯ, ಛತ್ತೀಸ್‌ಗಢದ ಹೇಮಚಂದ್ರ ಯಾದವ್ ವಿಶ್ವವಿದ್ಯಾಲಯ.

ಪಶ್ಚಿಮ ವಲಯದ ಭೋಪಾಲ್‌ನ ಬರ್ಕತ್ ಉಲ್ಲಾ ವಿಶ್ವವಿದ್ಯಾಲಯ, ಪುಣೆಯ ಸಾವಿತ್ರಿಭಾಯಿ ಫುಲೆ ವಿಶ್ವವಿದ್ಯಾಲಯ, ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯ, ರಾಜಸ್ಥಾನ್ ವಿಶ್ವವಿದ್ಯಾಲಯ. ಉತ್ತರ ವಲಯದ ರೋಹ್ತಕ್‌ನ ಎಂ.ಡಿ. ವಿಶ್ವವಿದ್ಯಾಲಯ, ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯ, ಅಮೃತಸರದ ಗುರು ನಾನಕ್ ದೇವ್ ವಿಶ್ವವಿದ್ಯಾಲಯ, ಚಂಡೀಗಢದ ಪಂಜಾಬ್ ವಿಶ್ವವಿದ್ಯಾಲಯ. ದಕ್ಷಿಣ ವಲಯದ ಕೋಟಯಂನ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯ ಹಾಗೂ ಕ್ಯಾಲಿಕಟ್ ವಿಶ್ವವಿದ್ಯಾಲಯ, ವಿಶಾಖಪಟ್ಟಣಂನ ಆಂಧ್ರ ವಿಶ್ವವಿದ್ಯಾಲಯ ಹಾಗೂ ಆದಿಕವಿ ನನ್ನಯ ವಿಶ್ವವಿದ್ಯಾಲಯ ಭಾಗವಹಿಸಲಿವೆ.